ಮಂಗಳೂರು
ರಾಷ್ಟ್ರ ಜಾಗೃತಿಯ ದೈನಿಕ
ಗುರುವಾರ, 19 ಮಾರ್ಚ್ 2026
ಸಂಪುಟ 48, ಸಂಚಿಕೆ 1, ಪುಟಗಳು 12+8
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಶುಭಾಶಯ

ನಮ್ಮೆಲ್ಲ ಓದುಗರು, ಹಿತೈಷಿಗಳು, ಜಾಹೀರಾತುದಾರರು, ಏಜೆಂಟರು ಹಾಗೂ ನಾಡಿನ ಸಮಸ್ತ ಜನತೆಗೆ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು.

ಬಿಡುವು

ಯುಗಾದಿ ಪ್ರಯುಕ್ತ ಇಂದು (ಗುರುವಾರ, ಮಾರ್ಚ್ 19) ಹೊಸ ದಿಗಂತ ಕಚೇರಿಗೆ ಬಿಡುವು. ಆದ್ದರಿಂದ ಶುಕ್ರವಾರದ (ಮಾರ್ಚ್ 20) ಸಂಚಿಕೆ ಪ್ರಕಟವಾಗುವುದಿಲ್ಲ.

ಕಾಲಗಣನೆಯ ಕನ್ನಡಿ ಈ 'ಯುಗಾದಿ' ಪುಟ ೦೬

ಸಚಿವಾಕಾಂಕ್ಷಿಗಳು ಭೇಟಿಯಾಗಿಲ್ಲ: ಡಿಕೆಶಿ ➡ಪುಟ ೮

ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಲೋಪವಾಗಿಲ್ಲ ➡ಪುಟ ೮

ಇವ ನಮ್ಮವ ಇವ ನಮ್ಮವ ವಿಧೇಯಕ ಮಂಡಿಸಿದ ಸಚಿವ

ಮರ್ಯಾದೆ ಹತ್ಯೆಗೆ ಐದು ವರ್ಷ ಜೈಲು

• **ವಿಧಾನಸಭೆ:** ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿ ಎಸಗುವ ಅಪರಾಧಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕರ್ನಾಟಕ ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯ ಹಾಗೂ ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿನ ಅಪರಾಧಗಳ ಪ್ರತಿಬಂಧಕ ಮತ್ತು ನಿಷೇಧ (ಇವ ನಮ್ಮವ-ಇವ ನಮ್ಮವ) ವಿಧೇಯಕವನ್ನು ಸಚಿವ ಪ್ರಿಯಾಂಕ್ ಖರ್ಗೆ ವಿಧಾನಸಭೆಯಲ್ಲಿ ಮಂಡಿಸಿದರು. ಬಳಿಕ ವಿಧೇಯಕದ ಬಗ್ಗೆ ವಿವರಿಸಿದ ಸಚಿವ ಪ್ರಿಯಾಂಕ್ ಖರ್ಗೆ ಅವರು, ಈ ವಿಧೇಯಕದಲ್ಲಿ ಅಂತರ್ಜಾತಿ ವಿವಾಹವಾಗುವ ಜೋಡಿ ಅಥವಾ ದಂಪತಿಗೆ ಮರ್ಯಾದೆ ಹೆಸರಿನಲ್ಲಿ ಯಾರೊಬ್ಬರನ್ನು ಅಥವಾ ಯಾವುದೇ ವ್ಯಕ್ತಿಯನ್ನು ಯಾವುದೇ ರೀತಿ ಅವರ ಸಾವಿಗೆ ಕಾರಣವಾದ ಅಥವಾ ಸಾವಿಗೆ ಕಾರಣವಾಗುವ ಕೃತ್ಯ ಎಸಗುವ ವ್ಯಕ್ತಿಗೆ ಕನಿಷ್ಠ 5 ವರ್ಷಗಳ ಜೈಲು ಶಿಕ್ಷೆಗೆ ಒಳಗಾಗುತ್ತಾನೆ. ➡ಪುಟ ೮



> ಡಿಜೆ ನಿಷೇಧಕ್ಕೆ ನನ್ನ ಒಪ್ಪಿಗೆ ಇಲ್ಲ. ಡಿಜೆ ಮಾತ್ರ ನಿಷೇಧ ಏಕೆ? ಸುಪ್ರೀಂ ಕೋರ್ಟ್ ಆದೇಶದಲ್ಲಿ ಆಝಾನ್ ನಿಷೇಧ ಮಾಡಿ ಎಂದಿದೆ. ಅದನ್ನು ನಿಷೇಧಿಸುತ್ತೀರಾ?
> ■ ಎಸ್.ಎನ್. ಚನ್ನಬಸಪ್ಪ, ಬಿಜೆಪಿ ಶಾಸಕ

> ಹೃದಯ ಸಂಬಂಧಿ ಸಮಸ್ಯೆಗಳಿರುವವರು ಮತ್ತು ಫೇಸ್ ಮೇಕರ್ ಹಾಕಿದವರಿಗೆ ಡಿಜೆ ಶಬ್ದದಿಂದ ತುಂಬಾ ತೊಂದರೆ ಆಗುತ್ತಿದೆ. ಮಕ್ಕಳೂ ಕಿವಿ ಮುಚ್ಚಿಕೊಳ್ಳುವುದನ್ನು ಕಂಡಿದ್ದೇವೆ. ಈ ವಿಚಾರದಲ್ಲಿ ಪೊಲೀಸರೂ ಅಸಹಾಯಕರಾಗಿದ್ದಾರೆ. ಡಿಜೆಗಳಿಂದ ಆಗುತ್ತಿರುವ ಶಬ್ದಮಾಲಿನ್ಯವನ್ನು ನಾವು ಗಂಭೀರವಾಗಿ ಪರಿಗಣಿಸಬೇಕು.
> ■ ಸುರೇಶ್ ಕುಮಾರ್, ಬಿಜೆಪಿ ಶಾಸಕ

ಪ್ರವೇಶ ನಿಯಂತ್ರಿತ ರಸ್ತೆ ಯೋಜನೆಗೆ 6,969 ಕೋಟಿ ರೂ.

ಯುವಜನರಿಗಾಗಿ ಭವ್ಯ ಯೋಜನೆ

• **ಹೊಸದಿಲ್ಲಿ:** ಕೇಂದ್ರದ ನರೇಂದ್ರ ಮೋದಿ ಅವರ ಬಿಜೆಪಿ ನೇತೃತ್ವದ ಸರಕಾರ ದೇಶದಲ್ಲಿ ಯುವಜನತೆಗಾಗಿ ಉದ್ಯೋಗ ಸೃಷ್ಟಿಸುವ ಬೃಹತ್ ಯೋಜನೆಯೊಂದನ್ನು ರೂಪಿಸಿದೆ. ಇದರಂತೆ, ಕೇಂದ್ರ ಸಂಪುಟವು ಭಾರತ್ ಔದ್ಯೋಗಿಕ್ ವಿಕಾಸ್ ಯೋಜನೆ(ಭವ್ಯ)ಯಲ್ಲಿ 33,660ಕೋಟಿ ರೂ. ವೆಚ್ಚದಲ್ಲಿ ದೇಶಾದ್ಯಂತ 100 ಹೂಡಿಕೆಗೆ ಸಿದ್ಧವಾದ ಪ್ಲಗ್-ಅಂಡ್-ಪ್ಲೇ ಕೈಗಾರಿಕಾ ಪಾರ್ಕ್‌ಗಳನ್ನು ನಿರ್ಮಿಸುವ ಯೋಜನೆಯೊಂದಕ್ಕೆ ಬುಧವಾರ ಅನುಮೋದನೆ ನೀಡಿದೆ. ➡ಪುಟ ೮

- 33,660 ಕೋಟಿ ವೆಚ್ಚದಲ್ಲಿ ಯೋಜನೆ ಜಾರಿ
- ಸಂಪರ್ಕ ಹೆಚ್ಚಳಕ್ಕೆ ಉತ್ತರ ಪ್ರದೇಶದಲ್ಲಿ 4 ಪಥಗಳ

ಕೇಂದ್ರವೂ ಗಮನಿಸಲಿ

• **ವಿಧಾನಸಭೆ:** ಅಂಗನವಾಡಿ ಕಾರ್ಯಕರ್ತೆಯರ ಗೌರವಧನ ಹೆಚ್ಚಳ ವಿಷಯದಲ್ಲಿ ಕೇವಲ ರಾಜ್ಯ ಸರ್ಕಾರದತ್ತ ಬೊಟ್ಟು ಮಾಡುವುದು ಸರಿಯಲ್ಲ, ಕೇಂದ್ರ ಸರ್ಕಾರವೂ ಈ ವಿಷಯದಲ್ಲಿ ಕಣ್ತೆರೆಯಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು. ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕರ್ನಾಟಕ ರಾಜ್ಯ ಅತಿ ಹೆಚ್ಚು ಗೌರವ ಧನವನ್ನು ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ನೀಡುತ್ತಿದೆ. ➡ಪುಟ ೮



ಇಸ್ರೇಲ್ ವಿರುದ್ಧ ಪ್ರತೀಕಾರ ಇರಾನ್‌ನಿಂದ ಕ್ಷಿಪಣಿ ಸುರಿಮಳೆ

• **ದುಬೈ:** ಇಸ್ರೇಲ್ ನಡೆಸಿದ ಸರಣಿ ಹತ್ಯೆಗಳಿಗೆ ಪ್ರತಿಯಾಗಿ ಇರಾನ್ ಬುಧವಾರ ಇಸ್ರೇಲ್ ಮತ್ತು ಗಲ್ಫ್ ರಾಷ್ಟ್ರಗಳ ಮೇಲೆ ತೀವ್ರ ಕ್ಷಿಪಣಿ ದಾಳಿ ನಡೆಸಿದೆ. ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಇರಾನ್‌ನ ಪ್ರಭಾವಿ ನಾಯಕ ಅಲಿ ಲಾರಿಜಾನಿ ಮತ್ತು ಗುಪ್ತಚರ ಸಚಿವ ಇಸ್ಮಾಯಿಲ್ ಖತೀಬ್ ಹತರಾದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ಕ್ಷಿಪಣಿ ದಾಳಿ ಮತ್ತು ಸಾವು-ನೋವು: ಇರಾನ್‌ನ ರೆವಲ್ಯೂಷನರಿ ಗಾರ್ಡ್ ಕೇಂದ್ರ ಇಸ್ರೇಲ್ ಅನ್ನು ಗುರಿಯಾಗಿಸಿ 'ಖೋರಮ್‌ಶಹರ್ 4' ಮತ್ತು ಖಾದರ್ ಎಂಬ ಸುಧಾರಿತ ಮಲ್ಟಿ-ವಾರ್‌ಹೆಡ್ ಕ್ಷಿಪಣಿಗಳನ್ನು ಉಡಾಯಿಸಿದೆ. ಈ ದಾಳಿಯಿಂದಾಗಿ ಟೆಲ್ ಅವಿವ್ ಸಮೀಪದ ರಾಮತ್ ಗನ್‌ನಲ್ಲಿ ಇಬ್ಬರು ಮೃತಪಟ್ಟಿದ್ದಾರೆ ಎಂದು ಇಸ್ರೇಲಿ ವೈದ್ಯಕೀಯ ಮೂಲಗಳು ದೃಢಪಡಿಸಿವೆ. ಇರಾನ್‌ನ ಈ ಕ್ಷಿಪಣಿಗಳು ವಾಯು ರಕ್ಷಣಾ ವ್ಯವಸ್ಥೆಗಳನ್ನು ಭೇದಿಸುವ ಸಾಮರ್ಥ್ಯ ಹೊಂದಿದ್ದು, ಇಸ್ರೇಲ್‌ನಾದ್ಯಂತ ತೀವ್ರ ಆತಂಕ ಸೃಷ್ಟಿಸಿದೆ.

ಗಲ್ಫ್ ರಾಷ್ಟ್ರಗಳ ಮೇಲೆ ದಾಳಿ: ಇಸ್ರೇಲ್ ಮಾತ್ರವಲ್ಲದೆ, ಇರಾನ್ ತನ್ನ ನೆರೆಯ ಗಲ್ಫ್ ರಾಷ್ಟ್ರಗಳಾದ ಸೌದಿ ಅರೇಬಿಯಾ, ಕುವೈತ್, ಯುಎಇ, ಬಹ್ರೇನ್ ಮತ್ತು ಕತಾರ್ ಮೇಲೆಯೂ ಕ್ಷಿಪಣಿ ಹಾಗೂ ಡ್ರೋನ್ ದಾಳಿಗಳನ್ನು ನಡೆಸಿದೆ. ಸೌದಿ ಅರೇಬಿಯಾದ ತೈಲ ಸಮೃದ್ಧ ಪೂರ್ವ ಪ್ರಾಂತ್ಯ ಮತ್ತು ಅಮೆರಿಕದ ನೆಲೆ ಇರುವ ಪ್ರಿನ್ಸ್ ಸುಲ್ತಾನ್ ಏರ್ ಬೇಸ್ ಅನ್ನು ಗುರಿಯಾಗಿಸಲಾಗಿತ್ತು. ದುಬೈ ಸಮೀಪದ ಆಸ್ಟ್ರೇಲಿಯಾದ ಸೇನಾ ನೆಲೆಯಲ್ಲೂ ಸ್ಫೋಟಗಳು ಸಂಭವಿಸಿದ್ದು, ಸಣ್ಣ ಮಟ್ಟದ ಬೆಂಕಿ ಕಾಣಿಸಿಕೊಂಡಿದೆ.


ಕ್ಷಿಪಣಿ ಅವಶೇಷ ಬಿದ್ದು 3 ಇಸ್ರೇಲಿ ವಿಮಾನಕ್ಕೆ ಹಾನಿ: ಇರಾನ್ ಕ್ಷಿಪಣಿಗಳಿಂದಾಗಿ ಟೆಲ್ ಅವೀವ್‌ನ ಬೆನ್ ಗುರಿಯನ್ ವಿಮಾನ ನಿಲ್ದಾಣದಲ್ಲಿ ನಿಲುಗಡೆಗೊಳಿಸಿದ್ದ ಮೂರು ಖಾಸಗಿ ವಿಮಾನಗಳಿಗೆ ಹಾನಿಯಾಗಿವೆ ಎಂದು ಇಸ್ರೇಲ್ ವಿಮಾನ ನಿಲ್ದಾಣ ಪ್ರಾಧಿಕಾರ ಬುಧವಾರ ದೃಢೀಕರಿಸಿವೆ. ಇರಾನ್ ಕ್ಷಿಪಣಿಗಳ ಅವಶೇಷ ಬಿದ್ದಿದ್ದರಿಂದ ವಿಮಾನಗಳಿಗೆ ಹಾನಿಯಾಗಿವೆ ಎಂದು ಇಸ್ರೇಲ್ ಸೇನೆ ಹೇಳಿದೆ.

ಹಾರ್ಮುಜ್‌ನತ್ತ ಭಾರತದ ಹೆಚ್ಚುವರಿ ಯುದ್ಧನೌಕೆಗಳು

ಇರಾನ್ ಇನ್ನಷ್ಟು ಭಾರತೀಯ ತೈಲ ಟ್ಯಾಂಕರ್‌ಗಳಿಗೆ ಅನುಮತಿ ನೀಡುವ ಸಾಧ್ಯತೆ ಹಿನ್ನೆಲೆ ಹಾರ್ಮುಜ್ ಜಲಸಂಧಿಯನ್ನು ದಾಟಿ ಭಾರತದತ್ತ ಸಂಚರಿಸುವ ತೈಲ ಹಡಗುಗಳ ಸುರಕ್ಷತೆಯನ್ನು ಖಚಿತಪಡಿಸುವುದಕ್ಕಾಗಿ ಗಲ್ಫ್ ಆಫ್ ಒಮನ್ ಮತ್ತು ಅರಬ್ಬಿ ಸಮುದ್ರಕ್ಕೆ ಸುಮಾರು 6ಕ್ಕೂ ಹೆಚ್ಚು ಹೆಚ್ಚುವರಿ ಯುದ್ಧನೌಕೆಗಳನ್ನು ಭಾರತೀಯ ವಾಯುಪಡೆ ಕಳುಹಿಸಿಕೊಟ್ಟಿದೆ. ಇವುಗಳೊಂದಿಗೆ ಸರಕು ಹಡಗುಗಳನ್ನೂ ಕಳುಹಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಲೆಬನಾನ್‌ನಲ್ಲಿ ಸಂಘರ್ಷ ಮತ್ತು ಸ್ಥಳಾಂತರ

ಇತ್ತ ಇಸ್ರೇಲ್ ತನ್ನ ದಾಳಿಯನ್ನು ಲೆಬನಾನ್ ಮೇಲೆಯೂ ತೀವ್ರಗೊಳಿಸಿದೆ. ಬುಧವಾರ ಬೆಳಗ್ಗೆ ಯಾವುದೇ ಮುನ್ಸೂಚನೆ ನೀಡದೆ ಮಧ್ಯ ಬೈರುತ್‌ನ ವಸತಿ ಕಟ್ಟಡಗಳ ಮೇಲೆ ದಾಳಿ ನಡೆಸಲಾಗಿದ್ದು, ಕನಿಷ್ಠ 12 ಜನರು ಮೃತಪಟ್ಟಿದ್ದಾರೆ. ಫೆಬ್ರವರಿ 28 ರಿಂದ ಆರಂಭವಾದ ಈ ಸಂಘರ್ಷದಲ್ಲಿ ಇದುವರೆಗೆ ಲೆಬನಾನ್‌ನಲ್ಲಿ 912ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದು, ಸುಮಾರು 10 ಲಕ್ಷಕ್ಕೂ ಹೆಚ್ಚು ಜನರು ನಿರಾಶ್ರಿತರಾಗಿದ್ದಾರೆ. ಈ ಮಧ್ಯೆ, ಇಸ್ರೇಲ್‌ನ ಮೊಸಾದ್ ಗುಪ್ತಚರ ಸಂಸ್ಥೆಗಾಗಿ ಗೂಢಚರ್ಯೆ ನಡೆಸಿದ ಆರೋಪದ ಮೇಲೆ ಇರಾನ್ ವ್ಯಕ್ತಿಯೊಬ್ಬನನ್ನು ಗಲ್ಲಿಗೇರಿಸಿದೆ ಎಂದು ಅಲ್ಲಿನ ನ್ಯಾಯಾಂಗದ ಮಿಜಾನ್ ಸುದ್ದಿ ಸಂಸ್ಥೆ ವರದಿ ಮಾಡಿದೆ. ಈತ ಇಸ್ರೇಲ್‌ಗೆ ಸೂಕ್ಷ್ಮ ಪ್ರದೇಶಗಳ ಚಿತ್ರಗಳು ಮತ್ತು ಮಾಹಿತಿಗಳನ್ನು ನೀಡಿದ್ದ ಎಂದು ವರದಿಯಲ್ಲಿ ತಿಳಿಸಲಾಗಿದೆ. ಅಂತಾರಾಷ್ಟ್ರೀಯ ಪರಮಾಣು ಇಂಧನ ಸಂಸ್ಥೆ (ಐಎಇಎ) ಪ್ರಕಾರ, ಇರಾನ್‌ನ ಬುಶೆಹರ್ ಪರಮಾಣು ಸ್ಥಾವರದ ಮೇಲೆಯೂ ಕ್ಷಿಪಣಿಯೊಂದು ಬಿದ್ದಿದೆ. ಆದರೆ ಯಾವುದೇ ವಿಕಿರಣ ಸೋರಿಕೆ ಅಥವಾ ಹಾನಿ ಸಂಭವಿಸಿಲ್ಲ, ಎಂದು ವರದಿಯಾಗಿದೆ. ಯುದ್ಧವು ಈಗ ನಿರ್ಣಾಯಕ ಹಂತ ತಲುಪಿದ್ದು, ಜಾಗತಿಕ ಸಮುದಾಯವು ಆತಂಕದಿಂದ ಗಮನಿಸುತ್ತಿದೆ.



ಹಾರ್ಮುಜ್ ಸುರಕ್ಷತೆಗಾಗಿ ಸಹಾಯ ನಿರಾಕರಿಸಿದ ನ್ಯಾಟೋ

ನ್ಯಾಟೋ ವಿರುದ್ಧ ಟ್ರಂಪ್ ಆಕ್ರೋಶ

• **ವಾಷಿಂಗ್ಟನ್:** ಇಡೀ ಜಗತ್ತಿನ ಒಳಿತಿಗಾಗಿ ತಾನು ಇರಾನ್ ವಿರುದ್ಧ ನಡೆಸುತ್ತಿರುವ ಯುದ್ಧಕ್ಕೆ ಬೆಂಬಲಿಸದೆ ನ್ಯಾಟೋ ಮತ್ತದರ ಮಿತ್ರ ರಾಷ್ಟ್ರಗಳು ಮೂರ್ಖತನದ ಕೆಲಸ ಮಾಡುತ್ತಿವೆ. ನಮಗೆ ಯಾರ ಸಹಾಯವೂ ಬೇಕಾಗಿಲ್ಲ. ಯಾರ ಸಹಾಯವೂ ಇಲ್ಲದೆ ಅರ್ಧ ಇರಾನ್ ನಾಶ ಮಾಡಿದ್ದೇವೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನ್ಯಾಟೋ ಸದಸ್ಯರ ವಿರುದ್ಧ ಹರಿಹಾಯ್ದಿದ್ದಾರೆ.


ಹಾರ್ಮುಜ್ ಜಲಸಂಧಿಯನ್ನು ವಶಪಡಿಸಲು, ಅದನ್ನು ಮೊದಲಿನಂತೆ ಸುರಕ್ಷಿತಗೊಳಿಸಲು ಸಹಾಯ ಮಾಡಬೇಕೆಂಬ ನನ್ನ ಮನವಿಯನ್ನು ನ್ಯಾಟೋ ಮತ್ತದರ ಮೈತ್ರಿಕೂಟದ ರಾಷ್ಟ್ರಗಳು ತಿರಸ್ಕರಿಸಿವೆ. ಜಗತ್ತಿನ ಹಿತಕ್ಕಾಗಿ ಇರಾನ್ ವಿರುದ್ಧದ ಯುದ್ಧಕ್ಕೆ ಬೆಂಬಲಿಸುವಂತೆ ಕೋರಿದ್ದರೂ ನ್ಯಾಟೋ ಮೂರ್ಖತನದ ನಿಲುವು ತೆಗೆದುಕೊಂಡಿದೆ ಎಂದು ಅಧ್ಯಕ್ಷ ಟ್ರಂಪ್ ಮಂಗಳವಾರ ಹತಾಶೆ ವ್ಯಕ್ತಪಡಿಸಿದ್ದಾರೆ. ನಮಗೆ ಯಾರ ಸಹಾಯದ ಅಗತ್ಯವಿಲ್ಲ. ನಮ್ಮಿಂದ ಸಹಾಯ ಪಡೆದವರು ನಮಗೆ ಸಹಾಯ ಮಾಡಲು ಸಿದ್ಧರಿಲ್ಲ. ನಾವು ಅಮೆರಿಕದವರು ವಿಶ್ವದಲ್ಲೇ ಅತ್ಯಂತ ಶಕ್ತಿಶಾಲಿಗಳು. ನಿಮ್ಮ ಸಹಾಯವಿಲ್ಲದೆಯೂ ಇರಾನ್‌ನ ಭಯೋತ್ಪಾದಕ ಆಡಳಿತದ ವಿರುದ್ಧ ಹೋರಾಡುತ್ತೇವೆ. ಇರಾನ್ ಸೇನೆ, ನೌಕಾಪಡೆ, ವಾಯುಪಡೆ, ವಾಯು ರಕ್ಷಣಾ ವ್ಯವಸ್ಥೆ ಮತ್ತು ನಾಯಕತ್ವ ಸೇರಿ ಅರ್ಧ ಇರಾನ್ ನಾಶ ಮಾಡಿದ್ದೇವೆ ಎಂದು ಟ್ರಂಪ್ ಹೇಳಿದ್ದಾರೆ.



ಯುಎಇ ಮೇಲಿನ ದಾಳಿ ಖಂಡಿಸಿದ ಮೋದಿ

• **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿ ಅವರು ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಮತ್ತು ಕುವೈತ್ ದೊರೆ ಶೇಖ್ ಸಬಾ ಅಲ್-ಖಲೀದ್ ಅಲ್-ಹಮದ್ ಅಲ್-ಮುಬಾರಕ್ ಅಲ್-ಸಬಾ ಅವರೊಂದಿಗೆ ಮಾತನಾಡಿ, ಪಶ್ಚಿಮ ಏಷ್ಯಾದಲ್ಲಿ ಬದಲಾಗುತ್ತಿರುವ ಭದ್ರತಾ ಪರಿಸ್ಥಿತಿಯ ಬಗ್ಗೆ ಚರ್ಚಿಸಿದರು ಮತ್ತು ಪ್ರಾದೇಶಿಕ ಸ್ಥಿರತೆಯ ಬಗ್ಗೆ ಭಾರತದ ನಿಲುವನ್ನು ಪುನರುಚ್ಚರಿಸಿದರು. ಅವರೊಂದಿಗೆ ಪಶ್ಚಿಮ ಏಷ್ಯಾ ಮತ್ತು ಹಾರ್ಮುಜ್ ಜಲಸಂಧಿಯ ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಮಂಗಳವಾರ ಮಾತುಕತೆ ನಡೆಸಿ ಯುಎಇ ಮೇಲಣ ದಾಳಿಯನ್ನು ಖಂಡಿಸಿದ್ದಾರೆ.

ತವರಿಗೆ 80,886 ಟನ್ ತೈಲ ಹೊತ್ತ ಜಗ್ ಲಾಡ್ಕಿ



ಅಹಮದಾಬಾದ್: ಫುಜೈರಾ ಬಂದರಿನ ಮೇಲೆ ಇರಾನ್ ದಾಳಿ ಹಿನ್ನೆಲೆ 80,886 ಟನ್ ಕಚ್ಚಾ ತೈಲ ಹೊತ್ತು ಯುಎಇನಿಂದ ಭಾನುವಾರ ಬೆಳಗ್ಗೆ ಹೊರಟಿದ್ದ ಜಗ್ ಲಾಡ್ಕಿ (ವಿಶ್ವದ ಮಗಳು) ತೈಲ ಟ್ಯಾಂಕರ್ ಹಡಗು ಬುಧವಾರ ಗುಜರಾತ್‌ನ ಮುಂದ್ರಾ ಬಂದರನ್ನು ತಲುಪಿದೆ. ಫುಜೈರಾ ಬಂದರಿನ ತೈಲ ಘಟಕಗಳ ಮೇಲೆ ಇರಾನ್ ದಾಳಿ ನಡೆಸಿದ್ದರಿಂದ ಭಾನುವಾರ ಬೆಳಗ್ಗೆ ಜಗ್ ಲಾಡ್ಕಿ ತೈಲ ಟ್ಯಾಂಕರ್ ಹಡಗು ಫುಜೈರಾ ಬಂದರಿನಿಂದ ಭಾರತದತ್ತ ಹೊರಟಿತ್ತು. ಯುಎಇಯಿಂದ ಇರಾನ್‌ನ ಖಾರ್ಗ್ ದ್ವೀಪದಲ್ಲಿನ ತೈಲ ಸಂಸ್ಕರಣಾ ಘಟಕಗಳ ಮೇಲೆ ಅಮೆರಿಕ ನಡೆಸಿದ ದಾಳಿಗೆ ಪ್ರತೀಕಾರವಾಗಿ ಮಾ.14ರ ಶನಿವಾರ ಫುಜೈರಾ ಬಂದರಿನ ತೈಲ ಘಟಕಗಳ ಮೇಲೆ ಇರಾನ್ ಪ್ರತಿದಾಳಿ ನಡೆಸಿದ್ದಾಗಿ ಒಪ್ಪಿಕೊಂಡಿದೆ. ಇದರಿಂದ ಫುಜೈರಾದಲ್ಲಿ ಕಚ್ಚಾ ತೈಲ ತುಂಬಿಸಿಕೊಳ್ಳುತ್ತಿದ್ದ ಭಾರತೀಯ ತೈಲ ಹಡಗು ಜಗ್ ಲಾಡ್ಕಿ ಭಾನುವಾರ ಬೆಳಗ್ಗೆ ಭಾರತದತ್ತ ಹೊರಟಿತ್ತು. 80,886 ಟನ್‌ಗಳಷ್ಟು ಮುರ್ಬನ್ ಕಚ್ಚಾ ತೈಲವನ್ನು ಹೊತ್ತ ಜಗ್ ಲಾಡ್ಕಿ ಹೊರ್ಮುಜ್ ಜಲಸಂಧಿಯನ್ನು ದಾಟಿ ಬಂದಿದೆ. ಹೊರ್ಮುಜ್ ಜಲಸಂಧಿಯನ್ನು ನಿರಾಯಾಸವಾಗಿ ದಾಟಿ ಭಾರತ ತಲುಪಿದ ಮೂರನೇ ತೈಲ ಹಡಗು ಇದಾಗಿದೆ.

ನಾನು ಜೀವಂತವಾಗಿದ್ದೇನೆ: ನೆತನ್ಯಾಹು

ಹೌದು ಮೈಕ್, ನಾನು ಜೀವಂತವಾಗಿದ್ದೇನೆ ಹೀಗೆಂದು ಇನ್ನೊಂದು ವಿಡಿಯೋ ಹರಿಯಬಿಟ್ಟಿದ್ದಾರೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು. ವಿಡಿಯೋದಲ್ಲಿ ನೆತನ್ಯಾಹು ತಾವು ಜೀವಂತವಾಗಿ ಇರುವುದನ್ನು ಸಾಬೀತುಪಡಿಸಿದ್ದು ಮಾತ್ರವಲ್ಲದೆ, ತಮ್ಮಲ್ಲೊಂದು ಪಂಚ್ ಕಾರ್ಡ್ ಇದೆ. ಅದರಲ್ಲಿ ಇನ್ನೂ ಹಲವು ಇರಾನ್ ನಾಯಕರ ಹೆಸರುಗಳಿವೆ.



ಅವರನ್ನು ಹತ್ಯೆಗೈಯ್ಯುವುದಾಗಿ ಎಚ್ಚರಿಕೆ ನೀಡಿದ್ದಾರೆ. ಇರಾನ್ ನಾಯಕ ಅಲಿ ಲರಿಜಾನಿ, ರಾಷ್ಟ್ರೀಯ ಭದ್ರತಾ ಸಮಿತಿ ಮತ್ತು ಇರಾನ್ ಪಡೆಯ ಕಮಾಂಡರ್ ಘೋಲಮ್‌ರೆಜಾ ಸೊಲೈಮಾನಿ ಅವರ ಹತ್ಯೆ ನಡೆಸಿರುವುದಾಗಿ ನೆತನ್ಯಾಹು ಮಂಗಳವಾರ ಹೇಳಿದ್ದರು. ಇಸ್ರೇಲ್‌ನಲ್ಲಿನ ಅಮೆರಿಕ ರಾಯಭಾರಿ ಮೈಕ್ ಹಕ್ಕಬೀ ಅವರ ಜತೆಗಿನ ಮಾತುಕತೆ ವಿಡಿಯೋವನ್ನು ನೆತನ್ಯಾಹು ಹಂಚಿಕೊಂಡಿದ್ದಾರೆ.

ನೆತನ್ಯಾಹುರನ್ನು ವಿಚಾರಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆದೇಶಿಸಿದ್ದರೆಂಬ ಮೈಕ್ ಮಾತಿಗೆ, ಹೌದು ಮೈಕ್, ನಾನು ಜೀವಂತವಾಗಿದ್ದೇನೆ. ನಾವು ಐದು ಬೆರಳುಗಳಿರುವ ಕೈಗಳಿಂದ ಹಸ್ತಲಾಘವ ಮಾಡಿದ್ದೇವೆ ಎಂದು ನೆತನ್ಯಾಹು ವ್ಯಂಗ್ಯ ಮಾಡಿದ್ದಾರೆ.

ಇದಾದ ನಂತರ ತಮ್ಮ ಜೇಬಿನಿಂದ ಕಾರ್ಡ್‌ವೊಂದನ್ನು ತೆಗೆದ ನೆತನ್ಯಾಹು, ನಾನು ಜೀವಂತವಾಗಿದ್ದೇನೆ, ನನ್ನಲ್ಲಿ ಈ ಪಂಚ್ ಕಾರ್ಡ್ ಇದೆ. ಇದರಿಂದ ಇಬ್ಬರ ಹೆಸರನ್ನು ಅಳಿಸಿಹಾಕಿದ್ದೇನೆ. ಇನ್ನೂ ಹಲವರ ಹೆಸರು ಇದರಲ್ಲಿದೆ ಎಂದು ಇನ್ನೂ ಹಲವು ಇರಾನ್ ನಾಯಕರ ಹತ್ಯೆ ನಡೆಯಲಿದೆ ಎಂದು ಇರಾನ್‌ಗೆ ಎಚ್ಚರಿಕೆ ಸಂದೇಶವನ್ನು ರವಾನಿಸಿದ್ದಾರೆ.

ಕಿರುಸುದ್ದಿ

ನೀತಾ ಅಂಬಾನಿಗೆ ಕಳಿಂಗ ಮಾನವೀಯ ಪ್ರಶಸ್ತಿ

• **ಮುಂಬೈ:** ರಿಲಯನ್ಸ್ ಫೌಂಡೇಷನ್ ಸ್ಥಾಪಕಿ ಹಾಗೂ ಅಧ್ಯಕ್ಷೆ ಆದ ನೀತಾ ಅಂಬಾನಿ ಅವರಿಗೆ ಪ್ರತಿಷ್ಠಿತ ಕಳಿಂಗ ಇನ್ ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸಸ್ (ಕಿಸ್) ಹ್ಯುಮಾನಿಟೇರಿಯನ್ ಪ್ರಶಸ್ತಿ 2025ಕ್ಕೆ ಭಾಜನರಾಗಿದ್ದಾರೆ. ಕಳಿಂಗ ಇನ್ ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸಸ್ ಕ್ಯಾಂಪಸ್ ನಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ನೊಬೆಲ್ ಪ್ರಶಸ್ತಿ ವಿಜೇತರಾದ ಶ್ರೀಲಂಕಾದ ಪ್ರೊ .ಮೋಹನ್ ಮುನಸಿಂಘೆ ಅವರು ಈ ಪ್ರಶಸ್ತಿಯನ್ನು ನೀತಾ ಅಂಬಾನಿಯವರಿಗೆ ನೀಡಿದರು.

ಇರಾನ್‌ಗೆ ವೈದ್ಯಕೀಯ ನೆರವು ರವಾನೆ

• **ಹೊಸದಿಲ್ಲಿ:** ಮಧ್ಯಪ್ರಾಚ್ಯದಲ್ಲಿ ಸಂಘರ್ಷ ತೀವ್ರಗೊಳ್ಳುತ್ತಿರುವ ಬೆನ್ನಲ್ಲೇ ಭಾರತ ಇರಾನ್‌ಗೆ ತನ್ನ ಮೊದಲ ಹಂತದ ಮಾನವೀಯ ವೈದ್ಯಕೀಯ ನೆರವನ್ನು ರವಾನಿಸಿದೆ. ಕಷ್ಟ ಕಾಲದಲ್ಲಿ ಬೆಂಬಲ ನೀಡಿದ ಭಾರತದ ಜನತೆಗೆ ಟೆಹ್ರಾನ್ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದೆ. ಸಾರ್ವಜನಿಕ ದೇಣಿಗೆಗಳನ್ನು ಸುಲಭಗೊಳಿಸಲು ಭಾರತದಲ್ಲಿರುವ ಇರಾನ್ ರಾಯಭಾರ ಕಚೇರಿ ಅಧಿಕೃತ ಬ್ಯಾಂಕ್ ಖಾತೆ ಸಂಖ್ಯೆಯನ್ನು ಸಹ ಬಿಡುಗಡೆ ಮಾಡಿದೆ.

ಬೋರ್ಡೋಲಾಯಿ ಬಿಜೆಪಿಗೆ ಸೇರ್ಪಡೆ

• **ಗುವಾಹಟಿ:** ಅಸ್ಸಾಂ ವಿಧಾನಸಭಾ ಚುನಾವಣೆಗೆ ಬರೇ 20 ದಿನಗಳು ಉಳಿದಿರುವಂತೆ, ಕಾಂಗ್ರೆಸ್ ಸಂಸದ ಪ್ರದ್ಯುತ್ ಬೋರ್ಡೋಲಾಯಿ ಪಕ್ಷಕ್ಕೆ ರಾಜೀನಾಮೆ ನೀಡಿ, ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಮತ್ತು ರಾಜ್ಯ ಬಿಜೆಪಿ ಅಧ್ಯಕ್ಷ ದಿಲೀಪ್ ಸೈಕಿಯಾ ಅವರ ಸಮ್ಮುಖದಲ್ಲಿ ಪಕ್ಷಕ್ಕೆ ಸೇರ್ಪಡೆಯಾದರು.

ಚುನಾವಣೆ ಕಾವಿನ ಮಧ್ಯೆ ಅಸ್ಸಾಂನಲ್ಲಿ ಕಾಂಗ್ರೆಸ್ ಹೊಡೆತ

ಮಿತಿಮೀರಿದ ಬೇಸರದಿಂದ ತಾನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಎಲ್ಲಾ ಹುದ್ದೆಗಳು, ಬಾಧ್ಯತೆಗಳು ಮತ್ತು ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡುತ್ತಿರುವುದಾಗಿ ಬೋರ್ಡೋಲಾಯಿ, ಖರ್ಗೆ ಅವರಿಗೆ ಸಲ್ಲಿಸಿರುವ ಒಂದು ವಾಕ್ಯದ ರಾಜೀನಾಮೆ ಪತ್ರದಲ್ಲಿ ತಿಳಿಸಿದ್ದಾರೆ.

ಭೂಪೆನ್ ಕುಮಾರ್ ಬೋರಾ ಎಪಿಸಿಸಿ ಅಧ್ಯಕ್ಷ ಗಾದಿಗೆ ರಾಜೀನಾಮೆ ನೀಡಿ ಆಳುವ ಬಿಜೆಪಿಗೆ ಸೇರಿದ ವಿದ್ಯಮಾನದ ಬೆನ್ನಲ್ಲೇ, ತಿಂಗಳವಧಿಯಲ್ಲಿ ಬೋರ್ಡೋಲಾಯಿ ಅವರೂ ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದ್ದಾರೆ. ಎಪಿಸಿಸಿಯ ಇನ್ನೋರ್ವ ಹಿರಿಯ ನಾಯಕ , ಬೋರ್ಡೋಲಾಯಿ ಅವರ ನಿಕಟವರ್ತಿ ನಬಜ್ಯೋತಿ ತಾಲುಕ್‌ದಾರ್ ಕೂಡ ಮಂಗಳವಾರ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದಾರೆ. ಅಸ್ಸಾಂ ಕಾಂಗ್ರೆಸ್ ಅಧ್ಯಕ್ಷ ಗೊಗೊಯ್-ಜೋರ್ಹಟ್, ಬೋರ್ಡೋಲಾಯಿ ಮತ್ತು ರಕಿಬುಲ್ ಹುಸೇನ್ ಅಸ್ಸಾಂನಲ್ಲಿ ಕಾಂಗ್ರೆಸ್ ಹೊಂದಿರುವ ಮೂವರು ಸಂಸದರು. ಇದೀಗ ಬೋರ್ಡೋಲಾಯಿ ರಾಜೀನಾಮೆಯಿಂದ ಅಸ್ಸಾಂನಲ್ಲಿ ಕಾಂಗ್ರೆಸ್ ಸಂಸದರ ಬಲ ಎರಡಕ್ಕಿಳಿದಿದೆ.

ಇಡಿ ದಾಳಿ ವೇಳೆ ಸಿಎಂ ನುಗ್ಗಿದರೆ ಕಥೆ ಏನು?

• **ಹೊಸದಿಲ್ಲಿ:** ಐಪ್ಯಾಕ್ ಕಚೇರಿ ಮೇಲಿನ ದಾಳಿ ವೇಳೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ನುಗ್ಗಿ ಹೋದ ಘಟನೆ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಸುಪ್ರೀಂಕೋರ್ಟ್, ಮುಂದೆ ಬೇರೊಬ್ಬ ಮುಖ್ಯಮಂತ್ರಿಯೂ ಇದೇ ರೀತಿ ನುಗ್ಗಿ ಹೋದರೆ ಏನು ಮಾಡುವುದು ಎಂದು ಪ್ರಶ್ನಿಸಿದೆ.

» ಮಮತಾ-ಐಪ್ಯಾಕ್ ಪ್ರಕರಣದಲ್ಲಿ ಸುಪ್ರೀಂ ಗಂಭೀರ ಪ್ರಶ್ನೆ

ಇದು ಖುಷಿಯ ಸಂಗತಿ ಅಲ್ಲವೇ ಅಲ್ಲ ಎಂದಿರುವ ಕೋರ್ಟ್, ಇಂಥ ಅಸಾಮಾನ್ಯ ಸಂದರ್ಭಗಳಲ್ಲಿ ಕೇಂದ್ರ ತನಿಖಾ ಸಂಸ್ಥೆ ಏನು ಮಾಡಬೇಕು ಎಂಬಂಥ ಸ್ಥಿತಿ ಉದ್ಭವವಾಗಲಿದೆ ಎಂದಿದೆ. ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ಎನ್.ವಿ. ಅಂಜಾರಿಯಾ ಅವರ ಪೀಠವು, 'ನಾಳೆ ಮತ್ತೊಬ್ಬ ಮುಖ್ಯಮಂತ್ರಿ ಇದೇ ರೀತಿಯಲ್ಲಿ ದಾಳಿಗೆ ನುಗ್ಗಿದರೆ ಏನು? ಆಗ ಇಡಿ ಕೈಕಟ್ಟಿ ಕುಳಿತುಕೊಳ್ಳಬೇಕೇ?' ಎಂದು ಗಂಭೀರವಾಗಿ ಪ್ರಶ್ನಿಸಿತು.


ಇಡಿ ತನ್ನ ಅರ್ಜಿಯಲ್ಲಿ, ಐಪ್ಯಾಕ್ ಮುಖ್ಯಸ್ಥ ಪ್ರತೀಕ್ ಜೈನ್ ನಿವಾಸ ಮತ್ತು ಕಚೇರಿಗಳಲ್ಲಿ ನಡೆದ ದಾಳಿಯ ವೇಳೆ ಮುಖ್ಯಮಂತ್ರಿ ಬ್ಯಾನರ್ಜಿ ಲ್ಯಾಪ್‌ಟಾಪ್, ಮೊಬೈಲ್ ಮತ್ತು ಕೆಲವು ದಾಖಲೆಗಳನ್ನು ತೆಗೆದುಕೊಂಡು ಹೊರಟಿದ್ದಾರೆ ಎಂದು ಆರೋಪಿಸಿದೆ. ಇದನ್ನು ಅಧಿಕಾರದ ದುರುಪಯೋಗ ಎಂದು ಇಡಿ ಆಪಾದಿಸಿದೆ. ಈ ವೇಳೆ ಮುಖ್ಯಮಂತ್ರಿ ಕೇಂದ್ರ ಸಂಸ್ಥೆಯ ಕಾರ್ಯಕ್ಕೆ ಅಡ್ಡಿಯಾದರೆ ಅದರ ಪರಿಹಾರ ಯಾರು ನೀಡುತ್ತಾರೆ?" ಎಂದು ನ್ಯಾಯಮೂರ್ತಿ ಮಿಶ್ರಾ ಪ್ರಶ್ನಿಸಿದ್ದಾರೆ. ಮುಂದಿನ ವಿಚಾರಣೆಯನ್ನು ಮಾ.24ಕ್ಕೆ ಮುಂದೂಡಲಾಗಿದೆ.

ರಾಷ್ಟ್ರಪತಿ ಸ್ವಾಗತಕ್ಕೆ ಸಜ್ಜಾದ ರಾಮ ನಗರಿ

ಅಯೋಧ್ಯೆಗೆ ಇಂದು ಮುರ್ಮು ಭೇಟಿ

• **ಅಯೋಧ್ಯೆ:** ಅಯೋಧ್ಯೆ ಶ್ರೀ ರಾಮ ಜನ್ಮಭೂಮಿ ಮಂದಿರದ ದ್ವಿತೀಯ ಮಹಡಿಯಲ್ಲಿ ಶ್ರೀ ರಾಮ ಯಂತ್ರ ಸ್ಥಾಪನೆಯ ಕಾರ್ಯಕ್ರಮಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಆಗಮಿಸಲಿದ್ದಾರೆ. ಗುರುವಾರ ಬೆಳಗ್ಗೆ 9 ಗಂಟೆಗೆ ದಿಲ್ಲಿಯಿಂದ ಹೊರಟು 10:15 ಕ್ಕೆ ಅಯೋಧ್ಯೆಯ ಮಹರ್ಷಿ ವಾಲ್ಮೀಕಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಲ್ಲಿದ್ದು, ಅಲ್ಲಿಂದ ನೇರವಾಗಿ ಶ್ರೀ ರಾಮ ಜನ್ಮಭೂಮಿ ಮಂದಿರಕ್ಕೆ ತೆರಳಲಿದ್ದಾರೆ. ಶ್ರೀ ರಾಮರ ವಿಶೇಷ ದರ್ಶನ ಮತ್ತು ಆರತಿಯ ನಂತರ ಶ್ರೀ ರಾಮ ಜನ್ಮಭೂಮಿಯ ಆವರಣದಲ್ಲಿರುವ ಮಂದಿರಗಳ ದರ್ಶನವನ್ನು ಪಡೆಯಲಿದ್ದಾರೆ. ದ್ವಿತೀಯ ಮಹಡಿಯಲ್ಲಿ ಶ್ರೀ ರಾಮ ಯಂತ್ರ ಸ್ಥಾಪಿಸಿದ ನಂತರ ಪ್ರಥಮ ಮಹಡಿಯಲ್ಲಿರುವ ರಾಮ ಪರಿವಾರದ ಆರತಿ ದರ್ಶನ ಪಡೆದು, ಮಧ್ಯಾಹ್ನ 12:30 ರಿಂದ 1:15 ರವರಗೆ ಶ್ರೀ ರಾಮ ಯಂತ್ರ ಸ್ಥಾಪನೆಯ ಕಾರ್ಯಕ್ರಮಕ್ಕೆ ಆಗಮಿಸಿದ ವಿಶೇಷ ಆಹ್ವಾನಿತರ ಸಭೆಯಲ್ಲಿ ಭಾಗವಹಿಸಿದ ನಂತರ ಸಪ್ತ ಮಂದಿರಗಳ ದರ್ಶನವನ್ನು ಪಡೆದು ಅಯೋಧ್ಯೆಯಿಂದ ನಿರ್ಗಮಿಸಲಿದ್ದಾರೆ ಎಂದು ಜಿಲ್ಲಾಡಳಿತ ತಿಳಿಸಿದೆ.

ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರು: ಉತ್ತರ ಪ್ರದೇಶ ಹಾಗೂ ಉತ್ತರಾಖಂಡನ ಸಂಘ ಪರಿವಾರದ ಹಿತೈಷಿಗಳು,ಕರಸೇವಕರು, ಶ್ರೀ ರಾಮ ಜನ್ಮಭೂಮಿ ಮಂದಿರದ ನಿರ್ಮಾಣ ಕಾರ್ಯದಲ್ಲಿ ಸೇವೆಯನ್ನು



ಸಲ್ಲಿಸಿದ ಕಟ್ಟಡ ಕಾರ್ಮಿಕರು, ಗುತ್ತಿಗೆದಾರರು, ಮಾತಾ ಅಮೃತಾನಂದಮಯಿ ಅವರ ಒಂದು ಸಾವಿರ ಜನ ಶಿಷ್ಯರು ಸೇರಿದಂತೆ ಈ ಕಾರ್ಯದಲ್ಲಿ ಏಳು ಸಾವಿರ ಜನರು ಪಾಲ್ಗೊಳ್ಳಲಿದ್ದಾರೆ.

ವಿಶೇಷ ದರ್ಶನ, ಗಾಲಿ ಕುರ್ಚಿ ವ್ಯವಸ್ಥೆ ಸ್ಥಗಿತ: ಪ್ರತಿದಿನದಂತೆ ಸಾರ್ವಜನಿಕ ದರ್ಶನಕ್ಕೆ ಅವಕಾಶವಿದ್ದು, ಬೆಳಗ್ಗೆಯಿಂದ ಸಾಯಂಕಾಲ 5 ಗಂಟೆಯವರೆಗೂ ವಿಶೇಷ ದರ್ಶನ ಹಾಗೂ ಗಾಲಿ ಕುರ್ಚಿ ವ್ಯವಸ್ಥೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ತಿಳಿಸಿದೆ.

ರಾಜ್ಯಸಭೆಯಿಂದ ನಿವೃತ್ತ 59 ಸದಸ್ಯರಿಗೆ ಪ್ರಧಾನಿ ಮೋದಿ ಶುಭ ಹಾರೈಕೆ

ಸಂಸತ್ ಮುಕ್ತ ವಿಶ್ವವಿದ್ಯಾಲಯವಿದ್ದಂತೆ

• **ಹೊಸದಿಲ್ಲಿ:** ಸಂಸತ್ತು ಒಂದು ಮುಕ್ತ ವಿಶ್ವವಿದ್ಯಾಲಯವಿದ್ದಂತೆ. ರಾಜನೀತಿಯಲ್ಲಿ ಪೂರ್ಣ ವಿರಾಮ ಎಂಬುದಿಲ್ಲ. ರಾಷ್ಟ್ರೀಯ ಬದುಕಿನಲ್ಲಿ ಸದಾ ಸಕ್ರಿಯರಾಗಿರಿ ಎಂದು ಏಪ್ರಿಲ್-ಜುಲೈ ನಡುವಣ ಅವಧಿಯಲ್ಲಿ ರಾಜ್ಯಸಭೆಯಿಂದ ನಿವೃತ್ತರಾಗಲಿರುವ ಜೆಡಿಎಸ್ ಹಿರಿಯ ನಾಯಕ, ಮಾಜಿ ಪ್ರಧಾನಿ ದೇವೇಗೌಡ, ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ, ಎನ್‌ಸಿಪಿ ನಾಯಕ ಪವಾರ್ ಸಹಿತ 59 ಸಂಸತ್ ಸದಸ್ಯರಿಗೆ ಪ್ರಧಾನಿ ನರೇಂದ್ರ ಮೋದಿ ಶುಭ ಹಾರೈಸಿದ್ದಾರೆ ಮತ್ತವರ ಕೊಡುಗೆಗಳನ್ನು ರಾಜ್ಯಸಭೆಯಲ್ಲಿನ ದ್ವೈವಾರ್ಷಿಕ ವಿದಾಯಕೂಟದಲ್ಲಿ ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ.



ಮೂವರು ಬಲಿಷ್ಠ ನಾಯಕರ ನಿಷ್ಠೆಗೆ ಪ್ರಶಂಸೆ: ತಮ್ಮ ಬದುಕಿನ ಅರ್ಧಕ್ಕೂ ಮೀರಿ ಅವಧಿಯನ್ನು ಸಂಸದೀಯ ಕಲಾಪಗಳಿಗೆ ವ್ಯಯಿಸಿದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ, ಎನ್‌ಸಿಪಿ ನಾಯಕ ಶರದ್ ಪವಾರ್ ಬಲಿಷ್ಠ ನಾಯಕರು ಎಂದು ವಿಶೇಷವಾಗಿ ಪ್ರಶಂಸಿಸಿದರು. ತುಂಬು ಸ್ಫೂರ್ತಿ ಮತ್ತು ಸಮರ್ಪಣಾ ಭಾವದಿಂದ ಈ ನಾಯಕರು ಸದನದ ಕಲಾಪಗಳಿಗೆ ನಿರಂತರವಾಗಿ ಹಾಜರಾಗುತ್ತಿದ್ದ ಪರಿ ನಿಜಕ್ಕೂ ಅನುಕರಣೀಯ. ಎಲ್ಲಾ ಹೊಸ ಸಂಸದರಿಗೆ ಪ್ರೇರಣಾದಾಯಿ ಎಂದು ಪ್ರಧಾನಿ ಮೆಚ್ಚುಗೆ ವ್ಯಕ್ತಪಡಿಸಿದರು.

ಜಾಗೃತಿ ಮೂಡಿಸುತ್ತಿದ್ದ ಹರಿವಂಶ್‌ಗೆ ನಮನ: ರಾಜ್ಯಸಭೆಯ ನಿರ್ಗಮನ ಅಧ್ಯಕ್ಷ ಹರಿವಂಶ್ ಅವರಿಗೆ ಪ್ರಧಾನಿ ಮೋದಿ ನಮನ ಸಲ್ಲಿಸಿದರು.

ಪಕ್ಷ ಭೇದ ಮರೆತು ವಿದಾಯ: ನಿವೃತ್ತರಾಗುತ್ತಿರುವ ತಮ್ಮ ಸಹೋದ್ಯೋಗಿಗಳಿಗೆ ರಾಜ್ಯಸಭಾ ಸದಸ್ಯರು ಬುಧವಾರ ಪಕ್ಷ ಭೇದ ಮರೆತು ವಿದಾಯ ಕೋರಿದರು ಮತ್ತು ನಿರ್ಗಮನ ಸದಸ್ಯರು ಮುಂದೆಯೂ ಸಾರ್ವಜನಿಕ ಬದುಕಲ್ಲಿ ನಿರಂತರ ಸೇವೆ ಸಲ್ಲಿಸಲಿರುವ ಭರವಸೆ ವ್ಯಕ್ತಪಡಿಸಿದರು.ನಿರ್ಗಮನ ಸದಸ್ಯರ ಪೈಕಿ ಬಹುತೇಕರು ತಮ್ಮ ಆರು ವರ್ಷಗಳ ಸೇವಾವಧಿಯಲ್ಲಿ ರಾಜ್ಯಸಭೆಯ ಮೂವರು ಅಧ್ಯಕ್ಷರಾದ ಎಂ.ವೆಂಕಯ್ಯ ನಾಯ್ಡು, ಜಗದೀಪ್ ಧನ್ಖರ್ ಮತ್ತು ಹಾಲಿ ಅಧ್ಯಕ್ಷ ಸಿ.ಪಿ.ರಾಧಾಕೃಷ್ಣನ್ ಅವಧಿಯಲ್ಲೂ ಸೇವೆ ಸಲ್ಲಿಸಿದವರು ಎಂದು ಗಮನ ಸೆಳೆದರು.

ಖರ್ಗೆ ಹೇಳಿಕೆಗೆ ಸದನದಲ್ಲಿ ನಗೆ: ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಬುಧವಾರ ನಿವೃತ್ತಿ ಹೊಂದುತ್ತಿರುವ ಸದಸ್ಯರಿಗೆ ವಿದಾಯ ಹೇಳುವ ಸಂದರ್ಭದಲ್ಲಿ ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡರ ಬಗ್ಗೆ ಖರ್ಗೆ ಅವರು ಪ್ರೇಮ್ ಹುಮಾರೆ ಸಾಥ್, ಶಾದಿ ಮೋದಿ ಜಿ ಕೆ ಸಾಥ್' (ನಮ್ಮೊಂದಿಗೆ ಪ್ರೀತಿ ಮಾಡಿದರು, ಆದರೆ ಪ್ರಧಾನಿ ಮೋದಿ ಅವರೊಂದಿಗೆ ಮದುವೆಯಾದರು) ಎಂಬ ಹೇಳಿಕೆ ನೀಡಿದ್ದಾರೆ. ಇದು ಇಡೀ ಸದನವನ್ನೇ ನಗೆಗಡಲಲ್ಲಿ ತೇಲುವಂತೆ ಮಾಡಿತು.

ಪ್ರತ್ಯೇಕ ಬೆಂಕಿ ಅವಘಡದಲ್ಲಿ 17 ಮಂದಿ ಸಾವು

ಇಂದೋರ್‌ನಲ್ಲಿ ಇವಿ ಸ್ಫೋಟ: ಭೀಕರ ಬೆಂಕಿಗೆ ಎಂಟು ಬಲಿ

• **ಇಂದೋರ್:** ಮೂರು ಅಂತಸ್ತಿನ ಮನೆಯಲ್ಲಿ ಬುಧವಾರ ಮುಂಜಾನೆ ಸಂಭವಿಸಿದ ಅಗ್ನಿ ಅವಘಡದಲ್ಲಿ ಎಂಟು ಮಂದಿ ಮೃತಪಟ್ಟಿದ್ದಾರೆ,. ಮನೆಯ ಹೊರಗೆ ಚಾರ್ಜ್ ಮಾಡಲಾಗುತ್ತಿದ್ದ ಎಲೆಕ್ಟ್ರಿಕ್ ವಾಹನ (ಇವಿ) ಸ್ಫೋಟಗೊಂಡಿದ್ದರಿಂದ ಈ ಬೆಂಕಿ ಕಾಣಿಸಿಕೊಂಡಿದೆ. ಮನೆಯ ಒಳಗಿದ್ದ ಗ್ಯಾಸ್ ಸಿಲಿಂಡರ್ ಕೂಡ ಸ್ಫೋಟಗೊಂಡಿದ್ದರಿಂದ ಜ್ವಾಲೆ ಕ್ಷಣಾರ್ಧದಲ್ಲಿ ಎಲ್ಲಾ ಮಹಡಿಗಳಿಗೆ ವ್ಯಾಪಿಸಿದೆ. ಮನೆಯ ಬಾಗಿಲುಗಳಿಗೆ ಎಲೆಕ್ಟ್ರಾನಿಕ್ ಲಾಕ್‌ಗಳಿದ್ದ ಕಾರಣ ಪೊಲೀಸರು ಒಳ ಪ್ರವೇಶಿಸಲು ಆರಂಭದಲ್ಲಿ ವಿಳಂಬವಾಗಿದೆ. ನಂತರ ಬಾಗಿಲು ಮುರಿದು ಸಿಲುಕಿಕೊಂಡಿದ್ದ ಮೂವರನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೆ ಒಬ್ಬರು ಮೃತಪಟ್ಟಿದ್ದಾರೆ. ಘಟನಾ ಸ್ಥಳದಿಂದ 7 ಮೃತ ದೇಹಗಳನ್ನು ವಶಪಡಿಸಿಕೊಂಡು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ.

ಘಟನೆಯ ಕುರಿತು ಪ್ರಧಾನಿ ಮೋದಿ ಎಕ್ಸ್ ನಲ್ಲಿ ಪ್ರತಿಕ್ರಿಯಿಸಿದ್ದು, ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡವರಿಗೆ ನನ್ನ ಸಂತಾಪಗಳು ಎಂದಿದ್ದಾರೆ. ಮೃತರ ಕುಟುಂಬದವರಿಗೆ ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಯಿಂದ ತಲಾ 2 ಲಕ್ಷ ರೂ. ಹಾಗೂ ಗಾಯಾಳುಗಳಿಗೆ 50,000 ರೂ.ಗಳ ಪರಿಹಾರ ಘೋಷಿಸಲಾಗಿದೆ. ವಾಹನದಲ್ಲಿ ಉಂಟಾದ ತಾಂತ್ರಿಕ ವೈಫಲ್ಯದ ಬಗ್ಗೆ ಅಧಿಕಾರಿಗಳು ಪ್ರಸ್ತುತ ಸಮಗ್ರ ತನಿಖೆ ನಡೆಸುತ್ತಿದ್ದಾರೆ.

ಕಟ್ಟಡ ಅಗ್ನಿ ಅವಘಡ: ಒಂದೇ ಕುಟುಂಬದ 9 ಮಂದಿ ಸಾವು

• **ಹೊಸದಿಲ್ಲಿ:** ಪಾಲಂ ಪ್ರದೇಶದ ಬಹುಮಹಡಿ ಕಟ್ಟಡವೊಂದರಲ್ಲಿ ಬುಧವಾರ ಸಂಭವಿಸಿದ ಭೀಕರ ಅಗ್ನಿ ಅವಘಡದಲ್ಲಿ 70 ವರ್ಷದ ವೃದ್ಧೆ ಮತ್ತು ಮೂವರು ಮಕ್ಕಳು ಸೇರಿದಂತೆ ಒಂದೇ ಕುಟುಂಬದ ಒಂಬತ್ತು ಸದಸ್ಯರು ಮೃತಪಟ್ಟಿದ್ದಾರೆ. ಬೆಂಕಿಯ ಜ್ವಾಲೆಯಿಂದ ತಪ್ಪಿಸಿಕೊಳ್ಳಲು ಕಟ್ಟಡದಿಂದ ಜಿಗಿದ ಮೂವರು ತೀವ್ರವಾಗಿ ಗಾಯಗೊಂಡಿದ್ದಾರೆ. ಜನಜಂಗುಳಿ ಮಾರುಕಟ್ಟೆಯಲ್ಲಿ ಈ ಘಟನೆ ನಡೆದಿದೆ.



ಬೆಳಿಗ್ಗೆ ಸುಮಾರು 6:15ಕ್ಕೆ ಕಟ್ಟಡದ ಕೆಳಮಹಡಿಯಲ್ಲಿದ್ದ ಬಟ್ಟೆ ಮತ್ತು ಸೌಂದರ್ಯವರ್ಧಕ ಮಳಿಗೆಯಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂದು ವರದಿಯಾಗಿದೆ. ಅಂಗಡಿಯಲ್ಲಿದ್ದ ಸುಗಂಧ ದ್ರವ್ಯಗಳು ಮತ್ತು ಇತರ ದಹನಕಾರಿ ವಸ್ತುಗಳಿಂದಾಗಿ ಬೆಂಕಿ ವೇಗವಾಗಿ ಮೇಲಿನ ವಸತಿ ಮಹಡಿಗಳಿಗೆ ವ್ಯಾಪಿಸಿದೆ. ಮೆಟ್ಟಿಲುಗಳ ಬಳಿ ಸಂಭವಿಸಿದ ಶಾರ್ಟ್ ಸರ್ಕ್ಯೂಟ್ ಈ ಅವಘಡಕ್ಕೆ ಕಾರಣವಿರಬಹುದು ಎಂದು ಸ್ಥಳೀಯರು ಶಂಕಿಸಿದ್ದಾರೆ.

ಕಿರುಸುದ್ದಿ

ಅ.ಭಾ.ನೇತ್ರತಜ್ಞರ ಸಂಘಟನೆಯ 'ಕಾರ್ಯಕಲಾಪ ಸಂಪಾದಕರಾಗಿ ಡಾ. ಕೃಷ್ಣಪ್ರಸಾದ್ ಕೂಡ್ಲು



• **ಮಂಗಳೂರು:** ಉಡುಪಿಯ ಪ್ರಸಿದ್ಧ ನೇತ್ರತಜ್ಞ, ಪ್ರಸಾದ್ ನೇತ್ರಾಲಯ ಸೂಪರ್ ಸ್ಪೆಷಾಲಿಟಿ ಸಮೂಹ ಕಣ್ಣಿನ ಆಸ್ಪತ್ರೆಗಳ ವೈದ್ಯಕೀಯ ನಿರ್ದೇಶಕ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ವಿಜೇತ, ನಾಡೋಜ ಡಾ. ಕೃಷ್ಣಪ್ರಸಾದ್ ಕೂಡ್ಲು ಅವರು ಅಖಿಲ ಭಾರತ ನೇತ್ರತಜ್ಞರ ಸಂಘಟನೆಯ ಕಾರ್ಯಕಲಾಪ ಸಂಪಾದಕರಾಗಿ ಅವಿರೋಧವಾಗಿ ಪುನರಾಯ್ಕೆಯಾಗಿದ್ದಾರೆ. ಡಾ. ಕೃಷ್ಣಪ್ರಸಾದ್ ಕೂಡ್ಲು ಅವರು ಹಲವಾರು ವರ್ಷಗಳಿಂದ ಈ ಸಂಘಟನೆಯ ರಾಷ್ಟ್ರೀಯ ಮಟ್ಟದ ವಿವಿಧ ಜವಾಬ್ದಾರಿಯುತ ಹುದ್ದೆಗಳನ್ನು ನಿರ್ವಹಿಸಿದ್ದಾರೆ.

ನವೋದಯ ಶಾಲೆಗೆ ಆಯ್ಕೆ



• **ಸುಬ್ರಹ್ಮಣ್ಯ:** ಗುತ್ತಿಗಾರು ಗ್ರಾಮ ಪಂಚಾಯತ್‌ನ ಅರಿವು ಕೇಂದ್ರ ಮತ್ತು ಶ್ರೀ ದುರ್ಗಾ ಕಂಪ್ಯೂಟರ್ ತರಬೇತಿ ಕೇಂದ್ರದ ಸಹಭಾಗಿತ್ವದಲ್ಲಿ ನಡೆದ 8ನೇ ವರ್ಷದ ನವೋದಯ ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲಾ ಪ್ರವೇಶ ಪರೀಕ್ಷಾ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆದ ಗೋಕ್ಷಿತಾ ಕುಳ್ಳಂಪಾಡಿ ಮುಡಿಪುವಿನ ನವೋದಯ ವಸತಿ ಶಾಲೆಗೆ ಪ್ರಥಮ ಸುತ್ತಿನಲ್ಲಿ ಆಯ್ಕೆಯಾಗಿದ್ದಾರೆ. ಅವರಿಗೆ ಗ್ರಂಥಾಲಯ ಮೇಲ್ವಿಚಾರಕಿ ಅಭಿಲಾಷ ಮೋಟ್ನೂರು ತರಬೇತಿ ನೀಡಿದ್ದಾರೆ. ಗೋಕ್ಷಿತಾ ಧನ್ಯ ಮತ್ತು ಗೋಪಾಲಕೃಷ್ಣ ಕುಳ್ಳಂಪಾಡಿ ದಂಪತಿಯ ಪುತ್ರಿ.

ಸಿಎಸ್‌ಆರ್ ಸಮೀಕ್ಷೆ: ಎಸ್‌ಡಿಎಂ ಕಾನೂನು ಕಾಲೇಜಿಗೆ ಪ್ರಥಮ ರ್‍ಯಾಂಕ್

• **ಮಂಗಳೂರು:** ದೇಶದ ಪ್ರತಿಷ್ಠಿತ ಮ್ಯಾಗಜೀನ್ ಕಾಂಪೀಟೇಶನ್ ಸಕ್ಸೆಸ್ ರಿವ್ಯೂ (ಸಿ.ಎಸ್.ಆರ್) ಇವರು 2025ರಲ್ಲಿ ನಡೆಸಿದ ಕಾನೂನು ಕಾಲೇಜುಗಳ ರಾಷ್ಟ್ರ ವ್ಯಾಪಿ ಸಮೀಕ್ಷೆಯಲ್ಲಿ ಮಂಗಳೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾನೂನು ಮಹಾವಿದ್ಯಾಲಯವು ಟಾಪ್ ಎಮಿನೆಂಟ್ ಲಾ ಸ್ಕೂಲ್ ವರ್ಗದಲ್ಲಿ ಅಗ್ರ ಸ್ಥಾನವನ್ನು ಪಡೆದುಕೊಂಡಿದೆ. ಕಾಲೇಜುಗಳ ಮೂಲಭೂತ ಸೌಕರ್ಯ, ಶೈಕ್ಷಣಿಕ ಸ್ಥಿತಿಗತಿ, ಬೋಧನಾ ಸಂಪನ್ಮೂಲಗಳು, ಶಿಕ್ಷಕರ ಗುಣಮಟ್ಟ, ನೇಮಕಾತಿ ಹಾಗೂ ತರಬೇತಿ ಮುಂತಾದ ಮಾನದಂಡಗಳನ್ನು ಆಧರಿಸಿ ಈ ಸಮೀಕ್ಷೆಯನ್ನು ಕೈಗೊಳ್ಳಲಾಗಿತ್ತು ಎಂದು ಎಸ್‌ಡಿಎಂ ಕಾನೂನು ಕಾಲೇಜು ಪ್ರಾಂಶುಪಾಲರು ತಿಳಿಸಿದ್ದಾರೆ.

ಮಾ. 21: ಸೇವಾಭಾರತಿಯಿಂದ ವೈದ್ಯಕೀಯ ತಪಾಸಣಾ ಶಿಬಿರ

• **ಮಂಗಳೂರು:** ಸೇವಾಭಾರತಿಯ ಸೇವಾ ಪ್ರಕಲ್ಪವಾದ 'ಅನಂತಸೌಖ್ಯ'ವು ಯೆನೆಪೋಯಾ ಮೆಡಿಕಲ್ ಕಾಲೇಜು, ಡಿಮೆನ್ಶಿಯಾ ಇಂಡಿಯಾ ಅಲಯನ್ಸ್, ಸ್ಫೂರ್ತಿ ಚಾರಿಟೇಬಲ್ ಟ್ರಸ್ಟ್, ಹಿರಿಯ ನಾಗರಿಕರ ಸಂಘದ ಜಂಟಿ ಆಶ್ರಯದೊಂದಿಗೆ ಹಿರಿಯ ನಾಗರಿಕರಿಗಾಗಿ ಮಾ. 21ರಂದು ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 12 ಗಂಟೆಯ ತನಕ ಉಚಿತ ಸಾಮಾನ್ಯ ವೈದ್ಯಕೀಯ ತಪಾಸಣಾ ಶಿಬಿರವನ್ನು ವಿ.ಟಿ.ರಸ್ತೆಯಲ್ಲಿರುವ ಚೇತನಾ ಬಾಲವಿಕಾಸ ಕೇಂದ್ರದ ವಠಾರದಲ್ಲಿ ಆಯೋಜಿಸಿದೆ. ಈ ಶಿಬಿರವನ್ನು ಡಾ. ಪ್ರಭಾ ಅಧಿಕಾರಿ ತಮ್ಮ ತಂಡದೊಂದಿಗೆ ನಡೆಸಿಕೊಡಲಿದ್ದಾರೆ.

ಪುತ್ತೂರಿನಲ್ಲಿ ವೈದ್ಯಕೀಯ ಆಸ್ಪತ್ರೆ ನಿರ್ಮಾಣಕ್ಕೆ ಅನುದಾನ ಸರಕಾರದಿಂದ ಅಧಿಕೃತ ಆದೇಶ

ಪುತ್ತೂರು: ಪುತ್ತೂರಿನ ಸೇಡಿಯಾಪಿನಲ್ಲಿ ಕಾಯ್ದಿರಿಸಲಾಗಿರುವ ಜಾಗದಲ್ಲಿ 300 ಬೆಡ್‌ನ ಮೆಡಿಕಲ್ ಆಸ್ಪತ್ರೆ ನಿರ್ಮಾಣಕ್ಕೆ ಅನುದಾನವನ್ನು ಒದಗಿಸುವುದರ ಜೊತೆಗೆ ಕಟ್ಟಡದ ರೂಪರೇಶೆಗಳ ಬಗ್ಗೆಯೂ ಸರಕಾರದ ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಅಂತಿಮ ಮುದ್ರೆ ಬಿದ್ದಿದೆ.

2025–26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ–138ರಲ್ಲಿ ಪುತ್ತೂರಿನಲ್ಲಿ ಹೊಸ ವೈದ್ಯಕೀಯ ಕಾಲೇಜನ್ನು ಸ್ಥಾಪಿಸಲು ಉದ್ದೇಶಿಲಾಗಿದೆ. ಇದಕ್ಕಾಗಿ ಈಗಿರುವ 100 ಹಾಸಿಗೆ ಸಾಮರ್ಥ್ಯದ ತಾಲೂಕು ಆಸ್ಪತ್ರೆಯನ್ನು ಉನ್ನತೀಕರಿಸಲು ಪ್ರಸಕ್ತ ವರ್ಷದಲ್ಲಿ ಕ್ರಮ ವಹಿಸಲಾಗುವುದು ಎಂದು ಘೋಷಿಸಲಾಗಿತ್ತು.

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಬನ್ನೂರು ಗ್ರಾಮದ ಸೇಡಿಯಾಪುನಲ್ಲಿ, 300 ಹಾಸಿಗೆಗಳ ಬೋಧನಾ ಆಸ್ಪತ್ರೆಯನ್ನು ನಿರ್ಮಿಸುವ ಸಂಬಂಧ ಮುಖ್ಯ ಇಂಜಿನಿಯರ್ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ಘಟಕ ಕಾಮಗಾರಿಯ ರೂ.180 ಕೋಟಿ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ ಸಲ್ಲಿಸಿದ್ದು ಆಡಳಿತಾತ್ಮಕ ಅನುಮೋದನೆ ಕೋರಿದ್ದಾರೆ. ಮುಖ್ಯ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ಘಟಕದ ಪ್ರಸ್ತಾವನೆಯಲ್ಲಿ ಕಂದಾಯ ಇಲಾಖೆಯಿಂದ ಪುತ್ತೂರು ತಾಲೂಕಿನ ಬನ್ನೂರು ಗ್ರಾಮದ ಸೇಡಿಯಾಪು ಬಳಿ 40 ಎಕರೆ ಜಾಗವನ್ನು ಗುರುತಿಸಿ, ಜಿಲ್ಲಾ ಸರಕಾರಿ ವೈದ್ಯಕೀಯ ಆಸ್ಪತ್ರೆ ಸ್ಥಾಪಿಸುವ ಉದ್ದೇಶಕ್ಕೆ ಮೀಸಲಿರಿಸಿದ ಜಾಗದಲ್ಲಿ ಸದರಿ ಯೋಜನೆಯನ್ನು ಪ್ರಸ್ತಾಪಿಸಲಾಗಿರುತ್ತದೆ. ಹೊಸ ಹಾಸ್ಪಿಟಲ್ ನಿರ್ಮಾಣಕ್ಕೆ ಟೆಂಡರ್ ಪ್ರಕ್ರಿಯೆಯೂ ಮುಗಿದಿರುತ್ತದೆ ಎಂದು ತಿಳಿಸಲಾಗಿದೆ.

> **ಶೀಘ್ರವೇ ಶಿಲಾನ್ಯಾಸ**
> **ಮೆಡಿಕಲ್ ಕಾಲೇಜ್ ನಿರ್ಮಾಣಕ್ಕೆ ಮೊದಲು ಮೆಡಿಕಲ್ ಹಾಸ್ಪಿಟಲ್ ನಿರ್ಮಾಣವಾಗಬೇಕಿದೆ. ಈಗಾಗಲೇ ನಿಯೋಜಿತ ಬನ್ನೂರು ಗ್ರಾಮದ ಸೇಡಿಯಾಪಿನಲ್ಲಿ 300 ಬೆಡ್‌ನ ಹಾಸ್ಪಿಟಲ್ ನಿರ್ಮಾಣವಾಗಲಿದೆ. ಇದಕ್ಕಾಗಿ ರೂ.180 ಕೋಟಿ ಮಂಜೂರಾಗಿದ್ದು ಟೆಂಡರ್ ಪ್ರಕ್ರಿಯೆ ಅಂತಿಮವಾಗಿದೆ. ಕೆಲವೇ ದಿನಗಳಲ್ಲಿ ಕಾಮಗಾರಿಗೆ ಶಿಲಾನ್ಯಾಸವೂ ನಡೆಯಲಿದೆ. ಹಾಸ್ಪಿಟಲ್ ನಿರ್ಮಾಣವಾದ ಬಳಿಕ ಮೆಡಿಕಲ್ ಕಾಲೇಜ್ ಕಟ್ಟಡ ನಿರ್ಮಾಣ ಪ್ರಕ್ರಿಯೆಗೆ ಚಾಲನೆ ದೊರೆಯಲಿದೆ.**
> ■ ಅಶೋಕ್ ರೈ, ಶಾಸಕರು ಪುತ್ತೂರು

ಆಳ್ವಾಸ್ ನುಡಿಸಿರಿ ವಿರಾಸತ್ ಮಂಗಳೂರು ಘಟಕದ ವತಿಯಿಂದ ಮಾ.21ರಂದು

ಆಳ್ವಾಸ್ ಸಾಂಸ್ಕೃತಿಕ ವೈಭವ



• **ಮಂಗಳೂರು:** ಆಳ್ವಾಸ್ ನುಡಿಸಿರಿ–ವಿರಾಸತ್ ಮಂಗಳೂರು ಘಟಕದ ಆಶ್ರಯದಲ್ಲಿ ಮಂಗಳೂರಿನ ಲಾಲ್‌ಭಾಗ್ ಕರಾವಳಿ ಉತ್ಸವ ಮೈದಾನದ ಕೀರ್ತಿಶೇಷ ಡಾ. ಎನ್. ವಿನಯ ಹೆಗ್ಡೆ ವೇದಿಕೆಯಲ್ಲಿ ಮಾ. 21ರಂದು ಸಂಜೆ 6.15ಕ್ಕೆ ಆಳ್ವಾಸ್ ಸಾಂಸ್ಕೃತಿಕ ವೈಭವ ಮೇಳೈಸಲಿದೆ.

ಆರಂಭದಲ್ಲಿ 45 ನಿಮಿಷಗಳ ಕಾಲ ನಡೆಯುವ ಸಭಾ ಕಾರ್ಯಕ್ರಮವನ್ನು ದಕ್ಷಿಣ ಕನ್ನಡ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಉದ್ಘಾಟಿಸುವರು. ಮಂಗಳೂರು ನಗರ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ವೇದವ್ಯಾಸ ಕಾಮತ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಮಾಜದ ಎಲ್ಲಾ ಸ್ತರಗಳ ಪ್ರಮುಖರು ಸಭಾ ಕಾರ್ಯಕ್ರಮದಲ್ಲಿ ಗೌರವ ಉಪಸ್ಥಿತಿ ಇರಲಿದ್ದಾರೆ. ಈ ಸಾಂಸ್ಕೃತಿಕ ಕಾರ್ಯಕ್ರಮವನ್ನು ಕೀರ್ತಿಶೇಷ ಡಾ. ಎನ್. ವಿನಯ ಹೆಗ್ಡೆಯವರಿಗೆ ಅರ್ಪಿಸಲಾಗಿದೆ ಎಂದು ಮೂಡುಬಿದಿರೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರೇಕ್ಷಕರಿಗಾಗಿ 8,000ಕ್ಕೂ ಅಧಿಕ ಆಸನದ ವ್ಯವಸ್ಥೆ ಮಾಡಲಾಗಿದ್ದು, ಎಲ್ಲರಿಗೂ ಉಚಿತ ಪ್ರವೇಶವಿರಲಿದೆ. ಸಾಂಸ್ಕೃತಿಕ ಕಾರ್ಯಕ್ರಮ ಕ್ಲಪ್ತ ಸಮಯಕ್ಕೆ ಆರಂಭವಾಗಿ ನಿಗದಿತ ಸಮಯಕ್ಕೆ ಮುಕ್ತಾಯಗೊಳ್ಳಲಿದೆ ಎಂದರು.

ಆಳ್ವಾಸ್ ಸಾಂಸ್ಕೃತಿಕ ವೈಭವವು ಕರ್ನಾಟಕದ ಅತ್ಯಂತ ಪ್ರಸಿದ್ಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಇದು ಕೇವಲ ಒಂದು ಕಾರ್ಯಕ್ರಮವಲ್ಲ, ನಮ್ಮ ದೇಶದ ಸಂಸ್ಕೃತಿ, ಪರಂಪರೆ ಮತ್ತು ವೈವಿಧ್ಯತೆಯ ಸೊಬಗನ್ನು ಒಂದೇ ವೇದಿಕೆಯಲ್ಲಿ ಕಣ್ತುಂಬಿಸಿಕೊಳ್ಳಲು ಇರುವ ಸುಂದರ ಅವಕಾಶ. ಈ ಕಾರ್ಯಕ್ರಮದ ಮೂಲಕ ನೂರು ಸಂದೇಶಗಳು ಸಮಾಜಕ್ಕೆ ತಲುಪಿ, ಸ್ವಸ್ಥ ಸಮಾಜದ ನಿರ್ಮಾಣ ಸಾಧ್ಯವಿದೆ ಎಂದು ಅವರು ಹೇಳಿದರು.

ಆಳ್ವಾಸ್ ನುಡಿಸಿರಿ–ವಿರಾಸತ್ ಮಂಗಳೂರು ಘಟಕದ ಸಂಘಟನಾ ಕಾರ್ಯದರ್ಶಿ ಪ್ರಸಾದ್ ರೈ ಕಲ್ಲಿಮಾರ್, ಕೋಶಾಧಿಕಾರಿ ಶಶಿರಾಜ್ ಕಾವೂರು, ಪ್ರಮುಖರಾದ ಪ್ರದೀಪ ಕುಮಾರ ಕಲ್ಕೂರ, ಲೀಲಾಕ್ಷ ಕರ್ಕೇರ, ಆಳ್ವಾಸ್ ಕಾಲೇಜು ಉಪನ್ಯಾಸಕ ರಾಮ್ ಪ್ರಸಾದ್ ಕಾಂಚೋಡು ಉಪಸ್ಥಿತರಿದ್ದರು.

> **ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ವತಿಯಿಂದ 2012ರಿಂದ 88 ಆಳ್ವಾಸ್ ನುಡಿಸಿರಿ ವಿರಾಸತ್ ಘಟಕಗಳ ಮೂಲಕ ದೇಶ-ವಿದೇಶಗಳಲ್ಲಿ 500ಕ್ಕೂ ಅಧಿಕ ಕಾರ್ಯಕ್ರಮ ನೀಡಲಾಗಿದೆ. ಈ ವರ್ಷ 40 ಕಾರ್ಯಕ್ರಮ ನೀಡಿದ್ದೇವೆ. ಈ ಕಾರ್ಯಕ್ರಮಗಳಲ್ಲಿ ಮನೋರಂಜನೆ ಜತೆಗೆ ಸಂದೇಶ ನೀಡಿದ್ದೇವೆ. ಆಳ್ವಾಸ್ ಸಾಂಸ್ಕೃತಿಕ ವೈಭವ ನಮಗೆ ನೆಮ್ಮದಿ, ಖುಷಿ ನೀಡಿದೆ. ಜನರಿಂದ ಉತ್ತಮ ಸಂದೇಶ ವ್ಯಕ್ತವಾಗಿದೆ. ಸಾಂಸ್ಕೃತಿಕ ವಿಭಾಗದಲ್ಲಿ ದತ್ತು ಸ್ವೀಕಾರದ ವಿದ್ಯಾರ್ಥಿಗಳು ಅತ್ಯಂತ ಆಸಕ್ತಿಯಿಂದ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ.**
> ■ ಡಾ.ಎಂ. ಮೋಹನ ಆಳ್ವ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಅಧ್ಯಕ್ಷರು

- ಎಲ್ಲರಿಗೂ ಉಚಿತ ಪ್ರವೇಶ
- ಪ್ರೇಕ್ಷಕರಿಗಾಗಿ 8,000ಕ್ಕೂ ಅಧಿಕ ಆಸನದ ವ್ಯವಸ್ಥೆ
- ಕ್ಲಪ್ತ ಸಮಯಕ್ಕೆ ಆರಂಭವಾಗಿ ನಿಗದಿತ ಸಮಯಕ್ಕೆ ಮುಕ್ತಾಯ

ಸಂಜೆ 7ರಿಂದ ರಾತ್ರಿ 10ರವರೆಗೆ ಕಾರ್ಯಕ್ರಮ

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ 500ಕ್ಕೂ ಅಧಿಕ ವಿದ್ಯಾರ್ಥಿ ಕಲಾವಿದರಿಂದ ಭಾರತೀಯ ಕಲಾಪ್ರಕಾರಗಳಾದ ಯೋಗ ದೀಪಿಕಾ, ಶಾಸ್ತ್ರೀಯ ನೃತ್ಯ–ಅಷ್ಟಲಕ್ಷ್ಮಿ, ಬಡಗುತಿಟ್ಟು ಯಕ್ಷಗಾನ ಅಂಕರಾರ್ಧ ಶರೀರಿಣಿ, ಗುಜರಾತಿನ ದಾಂಡಿಯ ನೃತ್ಯ, ಮಣಿಪುರಿ ಸ್ಟಿಕ್ ಡಾನ್ಸ್, ಮಲ್ಲಕಂಬ ಹಾಗೂ ಕಸರತ್ತು, ಸೃಜನಾತ್ಮಕ ನೃತ್ಯ, ಡೊಳ್ಳು ಕುಣಿತ, ಕಥಕ್ ವರ್ಷಧಾರೆ, ಪುರುಲಿಯಾ ಸಿಂಹ ನೃತ್ಯ, ತೆಂಕುತಿಟ್ಟು ಯಕ್ಷಗಾನ ಹಿರಣ್ಯಾಕ್ಷ ವಧೆ, ಬೊಂಬೆ ವಿನೋದಾವಳಿಯ ಪ್ರದರ್ಶನ ನಡೆಯಲಿದೆ. ಸಂಜೆ 7ರಿಂದ ರಾತ್ರಿ 10ರವರೆಗೆ ಆಳ್ವಾಸ್ ಸಾಂಸ್ಕೃತಿಕ ವೈಭವ ಕಣ್ತುಂಬಿಕೊಳ್ಳಬಹುದು ಎಂದು ಡಾ.ಎಂ. ಮೋಹನ ಆಳ್ವ ತಿಳಿಸಿದರು.

ಕಾರ್ಕಳ ಹೊಟೇಲ್ ಮಾಲಕರ ನಿರ್ಧಾರ

ಇಲೆಕ್ಟ್ರಿಕ್ ಸ್ಟವ್ ಬಳಕೆ ಮಾಡಿ ಗ್ರಾಹಕರಿಗೆ ಸೇವೆ

• **ಕಾರ್ಕಳ :** ಗ್ಯಾಸ್ ಕೊರತೆಯಿಂದ ಈಗಾಗಲೇ 5–10 ಕ್ಕೂ ಹೆಚ್ಚು ಹೊಟೇಲ್‌ಗಳು ಕಾರ್ಕಳದಲ್ಲಿ ಮುಚ್ಚಿವೆ, ಆದರೆ ಕೆಲವೆಡೆ 1–2 ದಿನಕ್ಕಾಗುವಷ್ಟು ಗ್ಯಾಸ್ ಇದೆ. ಒಂದು ವೇಳೆ ಮುಗಿದರೂ ಹೊಟೇಲ್ ಬಂದ್ ಮಾಡುವ ಬದಲು ಇಲೆಕ್ಟ್ರಿಕ್ ಸ್ಟವ್ ಬಳಕೆಗೆ ಗ್ರಾಹಕರಿಗೆ ಸೇವೆ ನೀಡುವುದಾಗಿ ಕೆಲವೊಂದು ಮಾಲೀಕರು ತೀರ್ಮಾನಿಸಿದ್ದಾರೆ.

ನಷ್ಟ, ಕಾರ್ಮಿಕರ ಸಮಸ್ಯೆ ಎದುರಾಗುವ ಆತಂಕದಿಂದ ನಿರ್ಧಾರ

ವಾಣಿಜ್ಯ ಬಳಕೆಯ ಸಿಲಿಂಡರ್ ಸಮಸ್ಯೆ ನಡುವೆಯೂ ಗ್ರಾಹಕರು ಮತ್ತು ಉದ್ಯಮದ ಹಿತದೃಷ್ಟಿಯಿಂದ ಆಹಾರದ ಮೆನುವಿನಲ್ಲಿ ಕೆಲ ಬದಲಾವಣೆಯೊಂದಿಗೆ ಹೊಟೇಲ್‌ಗಳನ್ನು ತೆರೆಯಲು ಹೊಟೇಲ್ ಮಾಲೀಕರು ತೀರ್ಮಾನ ತೆಗೆದುಕೊಂಡಿದ್ದಾರೆ. ಒಂದೊಮ್ಮೆ ಹೋಟೆಲ್ ಬಂದ್ ಮಾಡಿದರೆ ದೊಡ್ಡ ನಷ್ಟ ಎದುರಿಸಬೇಕಾಗುತ್ತದೆ. ಕಾರ್ಮಿಕರ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ.

ಎರಡು ಮೂರು ದಿನಕ್ಕೆ ಮಾತ್ರ

ಕೆಲವು ಹೊಟೇಲ್‌ಗಳಲ್ಲಿ ಎರಡು –ಮೂರು ದಿನಕ್ಕಾಗುವಷ್ಟು ಮಾತ್ರ ಗ್ಯಾಸ್ ಸಿಲಿಂಡರ್ ಹೊಂದಿವೆ. ಇಂತಹ ಸಂದಿಗ್ಧ ಸಮಯದಲ್ಲೂ ಯಾವುದೇ ಕಾರಣಕ್ಕೂ ಹೊಟೇಲ್‌ಗಳನ್ನು ಬಂದ್ ಮಾಡುವುದಿಲ್ಲ. ಎಷ್ಟೇ ಕಷ್ಟವಾದರೂ ಸರಿ ತೆರೆಯುವ ಮೂಲಕ ಗ್ರಾಹಕರಿಗೆ ಸೇವೆ ನೀಡುವುದಾಗಿ ಹೊಟೇಲ್ ಮಾಲೀಕರು ಹೊಸದಿಗಂತಕ್ಕೆ ತಿಳಿಸಿದ್ದಾರೆ.

ಸಮಸ್ಯೆಗೆ ಪರ್ಯಾಯ

ಗ್ಯಾಸ್‌ಗೆ ಪರ್ಯಾಯವಾಗಿ ಇಂಡಕ್ಷನ್ ಸ್ಟವ್ (ಇಲೆಕ್ಟ್ರಿಕ್ ಒಲೆ)ಗಳನ್ನು ಬಳಸಿ ಗ್ರಾಹಕರಿಗೆ ಊಟ, ತಿಂಡಿ ನೀಡಲು ತೀರ್ಮಾನಿಸಲಾಗಿದೆ.

> **ಗ್ಯಾಸ್ ಇಲ್ಲದೆ ಇಂಡಕ್ಷನ್ ಹಾಗೂ ಸೌದೆಯಿಂದ ಟೀ ಹಾಗೂ ತಿಂಡಿ ಮಾಡುತ್ತಿದ್ದೇವೆ. ಎಷ್ಟು ಕಷ್ಟ ಬಂದರೂ ಹೊಟೇಲ್ ಬಂದ್ ಮಾಡುವುದಿಲ್ಲ. ಹೊಟೇಲ್ ಬಂದ್ ಮಾಡಿದಲ್ಲಿ ಕೆಲಸದವರಿಗೆ ಕೆಲಸ ವಿಲ್ಲ. ಮತ್ತೆ ಬೇರೆ ಕಡೆ ಕೆಲಸಕ್ಕೆ ಸೇರಿ ಕೊಂಡರೆ ಮತ್ತೆ ಕೆಲಸದವರ ಸಮಸ್ಯೆ**
> ■ ನಾಗರಾಜ್ ಪೈ, ಮಾಲಕರು, ಹೋಟೆಲ್ ಶ್ರೀ ದುರ್ಗಾ ಭವನ, ಜೋಡುರಸ್ತೆ, ಕಾರ್ಕಳ

ಆತಂಕ

ಅಡುಗೆ ಅನಿಲ ಸಮಸ್ಯೆ ಹೀಗೇ ಮುಂದುವರಿದರೆ ಮತ್ತಷ್ಟು ಹೊಟೇಲ್‌ಗಳು ಬಂದ್ ಆಗುವ ಆತಂಕ ಎದುರಾಗಿದೆ. ದೊಡ್ಡ ಹೊಟೇಲ್‌ಗಳಿಗೆ ದಿನಕ್ಕೆ ಕನಿಷ್ಠ 2–3 ಸಿಲಿಂಡರ್‌ಗಳು ಬೇಕಾಗುತ್ತವೆ. ಗ್ಯಾಸ್ ಖಾಲಿಯಾದರೆ ಮುಂದೇನು ಎಂಬ ಆತಂಕ ಕಾಡುತ್ತಿದೆ. ಇದರ ನೇರ ಪರಿಣಾಮ ಗ್ರಾಹಕರ ಮೇಲೂ ಆಗಲಿದೆ. ಹೊಟೇಲ್‌ಗಳು ಆರ್ಥಿಕ ಸಂಕಷ್ಟಕ್ಕೆ ಒಳಗಾದರೆ, ಗ್ರಾಹಕರು ತಿಂಡಿ, ಊಟಕ್ಕಾಗಿ ಪರದಾಡುವಂತಹ ಸ್ಥಿತಿ ನಿರ್ಮಾಣವಾಗಲಿದೆ ಎಂದು ಹೊಟೇಲ್ ಮಾಲೀಕರು ತಮ್ಮ ಆತಂಕ ಹೊರ ಹಾಕಿದ್ದಾರೆ.

ದೈವ ನರ್ತಕ ವಿವಾದ: ಗಣೇಶ್ ಸ್ಪಷ್ಟನೆ

• **ಮಂಗಳೂರು:** ಬೋಳೂರಿನಲ್ಲಿ ಜಾರಂದಾಯ ದೈವಸ್ಥಾನದ ಬಂಟ ದೈವಕ್ಕೆ ಕ್ರಿಶ್ಚಿಯನ್ ಯುವಕನಿಂದ ನರ್ತನ ಸೇವೆ ಮಾಡಿಸಲಾಗಿದೆ ಎಂಬ ಆರೋಪ ನಿರಾಧಾರವಾಗಿದೆ. ಪಂಬದ ಸಮುದಾಯದ ಗಣೇಶ್ ಪದವಿನಂಗಡಿ ಅವರ ಪುತ್ರನಾದ ಸುಶಾಂತ್ ಬಂಗೇರ ಬೋಳೂರಿನಲ್ಲಿ ಬಂಟ ದೈವದ ನೇಮ ಕಟ್ಟಿದ್ದರು. ಸುಶಾಂತ್ ಅವರ ಜಾತಿ ಪ್ರಮಾಣ ಪತ್ರ ಹಾಗೂ ಇತರ ದಾಖಲೆಗಳಲ್ಲಿ ಅವರು ಪಂಬದ ಸಮುದಾಯಕ್ಕೆ ಸೇರಿದವರೆಂಬ ದೃಢೀಕರಣವಿದೆ ಎಂದು ಹಿರಿಯ ದೈವ ನರ್ತಕ ಚಿಪ್ಪಾರು ಗಣೇಶ್ ಪಂಬದ ಹೇಳಿದ್ದಾರೆ.

ಈ ಬಗ್ಗೆ ಇತ್ತೀಚೆಗೆ ಪಂಬದ ಸಮುದಾಯದ ಡಾ. ರತಿ ಎಂಬವರು ಮಾಡಿರುವ ಆರೋಪವನ್ನು ಬುಧವಾರ ಸುದ್ದಿಗೋಷ್ಠಿಯಲ್ಲಿ ನಿರಾಕರಿಸಿದ ಅವರು, ಸುಶಾಂತ್ ಬಂಗೇರ ಕ್ರೈಸ್ತ ಸಮುದಾಯಕ್ಕೆ ಸೇರಿದವರು ಎಂಬುದಕ್ಕೆ ಅಧಿಕೃತ ದಾಖಲೆಯನ್ನು ಮಾಧ್ಯಮದ ಮುಂದೆ ನೀಡಬೇಕು. ಅವರು ಪಂಬದ ಸಮುದಾಯಕ್ಕೆ ಸೇರಿದವರು ಎಂಬ ಬಗ್ಗೆ ನಮ್ಮಲ್ಲಿ ಅಗತ್ಯ ಕಾನೂನು ದಾಖಲೆಗಳಿವೆ ಎಂದರು.

ಗಣೇಶ್ ಪದವಿನಂಗಡಿಯವರು ಮದುವೆ ಆಗಿರುವುದು ಕ್ರೈಸ್ತ ಸಮುದಾಯ ಮಹಿಳೆ. ಆದರೆ ಅವರು ವಿವಾಹದ ಬಳಿಕ ಹಿಂದೂ ಸಂಪ್ರದಾಯ ಹಾಗೂ ಪಂಬದ ಜಾತಿಯ ನೀತಿ ನಿಯಮಗಳನ್ನು ಪಾಲಿಸಿಕೊಂಡು ಬಂದಿದ್ದಾರೆ. ಗಣೇಶ್ ಪದವಿನಂಗಡಿ ಅವರ ಪತ್ನಿ ಸವಿತಾ ಹಿಂದು ಸಂಪ್ರದಾಯದ ಪ್ರಕಾರ ಮದುವೆಯಾಗಿ ಸುಶಾಂತ್ ಪಂಬದ ಅವರನ್ನು ಮಗುವಾಗಿ ಪಡೆದಿದ್ದಾರೆ. ಅವರು ತಮ್ಮ ತಂದೆಯ ಕುಲವೃತ್ತಿಯನ್ನೇ ಮುಂದುವರಿಸಿಕೊಂಡು ಬಂದಿದ್ದು, ಕಳೆದ 13 ವರ್ಷಗಳಿಂದ ದೈವಾರಾಧನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಬಾರ್ಕೂರಿನಿಂದ ಮಂಗಳೂರಿನವರೆಗೆ ಬಂಟ, ಪಿಲಿಚಾಮುಂಡಿ ನರ್ತನ ಮಾಡಿಕೊಂಡು ಪ್ರಶಂಸೆಗೂ ಪಾತ್ರರಾಗಿದ್ದಾರೆ. ಹಾಗಿದ್ದರೂ ಅವರು ಕ್ರಿಶ್ಚಿಯನ್ ಎಂಬ ಆರೋಪ ಹೊರಿಸಿರುವುದು ಪಂಬದ ಸಮುದಾಯ ಮಾತ್ರವಲ್ಲದೆ, ದೈವಾರಾಧನೆಯ ನರ್ತನ ಸೇವೆಯಲ್ಲಿ ತೊಡಗಿಕೊಂಡಿರುವ ಎಲ್ಲಾ ಸಮುದಾಯಗಳಿಗೆ ಮಾಡಿರುವ ಅವಮಾನ ಎಂದು ಸೂರಜ್ ಚಿಪ್ಪಾರು ಹೇಳಿದರು.

ದಾಖಲಾತಿ ತೋರಿಸಲಿ

ನಾನು ಮತ್ತು ನನ್ನ ಮಕ್ಕಳು ಯಾವುದೇ ಚರ್ಚ್‌ನಲ್ಲಿ ದಾಖಲಾತಿ ಹೊಂದಿದ್ದಲ್ಲಿ ಅದನ್ನು ಆರೋಪ ಮಾಡಿದವರು ತಂದು ತೋರಿಸಲಿ. ಈ ರೀತಿಯ ಆರೋಪಗಳಿಂದಾಗಿ ನನ್ನ ಮಗ ಕೆಲಸ ಇಲ್ಲದೆ ಮಾನಸಿಕ ಹಿಂಸೆ ಅನುಭವಿಸುವಂತಾಗಿದೆ. ರತಿ ಎಂಬವರು ನನ್ನ ಹಿರಿಯ ಪುತ್ರನಿಂದ ನೇಮ ಕಟ್ಟಿಸಿದ್ದಾರೆ. ಈಗ ಯಾವುದೋ ವೈಯಕ್ತಿಕ ದ್ವೇಷದಿಂದ ಈ ರೀತಿ ಆರೋಪ ಮಾಡುವುದು ಸರಿಯಲ್ಲ ಎಂದು ಸವಿತಾ ಅವರು ಹೇಳಿದರು.

ಶಕ್ತಿನಗರ ಮುಖ್ಯ ಟ್ಯಾಂಕ್‌ನಿಂದ ಕುಂಜತ್ತಬೈಲ್ ಟ್ಯಾಂಕ್‌ಗೆ ಕಡಿಮೆ ನೀರು ಪೂರೈಕೆ

ಮರಕಡದ ಎತ್ತರದ ಸ್ಥಳಗಳಿಗೆ ನೀರು ಬರುತ್ತಿಲ್ಲ

• ಚಿತ್ರ: ರಾಜೇಶ್ ಶೆಟ್ಟಿ ಬಳ್ಳಾಲ್‌ಬಾಗ್



▸ **ಹರೀಶ ಕುಲ್ಕುಂದ**

• **ಮಂಗಳೂರು:** ನೀರು ಪ್ರತಿದಿನ ಸರಬರಾಜು ಆಗುತ್ತಿದೆ. ಆದರೆ, ಪೂರೈಕೆಯಾಗುವ ನೀರಿನ ಪ್ರಮಾಣ ಕಡಿಮೆ. ಎತ್ತರದ ಸ್ಥಳಗಳಿಗೆ ನೀರು ಬರುತ್ತಿಲ್ಲ. ಇದರಿಂದಾಗಿ ಕೆಲವರಿಗೆ ಟ್ಯಾಂಕರ್ ನೀರು ಇಲ್ಲಿ ಅನಿವಾರ್ಯ...

ಇದು ಮರಕಡ ವಾರ್ಡ್‌ನ ಕುಡಿಯುವ ನೀರಿನ ಸ್ಥಿತಿ.

ಮರಕಡ, ಮಿಲ್ಲತ್‌ನಗರ ಹಳೆಮೊಗರು, ಅಂಡಾಲಬೀಡು ಪ್ರದೇಶಗಳಲ್ಲಿ ನೀರಿನ ಸಮಸ್ಯೆಯಿದೆ. ಈ ಎಲ್ಲ ಸ್ಥಳಗಳಲ್ಲಿ ಬೇಡಿಕೆ ಇರುವಷ್ಟು ಕುಡಿಯುವ ನೀರು ಪೂರೈಕೆ ಆಗುತ್ತಿಲ್ಲ. ಈ ಪ್ರದೇಶದಲ್ಲಿ ಕಳೆದ ಎರಡು ತಿಂಗಳಿನಿಂದ ಕಡಿಮೆ ನೀರು ಪೂರೈಕೆಯ ಸಮಸ್ಯೆ ಉದ್ಭವಿಸಿದೆ. ಇಲ್ಲಿನ ಸುಮಾರು 800 ಮನೆಗಳು ಇದರಿಂದ ಕುಡಿಯುವ ನೀರಿಗೆ ತೊಂದರೆಗೆ ಒಳಗಾಗಿವೆ.

ಈ ಹಿಂದೆ ಇಲ್ಲಿ ಪ್ರತಿದಿನ ಬೆಳಗ್ಗೆ 6.30ರಿಂದ 11.30ರವರೆಗೆ ನೀರು ಪೂರೈಕೆ ಆಗುತ್ತಿತ್ತು. ಈಗ ಶಕ್ತಿನಗರದ ಮುಖ್ಯ ಟ್ಯಾಂಕ್‌ನಿಂದ ಕುಂಜತ್ತಬೈಲ್‌ನ ಟ್ಯಾಂಕ್‌ಗೆ ನೀರು ಪೂರೈಕೆ ಕಡಿಮೆಯಾದ ಕಾರಣ ಬೆಳಗ್ಗೆ 8 ಅಥವಾ 8–30ರ ವೇಳೆಗೆ ನೀರು ಬಿಡಲಾಗುತ್ತಿದೆ. ಬೆಳಗ್ಗೆ 10.30ಕ್ಕೆ ನೀರು ಬಂದ್ ಆಗುತ್ತದೆ. ಇಷ್ಟು ಕಡಿಮೆ ಅವಧಿಯಲ್ಲಿ ಎತ್ತರದ ಸ್ಥಳಗಳಿಗೆ ನೀರು ಬರುತ್ತಿಲ್ಲ ಎಂಬುದು ಸ್ಥಳೀಯರ ಅಳಲು.

▸ ಟ್ಯಾಂಕರ್ ನೀರು ಮೊರೆಹೋದ ಮರಕಡ ನಿವಾಸಿಗಳು

ಟೈಮಿಂಗ್‌ನ ಸಮಸ್ಯೆ

ವಾರ್ಡ್‌ನ ಕೃಷ್ಣನಗರ, ಬೋಂದೆಲ್ ಪ್ರದೇಶಗಳಲ್ಲೂ ನೀರು ಪೂರೈಕೆ ಟೈಮಿಂಗ್‌ನ ಸಮಸ್ಯೆಯಿದೆ. ಇಲ್ಲಿ ಪ್ರತಿದಿನ ನಿಗದಿತ ಸಮಯಕ್ಕೆ ನೀರು ಬರುತ್ತಿಲ್ಲ. ಗಂಧಕಾಡು ಟ್ಯಾಂಕ್‌ನಿಂದ ಬೋಂದೆಲ್, ಕೃಷ್ಣನಗರಕ್ಕೆ ನೀರು ಪೂರೈಕೆ ಆಗುತ್ತಿಲ್ಲ. ಇಲ್ಲಿ ಒಂದು ದಿನ ಬೆಳಗ್ಗೆ 7.30ಕ್ಕೆ ನೀರು ಪೂರೈಕೆ ಆರಂಭಗೊಂಡರೆ ಮತ್ತೊಂದು ದಿನ ಬೆಳಗ್ಗೆ 10.30ಕ್ಕೆ ನೀರು ಬಿಡಲಾಗುತ್ತಿದೆ. ಇದರಿಂದಾಗಿ ಸಾರ್ವಜನಿಕರು ಸಮರ್ಪಕವಾಗಿ ನೀರು ಹಿಡಿದಿಟ್ಟುಕೊಳ್ಳಲು ಪರದಾಡುತ್ತಿದ್ದಾರೆ.



> **ನಮ್ಮ ಪ್ರದೇಶದಲ್ಲಿ ಕಳೆದ ಹಲವು ದಿನಗಳಿಂದ ನೀರಿನ ಸಮಸ್ಯೆಯಿದೆ. ನೀರು ಬರುತ್ತಿದ್ದರೂ ಪ್ರೆಶರ್ ಇಲ್ಲದ ಕಾರಣ ಸಮರ್ಪಕವಾಗಿ ನೀರು ತಲುಪುತ್ತಿಲ್ಲ. ಕುಂಜತ್ತಬೈಲ್ ಟ್ಯಾಂಕ್‌ನಿಂದ ಪೂರೈಕೆಯಾಗುವ ನೀರಿನ ಪ್ರಮಾಣವೇ ಕಡಿಮೆಯಾಗಿದೆ. ಇದರಿಂದಾಗಿ ನೀರು ಸರಬರಾಜು ಅವಧಿ ಕಡಿತವಾಗಿದೆ. ದಿನಕ್ಕೆ ಎರಡು ಗಂಟೆ ಮಾತ್ರ ನೀರು ಬರುತ್ತಿದೆ. ಈ ಬಗ್ಗೆ ಸಂಬಂಧಪಟ್ಟ ಯಾರೂ ಗಮನ ನೀಡುತ್ತಿಲ್ಲ. ಮಂಗಳೂರು ಮಹಾನಗರ ಪಾಲಿಕೆ ಆಡಳಿತಾಧಿಕಾರಿ ಹಾಗೂ ಆಯುಕ್ತರು ಸಾರ್ವಜನಿಕರ ನೀರಿನ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು.**
> ■ ಪ್ರೇಮ್‌ಚಂದ್ ರಾವ್, ರಾಮನಗರ ಮರಕಡ





ಶನಿವಾರ: ವಾರ್ಡ್ 16- ಕುಂಜತ್ತಬೈಲ್ ದಕ್ಷಿಣ

> **ಶಕ್ತಿನಗರದ ಮುಖ್ಯ ಟ್ಯಾಂಕ್‌ನಿಂದ ಕುಂಜತ್ತಬೈಲ್ ಟ್ಯಾಂಕ್‌ಗೆ ನೀರು ಕಡಿಮೆ ಒತ್ತಡದಲ್ಲಿ ಪೂರೈಕೆಯಾಗುತ್ತಿದೆ. ಇದರಿಂದ ಮರಕಡ ವಾರ್ಡ್‌ನ ಹಲವು ಪ್ರದೇಶಗಳಿಗೆ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುತ್ತಿದೆ. ಇಲ್ಲಿನ ಎರಡು ಕಡೆ ಬೋರ್‌ವೆಲ್ ಇದ್ದು, ಅದನ್ನು ಪುನಶ್ಚೇತನಗೊಳಿಸಬೇಕಿದೆ. ಒಂದು ಹೊಸ ಬೋರ್‌ವೆಲ್ ಕೊರೆಯಲು ಅಂದಾಜುಪಟ್ಟಿ ಸಿದ್ಧವಾಗಿದ್ದು, ಮಂಜೂರಾತಿ ಆಗಬೇಕಿದೆ.**
> ■ ಲೋಹಿತ್ ಅಮೀನ್, ನಿಕಟಪೂರ್ವ ಕಾರ್ಪೋರೇಟರ್ ಮರಕಡ

ಟ್ಯಾಂಕರ್ ನೀರು

ನೀರಿನ ಲಭ್ಯತೆ ಕಡಿಮೆಯಾದ ಕಾರಣ ಪ್ರಸ್ತುತ ಇಲ್ಲಿನ ಅನೇಕ ಮನೆಗಳು ಟ್ಯಾಂಕರ್ ನೀರಿನ ಮೊರೆ ಹೋಗಿವೆ. ಪೈಪ್‌ಲೈನ್‌ನಲ್ಲಿ ಕಡಿಮೆ ನೀರು ಬರುತ್ತಿರುವುದರಿಂದ ನಿತ್ಯ ಬಳಕೆಗೆ ಟ್ಯಾಂಕರ್ ನೀರು ಅನಿವಾರ್ಯವಾಗಿದೆ. ಎರಡು ದಿನಕ್ಕೊಮ್ಮೆ ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ ಟ್ಯಾಂಕರ್ ಮೂಲಕ ಈ ಪ್ರದೇಶಗಳಿಗೆ ನೀರು ಪೂರೈಸಲಾಗುತ್ತಿದೆ. ಕೆಲವರು ಖಾಸಗಿ ಟ್ಯಾಂಕರ್ ಮೂಲಕ ಹಣ ಪಾವತಿಸಿ ನೀರು ಪಡೆಯುತ್ತಿದ್ದಾರೆ.

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ,
ಉತ್ತರಾಯಣ, ಶಿಶಿರ ಋತು,
ಫಾಲ್ಗುನ ಮಾಸ, ಅಮಾವಾಸ್ಯೆ ಉಪರಿ ಪಾಡ್ಯ
ನಕ್ಷತ್ರ: ಉತ್ತರಭಾದ್ರ

ದಿನದ ಮಾತು

ನಿರಾಶಾವಾದಿಯನ್ನು ಆಶಾವಾದಿಯಾಗಿಸಲು ಎರಡು ಸಹಾನುಭೂತಿಯ ಮಾತುಗಳು ಸಾಕು.

▲ನಾಣ್ನುಡಿ

ಯುದ್ಧಗಳಿಗೆ ಪರಾಭವವಾಗಲಿ, ಅಹಂಕಾರಕ್ಕೆ ಸೋಲಾಗಲಿ

ಗುರುತರ

◆ಸೋಮಶೇಖರ ಸಿ.ಜೆ.

◆ಪುಟ ೬

ಭಾರತದತ್ತ ರಷ್ಯಾ ತೈಲ ಹಡಗುಗಳು



◆**ಹೊಸದಿಲ್ಲಿ:** ಅಚ್ಚರಿ ಎಂಬಂತೆ ಚೀನಾಕ್ಕೆ ತೆರಳಬೇಕಿದ್ದ ರಷ್ಯಾದ ಕಚ್ಚಾ ತೈಲ ಹೊತ್ತ ನೌಕೆಗಳು ಸಮುದ್ರ ಮಧ್ಯದಲ್ಲೇ ಭಾರತದ ಬಂದರುಗಳತ್ತ ಮುಖ ಮಾಡಿವೆ. ಮಾರ್ಗ ಬದಲಾವಣೆ ಬಗ್ಗೆ ಕೇಂದ್ರ ಬಂದರು ಇಲಾಖೆಯಿಂದ ಯಾವುದೇ ಮಾಹಿತಿ ಸಿಗದಿದ್ದರೂ, ಆಂಗ್ಲ ಪತ್ರಿಕೆ ಬ್ಲೂಮ್‌ಬರ್ಗ್, ಈ ಕುರಿತಂತೆ ಮಾಹಿತಿ ನೀಡಿದೆ. ಇರಾನ್ ಯುದ್ಧದ ಕಾರಣದಿಂದಾಗಿ ಮಧ್ಯಪ್ರಾಚ್ಯ ರಾಷ್ಟ್ರಗಳಿಂದ ಸ್ಥಗಿತಗೊಂಡಿರುವ ತೈಲ ಪೂರೈಕೆಯನ್ನು ಸರಿದೂಗಿಸಲು, ಭಾರತೀಯ ಸಂಸ್ಕರಣಾಗಾರಗಳು ಕೇವಲ ಒಂದು ವಾರದಲ್ಲಿ 30 ಮಿಲಿಯನ್ ಬ್ಯಾರೆಲ್ ರಷ್ಯಾ ತೈಲವನ್ನು ಖರೀದಿಸಿವೆ, ಎಂದು ವರದಿಯಾಗಿದೆ.

ಮಾರುಕಟ್ಟೆ ಸ್ಥಿರತೆಗೆ ಯತ್ನ: ಇರಾನ್‌ನಲ್ಲಿ ನಡೆಯುತ್ತಿರುವ ಸಂಘರ್ಷದ ನಡುವೆ ರಾಷ್ಟ್ರೀಯ ಇಂಧನ ಮಾರುಕಟ್ಟೆಯನ್ನು ಸ್ಥಿರಗೊಳಿಸಲು ಭಾರತ ಈ ಕ್ರಮ ಕೈಗೊಂಡಿದೆ.

ಸರಣಿ ಹತ್ಯೆ

ಭದ್ರತಾ ಮುಖ್ಯಸ್ಥ ಅಲಿ ಲಾರಿಜಾನಿ ಮತ್ತು ಬಸಿಜ್ ಪಡೆಯ ಮುಖ್ಯಸ್ಥ ಗುಲಾಮ್ ರೇಜಾ ಸುಲೈಮಾನಿ ಹತ್ಯೆಯ ಬೆನ್ನಲ್ಲೇ ಖತೀಬ್ ಹತ್ಯೆ ನಡೆದಿದೆ. ಸುಲೈಮಾನಿ ಅವರನ್ನು ಅರಣ್ಯ ಪ್ರದೇಶವೊಂದರಲ್ಲಿ ಗುರಿಯಾಗಿಸಿ ಕೊಲ್ಲಲಾಗಿದೆ. ಇರಾನ್ ನಾಯಕತ್ವಕ್ಕೆ ಯಾವುದೇ ಸುರಕ್ಷಿತ ತಾಣವಿಲ್ಲ ಎಂಬ ಸಂದೇಶವನ್ನು ರವಾನಿಸಲು ಈ ದಾಳಿಗಳನ್ನು ನಡೆಸಲಾಗಿದೆ ಎಂದು ಇಸ್ರೇಲ್ ಹೇಳಿದೆ.

ಬದಲಾಯ್ತು ತೈಲ ನೌಕೆಗಳ ಮಾರ್ಗ

ನೌಕೆಗಳ ಸಂಚಾರದ ದತ್ತಾಂಶದ ಪ್ರಕಾರ, ಯುರಲ್ಸ್ ಕಚ್ಚಾ ತೈಲ ಹೊತ್ತ ಆಕ್ವಾ ಟೈಟಾನ್ ಹಡಗು ಈಗ ನವ ಮಂಗಳೂರು ಬಂದರಿನತ್ತ ಬರುತ್ತಿದ್ದು, ಮಾ.21ರಂದು ತಲುಪುವ ನಿರೀಕ್ಷೆಯಿದೆ. ಅದೇ ರೀತಿ, ಕರ್ಝುಕ್ ಸಿಪಿಸಿ ಬ್ಲೆಂಡ್ ಹೊತ್ತ ಝೌಝೌ ಎನ್ ನೌಕೆ ಸಿಕ್ಕಾ ಬಂದರಿನತ್ತ ತಿರುಗಿದೆ. ದಕ್ಷಿಣ ಚೀನಾ ಸಮುದ್ರದಲ್ಲಿ ಕನಿಷ್ಠ ಏಳು ತೈಲ ನೌಕೆಗಳು ಚೀನಾದ ಬಂದರುಗಳಿಗೆ ತೆರಳುವ ಬದಲು ಭಾರತದತ್ತ ತಿರುಗಿವೆ.

ಯುವಜನರಿಗಾಗಿ ಭವ್ಯ ಯೋಜನೆ

ಪುಟ ೧➡ ಇದು ದೇಶದಲ್ಲಿ ಉತ್ಪಾದನಾ ಬೆಳವಣಿಗೆ ಮತ್ತು ಉದ್ಯೋಗ ಸೃಷ್ಟಿಗೆ ಭಾರೀ ವೇಗ ನೀಡುವಲ್ಲಿ ನೆರವಾಗಲಿದೆ. ಈ ಯೋಜನೆಯು 2026-27ರಿಂದ 2031-32ರ ನಡುವಿನ ಆರು ವರ್ಷಗಳಲ್ಲಿ ಅನುಷ್ಠಾನಗೊಳ್ಳಲಿದ್ದು, ಹೂಡಿಕೆದಾರರ ಲಭ್ಯತೆ ಮತ್ತು ಸಂಪರ್ಕ ವ್ಯವಸ್ಥೆಯನ್ನು ಸುಧಾರಿಸಲು ನಗರ ಕೇಂದ್ರಗಳ ಬಳಿಯಲ್ಲಿ ಈ ಕೈಗಾರಿಕಾ ಕ್ಲಸ್ಟರ್‌ಗಳನ್ನು ಸ್ಥಾಪಿಸಲಾಗುವುದು. ಕೈಗಾರಿಕಾ ಪಾರ್ಕ್ ಅಭಿವೃದ್ಧಿಗಾಗಿ ಪ್ರತಿ ಎಕರೆಗೆ ಕೇಂದ್ರ ಸರಕಾರವು 1 ಕೋಟಿ ರೂ.ಗಳವರೆಗೆ ಹಣಕಾಸು ಬೆಂಬಲ ಒದಗಿಸಲಿದೆ.

ಭಾರತ್ ಔದ್ಯೋಗಿಕ್ ವಿಕಾಸ್ ಯೋಜನೆಯಲ್ಲಿ ರಾಜ್ಯ ಸರಕಾರಗಳು, ಕೇಂದ್ರೀಯ ಸಾರ್ವಜನಿಕ ವಲಯದ ಉದ್ಯಮಗಳು ಮತ್ತು ಖಾಸಗಿ ಡೆವಲಪರ್ಸ್‌ಗಳ ಸಹಭಾಗಿತ್ವದೊಂದಿಗೆ ಈ ಪಾರ್ಕ್‌ಗಳನ್ನು ನಿರ್ಮಿಸಲಾಗುವುದು. ಇಲ್ಲಿ ಚಾಲೆಂಜ್- ಮೋಡ್ ಪ್ರಕ್ರಿಯೆಯ ಮೂಲಕ ಆಯ್ಕೆ ಮಾಡಲಾಗುವುದು ಎಂದು ಅಧಿಕೃತ ಮೂಲಗಳು ತಿಳಿಸಿವೆ. ಈ ಕೈಗಾರಿಕಾ ಕ್ಲಸ್ಟರ್‌ಗಳು, ಪ್ರಧಾನಮಂತ್ರಿ ಗತಿಶಕ್ತಿ ತತ್ವಗಳೊಂದಿಗೆ ಭೂಗತ ಯುಟಿಲಿಟಿ ಕಾರಿಡಾರ್‌ಗಳು, ಹಸಿರು-ಇಂಧನ ಏಕೀಕರಣ ಮತ್ತು ಲಾಜಿಸ್ಟಿಕ್ ಯೋಜನೆಗಳನ್ನು ಸಂಯೋಜಿಸಲಿವೆ. ಹಾಗೆಯೇ ಜಾಗತಿಕ ಸ್ಪರ್ಧಾತ್ಮಕತೆಯ ಕೈಗಾರಿಕಾ ಪರಿಸರ ವ್ಯವಸ್ಥೆಯೊಂದನ್ನು ಸೃಷ್ಟಿಸಲು ಅಗತ್ಯವಾದ ಉದ್ಯಮ ವ್ಯವಹಾರವನ್ನು ಸುಲಲಿತಗೊಳಿಸುವ ಸುಧಾರಣೆಗಳ ಮೇಲೆ ಕೇಂದ್ರೀಕರಿಸಲಿವೆ ಎಂದು ಹೇಳಲಾಗಿದೆ.

ಈ ಉಪಕ್ರಮವು ಹೂಡಿಕೆಗೆ ಸಿದ್ಧವಾದ ಸುಮಾರು 34000 ಎಕರೆ ಕೈಗಾರಿಕಾ ಭೂಮಿಯನ್ನು ಸ್ಪರ್ಧಾತ್ಮಕ ದರದಲ್ಲಿ ಸೃಷ್ಟಿಸಲಿದೆ ಎಂದು ನಿರೀಕ್ಷಿಸಲಾಗಿದೆ. ಇವುಗಳ ಅರ್ಹತಾ ಮಾನದಂಡಗಳು ಕೈಗಾರಿಕಾ ಪಾರ್ಕ್‌ನ ಕನಿಷ್ಠ ಗಾತ್ರ 100 ಎಕರೆ ಎಂದು ನಿಗದಿಪಡಿಸಲಾಗಿದ್ದು, ಈಶಾನ್ಯ ರಾಜ್ಯಗಳು ಮತ್ತು ಪರ್ವತೀಯ ಪ್ರದೇಶಗಳಲ್ಲಿ ಇವನ್ನು 25 ಎಕರೆಗಳಿಗೆ ಸಡಿಲಿಸಲಾಗುವುದು. ಈ ಉಪಕ್ರಮವು ಆತ್ಮನಿರ್ಭರ್ ಭಾರತ್ ಮತ್ತು ಮೇಕ್ ಇನ್ ಇಂಡಿಯಾ ಗುರಿಗಳಿಗೆ ಬೆಂಬಲವಾಗಲಿದೆ ಎಂದು ಸರಕಾರ ನಿರೀಕ್ಷಿಸಿದೆ ಎಂದರು.

ಸಣ್ಣ ಜಲವಿದ್ಯುತ್ ಅಭಿವೃದ್ಧಿಗೆ 2,584.60 ಕೋಟಿ

ಕೇಂದ್ರ ಸಚಿವ ಸಂಪುಟವು ಬುಧವಾರ ಸಣ್ಣ ಜಲವಿದ್ಯುತ್ (ಎಸ್‌ಎಚ್‌ಪಿ) ಅಭಿವೃದ್ಧಿ ಯೋಜನೆಗೆ ಹಣಕಾಸು ವರ್ಷ 2026-27 ರಿಂದ ಹಣಕಾಸು ವರ್ಷ 2030-31ರವರೆಗೆ ಒಟ್ಟು 2,584.60 ಕೋಟಿ ರೂ. ವೆಚ್ಚದೊಂದಿಗೆ ಅನುಮೋದನೆ ನೀಡಿದೆ. ಈ ಯೋಜನೆಯು ದೇಶಾದ್ಯಂತ ಸುಮಾರು 1,500 ಮೆಗಾವ್ಯಾಟ್ ಸಾಮರ್ಥ್ಯದ ಸಣ್ಣ ಜಲವಿದ್ಯುತ್ ಯೋಜನೆಗಳನ್ನು ಸ್ಥಾಪಿಸುವ ಗುರಿ ಹೊಂದಿದ್ದು, ಹೆಚ್ಚಿನ ಬಳಕೆಯಾಗದ ಸಾಮರ್ಥ್ಯ ಹೊಂದಿರುವ ಗುಡ್ಡಗಾಡು ಮತ್ತು ಈಶಾನ್ಯ ರಾಜ್ಯಗಳ ಮೇಲೆ ವಿಶೇಷ ಗಮನವನ್ನು ಕೇಂದ್ರೀಕರಿಸುತ್ತದೆ.

ಕಿಡಿ ನುಡಿ

◆ವಾಸುದೇವರಾವ್ ಕಕ್ಕೆನೇಜಿ

◈ ದೇಶದ ಆರ್ಥಿಕತೆ ನಿರ್ವಹಿಸಲು ಜಗತ್ತಿನ ಮುಂದೆ ಭಿಕ್ಷೆ ಬೇಡುತ್ತಿದ್ದೇವೆ
- ಪಾಕಿಸ್ತಾನದ ಪ್ರಧಾನಿ

-ಭಿಕ್ಷೆ ಕೊಟ್ಟರೂ ಕಷ್ಟ, ಏಕೆಂದರೆ ಹೊಟ್ಟೆ ತುಂಬಿದ ಮೇಲೆ ಭಿಕ್ಷೆ ನೀಡಿದವನ ಮೇಲೆ ನೀವು ಭಯೋತ್ಪಾದನೆ ಮಾಡುವುದಿಲ್ಲ ಎಂಬುದಕ್ಕೆ ಗ್ಯಾರಂಟಿ ಏನು?

ದಿನ ಭವಿಷ್ಯ

ಮೇಷ ಭರವಸೆಯ ದಿನ. ಶುಭ ಸಂಕೇತಗಳು ಕಾಣುತ್ತಿವೆ. ವೈಯಕ್ತಿಕ ಸಮಸ್ಯೆ ಪರಿಹಾರದ ದಾರಿ ತೋರಲಿದೆ. ಚಿಂತಿತ ಮನಸ್ಸಿಗೆ ಶಮನ.

ವೃಷಭ ಮೌನವಾಗಿ ಕಠಿಣ ಕಾರ್ಯ ನಿರ್ವಹಿಸಿ. ಸಫಲತೆ ನಿಮ್ಮದಾಗಲಿದೆ. ಮೆಚ್ಚುಗೆಯೂ ಸಿಗಲಿದೆ. ಕುಟುಂಬಸ್ಥರ ಜತೆ ಸಂತೋಷದ ಕಾಲಕ್ಷೇಪ.

ಮಿಥುನ ಹರ್ಷೋಲ್ಲಾಸ. ಕೌಟುಂಬಿಕ ಸಮಾಗಮ. ಹಣದ ಬಿಕ್ಕಟ್ಟು ಪರಿಹಾರ. ಖರ್ಚು ತುಸು ಹೆಚ್ಚಿದರೂ ಅದು ಇಂದು ಮಹಾ ಅನ್ನಿಸದು.

ಕಟಕ ಎಲ್ಲರ ಜತೆ ಕೂಡಿ ಕಳೆಯುವ ಅವಕಾಶ. ಪುಟ್ಟ ಪ್ರವಾಸಕ್ಕೆ ಸಿದ್ಧರಾಗಿ. ದೈನಂದಿನ ರಗಳೆ ಮರೆತು ವ್ಯವಹರಿಸಿ. ಬಂಧು ಜತೆಗಿನ ವಿರಸ ಮಾಯ.

ಸಿಂಹ ಹಠಮಾರಿ ವರ್ತನೆ ಇತರರ ಟೀಕೆಗೆ ಗುರಿಯಾದೀತು. ವಿನಯ ಪ್ರದರ್ಶಿಸಿ. ಕೋಪದ ಕೈಗೆ ಬುದ್ಧಿ ಕೊಡಬೇಡಿ. ಹೊಂದಾಣಿಕೆ ಒಳಿತು.

ಕನ್ಯಾ ನಿಮ್ಮ ವ್ಯವಹಾರದಲ್ಲಿ ಒಳ್ಳೆ ಅವಕಾಶ ಸಿಕ್ಕರೆ ತಿರಸ್ಕರಿಸಬೇಡಿ. ಹಿಂಜರಿಕೆ ತ್ಯಜಿಸಿ. ಆತ್ಮೀಯರ ಸಂಗದಲ್ಲಿ ಸಂತೋಷ ಕಾಣುವಿರಿ. ಧನಪ್ರಾಪ್ತಿ.

ತುಲಾ ನಿಮ್ಮ ಕುರಿತಂತೆಯೆ ಸಿನಿಕತನ ಬೇಡ. ಎಲ್ಲವನ್ನು ಆಶಾವಾದದಿಂದ ಸ್ವೀಕರಿಸಿ. ಜಗದ ಜಂಜಡಕ್ಕೆ ಮನಸು ಹಾಳು ಮಾಡಿಕೊಳ್ಳದಿರಿ. ಒಳ್ಳೆ ಕಾಲ ಬರಲಿದೆ.

ವೃಶ್ಚಿಕ ವ್ಯವಹಾರದಲ್ಲಿ ಮುತುವರ್ಜಿ ವಹಿಸಿ. ಬೇಕಾಬಿಟ್ಟಿ ಧೋರಣೆ ಒಳಿತಲ್ಲ. ಖಾಸಗಿ ಬದುಕಿಗೆ ಹೆಚ್ಚಿನ ಗಮನ ಕೊಡಬೇಕಾದ ಪ್ರಸಂಗ.

ಧನು ಎಲ್ಲರ ನಡುವೆ ನಿಮ್ಮ ಪಾತ್ರವೇನು ಎಂದು ಪರಾಮರ್ಶಿಸಿ. ಅದರಂತೆ ವರ್ತಿಸಿ. ಎಲ್ಲರಿಂದ ಬೇರೆಯಾಗಿ ನಿಲ್ಲಬೇಡಿ. ಹೊಂದಾಣಿಕೆ ಮುಖ್ಯ.

ಮಕರ ಶಾಂತ ಮನಸ್ಸು. ದುಗುಡ ನಿವಾರಣೆ. ಇತರರ ಮೇಲ್ಪಂಕ್ತಿ ಅನುಸರಿಸಿ. ಮುಖ್ಯ ಬೇಡಿಕೆಯೊಂದು ಇಂದು ಈಡೇರುವುದು.

ಕುಂಭ ಒತ್ತಡಗಳಿಲ್ಲದ ವಿರಾಮ ದಿನ. ಬಂಧು ಬಳಗದ ಭೇಟಿ. ಮನೆಯಲ್ಲಿ ಹರ್ಷದ ವಾತಾವರಣ. ಖರೀದಿ ಹುಮ್ಮಸ್ಸು.

ಮೀನ ಆರ್ಥಿಕ ಉನ್ನತಿ. ಆಕಾಂಕ್ಷೆ ಈಡೇರಿಕೆ. ಆಪ್ತರ ಜತೆ ಭಾವುಕ ಸನ್ನಿವೇಶ ಎದುರಿಸುವಿರಿ. ಮನೋದಾರ್ಢ್ಯ ಪ್ರದರ್ಶಿಸಿ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ: 3,8,2,5

ಮಾತುಗಳಿಂದ ಮೋಸ: ಪ್ರತಿಪಕ್ಷ ಉಪನಾಯಕ ಅರವಿಂದ ಬೆಲ್ಲದ

ಅಭಿವೃದ್ಧಿಗೆ ಆದ್ಯತೆ ನೀಡಲಿ



◆**ವಿಧಾನಸಭೆ:** ಬಜೆಟ್ ಗಾತ್ರ ಮಾತ್ರ ಹೆಚ್ಚಾಗಿದೆ, ಅಭಿವೃದ್ಧಿ ಕಾಣುತ್ತಿಲ್ಲ. ಭರವಸೆಗಳ ಬಣ್ಣದ ಮಾತುಗಳಿಂದ ಜನರನ್ನು ಮೋಸಗೊಳಿಸುವ ಬದಲು, ನೈಜ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರ ಆದ್ಯತೆ ನೀಡಬೇಕು ಪ್ರತಿಪಕ್ಷ ಉಪನಾಯಕ ಅರವಿಂದ ಬೆಲ್ಲದ ಹೇಳಿದರು.

ಬುಧವಾರ ಕಲಾಪದಲ್ಲಿ ಆಯವ್ಯಯದ ಕುರಿತ ಚರ್ಚೆಯಲ್ಲಿ ಪಾಲ್ಗೊಂಡ ಅವರು, ರಾಜ್ಯದ ಪ್ರಸಕ್ತ ಆಯವ್ಯಯವು ಯೋಜನೆಗಳಿಲ್ಲದ, ದಿಸೆ ತೋರದ ಅಂಕಿ-ಅಂಶಗಳ ಸಮೂಹವಾಗಿದೆ. ಆಯವ್ಯಯವು ಕೇವಲ ಅಂಕಿ-ಸಂಖ್ಯೆಗಳ ನಿರ್ಜೀವ ಪ್ರದರ್ಶನವಲ್ಲ; 7 ಕೋಟಿ ಜನರ ಬದುಕಿನ ಭರವಸೆಯ ದಿಕ್ಕು ತೋರಿಸಬೇಕು. ಆದರೆ, ಇದು ಕನ್ನಡಿಗರ ಭವಿಷ್ಯಕ್ಕೆಆರ್ಥಿಕ ಮರಣ ಶಾಸನವಾಗಲಿದೆ ಎಂದು ವಿಶ್ಲೇಷಿಸಿದರು.

ಲಕ್ಷಾಂತರ ಮನೆಗಳನ್ನು ನಿರ್ಮಿಸಿ ಬಡವರಿಗೆ ನೀಡಿದ್ದೇವೆ ಎಂದು ವಸತಿ ಸಚಿವರು ಹೇಳುತ್ತಿದ್ದಾರೆ. ಆದರೆ, ಇದು ಸುಳ್ಳು. ಕಳೆದ 3 ವರ್ಷಗಳಲ್ಲಿ ಸರ್ಕಾರದ ಮಾಹಿತಿ ಪ್ರಕಾರ, ಪಿಎಂಎವೈ ಅಡಿ 7.03 ಲಕ್ಷ ಗುರಿ ಇದ್ದು, 3.13 ಲಕ್ಷ ಮನೆಗಳನ್ನು ಮಾತ್ರ ಮಂಜೂರು ಮಾಡಿದೆ. ಈ ಪೈಕಿ 9,757 ಮನೆಗಳನ್ನಷ್ಟೇ ನಿರ್ಮಿಸಿದ್ದಾರೆ. ಮತ್ತೆ ಈ ವರ್ಷ 3 ಲಕ್ಷ ಮನೆಗಳನ್ನು ನಿರ್ಮಿಸುವ ಭರವಸೆ ನೀಡಲಾಗಿದೆ. ಇದಕ್ಕೆ 13,500 ಕೋಟಿ ರೂ. ಅನುದಾನ ಬೇಕು. ಆದರೆ, ಬಜೆಟ್‌ನಲ್ಲಿ ಅಷ್ಟೊಂದು ಹಣ ಇಟ್ಟಿಲ್ಲ. ಇದನ್ನು ಗಮನಿದರೆ ಸರ್ಕಾರ ಕೇವಲ ಸುಳ್ಳು ಹೇಳಿ ದಲಿತರು, ಹಿಂದುಳಿದ ಹಾಗೂ ಬಡ ಜನರಿಗೆ ಅನ್ಯಾಯ ಮಾಡುತ್ತಿದೆ ಎಂಬುದು ಸ್ಪಷ್ಟವಾಗಿದೆ ಎಂದರು.

ಆಯವ್ಯಯ ಘೋಷಣೆಗೆ ಸೀಮಿತವಾಗಿದೆ: ಶಿಕ್ಷಣ ಇಲಾಖೆಗೆ ಹೆಚ್ಚಿನ ಅನುದಾನ ನೀಡಿದರೂ ಸಾಧನೆ ಮಾತ್ರ ಶೂನ್ಯ. ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ, ಉದ್ಯೋಗ, ಹೊಸ ದಿಕ್ಕು ನೀಡಲು ಕೇಂದ್ರ ಸರ್ಕಾರ ಶಿಕ್ಷಣ ನೀತಿ ತಂದಿದೆ. ಆದರೆ, ರಾಜ್ಯ ಸರ್ಕಾರ ಅದನ್ನು ಅನುಷ್ಠಾನಕ್ಕೆ ತರದೆ ಕೈ ಬಿಟ್ಟರು. ಶಿಕ್ಷಣ ಇಲಾಖೆ ಅಧಿಕಾರಿಗಳು ಖಾಸಗಿ ಶಾಲೆಗಳಿಗೆ ಭೇಟಿ ನೀಡುತ್ತಾರೆ ಹೊರತು, ಸರ್ಕಾರಿ ಶಾಲೆಗಳ ಅಭಿವೃದ್ಧಿಯ ಪ್ರಯತ್ನ ಮಾಡುತ್ತಿಲ್ಲ. ಕಳೆದ ಆಯವ್ಯಯದಲ್ಲಿ 500 ಹೊಸ ಕೆಪಿಎಸ್ ಶಾಲೆ ತೆರೆಯುವ ಘೋಷಣೆ ಆಗಿತ್ತು. ಆದರೆ, ಒಂದೂ ಶಾಲೆ ಆರಂಭವಾಗಿಲ್ಲ. ಈ ವರ್ಷ ಮತ್ತೆ ಘೋಷಣೆ ಮಾಡಿದ್ದಾರೆ. ಹೀಗಾಗಿ ಸರ್ಕಾರ ಕೇವಲ ಘೋಷಣೆ ಮಾಡುತ್ತಿದೆ ಹೊರತು ಅನುಷ್ಠಾನಕ್ಕೆ ತರುತ್ತಿಲ್ಲ. ಕಡ್ಡಾಯ ಶಿಕ್ಷಣ ಕಾಯ್ದೆ(ಆರ್‌ಟಿಇ)ಯನ್ನು ಬದಲಿಸಿ, ಬಡವರಿಗೆ ಖಾಸಗಿ ಶಾಲೆಗಳಲ್ಲಿ ಶಿಕ್ಷಣ ದೊರೆಯದಂತೆ ಮಾಡಲಾಗಿದೆ ಎಂದು ಟೀಕಿಸಿದರು.

ನೀರಾವರಿ ಯೋಜನೆಗೆ ಅನುದಾನವಿಲ್ಲ: ಕೃಷ್ಣಾ ಮೇಲ್ದಂಡೆ ಯೋಜನೆಗೆ 75,000 ಕೋಟಿ ರೂ. ಹೆಚ್ಚುವರಿಗೆ ಅನುದಾನ ಬೇಕಿದೆ. ಆದರೆ, ಕೃಷ್ಣೆಯ ಉಳಿವಿಗೆ ಯಾತ್ರೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೀಡಿದ್ದು ಅಲ್ಪ ಮಾತ್ರ. ಇದರಿಂದ 20 ವರ್ಷವಾದರೂ ಯೋಜನೆ ಪೂರ್ಣಗೊಳ್ಳುತ್ತಿಲ್ಲ. ಮಹಾದಾಯಿ ಹಾಗೂ ಮೇಕೆದಾಟು ಯೋಜನೆಗೆ 1000 ಕೋಟಿ ರೂ. ಅನುದಾನ ಹೆಸರಿಗೆ ಮೀಸಲಿಟ್ಟಿರುವ ಸರ್ಕಾರ, ಅನುಮೋದನೆಗಾಗಿ ಕಾಯುವ ಪ್ರಕ್ರಿಯೆಯಲ್ಲೇ ಕಾಲಹರಣ ಮಾಡುತ್ತಿದೆ. ಹೀಗೆ ರೈತರಿಗೆ ಅನುಕೂಲವಾಗುವಂತಹ ಯಾವುದೇ ನೀರಾವರಿ ಯೋಜನೆ ತರುವುದಿರಲಿ ಸೂಕ್ತ ಅನುದಾನ ನೀಡುವ ಕೆಲಸವೂ ಆಗಿಲ್ಲ ಎಂದು ದೂರಿದರು.

ರಾಜ್ಯದಲ್ಲಿ 77,11,374 ಇಪಿಎಫ್ ಖಾತೆದಾರರಿದ್ದಾರೆ. ಇದರಲ್ಲಿ ಶೇ. 78 ಜನರು ಬೆಂಗಳೂರಿನವರೇ. ಇದನ್ನು ಗಮನಿಸಿದರೆ ಎಲ್ಲ ಉದ್ಯೋಗದ ಸೃಷ್ಟಿ ಬೆಂಗಳೂರು ಹಾಗೂ ಅದರ ಸುತ್ತಲಿನ ಜಿಲ್ಲೆಗಳಲ್ಲೇ ಎಂಬುದು ಸ್ಪಷ್ಟ. ಇದು ಸರ್ಕಾರ ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ನಿರ್ಲಕ್ಷ್ಯ ವಹಿಸಿರುವುದಕ್ಕೆ ಸಾಕ್ಷಿ. ಮೂರು ವರ್ಷಗಳಲ್ಲಿ ಉತ್ತರ ಕರ್ನಾಟಕದಲ್ಲಿ ಕೈಗಾರಿಕೆಗಳ ಮೂಲಕ ಒಟ್ಟು 3,409 ಉದ್ಯೋಗ ದೊರೆತಿದೆ ಎಂದರು.

7 ಲಕ್ಷ ಜನರಿಗೆ 2.10 ಲಕ್ಷ ಕೋಟಿ ರೂ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 4.48 ಲಕ್ಷ ಕೋಟಿ ರೂ. ಗಾತ್ರದ ಆಯವ್ಯಯ ಮಂಡಿಸಿದ್ದಾರೆ. ಈ ಪೈಕಿ ಏಳು ಲಕ್ಷ ಸರ್ಕಾರಿ ನೌಕರರು, ನಿವೃತ್ತ ನೌಕರರಿಗೆ 2.10 ಲಕ್ಷ ಕೋಟಿ ರೂ. ನೀಡಿರುವ ಸರ್ಕಾರ ರಾಜ್ಯದ ಉಳಿದ 7 ಕೋಟಿ ಜನರಿಗೆ 73 ಸಾವಿರ ಕೋಟಿ ರೂ ಮಾತ್ರ ನೀಡಿದೆ. ಈ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ ಎಂದು ಅರವಿಂದ ಬೆಲ್ಲದ ಹೇಳಿದರು.

ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಲೋಪವಾಗಿಲ್ಲ: ಸಚಿವ

◆**ವಿಧಾನಸಭೆ:** ಇತ್ತೀಚೆಗೆ ನಡೆದ ಕೆಪಿಎಸ್‌ಸಿ ಮುಖ್ಯ ಪರೀಕ್ಷೆಯಲ್ಲಿ ಒಂದೇ ಕೊಠಡಿಯಲ್ಲಿ 11 ಅಭ್ಯರ್ಥಿಗಳು ಪರೀಕ್ಷೆ ಬರೆದು ಉತ್ತೀರ್ಣರಾಗಿರುವ ಅನುಮಾನಕ್ಕೆ ಪರೀಕ್ಷೆ ಕೇಂದ್ರದ ವಿಡಿಯೋ ಸಂಗ್ರಹ ನೋಡಲಾಗಿದ್ದು, ಯಾವುದೇ ತಪ್ಪು ಕಂಡುಬಂದಿಲ್ಲ. ಈ ಬಗ್ಗೆ ಮುಖ್ಯಮಂತ್ರಿಗಳ ಜತೆ ಚರ್ಚೆ ಮಾಡಿದ್ದು ಅವರು ಕೂಡ ಬೇಸರ ವ್ಯಕ್ತಪಡಿಸಿದ್ದಾರೆ. ಈ ಪ್ರಕರಣದ ಬಗ್ಗೆ ಲಿಖಿತವಾಗಿ ಉತ್ತರ ನೀಡುತ್ತೇವೆ. ಮತ್ತೊಂದು ತನಿಖೆ ಬೇಕಾದರೆ ಮಾಡಿಸುತ್ತೇವೆ ಎಂದು ಸಚಿವ ಕೃಷ್ಣ ಭೈರೇಗೌಡ ಹೇಳಿದರು.

ನಿಯಮ 69ರ ಮೇರೆಗೆ ಕೆಪಿಎಸ್‌ಸಿ ಕುರಿತು ನಡೆದ ಚರ್ಚೆಗೆ ಸರ್ಕಾರದ ಪರವಾಗಿ ಉತ್ತರಿಸಿದ ಅವರು, ಒಂದೇ ಕೊಠಡಿಯಲ್ಲಿ ಪರೀಕ್ಷೆ ಪಾಸ್ ಆಗಿರುವ 11 ಜನರು ಒಂದೇ ಕುಟುಂಬದವರಲ್ಲ, ಬೇರೆ ಬೇರೆ ಜಿಲ್ಲೆಯವರು, ಒಂದೇ ಇನ್ಶಿಯಲ್ ಇರುವುದು ಗೊಂದಲ ಮೂಡಿಸಿರಬಹುದು ಎಂದರು.

ಮರು ಪರೀಕ್ಷೆಗೆ ಒತ್ತಾಯ: ಆರೋಪ ಬಂದಿರುವ 11 ಅಭ್ಯರ್ಥಿಗಳ ಶೈಕ್ಷಣಿಕ ಹಿನ್ನೆಲೆ ನೋಡಬೇಕು. ಆಗ ಆರೋಪ ನಿಜವೋ /ಅಲ್ಲವೊ ಎಂದು ಗೊತ್ತಾಗಲಿದೆ ಎಂದು ಹೇಳಿದ ಶಾಸಕ ಸುರೇಶ್ ಕುಮಾರ್ ಅವರು, ಮರು ಪರೀಕ್ಷೆ ನಡೆಸಬೇಕೆಂದರು. ಇದಕ್ಕೆ ಧ್ವನಿಗೂಡಿಸಿದ ಬಿಜೆಪಿ ಸದಸ್ಯರು ಎಸ್‌ಐಟಿ ತನಿಖೆ ಕೂಡಾ ಆಗಬೇಕೆಂದು ಆಗ್ರಹಿಸಿದರು. ಶಾಸಕರು, ಸಚಿವರು ಹಾಗೂ ಸಿಎಂ ಮೇಲೂ ತನಿಖೆ ಆಗುತ್ತ, ನಾವು ವಿಚಾರಣೆ ಎದುರಿಸಿದ್ದೇವೆ, ಅವರು ಕಟಕಟೆಯ ಮೇಲೆ ನಿಲ್ಲಲಿ ಎಂದು ಅಶೋಕ್ ಹೇಳಿದರು.

ಅನುಮಾನದ ಆಧಾರದ ಮೇಲೆ ಮರು ಪರೀಕ್ಷೆ ನಡೆಸಿದರೆ 1 ವರ್ಷ ಮುಂದಕ್ಕೆ ಹೋಗುತ್ತದೆ. 5,500 ಅಭ್ಯರ್ಥಿಗಳು ಮತ್ತೆ ಪರೀಕ್ಷೆ ಬರೆಯಬೇಕಾಗುತ್ತದೆ. 2 ವರ್ಷ ವಯೋಮಿತಿ ಮುಂದಕ್ಕೆ ಹೋಗುತ್ತದೆ. ತಪ್ಪಾಗಿರುವ ಬಗ್ಗೆ ದಾಖಲೆ ನೀಡಿದರೆ ಕ್ರಮ ಕೈಗೊಳ್ಳಲಾಗುವುದು ಎಂದು ಕೃಷ್ಣಬೈರೇಗೌಡ ತಿಳಿಸಿದರು.ಸುರೇಶ್ ಕುಮಾರ್ ಅವರು ತಮ್ಮಲ್ಲಿರುವ ದಾಖಲಾತಿಗಳನ್ನು ತನಿಖೆಗೆ ನೀಡುವುದಾಗಿ ತಿಳಿಸಿದರು.

ಹೂಟಾ ಸಮಿತಿಯ ಶಿಫಾರಸು ಅನುಷ್ಠಾನ: ಶೇ.99ರಷ್ಟು ಹೂಟಾ ಸಮಿತಿಯ ಶಿಫಾರಸುಗಳನ್ನು ಅನುಷ್ಠಾನ ಮಾಡಿದ್ದು, ಸದಸ್ಯರ ನೇಮಕಕ್ಕೆ ಸ್ವಂತ ಕಮಿಟಿ ಮಾಡಿದ್ದು, ಸಂದರ್ಶನದಲ್ಲಿ ಏನೆಲ್ಲ ನಡೆಯುತ್ತದೆ ಎಂಬುದೆಲ್ಲ ಸತ್ಯ, ಶೇ.80ರಷ್ಟು ಅಂಕ ನೀಡಿದರೆ ಕಾರಣ ನೀಡಬೇಕಿದೆ ಎಂದರು.

ಸದನ ಸಮಿತಿ ರಚನೆ

ಕೆಪಿಎಸ್‌ಸಿ ಸುಧಾರಣೆಗೆ ಸದನ ಸಮಿತಿ ರಚಿಸಲು ಸರ್ಕಾರ ನಿರ್ಧರಿಸಿದ್ದು, ಇದಕ್ಕೆ ಸಭಾಧ್ಯಕ್ಷರು ಅನುಮೋದನೆ ನೀಡಿದರು. ಮುಂದಿನ ಅಧಿವೇಶನದ ಒಳಗಾಗಿ ವರದಿ ಸಲ್ಲಿಸಲು ಒಪ್ಪಿಗೆ ಸೂಚಿಸಲಾಯಿತು. ಇದಕ್ಕೆ ವಿರೋಧ ಪಕ್ಷದವರು ಒಪ್ಪಿಗೆ ನೀಡಿದರು.

ಸಚಿವಾಕಾಂಕ್ಷಿಗಳು ಭೇಟಿಯಾಗಿಲ್ಲ: ಡಿಕೆ



◆**ಹೊಸದಿಲ್ಲಿ:** ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿರುವವರು ಸಂಪುಟದಲ್ಲಿ ಸ್ಥಾನ ನೀಡಬೇಕು ಎಂದು ಡಿನ್ನರ್ ಮೀಟಿಂಗ್ ಮಾಡಿರುವ ಬಗ್ಗೆ ಹಾಗೂ ಹಿರಿಯ ಶಾಸಕರು ತಮ್ಮನ್ನು ಸಚಿವರನ್ನಾಗಿ ಮಾಡಿ ಎಂದು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಚರ್ಚಿಸಿರುವ ಬಗ್ಗೆ ನನಗೆ ಮಾಹಿತಿಯಿಲ್ಲ. ಅವರ್‍ಯಾರೂ ನನ್ನನ್ನು ಈ ವಿಚಾರವಾಗಿ ಭೇಟಿ ಮಾಡಿ ಚರ್ಚೆ ಮಾಡಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದರು. ಈ ಕುರಿತು ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಶಾಸಕರನ್ನು ನಿಯಂತ್ರಣ ಮಾಡುವುದು ಮುಖ್ಯಮಂತ್ರಿಗಳು. ಶಾಸಕಾಂಗದ ಪಕ್ಷದ ನಾಯಕರಾದ ಮುಖ್ಯಮಂತ್ರಿಗಳಿಗೆ ಶಾಸಕರಿಂದ ಶಿಸ್ತು ಪಾಲನೆ ಮಾಡುವ ಜವಾಬ್ದಾರಿ ಹೆಚ್ಚಾಗಿರುತ್ತದೆ ಎಂದು ತಿಳಿಸಿದರು. ಆದರೆ, ಶಾಸಕರ ಸಭೆಗಳ ಬಗ್ಗೆ ನನಗೆ ಯಾವುದೇ ಮಾಹಿತಿಯಿಲ್ಲ ಎಂದರು.

ಅಸ್ಸಾಂ ಜನರು ಬದಲಾವಣೆ ಬಯಸಿದ್ದಾರೆ: ಅಸ್ಸಾಂ ಕಾಂಗ್ರೆಸ್ ಸಂಸದ ಹಾಗೂ ಪಕ್ಷದ ನಿಷ್ಠಾವಂತ ನಾಯಕ ಪಕ್ಷ ತೊರೆದಿರುವುದು ನಮಗೆ ಆಚ್ಚರಿ ತಂದಿದೆ. ನಾನು ಅವರ ಜತೆ ಮಾತನಾಡುವ ಪ್ರಯತ್ನ ಮಾಡಿದೆ. ಆದರೆ ಅಷ್ಟು ಹೊತ್ತಿಗೆ ಅವರು ತೀರ್ಮಾನ ಮಾಡಿದ್ದರು. ನಾವು ಇದನ್ನು ನಿರೀಕ್ಷೆ ಮಾಡಿರಲಿಲ್ಲ. ಅವರು ಕಾಂಗ್ರೆಸ್ ಪಕ್ಷದಲ್ಲಿ ರೋಲ್ ಮಾಡೆಲ್ ಆಗಿದ್ದರು ಎಂದು ತಿಳಿಸಿದರು.

ಶೀಘ್ರ ಉಪಚುನಾವಣೆ ಅಭ್ಯರ್ಥಿಗಳ ಹೆಸರು ಅಂತಿಮ

ದಾವಣಗೆರೆ ಟಿಕೆಟ್ ವಿಚಾರವಾಗಿ ಇರುವ ಗೊಂದಲದ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಹಾಗೂ ಮುಖ್ಯಮಂತ್ರಿಗಳು ಈ ವಿಚಾರವಾಗಿ ಚರ್ಚೆ ಮಾಡಿದ್ದು, ವರದಿ ಇನ್ನೂ ಬಂದಿಲ್ಲ. ಮುಖ್ಯಮಂತ್ರಿಗಳು ಮೇಟಿ ಅವರ ಕುಟುಂಬದವರನ್ನು ಕರೆಸಿ ಚರ್ಚೆ ಮಾಡಿದ್ದಾರೆ. ದಾವಣಗೆರೆ ಚುನಾವಣಾ ಆಕಾಂಕ್ಷಿಗಳು ನನ್ನನ್ನು ಭೇಟಿ ಮಾಡುತ್ತಿದ್ದಾರೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು. ನಾನು ಕೂಡಾ ಆ ಭಾಗದ ಸಂಸದರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಜತೆ ಚರ್ಚೆ ಮಾಡಿದ್ದೇನೆ. ನಾನು ಹೈಕಮಾಂಡ್ ನಾಯಕರಿಗೆ ವರದಿ ನೀಡುತ್ತೇನೆ. ಎರಡ್ಮೂರು ದಿನಗಳಲ್ಲಿ ಅಭ್ಯರ್ಥಿಗಳನ್ನು ಅಂತಿಮಗೊಳಿಸಲಾಗುವುದು ಎಂದು ತಿಳಿಸಿದರು.

ತಿರುಪತಿ ಭಕ್ತಾದಿಗಳಿಗೆ ಪಂಚತಾರಾ ವಸತಿ ಸೌಲಭ್ಯ

◆**ಬೆಂಗಳೂರು:** ತಿರುಪತಿಗೆ ಭೇಟಿ ನೀಡುವ ರಾಜ್ಯದ ಭಕ್ತಾದಿಗಳ ಅನುಕೂಲಕ್ಕಾಗಿ ಇರುವ ಕರ್ನಾಟಕ ಭವನದ ಆಡಳಿತ ಮತ್ತು ನಿರ್ವಹಣೆಯಲ್ಲಿ ಮಹತ್ವದ ಬದಲಾವಣೆಯಾಗಿದೆ. ಈವರೆಗೆ ಮುಜರಾಯಿ ಇಲಾಖೆಯ ಸುಪರ್ದಿಯಲ್ಲಿದ್ದ ಈ ಭವನದ ಜವಾಬ್ದಾರಿಯನ್ನು ಈಗ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ(ಕೆಎಸ್‌ಟಿಡಿಸಿ) ಹಸ್ತಾಂತರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದ್ದು, ತಿರುಪತಿ ಭಕ್ತಾದಿಗಳಿಗೆ ಪಂಚತಾರಾ ವಸತಿ ಸೌಲಭ್ಯ ನೀಡಲು ಸರ್ಕಾರ ನಿರ್ಧರಿಸಿದೆ.

ಈ ವಿಚಾರವಾಗಿ ವಿಧಾನ ಪರಿಷತ್ ಸದಸ್ಯ ಕೆ. ಗೋವಿಂದರಾಜು ಕೇಳಿದ ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಸಾರಿಗೆ ಹಾಗೂ ಧಾರ್ಮಿಕ ದತ್ತಿ ಸಚಿವ ರಾಮಲಿಂಗಾರೆಡ್ಡಿ ಲಿಖಿತ ಉತ್ತರ ನೀಡಿದ್ದಾರೆ.ತಿರುಪತಿ ಭಕ್ತಾದಿಗಳಿಂದ ಕೇಳಿಬಂದ ಸಾಲು ಸಾಲು ದೂರುಗಳು ಹಾಗೂ ಸ್ವಚ್ಛತೆಯ ಕೊರತೆಯ ಹಿನ್ನೆಲೆಯಲ್ಲಿ, ನಿರ್ವಹಣೆಯ ಜವಾಬ್ದಾರಿ ಹೊತ್ತಿದ್ದ ಖಾಸಗಿ ಸಂಸ್ಥೆಗೆ ಭಾರಿ ದಂಡ ವಿಧಿಸುವುದರ ಜೊತೆಗೆ, ವಸತಿ ಗೃಹಗಳನ್ನು ಉತ್ಕೃಷ್ಟವಾಗಿ ನಿರ್ವಹಿಸುವ ಸಲುವಾಗಿ, ರಾಜ್ಯ ಸರ್ಕಾರದ ಅಂಗ ಸಂಸ್ಥೆಯಾದ ಕೆಎಸ್‌ಟಿಡಿಸಿಗೆ ಹಸ್ತಾಂತರಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಲಾಗಿದೆ. ಫೆಬ್ರವರಿಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಆಡಳಿತಾತ್ಮಕ ಬದಲಾವಣೆಗಳು, ಕೆಎಸ್‌ಟಿಡಿಸಿಗೆ ವಹಿಸಬೇಕಾದ ಜವಾಬ್ದಾರಿಗಳು ಮತ್ತು ಭಕ್ತಾದಿಗಳಿಗೆ ನೀಡಬೇಕಾದ ರಿಯಾಯಿತಿ ದರಗಳ ಕುರಿತು ಸಮಗ್ರವಾಗಿ ಚರ್ಚಿಸಲಾಗಿದೆ. ತಿರುಮಲದ ಕರ್ನಾಟಕ ಭವನದಲ್ಲಿ ಕೊಠಡಿಗಳ ಸ್ವಚ್ಛತೆ, ಶೌಚಾಲಯಗಳ ನಿರ್ವಹಣೆ ಮತ್ತು ಭಕ್ತಾದಿಗಳಿಗೆ ನೀಡಬೇಕಾದ ಕನಿಷ್ಠ ಸೌಲಭ್ಯಗಳಲ್ಲಿ ಖಾಸಗಿ ಏಜೆನ್ಸಿ ಯು ತೀವ್ರ ನಿರ್ಲಕ್ಷ್ಯ ತೋರಿರುವುದು ಸರ್ಕಾರದ ಗಮನಕ್ಕೆ ಬಂದ ಬಳಿಕ ಈ ಕ್ರಮ ಕೈಗೊಂಡಿದೆ. ನಿರ್ವಹಣಾ ವೆಚ್ಚದ ಬಿಲ್ಲಿನಲ್ಲಿ ಶೇ. 20 ರಷ್ಟು ಮೊತ್ತವನ್ನ ದಂಡದ ರೂಪದಲ್ಲಿ ಕಡಿತಗೊಳಿಸಲಾಗಿದೆ.

ಕೇಂದ್ರವೂ ಗಮನಿಸಲಿ

ಪುಟ ೧➡ ಹೆಚ್ಚು ಗೌರವ ಧನ ಕೊಡುತ್ತಿರುವವರ ಪೈಕಿ ಕರ್ನಾಟಕ ನಾಲ್ಕನೇ ಸ್ಥಾನದಲ್ಲಿದೆ. ಸರ್ಕಾರದ ಯೋಜನೆಗಳನ್ನು ಜನ ಸಾಮಾನ್ಯರಿಗೆ ತಲುಪಿಸುವಲ್ಲಿ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಅವರ ಬಗ್ಗೆ ಸರ್ಕಾರ ಕಾಳಜಿ ವಹಿಸುತ್ತದೆ. ಹರ್ಯಾಣ, ತೆಲಂಗಾಣ ಹಾಗೂ ಕೇರಳ ರಾಜ್ಯಗಳ ಬಳಿಕ ಹೆಚ್ಚು ಗೌರವಧನ ಕೊಡಲಾಗುತ್ತಿದೆ ಎಂದರು.

ಅಂಗನವಾಡಿ ಕಾರ್ಯಕರ್ತರಿಗೆ ಕೇಂದ್ರ ಸರ್ಕಾರ 2700 ರೂ. ಗೌರವ ಧನವನ್ನು ಪಾವತಿಸಿದರೆ, ಉಳಿದ 9800 ರೂ.ಗಳನ್ನು ರಾಜ್ಯ ಸರ್ಕಾರ ಭರಿಸುತ್ತಿದೆ. ಕಳೆದ ಏಪ್ರಿಲ್‌ನಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ 1000 ರೂ., ಸಹಾಯಕಿಯರಿಗೆ 750 ರೂ. ಏರಿಕೆ ಮಾಡಲಾಯಿತು. ಅವರು ಮಾಡುತ್ತಿರುವ ಕೆಲಸಕ್ಕೆ ಇದು ಸಾಕಾಗುತ್ತಿಲ್ಲ, ಸಹಾಯಧನ ಏರಿಕೆ ಮಾಡಬೇಕು ಎಂದು ಮನವಿ ಬಂದಿದ್ದು, ಈ ಸಂಬಂಧ ನಾವು ಈಗಾಗಲೇ ಹಣಕಾಸು ಇಲಾಖೆಗೆ ಮನವಿ ಸಲ್ಲಿಸಿದ್ದೇವೆ. ಆದರೆ, ಈ ವಿಷಯದಲ್ಲಿ ಕೇಂದ್ರ ಸರ್ಕಾರ ಒಂದು ಹೆಜ್ಜೆ ಮುಂದೆ ಹೋದರೆ ನಾವೂ ಒಂದು ಹೆಜ್ಜೆ ಮುಂದೆ ಹೋಗುತ್ತೇವೆ. ಅವರೂ ಕಣ್ತೆರೆಯಬೇಕು ಎಂದು ಸಚಿವರು ತಿಳಿಸಿದರು.

5 ಸಾವಿರ ಅಂಗನವಾಡಿಗಳಲ್ಲಿ ಮಾಂಟೆಸ್ಸರಿ

ಪ್ರಸಕ್ತ ವರ್ಷದಿಂದ 5,000 ಸಾವಿರ ಅಂಗನವಾಡಿ ಕೇಂದ್ರಗಳಲ್ಲಿ ಸರ್ಕಾರಿ ಮಾಂಟೆಸ್ಸರಿ ಆರಂಭಿಸಲು ತೀರ್ಮಾನ ಕೈಗೊಳ್ಳಲಾಗಿದೆ. ಪೌಷ್ಟಿಕ ಆಹಾರದ ಜತೆ ಗುಣಮಟ್ಟದ ಶಿಕ್ಷಣ ನೀಡುವುದೇ ನಮ್ಮ ಉದ್ದೇಶ. ಬಿಎ, ಬಿ.ಇಡಿ, ಎಂಎ, ಎಂಕಾಂ ಪದವಿ ಪಡೆದಿರುವ ಸುಮಾರು 17 ಸಾವಿರ ಅಂಗನವಾಡಿ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಮಾಂಟೆಸ್ಸರಿಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳುವುದು ನಮ್ಮ ಗುರಿಯಾಗಿದೆ ಎಂದರು.

ಗೌರವ ಡಾಕ್ಟರೇಟ್ ನೀಡಲು ಮಾರ್ಗಸೂಚಿ

◆**ಬೆಂಗಳೂರು:** ರಾಜ್ಯದ ವಿಶ್ವವಿದ್ಯಾಲಯಗಳು ನೀಡುವ ಗೌರವ ಡಾಕ್ಟರೇಟ್ ಪದವಿಗಳ ಘನತೆಯನ್ನು ಉಳಿಸಲು ರಾಜ್ಯ ಸರ್ಕಾರ ಮುಂದಾಗಿದ್ದು, ಒಬ್ಬರೇ ವ್ಯಕ್ತಿಗೆ ಹಲವು ವಿಶ್ವವಿದ್ಯಾಲಯಗಳು ಡಾಕ್ಟರೇಟ್ ನೀಡುತ್ತಿರುವುದು ಮತ್ತು ಗೌರವ ಡಾಕ್ಟರೇಟ್ ನೀಡುವುದರಲ್ಲಿನ ಪಾರದರ್ಶಕತೆಯ ಕೊರತೆಯ ಬಗ್ಗೆ ದೂರುಗಳು ಬರುತ್ತಿರುವ ಹಿನ್ನೆಲೆ, ಇನ್ನುಮುಂದೆ ಈ ಗೌರವ ಡಾಕ್ಟರೇಟ್ ನೀಡಲು ಮಾರ್ಗಸೂಚಿ ರೂಪಿಸಲು ಸರ್ಕಾರ ಮುಂದಾಗಿದೆ. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರು ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರಿಗೆ ಈ ಕುರಿತು ಪತ್ರ ಬರೆದಿದ್ದು, ಏಕರೂಪದ ಮಾರ್ಗಸೂಚಿಗಳನ್ನು ರೂಪಿಸಲು ತಜ್ಞರ ಸಮಿತಿಯನ್ನು ರಚಿಸುವಂತೆ ಪತ್ರ ಬರೆದು ಮನವಿ ಮಾಡಿದ್ದಾರೆ. ಗೌರವ ಡಾಕ್ಟರೇಟ್ ಪ್ರದಾನ ಮಾಡಲು ಎಲ್ಲಾ ರಾಜ್ಯ, ಖಾಸಗಿ ಮತ್ತು ವಿಶೇಷ ವಿಶ್ವವಿದ್ಯಾಲಯಗಳಿಗೆ ಅನ್ವಯವಾಗುವಂತೆ ಸಮಾನ ನಿಯಮಗಳನ್ನು ರೂಪಿಸಬೇಕು. ಒಬ್ಬ ವ್ಯಕ್ತಿಗೆ ಹಲವು ವಿಶ್ವವಿದ್ಯಾಲಯಗಳಿಂದ ಗೌರವ ಪದವಿ ಸಿಗದಂತೆ ಮಿತಿಯನ್ನು ನಿಗದಿ ಮಾಡಬೇಕು ಎಂದು ಸಚಿವರು ಪತ್ರದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ. ಹಾಗೆಯೇ ಪದವಿಯ ಪವಿತ್ರತೆಯನ್ನು ಕಾಪಾಡಲು ಈ ಕ್ರಮ ಅನಿವಾರ್ಯವಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ಪರಿಶಿಷ್ಟ ಪಂಗಡಗಳಲ್ಲೂ ಒಳ ಮೀಸಲಾತಿ ಜಾರಿಯಾಗಲಿ

◆**ವಿಧಾನ ಪರಿಷತ್:** ಪರಿಶಿಷ್ಟ ಜಾತಿಗಳಿಗೆ ನೀಡಿದಂತೆ ಪರಿಶಿಷ್ಟ ಪಂಗಡಗಳಲ್ಲೂ ಒಳ ಮೀಸಲಾತಿ ಜಾರಿ ಮಾಡಬೇಕು ಎಂಬ ಕೂಗು ಸದನದಲ್ಲಿ ಬುಧವಾರ ಕೇಳಿಬಂದಿದೆ.

ಈ ಬಗ್ಗೆ ಮೇಲ್ಮನೆಯಲ್ಲಿ ಶಾಂತಾರಾಮ್ ಸಿದ್ದಿ ಅವರು ಸದನದ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದಾರೆ. ಪರಿಶಿಷ್ಟ ಪಂಗಡಗಳಲ್ಲೂ ಒಳ ಮೀಸಲಾತಿ ಜಾರಿ ಮಾಡಲು, ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದ ಆಯೋಗ ರಚಿಸಿ, ಸೂಕ್ತ ಪರಿಹಾರ ಒದಗಿಸಬೇಕು ಎಂದು ಆಗ್ರಹಿಸಿದ್ದಾರೆ.

ರಾಜ್ಯ ಸರ್ಕಾರ ಪರಿಶಿಷ್ಟ ಜಾತಿಗಳಿಗೆ ಮಾತ್ರ ಒಳ ಮೀಸಲಾತಿ ಜಾರಿ ಮಾಡಿದೆ, ಆದರೆ, ಪರಿಶಿಷ್ಟ ಪಂಗಡಗಳಿಗೂ ಒಳ ಮೀಸಲಾತಿ ವಿಸ್ತರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಬೆಂಗಳೂರಿನಲ್ಲಿ ನಡೆದ ವಿವಿಧ ಬುಡಕಟ್ಟು ಸಮುದಾಯಗಳ ನಾಯಕರ ಸಭೆಯಲ್ಲಿ ಆಗ್ರಹಿಸಲಾಗಿದೆ. ಈ ಸಂಬಂಧ ಮುಖ್ಯ ಕಾರ್ಯದರ್ಶಿಯವರಿಗೆ ಮನವಿ ಕೂಡ ಸಲ್ಲಿಸಲಾಗಿದೆ ಎಂದು ಪತ್ರಿಕೆಗಳಲ್ಲಿ ಉಲ್ಲೇಖಿಸಲಾಗಿದೆ ಎಂದರು. 2024ರ ಆ.1ರಂದು ಪ್ರಕಟವಾದ ಒಳ ಮೀಸಲಾತಿ ಕುರಿತ ಐತಿಹಾಸಿಕ ತೀರ್ಪಿನಲ್ಲಿ, ಪರಿಶಿಷ್ಟ ಜಾತಿ ಜತೆಗೆ ಪರಿಶಿಷ್ಟ ಪಂಗಡದಲ್ಲೂ ಒಳ ಮೀಸಲಾತಿ ವರ್ಗೀಕರಣ ಮಾಡಬೇಕು ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಆದರೆ, ರಾಜ್ಯ ಸರ್ಕಾರ ಅದನ್ನು ಪಾಲಿಸಿಲ್ಲ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಿದೆ ಎಂದು ಶಾಂತಾರಾಮ್ ಸಿದ್ದಿ ತಿಳಿಸಿದರು. ಪರಿಶಿಷ್ಟ ಪಂಗಡಗಳಲ್ಲಿ ಸಣ್ಣ ಬುಡಕಟ್ಟು, ಸೂಕ್ಷ್ಮ, ದುರ್ಬಲ, ಪ್ರಬಲ ಸಮುದಾಯಗಳು ಒಂದೇ ಗುಂಪಿನಲ್ಲಿ ಮೀಸಲಾತಿ ಹಂಚಿಕೊಳ್ಳುವಂತಾಗಿದೆ ಎಂದು ಅನೇಕ ಪತ್ರಿಕೆಗಳು ವರದಿ ಮಾಡಿವೆ. ಈ ಕುರಿತು ಸರ್ಕಾರ ಮುತುವರ್ಜಿ ವಹಿಸಿ, ನಿವೃತ್ತ ನ್ಯಾಯಮೂರ್ತಿಗಳ ಆಯೋಗ ರಚಿಸಬೇಕು ಎಂದು ಬುಡಕಟ್ಟು ಸಮುದಾಯಗಳ ಮುಖಂಡರು ಒತ್ತಾಯಿಸುತ್ತಿದ್ದಾರೆ ಎಂದು ತಿಳಿಸಿದರು.

ಮರ್ಯಾದೆ ಹತ್ಯೆಗೆ ಐದು ವರ್ಷ ಜೈಲು

ಪುಟ ೧➡ ಅವರಲ್ಲಿ ಯಾರೊಬ್ಬರಿಗೆ ತೀವ್ರ ಗಾಯವಾಗಲು ಕಾರಣನಾದ ವ್ಯಕ್ತಿಗೆ 3 ವರ್ಷಗಳ ಜೈಲು, 3 ಲಕ್ಷ ರೂ.ವರೆಗೆ ದಂಡ ಹಾಕಲಾಗುತ್ತದೆ. ಸಣ್ಣ ಗಾಯವಾಗಲು ಕಾರಣವಾದರೆ 2 ವರ್ಷದವರೆಗೆ ಜೈಲು ಶಿಕ್ಷೆ ಮತ್ತು 2 ಲಕ್ಷ ರೂ.ವರೆಗೆ ದಂಡ ವಿಧಿಸಬಹುದಾಗಿದೆ. ಇದನ್ನು 7 ವರ್ಷದವರೆಗೂ ವಿಸ್ತರಿಸಬಹುದಾಗಿದೆ. ಮದುವೆಯಾಗುವ ಜೋಡಿಯ ಯಾವುದೇ ಕಡೆಯ ಸಂಬಂಧಿ ಅಥವಾ ಬೆಂಬಲಿಗರನ್ನು ಬೆದರಿಸಿದರೆ 3 ವರ್ಷಗಳಿಂದ 5 ವರ್ಷಗಳ ಜೈಲು ಮತ್ತು 2 ಲಕ್ಷ ರೂ.ವರೆಗೆ ದಂಡ ವಿಧಿಸಬಹುದಾಗಿದೆ. ಸಂತ್ರಸ್ತರ ಸಂಬಂಧಿಕರು ಮತ್ತು ಸಾಕ್ಷಿಗಳ ವಿರುದ್ಧ ಹಿಂಸೆ ಅಥವಾ ಬಲವಂತದ ಬೆದರಿಕೆಗಳಿಗೆ ರಕ್ಷಣೆ ನೀಡುವುದು ಸರ್ಕಾರದ ಜವಾಬ್ದಾರಿಯಾಗಿದೆ. ಪೊಲೀಸರು ರಕ್ಷಣೆ ಕೋರಿಕೆಯನ್ನು ಸ್ವೀಕರಿಸಿದ್ದಲ್ಲಿ ತಕ್ಷಣವೇ ಮತ್ತು 6 ಗಂಟೆಯೊಳಗೆ ಈ ವ್ಯಕ್ತಿಗಳಿಗೆ ಸೂಕ್ತ ಎನಿಸುವ ವಿಧಾನದಲ್ಲಿ ಸುರಕ್ಷತಾ ಕ್ರಮಗಳನ್ನು ಒದಗಿಸಬೇಕು ಮತ್ತು ಜಿಲ್ಲಾ ಕೇಂದ್ರದಲ್ಲಿ ವಾಸಸ್ಥಳ ಸ್ಥಾಪಿಸಬೇಕಾಗುತ್ತದೆ.

ಡಿಜೆ ನಿಷೇಧಿಸುವ ಕುರಿತು ಚರ್ಚೆ

◆**ವಿಧಾನಸಭೆ:** ರಾಜ್ಯದಲ್ಲಿ ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಅಬ್ಬರದ ಸಂಗೀತ ಪ್ರಸಾರಕ್ಕೆ ತಡೆ ಹಾಕುವ ನಿಟ್ಟಿನಲ್ಲಿ ಡಿಜೆ ನಿಷೇಧಿಸಲು ಸರ್ಕಾರ ಚಿಂತನೆ ನಡೆಸುತ್ತಿದೆ. ಬಿಜೆಪಿಯವರು ಒಪ್ಪಿದರೆ ನಾವು ಆದೇಶ ಹೊರಡಿಸುತ್ತೇವೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ ಹೇಳಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಎಸ್.ಎನ್. ಚನ್ನಬಸಪ್ಪ (ಚೆನ್ನಿ) ಅವರು ನಿಯಮಿತವಾಗಿ ಸಹ್ಯಾದ್ರಿ ಉತ್ಸವ ಆಯೋಜಿಸಲು ಸರ್ಕಾರ ಅನುದಾನ ಬಿಡುಗಡೆ ಮಾಡಬೇಕು ಎಂದು ಮನವಿ ಮಾಡಿದರು. ಇದೇ ವೇಳೆ, ಬಿಜೆಪಿ ಶಾಸಕ ಜನಾರ್ದನ ರೆಡ್ಡಿ ಅವರು ಕೊಪ್ಪಳದಲ್ಲಿ ಆನೆಗುಂದಿ ಉತ್ಸವವನ್ನು ಪುನರಾರಂಭಿಸಬೇಕು ಎಂದು ಒತ್ತಾಯಿಸಿದರು. ಮಧ್ಯಪ್ರವೇಶಿಸಿದ ಕಾರ್ಮಿಕ ಸಚಿವ ಸಂತೋಷ್ ಲಾಡ್, ಎಲ್ಲ ಜಯಂತಿಗಳ ಆಚರಣೆ ಸಂದರ್ಭದಲ್ಲಿ ಡಿಜೆ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಯಾವುದೇ ಆಚರಣೆ, ಮೆರವಣಿಗೆ ಸಂದರ್ಭದಲ್ಲಿ ಡಿಜೆ, ಐಟಂ ಸಾಂಗ್‌ಗಳು ಪ್ರಸಾರ ಆಗಲಿಲ್ಲವೆಂದರೆ ದೇವರು ಮುಂದೆ ಸಾಗುವುದೇ ಇಲ್ಲ. ಇದು ಅಸಹ್ಯವಾಗುತ್ತದೆ, ಈ ಬಗ್ಗೆ ಚರ್ಚೆಯಾಗಬೇಕಿದೆ. ಡಿಜೆಗಳು, ಐಟಂ ಸಾಂಗ್‌ಗಳು ಯಾವುದೇ ಸಂಸ್ಕೃತಿಗೆ ಒಳ್ಳೆಯದಲ್ಲ. ಆದ್ದರಿಂದ ಡಿಜೆ ನಿಷೇಧಿಸಬೇಕು ಎಂದು ಪ್ರತಿಪಾದಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ತಂಗಡಗಿ, ಡಿಜೆಯಿಂದಾಗಿ ಸಾಕಷ್ಟು ಸಮಸ್ಯೆಗಳು ಸೃಷ್ಟಿಯಾಗುತ್ತಿವೆ. ನಾವು ಈ ಸಂಬಂಧ ಆದೇಶ ಹೊರಡಿಸುತ್ತೇವೆ. ಆದರೆ, ಬಿಜೆಪಿಯವರು ಸಹಕಾರ ಕೊಡಬೇಕು. ಎಲ್ಲರೂ ಸಹಮತ ಸೂಚಿಸಿದರೆ, ಡಿಜೆ ನಿಷೇಧಿಸುತ್ತೇವೆ ಎಂದು ಸ್ಪಷ್ಟಪಡಿಸಿದರು.

ಇವ ನಮ್ಮವ ವೇದಿಕೆ

ಪ್ರತಿ ಜಿಲ್ಲೆಯಲ್ಲೂ ಜಿಲ್ಲಾ ಮ್ಯಾಜಿಸ್ಟ್ರೇಟರು ಇವ ನಮ್ಮವ ವೇದಿಕೆ ರಚಿಸಬೇಕಿದ್ದು, ಇದರಲ್ಲಿ ನಿವೃತ್ತ ನ್ಯಾಯಾಧೀಶರು, ಪೊಲೀಸ್ ಅಧಿಕಾರಿ, ಕಂದಾಯ ಉಪನೋಂದಣಿ ಅಧಿಕಾರಿ ಮತ್ತು ಸರ್ಕಾರ ನೇಮಿಸಬಹುದಾದ ಸದಸ್ಯರು ಇರುತ್ತಾರೆ. ವೇದಿಕೆಯು ಮದುವೆ ವಿಧಿವಿಧಾನಕ್ಕೆ ಅನುಕೂಲ ಕಲ್ಪಿಸಿಕೊಡಲಿದ್ದು, ಸಮಾಲೋಚನಾ ಸೇವೆಗಳನ್ನು ಒದಗಿಸಲಿದೆ.

ವಸತಿರಹಿತರಿಗೆ ಮನೆ: ಸಚಿವ

ವಿಧಾನ ಪರಿಷತ್: ಕಲಬುರಗಿ ಜಿಲ್ಲೆಯಲ್ಲಿ ವಸತಿರಹಿತ ಕುಟುಂಬಕ್ಕೆ ಮುಂದಿನ ಸಂಪುಟದಲ್ಲಿ ಅನುಮೋದಿಸಿ, ಮನೆಗಳನ್ನು ಪೂರ್ಣಗೊಳಿಸಲು ತೀರ್ಮಾನಿಸಿದ್ದೇವೆ. ಮುಂಬರುವ ಜೂನ್



ತಿಂಗಳಿನಲ್ಲಿ ಸೇಡಂನಲ್ಲಿ ಕಾರ್ಯಕ್ರಮ ಮಾಡಿ, ಆದಷ್ಟು ಶೀಘ್ರದಲ್ಲಿ ಮನೆಗಳನ್ನು ಪೂರ್ಣಗೊಳಿಸಲಾಗುವುದು ಎಂದು ವಸತಿ ಸಚಿವ ಜಮೀರ್ ಅಹ್ಮದ್ ಭರವಸೆ ನೀಡಿದರು.

ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ತಿಪ್ಪಣ್ಣಪ್ಪ ಕಮಕನೂರ್ ಅವರು ಕಲಬುರಗಿ ಜಿಲ್ಲೆಯಲ್ಲಿ ಪ್ರಸ್ತುತ ವಸತಿರಹಿತ ಕುಟುಂಬಗಳಿಗೆ ವಸತಿ ಸೌಲಭ್ಯ ಕಲ್ಪಿಸುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕಲಬುರಗಿಯಲ್ಲಿ ನಮ್ಮ ಇಲಾಖೆ ವತಿಯಿಂದ ನಡೆಸಿದ ಸಮೀಕ್ಷೆ ಪ್ರಕಾರ, ಗ್ರಾಮೀಣ ಭಾಗದಲ್ಲಿ 1,52,089, ನಗರ ಭಾಗದಲ್ಲಿ 8,309 ಮನೆಗಳು ಸೇರಿ ಒಟ್ಟಾರೆ 1,60,398 ವಸತಿರಹಿತರಿದ್ದಾರೆ. ಹಾಗೂ ಗ್ರಾಮೀಣ ಭಾಗದಲ್ಲಿ 4,658 ಮತ್ತು ನಗರ ಭಾಗದಲ್ಲಿ 18,813 ಸೇರಿದಂತೆ ಒಟ್ಟು 23,471 ನಿವೇಶನರಹಿತರಿರುವ ಮಾಹಿತಿ ಲಭ್ಯವಾಗಿದೆ ಎಂದರು.

1 ಲಕ್ಷ ಮನೆಗಳ ಹೊಸ ಗುರಿ

ಈ ಬಾರಿಯ ಬಜೆಟ್‌ನಲ್ಲಿ ಸರ್ವರಿಗೂ ಸೂರು ಕಲ್ಪಿಸುವ ಉದ್ದೇಶದಿಂದ ರಾಜ್ಯದ ವಿವಿಧ ವಸತಿ ಯೋಜನೆ ಅಡಿಯಲ್ಲಿ ಬಿಎಲ್‌ಸಿ ಆಧಾರಿತ 1 ಲಕ್ಷ ಮನೆಗಳ ಹೊಸ ಗುರಿಯನ್ನು ಘೋಷಿಸಲಾಗಿದೆ. ಈ ಗುರಿ ಅಡಿ ಆಯ್ಕೆಯಾಗುವ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ನೀಡುವ ಸಹಾಯಧನವನ್ನು ಕೇಂದ್ರ ಸರ್ಕಾರದಿಂದ 1.5 ಲಕ್ಷ ರೂ. ರಾಜ್ಯ ಸರ್ಕಾರದಿಂದಲೂ 1.20 ಲಕ್ಷ ಅನುದಾನ ಸಿಗಲಿದ್ದು, ರಾಜ್ಯದ 1.20 ಲಕ್ಷ ರೂ. ಮೊತ್ತವನ್ನು 2 ಲಕ್ಷ ರೂ.ವರೆಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ 2 ಲಕ್ಷ ರೂ.ಗಳಿಂದ 3 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದೆ ಎಂದು ಮಾಹಿತಿ ನೀಡಿದರು. ಇದಕ್ಕೆ ಮುಖ್ಯಮಂತ್ರಿಗಳು ಪರಿಶೀಲನಾ ಸಭೆ ಕೈಗೊಂಡು ಅಂತಿಮವಾಗಿ ಸಚಿವ ಸಂಪುಟಕ್ಕೆ ತರಲು ತೀರ್ಮಾನಿಸಿದ್ದಾರೆ ಎಂದು ತಿಳಿಸಿದರು.

ಉತ್ಸಾಹ



ಧಾರವಾಡದಲ್ಲಿ ಬುಧವಾರ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯಲು ಉತ್ಸಾಹದಿಂದ ಹೊರಟ ವಿದ್ಯಾರ್ಥಿಗಳು.

ಉತ್ಸವಗಳಿಗೆ ಮಾರ್ಗಸೂಚಿ ರೂಪಿಸಿ

ವಿಧಾನಸಭೆ: ಪ್ರತಿಯೊಂದು ಜಿಲ್ಲೆಯೂ ಉತ್ಸವವನ್ನು ಹೊಂದಿರಬೇಕು. ಈ ಜಿಲ್ಲಾ ಉತ್ಸವಗಳಿಗೆ ಮಾರ್ಗಸೂಚಿಯನ್ನು ರೂಪಿಸುವಂತೆ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಸಲಹೆ ನೀಡಿದರು. ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಚನ್ನಬಸಪ್ಪ (ಚೆನ್ನಿ) ಅವರು ಸಹ್ಯಾದ್ರಿ ಉತ್ಸವ ಅಥವಾ ಮಲ್ನಾಡ್ ಉತ್ಸವವನ್ನು ನಿಯಮಿತವಾಗಿ ನಡೆಸಲು ಸರ್ಕಾರದಿಂದ ಅನುದಾನ ನೀಡುವಂತೆ ಮನವಿ ಮಾಡಿದರು.



ಇದಕ್ಕೆ ಪ್ರತಿಕ್ರಿಯಿಸಿದ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ, ಎಲ್ಲಾ ಜಿಲ್ಲೆಗಳಿಗೂ ತಮ್ಮದೇ ಆದ ಉತ್ಸವಗಳು ಬೇಕು ಎಂಬ ಬೇಡಿಕೆ ಹೆಚ್ಚಾಗುತ್ತಿದ್ದು, ಇದು ನಮಗೆ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಉತ್ಸವವು ಆಯಾ ಸ್ಥಳದ ಇತಿಹಾಸಕ್ಕೆ ತಳುಕುಹಾಕಿಕೊಂಡಿರಬೇಕು. ದಸರಾ ಮೊದಲು ಮೈಸೂರು, ಮಡಿಕೇರಿ ಮತ್ತು ಚಾಮರಾಜನಗರಕ್ಕೆ ಮಾತ್ರ ಸೀಮಿತವಾಗಿತ್ತು. ನಂತರ ಶಿವಮೊಗ್ಗವನ್ನೂ ಸೇರಿಸಲಾಯಿತು ಎಂದು ಮಾಹಿತಿ ನೀಡಿದರು.

ಈ ವೇಳೆ ಸಭಾಧ್ಯಕ್ಷ ಯು.ಟಿ. ಖಾದರ್ ಮಾತನಾಡಿ, ಪ್ರತಿಯೊಂದು ಜಿಲ್ಲೆಗೂ ಅದರದ್ದೇ ಆದ ಉತ್ಸವ ಇರಬೇಕು. ಇದು ಸ್ಥಳೀಯ ಸಂಸ್ಕೃತಿ ಮತ್ತು ಪರಂಪರೆಯನ್ನು ಉತ್ತೇಜಿಸುತ್ತದೆ. ಇಲ್ಲದಿದ್ದರೆ ಮುಂದಿನ ಪೀಳಿಗೆಯ ಮಕ್ಕಳು ನಮ್ಮ ಸಂಸ್ಕೃತಿಯನ್ನು ಸಂಪೂರ್ಣವಾಗಿ ಮರೆತುಬಿಡುತ್ತಾರೆ ಎಂದು ಅಭಿಪ್ರಾಯಪಟ್ಟರು.

ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ರಾಜ್ಯದಲ್ಲಿ ವರ್ಷಪೂರ್ತಿ ಉತ್ಸವಗಳು ನಡೆಯಬೇಕು. ಅವು ಕೇವಲ ಸಾಂಸ್ಕೃತಿಕ ಕಾರ್ಯಕ್ರಮಗಳಾಗಿರದೇ ಸ್ಥಳೀಯ ಕಲಾವಿದರಿಗೆ ನೆರವಾಗಲು ಆರ್ಥಿಕ ಚಟುವಟಿಕೆಗಳನ್ನು ಸೃಷ್ಟಿಸುವಂತಿರಬೇಕು. ನಾವು ಕೇವಲ ಎರಡು ದಿನದ ಉತ್ಸವಕ್ಕಾಗಿ 20 ಕೋಟಿ ರೂ. ಖರ್ಚು ಮಾಡುತ್ತೇವೆ. ಹಾಗಾದರೆ ಉಳಿದ 363 ದಿನಗಳ ಕಥೆ ಏನು? ಎಂದು ಪ್ರಶ್ನಿಸಿದರು. ಈ ವೇಳೆ ಕಾರ್ಮಿಕ ಸಚಿವ ಸಂತೋಷ್ ಲಾಡ್, ಹೊಸ ಉತ್ಸವಗಳಿಗೆ ಕೋಟ್ಯಂತರ ರೂಪಾಯಿ ವೆಚ್ಚವಾಗುತ್ತದೆ. ಏಕೆಂದರೆ ದೊಡ್ಡ ಗಾಯಕರನ್ನು ಆಹ್ವಾನಿಸಲಾಗುತ್ತದೆ. ಗಾಯಕರು ಮತ್ತು ಐಟಂ ಹಾಡುಗಳಿಲ್ಲದೆ ಜನರು ಕಾರ್ಯಕ್ರಮಕ್ಕೆ ಬರುವುದೇ ಇಲ್ಲ. ಇದಲ್ಲದೇ ಬೇರೆ ಸಾಂಸ್ಕೃತಿಕ ಕಾರ್ಯಕ್ರಮಗಳು ಆಯೋಜಿಸಿದರೆ ಪ್ರೇಕ್ಷಕರೇ ಇರುವುದಿಲ್ಲ ಎಂದರು.

ಕಿರುಸುದ್ದಿ

ವೈಷ್ಣೋದೇವಿ ಯಾತ್ರಿಗಳಿಗೆ ತಲಾ ₹5 ಸಾವಿರ ಸಹಾಯಧನ

ಬೆಂಗಳೂರು: ಶ್ರೀ ಮಾತಾ ವೈಷ್ಣೋದೇವಿ ದೇವಾಲಯಕ್ಕೆ ಭೇಟಿ ನೀಡುವ ಯಾತ್ರಿಗಳಿಗೆ ತಲಾ 5 ಸಾವಿರ ರೂ. ಸಹಾಯಧನ ಯೋಜನೆ ಜಾರಿ ಮಾಡಲಾಗಿದೆ ಎಂದು ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ. ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ಮಂಜೇಗೌಡ ಪ್ರಶ್ನೆಗೆ ಉತ್ತರ ನೀಡಿದ ಅವರು, ಶ್ರೀ ಮಾತಾ ವೈಷ್ಣೋದೇವಿ ದೇವಾಲಯಕ್ಕೆ ಭೇಟಿ ನೀಡುವ ಯಾತ್ರಿಗಳಿಗೆ ತಲಾ 5 ಸಾವಿರ ರೂ. ಸಹಾಯಧನ ಯೋಜನೆ ಜಾರಿ ಮಾಡಲಾಗಿದೆ. ಇದಕ್ಕಾಗಿ ಸರ್ಕಾರ 5 ಕೋಟಿ ರೂ. ಹಣ ಮೀಸಲಿಡಲಾಗಿದೆ. 2026-27ನೇ ಸಾಲಿನಿಂದ ಯೋಜನೆ ಅನುಷ್ಠಾನ ಮಾಡಲಾಗುತ್ತದೆ ಎಂದರು. ಅಲ್ಲದೇ, ಕೈಲಾಸ ಮಾನಸ ಸರೋವರ ಯಾತ್ರಿಗಳಿಗೆ 30 ಸಾವಿರ ರೂ. ಚಾರ್ ಧಾಮ್‌ಗೆ 20 ಸಾವಿರ ರೂ. ಮತ್ತು ಕಾಶಿ ಯಾತ್ರಿಗೆ 5 ಸಾವಿರ ರೂ. ಸಹಾಯಧನ ನೀಡಲಾಗುತ್ತದೆ. ಅರ್ಚಕರಿಗೆ ಉಚಿತವಾಗಿ ಯಾತ್ರೆ ಮಾಡಿಸುತ್ತೇವೆ. ವರ್ಷಕ್ಕೆ 2,500 ಅರ್ಚಕರಿಗೆ ಉಚಿತ ಪ್ರವಾಸ ಕೊಡಿಸಲಾಗುತ್ತದೆ. ಯಾತ್ರಿಗಳು ವೈಷ್ಣೋದೇವಿ ಸೇರಿ ಯಾತ್ರೆಗೆ ಹೋಗಿ ಫೋಟೋ ಅಪ್ಲೋಡ್ ಮಾಡಿದರೆ ಸಹಾಯಧನ ಅವರ ಮನೆಗೆ ಕೊಡುತ್ತೇವೆ. ಫಸ್ಟ್ ಕಮ್ ಫಸ್ಟ್ ಸರ್ವೀಸ್ ನೀಡಲಾಗುತ್ತದೆ. ಯಾರು ಬೇಕಾದರೂ ಯಾತ್ರೆಗೆ ಹೋಗಬಹುದು ಎಂದು ಹೇಳಿದರು.

ದೈಹಿಕ ಶಿಕ್ಷಕ ಹುದ್ದೆಗಳನ್ನು ಭರ್ತಿ ಮಾಡಿ: ನಮೋಶಿ

ವಿಧಾನ ಪರಿಷತ್: ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ದೈಹಿಕ ಹಾಗೂ ವಿಷಯ ಶಿಕ್ಷಕರ ಹುದ್ದೆಗಳು ಸಾವಿರಾರು ಸಂಖ್ಯೆಯಲ್ಲಿ ಖಾಲಿಯಿದ್ದು, ಅವುಗಳ ಭರ್ತಿಗೆ ಸರ್ಕಾರ ಕ್ರಮ ವಹಿಸಬೇಕು ಎಂದು ಬಿಜೆಪಿ ಶಾಸಕ ಶಶಿಲ್ ನಮೋಶಿ ಒತ್ತಾಯಿಸಿದರು. ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, ದೈಹಿಕ ಶಿಕ್ಷಕ ಹಾಗೂ ವಿಷಯ ಶಿಕ್ಷಕರ ಹುದ್ದೆಗಳಿಗೆ ಕಳೆದ 15 ವರ್ಷಗಳಿಂದ ನೇಮಕಾತಿಯೇ ನಡೆದಿಲ್ಲ. ಪರಿಣಾಮ ಆಯಾ ವಿಷಯಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ ಪಡೆದಿರುವ ಲಕ್ಷಾಂತರ ಜನ ಅಭ್ಯರ್ಥಿಗಳು ಸರ್ಕಾರಿ ನೌಕರರಿಗಾಗಿ ಚಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ. ಮತ್ತೊಂದೆಡೆ ಪ್ರಾಥಮಿಕ ಹಂತದಿಂದಲೇ ಮಕ್ಕಳು ದೈಹಿಕ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ ಎಂದು ಸಮಸ್ಯೆಯ ಗಂಭೀರತೆಯನ್ನು ಸದನದ ಮುಂದಿಟ್ಟರು. ಅದಕ್ಕೆ ಪ್ರತಿಕ್ರಿಯಿಸಿದ ಸಚಿವ ಡಾ.ಜಿ.ಪರಮೇಶ್ವರ್, ಶಿಕ್ಷಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಸದನಕ್ಕೆ ಭರವಸೆ ನೀಡಿದರು.

ಭದ್ರಾ ಅಣೆಕಟ್ಟು ದುರಸ್ತಿಯಲ್ಲಿ ಅಕ್ರಮ

ವಿಧಾನ ಪರಿಷತ್: ಭದ್ರಾ ಜಲಾಶಯದ ಗೇಟ್‌ಗಳ ದುರಸ್ತಿ ಕಾರ್ಯದಲ್ಲಿ ಅಕ್ರಮದ ಆರೋಪ ಕೇಳಿ ಬರುತ್ತಿದ್ದು, ಈ ಕೂಡಲೇ ತನಿಖೆ ನಡೆಸಬೇಕು ಎಂದು ಕಾಂಗ್ರೆಸ್ ಶಾಸಕಿ ಬಿಲ್ಕಿಸ್ ಬಾನು ಸರ್ಕಾರಕ್ಕೆ ಒತ್ತಾಯಿಸಿದರು. ಶೂನ್ಯವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, ಭದ್ರಾ ಜಲಾಶಯದ ದುರಸ್ತಿ ಕಾಮಗಾರಿಗೆ ಸರ್ಕಾರ 4 ಕೋಟಿ ರೂ. ಒದಗಿಸಿದೆ. ಆದರೆ, ತುಂಗಭದ್ರಾ ಜಲಾಶಯದಿಂದ ತೆರವುಗೊಳಿಸಿರುವ ಹಳೆಯ ತುಕ್ಕು ಹಿಡಿದ ಕ್ರಸ್ಟ್ ಗೇಟ್‌ಗಳು ಗುಜರಿಗೆ ಸೇರುವಂತಿವೆ. ಅವುಗಳನ್ನು ಇಲ್ಲಿ ಬಿಡಿ ಭಾಗಗಳನ್ನಾಗಿ ಬಳಕೆ ಮಾಡಲಾಗುತ್ತಿದೆ. ನೀರು ಸೋರಿಕೆಯಾಗದಂತೆ ಗೇಟ್‌ಗಳಿಗೆ ಅಳವಡಿಸುವ ರಬ್ಬರ್ ಕಳಪೆಯಾಗುತ್ತಿದೆ ಎಂಬ ಮಾಹಿತಿಯಿದೆ. ಈ ಕೂಡಲೇ ಸರ್ಕಾರ ಗಮನ ಹರಿಸಿ, ತನಿಖೆ ನಡೆಸಬೇಕು ಎಂದು ಕೋರಿದರು.

ಮಹಾನಗರ, ನಗರ ಸ್ಥಳೀಯ ಸಂಸ್ಥೆಗಳಿಗೆ ತಿದ್ದುಪಡಿ ಕಾಯ್ದೆ ಅನ್ವಯ

ಜಾಹೀರಾತು ಮಸೂದೆಗೆ ಅಸ್ತು

ವಿಧಾನ ಪರಿಷತ್: ರಾಜ್ಯಾದ್ಯಂತ ಪುರಸಭೆಗಳು ಹೋರ್ಡಿಂಗ್‌ಗಳು, ಜಾಹೀರಾತು ಫಲಕಗಳ ಶುಲ್ಕದ ಮೇಲೆ ತೆರಿಗೆ ವಿಧಿಸಲು ಅನುವು ಮಾಡಿಕೊಡುವ ತಿದ್ದುಪಡಿ ಮಸೂದೆ ಅಂಗೀಕರಿಸಿದೆ.

ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರು ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು(ತಿದ್ದುಪಡಿ) ವಿಧಾನಸಭೆಯಿಂದ ಅಂಗೀಕರಿಸಿದ ಮಸೂದೆಯನ್ನು ಪರಿಷತ್‌ನಲ್ಲಿ ಮಂಡಿಸಿ ಅಂಗೀಕಾರ ಪಡೆದರು. ಇದಕ್ಕೂ ಮುನ್ನ ಮಾತನಾಡಿದ ಅವರು, ಗ್ರೇಟರ್ ಬೆಂಗಳೂರು ಹೊರತುಪಡಿಸಿ ರಾಜ್ಯದ ಇನ್ನುಳಿದ ಮಹಾನಗರ, ನಗರಸಭೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಉದ್ದೇಶಿತ ತಿದ್ದುಪಡಿ ಕಾಯ್ದೆ ಅನ್ವಯವಾಗಲಿದೆ. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಜಾಹೀರಾತು ಹೋಲ್ಡಿಂಗ್‌ಗಳನ್ನು ಅಳವಡಿಸಿ ಭಾರೀ ಪ್ರಚಾರ ಪಡೆದುಕೊಳ್ಳುತ್ತಿವೆ. ಹೋಲ್ಡಿಂಗ್ಸ್‌ಗೆ ಜಾಗ ಮಾಡಿಕೊಟ್ಟ ಮನೆ, ನಿವೇಶನ ಮಾಲೀಕರೂ ಆದಾಯ ಪಡೆಯುತ್ತಿದ್ದಾರೆ. ಆದರೆ, ಆದರಿಂದ ನಗರ ಸ್ಥಳೀಯ ಸಂಸ್ಥೆಗಳಿಗೆ ಆದಾಯವೇ ಇಲ್ಲ. ಜಾಹೀರಾತು ಶುಲ್ಕದಿಂದ ನಗರ ಸ್ಥಳೀಯ ಸಂಸ್ಥೆಗಳು ಆರ್ಥಿಕವಾಗಿ ಬಲವರ್ಧನೆಯಾಗಲಿವೆ ಎಂಬುದು ಈ ಮಸೂಧೆಯ ಸದುದ್ದೇಶವಾಗಿದೆ. ಈ ಕುರಿತಂತೆ ಶೀಘ್ರವೇ ಡ್ರೋಣ್‌ಗಳ ಮೂಲಕ ಹೋಲ್ಡಿಂಗ್ಸ್ ಸಮೀಕ್ಷೆ ನಡೆಸಲಾಗುತ್ತದೆ. ಸ್ವಂತ ಉದ್ಯಮ ಫಲಕಗಳಿಗೆ ಇದರಿಂದ ವಿನಾಯಿತಿ ನೀಡಲಾಗುವುದು ಎಂದರು. ಅದಕ್ಕೆ ಆಕ್ಷೇಪಿಸಿದ ಬಿಜೆಪಿ ಸದಸ್ಯರಾದ ಸಿ.ಟಿ.ರವಿ, ಖಾಸಗಿ ಕಟ್ಟಡಗಳ ಮಾಲೀಕರು ಈಗಾಗಲೇ ಸರ್ಕಾರಕ್ಕೆ ಆಸ್ತಿ ತೆರಿಗೆ, ನೀರಿನ ಕರ, ಕಸದ ತೆರಿಗೆ ಕಟ್ಟುತ್ತಿದ್ದರೂ ಸರ್ಕಾರದ ಹಣದ ದಾಹ ತೀರುತ್ತಿಲ್ಲ. ಹೀಗಾಗಿ ಜಾಹೀರಾತು ಫಲಕಗಳಿಂದ ಜನರಿಗೆ ಬರುವ ಆದಾಯಕ್ಕೂ



ಪ್ರಚಾರಕ್ಕಾಗಿ ಸುಣ್ಣಬಣ್ಣ

ಇದಕ್ಕೆ ಧ್ವನಿಗೂಡಿಸಿದ ಭೋಜೇಗೌಡ, ಮುಖ್ಯ ರಸ್ತೆಯಲ್ಲಿರುವ ಅನೇಕ ಮನೆಗಳ ಗೋಡೆಗಳಿಗೆ ಪ್ಲಾಸ್ಟರಿಂಗ್, ಸುಣ್ಣ ಬಣ್ಣವೂ ಇರುವುದಿಲ್ಲ. ಅಂತಹ ಕಟ್ಟಡಗಳ ಮಾಲೀಕರಿಗೆ ಒಂದಿಷ್ಟು ಹಣ ನೀಡಿ, ತಮ್ಮ ಕಂಪನಿಯ ಪ್ರಚಾರಕ್ಕಾಗಿ ಸುಣ್ಣಬಣ್ಣ ಬರೆಸುವುದಕ್ಕೂ ಈ ವಿಧೇಯಕ ಕೊಡಲಿ ಪೆಟ್ಟಾಗುತ್ತದೆ. ಬಡವರ ಹೊಟ್ಟೆ ಮೇಲೆ ಹೊಡೆದ ಂತಾಗುತ್ತದೆ ಎಂದು ಎಚ್ಚರಿಸಿದರು. ಆಗ ಮಧ್ಯ ಪ್ರವೇಶಿಸಿದ ಸಭಾಪತಿ ಹೊರಟ್ಟಿ, ಭೋಜೇಗೌಡ ನಾಳೆ ನಾನು ತೋರಿಸುತ್ತೇನೆ ಕೂರು ಎಂದು ನಗೆ ಚಟಾಕಿ ಹಾರಿಸಿದರು.

ಸರ್ಕಾರ ಕನ್ನ ಹಾಕುತ್ತಿದೆ ಎಂಬುದಕ್ಕೆ ಈ ವಿಧೇಯಕ ಸಾಕ್ಷಿ. ಕೆಎಸ್‌ಆರ್‌ಟಿಸಿ ಬಸ್‌ಗಳಿಗೆ ಜಾಹೀರಾತು ಪ್ರದರ್ಶಿಸಲು ಕಂಪನಿಗಳು ದುಡ್ಡು ನೀಡುವುದಲ್ಲದೇ ನಿಮಗೂ ತೆರಿಗೆ ಕಟ್ಟಬೇಕೇ? ಇನ್ನೂ ಯಾವ ಯಾವ ಮೂಲದಿಂದ ತೆರಿಗೆ ಸಂಗ್ರಹಿಸಬೇಕೋ ಹೇಳಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪೊಲೀಸ್ ತಿದ್ದುಪಡಿ ವಿಧೇಯಕ ಅಂಗೀಕಾರ

ವಿಧಾನ ಪರಿಷತ್: ಅಶಿಸ್ತು, ಅನುಚಿತ ವರ್ತನೆ ಹಾಗೂ ಕರ್ತವ್ಯ ಲೋಪ ಎಸಗುವ ಡಿವೈಎಸ್ಪಿಗಿಂತ ಕೆಳ ಹಂತದ ಸಿಬ್ಬಂದಿಗೆ ಅಂಕುಶ ಹಾಕುವ ಉದ್ದೇಶದಿಂದ ಗೃಹ ಸಚಿವ ಡಾ.ಜಿ.ಪರಮೇಶ್ವರ ಮಂಡಿಸಿದ ಕರ್ನಾಟಕ ಪೊಲೀಸ್ ತಿದ್ದುಪಡಿ ವಿಧೇಯಕ-2026 ಅನ್ನು ಮೇಲ್ಮನೆಯಲ್ಲಿ ಅಂಗೀಕರಿಸಲಾಯಿತು.

ತಿದ್ದುಪಡಿ ವಿಧೇಯಕವನ್ನು ಮಂಡಿಸಿದ ಸಚಿವ ಡಾ.ಪರಮೇಶ್ವರ್, ಪೊಲೀಸ್ ವರ್ಗಾವಣೆಗೆ ಸಂಬಂಧಿಸಿದ ಈ ಮಸೂಧೆಯನ್ನು ಕೆಳಮನೆ ಅಂಗೀಕರಿಸಿದೆ. ಐಪಿಎಸ್, ಡಿವೈಎಸ್ಪಿ ಹಾಗೂ ಇನ್ಸ್‌ಪೆಕ್ಟರ್‌ಗಳ ವರ್ಗಾವಣೆಗೆ ಈಗಾಗಲೇ ವ್ಯವಸ್ಥೆಯಿದೆ. ಆದರೆ, ಅಶಿಸ್ತು, ಕರ್ತವ್ಯಲೋಪ ತೋರಿದವರನ್ನು ತಕ್ಷಣ ಅಲ್ಲಿಂದ ವರ್ಗಾವಣೆ ಮಾಡಲು ಈ ವಿಧೇಯಕದಡಿ ಕರ್ನಾಟಕ ಪೊಲೀಸ್ ಎಸ್ಟಾಬ್ಲಿಷ್ಮೆಂಟ್ ಬೋರ್ಡ್ ಸ್ಥಾಪಿಸಲಾಗುತ್ತದೆ. ಡಿಜಿ-ಐಜಿ ಅವರು ಬೋರ್ಡ್‌ನ ಮುಖ್ಯಸ್ಥರಾಗಿರುತ್ತಾರೆ.

ಪೊಲೀಸರ ದುರ್ನಡತೆ ಹೆಚ್ಚಳ

ಅದಕ್ಕೆ ಪ್ರತಿಕ್ರಿಯಿಸಿದ ಜೆಡಿಎಸ್ ಸದಸ್ಯ ಶರವಣ, ಬಿಜೆಪಿ ಸದಸ್ಯೆ ಹೇಮಲತಾ ನಾಯಕ್, ನವೀನ್ ಕೆ.ಎಸ್., ಕಾಂಗ್ರೆಸ್‌ನ ಎಂ.ನಾಗರಾಜ, ಇತ್ತೀಚಿನ ದಿನಗಳಲ್ಲಿ ಪೊಲೀಸ್ ಅಧಿಕಾರಿಗಳ ದುರ್ನಡತೆ ಹೆಚ್ಚುತ್ತಿದೆ. ಸಾರ್ವಜನಿಕರು, ರೈತರು ಮೇಲೆ ಪೊಲೀಸ್ ದರ್ಪಕ್ಕೆ ಕಡಿವಾಣ ಹಾಕಬೇಕು. ವರ್ಗಾವಣೆ ನೆಪದಲ್ಲಿ ಕೆಳ ಸಿಬ್ಬಂದಿಗೆ ಕಿರುಕುಳ ಆಗದಂತೆ ಕಾಯ್ದೆಯಲ್ಲಿ ನಿಯಮಗಳನ್ನು ರೂಪಿಸಿ ಎಂದರು.

ಕೃಷಿ ಇಲಾಖೆಯಲ್ಲಿ 940 ಹುದ್ದೆಗಳ ಭರ್ತಿ: ಸಚಿವ

143 ಹುದ್ದೆಗಳು ಮಂಜೂರು

ಉಡುಪಿ ಜಿಲ್ಲೆ ವ್ಯಾಪ್ತಿಯಲ್ಲಿನ ವಿವಿಧ ಕಚೇರಿಗಳಲ್ಲಿ 143 ಹುದ್ದೆಗಳು ಮಂಜೂರಾಗಿದ್ದು ಅದರಲ್ಲಿ 30 ಹುದ್ದೆಗಳು ಖಾಲಿಯಿವೆ. ಮುಂದಿನ 2-3 ತಿಂಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಆರಂಭವಾಗಲಿದೆ. ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಉಡುಪಿ ಭಾಗಕ್ಕೂ ನಿಯೋಜಿಸಲಾಗುವುದು ಎಂದು ಸಚಿವರು ತಿಳಿಸಿದರು.

ವಿಧಾನಸಭೆ: ಕೃಷಿ ಇಲಾಖೆಯಲ್ಲಿ ಖಾಲಿ ಇರುವ 940 ಹುದ್ದೆಗಳನ್ನು ಮೂರು ತಿಂಗಳಲ್ಲಿ ಭರ್ತಿ ಮಾಡಲಾಗುವುದು ಎಂದು ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.



ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಕಿರಣ್ ಕುಮಾರ್ ಕೊಡ್ಗಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 2018ರಲ್ಲಿ 370 ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. 2023ರಲ್ಲಿ 940 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

ಕೃಷಿ ಇಲಾಖೆಯ ಗ್ರೂಪ್ ಬಿ ಮತ್ತು ಸಿ ವೃಂದದ ಹುದ್ದೆಗಳನ್ನು ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ ವೃಂದದಲ್ಲಿ ನೇರ ನೇಮಕಾತಿ ಕೋಟಾದಡಿ 945 ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದಿಂದ ನೇಮಕಾತಿ ಅಧಿಸೂಚನೆ ಹೊರಡಿಸಲಾಗಿತ್ತು. ನಂತರ ಪರಿಶಿಷ್ಟ ಜಾತಿ ಒಳಮೀಸಲಾತಿ ಜಾರಿಗೆ ಬಂದಿದ್ದು, ಸರ್ಕಾರದ ನಿರ್ದೇಶನದನ್ವಯ ಹಿಂದಿನ ನೇಮಕಾತಿ ಅಧಿಸೂಚನೆ ರದ್ದು ಪಡಿಸಲಾಗಿದೆ. ಸರ್ಕಾರದ ಇತ್ತೀಚಿನ ನಿರ್ದೇಶನದಂತೆ ಹೊಸದಾಗಿ ನೇಮಕಾತಿ ಅಧಿಸೂಚನೆ ಹೊರಡಿಸಲು ಕ್ರಮ ವಹಿಸಲಾಗುತ್ತಿದೆ. ಮುಂದಿನ ಮೂರು ತಿಂಗಳಲ್ಲಿ ನೇಮಕಾತಿ ಮಾಡಲಾಗುವುದು ಎಂದರು.

6 ಸಾವಿರ ಹೊಸ ಬಸ್ ಖರೀದಿಗೆ ತೀರ್ಮಾನ

ವಿಧಾನ ಪರಿಷತ್: ನಮ್ಮ ಸರ್ಕಾರ ಬಂದ ಮೇಲೆ ಸುಮಾರು 6 ಸಾವಿರ ಹೊಸ ಬಸ್ ಖರೀದಿ ಮಾಡಲು ತೀರ್ಮಾನಿಸಿದ್ದೇವೆ. ಅವಧಿ ಮೀರಿರುವ ಬಸ್‌ಗಳು ನಮ್ಮಲ್ಲಿ ಇಲ್ಲ. ಹೊಸ ಬಸ್ ಖರೀದಿಗೆ ಟೆಂಡರ್ ಕರೆಯಲಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.



ಸದಸ್ಯರಾದ ಭಾರತಿ ಶೆಟ್ಟಿ ಹಾಗೂ ಗೋವಿಂದ್ ರಾಜ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಎಲ್ಲೆಲ್ಲಿ ಕೊರತೆ ಇದೆಯೋ ಅಂತಹ ಕಡೆ ಆದ್ಯತೆ ಮೇರೆಗೆ ಬಸ್‌ಗಳನ್ನು ಒದಗಿಸುತ್ತೇವೆ. ಪ್ರಕ್ರಿಯೆಯಿಂದ ತಡವಾಗಿದೆ. ಮುಖ್ಯಮಂತ್ರಿ ಅವರು 2 ಸಾವಿರ ಕೋಟಿ ರೂ. ಸಾಲ ಕೊಟ್ಟಿದ್ದಾರೆ. ಅದನ್ನು ಕೆಎಸ್‌ಆರ್‌ಟಿಸಿ ತೀರಿಸುತ್ತಿದೆ. ಇಲಾಖೆಯಲ್ಲಿ ಒಟ್ಟು 6 ಸಾವಿರ ಕೋಟಿ ರೂ. ಸಾಲ ಇದೆ. ಇದನ್ನು ಸರ್ಕಾರವೇ ತೀರಿಸಲಿದೆ. ನಾನು ಮಂತ್ರಿ ಆದಾಗ 4,099 ಕೋಟಿ ರೂ. ಸಾಲವಿತ್ತು. ಹಿಂದಿನ ಸರ್ಕಾರ ಬಸ್ ಖರೀದಿ ಮಾಡಿರಲಿಲ್ಲ. ನೇಮಕಾತಿ ಆಗಿರಲಿಲ್ಲ. ನಮ್ಮ ಸರ್ಕಾರ ಬಂದ ನಂತರ ಸುಮಾರು 6 ಸಾವಿರ ಹೊಸ ಬಸ್ ಅನ್ನು ಖರೀದಿಗೆ ತೀರ್ಮಾನಿಸಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಇದಕ್ಕೂ ಮೊದಲು ಸದಸ್ಯೆ ಭಾರತಿ ಶೆಟ್ಟಿ ಅವರು, ಮಹಿಳೆಯರಿಗೆ ಉಚಿತ ಸಾರಿಗೆ ಸೌಲಭ್ಯದ ಶಕ್ತಿ ಯೋಜನೆ ಹಣ ಸರ್ಕಾರದಿಂದ ಬಾಕಿ ಇದೆ. ಇದರಿಂದ ಇಲಾಖೆಗೆ ಆರ್ಥಿಕ ಕೊರತೆ ಉಂಟಾಗಿದೆ. ನಮ್ಮ ಸರ್ಕಾರದಲ್ಲಿ ಬಸ್ ಸರಿಯಾಗಿತ್ತು. ಅದಕ್ಕೆ ಹೊಸ ಬಸ್ ಖರೀದಿ ಮಾಡಿಲ್ಲ. ಈಗ ಸರಿಯಿಲ್ಲ. ಹೊಸ ಬಸ್ ಖರೀದಿ ಮಾಡಿ ಎಂದು ತಿಳಿಸಿದರು. ಸದಸ್ಯ ಗೋವಿಂದ್ ರಾಜ್ ಮಾತನಾಡಿ, ಕೇಂದ್ರದ ಜಿಸಿಸಿ ಬಸ್ ಯಾವಾಗ ಬರುತ್ತದೆ? ಶಕ್ತಿ ಯೋಜನೆಯಿಂದ 4 ಸಾವಿರ ಕೋಟಿ ರೂ. ಬಾಕಿ ಇದೆ. ಶಕ್ತಿ ಯೋಜನೆ ಆತುರವಾಗಿ ಜಾರಿ ಮಾಡಿದ್ದೀರಿ. ಈ ಯೋಜನೆಗೆ ಬಾಕಿ ಹಣ ತೆಗೆದುಕೊಂಡು ಹೊಸ ಬಸ್ ಖರೀದಿ ಮಾಡಬೇಕು. ನೌಕರರ ವೇತನ ಪರಿಷ್ಕರಣೆ ಮಾಡಿ ಎಂದು ಒತ್ತಾಯಿಸಿದರು.

ಸ್ವಯಂಚಾಲಿತವಾಗಿ ಖಾತೆ ಬದಲಾವಣೆ

ವಿಧಾನ ಪರಿಷತ್: ಆಸ್ತಿ ನೋಂದಣಿ ನಂತರ ಖಾತೆ ಬದಲಾವಣೆ ಪೈಕಿ ಪ್ರಸ್ತುತ ಶೇ.98 ರಷ್ಟು ಸ್ವಯಂ ಚಾಲಿತವಾಗಿಯೇ ಖಾತೆ ಬದಲಾವಣೆ ಆಗುತ್ತಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.



ರಾಮೋಜಿಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕಳೆದ 1 ವರ್ಷದಿಂದ 2 ಹಂತದಲ್ಲಿ ಸುಧಾರಣೆಗಳನ್ನು ತರಲಾಗಿದೆ. ಹೀಗಾಗಿ ಮೊದಲ ಹಂತದಲ್ಲಿ ಕಳೆದ ವರ್ಷ ಒಟ್ಟು ಖಾತೆ ಬದಲಾವಣೆ ಪೈಕಿ ಶೇ.66 ರಷ್ಟು ಖಾತೆಗಳನ್ನು ಆಟೋ ಮ್ಯುಟೇಶನ್ ಮಾಡುವ ಮೂಲಕ ಸ್ವಯಂ ಚಾಲಿತವಾಗಿ ಖಾತೆ ಬದಲಾವಣೆ ಜಾರಿ ಮಾಡಿದ್ದೇವೆ. ಕಳೆದ ತಿಂಗಳು ಮತ್ತೆ ಒಂದು ಹೆಜ್ಜೆ ಮುಂದಿಡಲಾಗಿದೆ ಎಂದರು. ಕೆಲವು ಅರ್ಜಿ ನೀಡಿದ ಕೇವಲ ಮೂರು ಗಂಟೆಗಳಲ್ಲಿ, ಕೆಲವು ಎಂಟನೇ ದಿನ, ಇನ್ನೂ ಕೆಲವು 16ನೇ ದಿನ ಕಾನೂನು ಪ್ರಕಾರವಾಗಿ ಖಾತೆ ಬದಲಾವಣೆ ಆಗುತ್ತವೆ. ಈ ಬಗ್ಗೆ ತಕರಾರು ದಾಖಲಾದರೆ ಮಾತ್ರ ಖಾತೆ ಬದಲಾವಣೆ ವಿಳಂಬವಾಗುತ್ತದೆ. ಇನ್ನುಳಿದಂತೆ ಯಾರನ್ನೂ ಭೇಟಿ ಮಾಡದೆ, ಮಧ್ಯವರ್ತಿಗಳ ಹಾವಳಿ ಇಲ್ಲದೆಯೇ ಸೇವೆಯನ್ನು ಪಡೆಯಬಹುದಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಆರ್‌ಐ ತಮ್ಮ ಕಡೆಯವರಿಂದ ತಕರಾರು ಹಾಕುತ್ತಿದ್ದಾರೆ ಎಂಬ ಬಗ್ಗೆಯೂ ಆರೋಪ ಇತ್ತು. ಹೀಗಾಗಿ ತಕರಾರು ಹಾಕುವವರಿಗೆ ಆಧಾರ್ ಇ-ಕೆವೈಸಿಯನ್ನು ಕಡ್ಡಾಯ ಮಾಡಲಾಗಿದೆ ಎಂದು ತಿಳಿಸಿದರು.

ಬಾಕಿ ಇದ್ದ ಪ್ರಕರಣಗಳು ವಿಲೇವಾರಿ

ತಹಶೀಲ್ದಾರ್ ನ್ಯಾಯಾಲಯದಲ್ಲಿ ನಾವು ಬರುವ ಮೊದಲು ಅವಧಿ ಮೀರಿರುವ 10,774 ತಕರಾರು ಪ್ರಕರಣಗಳು ಬಾಕಿಯಿದ್ದವು. ಇದೀಗ ಪ್ರಸ್ತುತ 137 ಪ್ರಕರಣಗಳು ಮಾತ್ರ ಬಾಕಿ ಉಳಿದಿವೆ. ಎಸಿ ನ್ಯಾಯಾಲಯಗಳಲ್ಲಿ 73,634 ಪ್ರಕರಣಗಳು ಬಾಕಿ ಉಳಿದಿದ್ದ ಈ ಪೈಕಿ ಪ್ರಸ್ತುತ 10,255 ಪ್ರಕರಣಗಳು ಬಾಕಿ ಇವೆ. ಐದು ವರ್ಷಕ್ಕೂ ಮೀರಿದ 32,787 ಪ್ರಕರಣಗಳ ಪೈಕಿ 2894 ಪ್ರಕರಣಗಳು ಮಾತ್ರ ಬಾಕಿ ಇವೆ. ಪ್ರಕರಣ ವಿಲೇವಾರಿಗೆ ಬೆಂಗಳೂರಿಗೆ ಮಾತ್ರ 8 ಜನ ವಿಶೇಷ ಜಿಲ್ಲಾಧಿಕಾರಿಗಳು ಹಾಗೂ ರಾಜ್ಯಾದ್ಯಂತ 27 ವಿಶೇಷ ಎಸಿಗಳನ್ನು ನೇಮಕ ಮಾಡಲಾಗಿದೆ ಎಂದು ಕೃಷ್ಣಬೈರೇಗೌಡ ತಿಳಿಸಿದರು.

250 ಹಾಸ್ಟೆಲ್ ನೀಡುವಂತೆ ಮುಖ್ಯಮಂತ್ರಿಗೆ ಮನವಿ

ವಿಧಾನಸಭೆ: ಜಿಲ್ಲಾ ಕೇಂದ್ರಗಳಿಂದ ಹೆಚ್ಚಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಸ್ಟೆಲ್‌ಗಳಿಗೆ ಬೇಡಿಕೆ ಬರುತ್ತಿರುವುದರಿಂದ 250 ಹಾಸ್ಟೆಲ್ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಲಾಗಿದೆ ಎಂದು ಸಚಿವ ಶಿವರಾಜ ಎಸ್.ತಂಗಡಗಿ ಹೇಳಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ದೊಡ್ಡನಗೌಡ ಹನುಮಗೌಡ ಪಾಟೀಲ್ ಅವರ



ಪ್ರಶ್ನೆಗೆ ಉತ್ತರಿಸಿದ ಸಚಿವರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಸ್ಟೆಲ್‌ಗಳಿಗೆ ಹೆಚ್ಚಿನ ಬೇಡಿಕೆಯಿದೆ. ರಾಜ್ಯದಲ್ಲಿ 1.41 ಲಕ್ಷ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಒದಗಿಲು ಸಾಧ್ಯವಾಗಿಲ್ಲ. ಕಳೆದ ಮೂರು ವರ್ಷಗಳಲ್ಲಿ ಸರ್ಕಾರವು 150 ಹಾಸ್ಟೆಲ್ ಕೊಟ್ಟಿದೆ. ಈಗಾಗಲೇ ಮುಖ್ಯಮಂತ್ರಿಗಳು 50 ಹಾಸ್ಟೆಲ್ ನೀಡಿದ್ದಾರೆ. ಬೇಡಿಕೆ ಹೆಚ್ಚಿರುವುದರಿಂದ ಇನ್ನೂ 250 ಹಾಸ್ಟೆಲ್ ನೀಡುವಂತೆ ಮನವಿ ಮಾಡುವುದಾಗಿ ತಿಳಿಸಿದರು. ಕೊಪ್ಪಳ ಜಿಲ್ಲೆಯಲ್ಲಿ 42 ಮೆಟ್ರಿಕ್ ಪೂರ್ವ ಮತ್ತು 48 ಮೆಟ್ರಿಕ್ ನಂತರ ಸೇರಿ ಒಟ್ಟು 90 ಹಾಸ್ಟೆಲ್‌ಗಳು ಕಾರ್ಯ ನಿರ್ವಹಿಸುತ್ತಿವೆ ಎಂದು ಹೇಳಿದರು. ಈ ವೇಳೆ ಮಧ್ಯ ಪ್ರವೇಶಿಸಿದ ವಿಧಾನಸಭಾಧ್ಯಕ್ಷ ಯು. ಟಿ. ಖಾದರ್ ಉಳ್ಳಾಲ ಕ್ಷೇತ್ರದಲ್ಲಿನ ದೀನ ದಯಾಳ್ ಉಪಾಧ್ಯಾಯ ಹಾಸ್ಟೆಲ್‌ಗೆ ಅಗತ್ಯ ಮೂಲ ಸೌಕರ್ಯ ಕಲ್ಪಿಸುವಂತೆ ಸಚಿವರಿಗೆ ತಿಳಿಸಿದರು. ಬಿಜೆಪಿ ಶಾಸಕ ಉಮಾನಾಥ ಕೋಟ್ಯಾನ್, ಮೂಡಬಿದಿರೆ ಮತ್ತು ಮುಲ್ಕಿಗೆ ಹಾಸ್ಟೆಲ್ ಮಂಜೂರು ಮಾಡುವಂತೆ ಮನವಿ ಮಾಡಿದರು.

ವಿಧಾನಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಒತ್ತಾಯ

ಮೀನುಗಾರರ ಪ್ರೋತ್ಸಾಹಧನ ಹೆಚ್ಚಿಸಲಿ

ವಿಧಾನ ಪರಿಷತ್: ಮೀನುಗಾರರಿಗೆ ಮತ್ಸ್ಯಾಶ್ರಯ ಯೋಜನೆಯಡಿ ನೀಡಲಾಗುವ ಧನ ಸಹಾಯವನ್ನು ಕನಿಷ್ಠ 5 ಲಕ್ಷ ರೂ. ಗೆ ಹೆಚ್ಚಿಸಬೇಕು. ಗ್ರಾಮೀಣ ಭಾಗದಲ್ಲಿ ಮನೆ ನಿರ್ಮಾಣಕ್ಕೆ ಗ್ರಾ.ಪಂ.ಯಿಂದಲೇ ಕಟ್ಟಡ ನಿರ್ಮಾಣಕ್ಕೆ ಪರವಾನಿಗೆ ನೀಡುವ ವ್ಯವಸ್ಥೆಯನ್ನು ಮರು ಜಾರಿಗೆ ತರಬೇಕು ಎಂದು ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಆಗ್ರಹಿಸಿದರು.

ಮೇಲ್ಮನೆಯಲ್ಲಿ ಪ್ರಶ್ನೋತ್ತರ ವೇಳೆ ಪ್ರಸ್ತಾಪಿಸಿದ ಅವರು, 2022 ರಿಂದ ರಾಜ್ಯದಲ್ಲಿ ಈ ವರೆಗೆ ಒಂದೇ ಒಂದು ಮನೆ ಮಂಜೂರಾಗಿಲ್ಲ. ಮತ್ಸ್ಯಾಶ್ರಯ ಯೋಜನೆಯಡಿ ಗ್ರಾಮೀಣ ಭಾಗದ ಫಲಾನುಭವಿಗಳಿಗೆ 1.20 ಲಕ್ಷ ರೂ., ಪರಿಶಿಷ್ಟ ಜಾತಿ, ಪಂಗಡದವರಿಗೆ 1.75 ಲಕ್ಷ ರೂ. ನೀಡಲಾಗುತ್ತದೆ. ಇತ್ತೀಚೆಗೆ ಎಲ್ಲ ವಸ್ತುಗಳು ದುಬಾರಿಯಾಗಿದ್ದರಿಂದ ಸರ್ಕಾರದ ಅತ್ಯಲ್ಪದ ಸಹಾಯಧನದಲ್ಲಿ ಮನೆ ನಿರ್ಮಾಣ ಸಾಧ್ಯವಾಗದೇ ಪರದಾಡುವಂತಾಗಿದೆ. ಅದರಂತೆ ಈ ಹಿಂದೆ ಗ್ರಾಮೀಣ ಪ್ರದೇಶದಲ್ಲಿ ಮನೆ ನಿರ್ಮಾಣಕ್ಕೆ ಸ್ಥಳೀಯ ಪಂಚಾಯತ್‌ನಿಂದ ಅನುಮತಿ ನೀಡಲಾಗುತ್ತಿತ್ತು. ಅದನ್ನು ನಗರಾಭಿವೃದ್ಧಿ ಕೋಶಕ್ಕೆ ವರ್ಗಾಯಿಸಿದ್ದರಿಂದ ಜನರು ಪರದಾಡುವಂತಾಗಿದೆ ಎಂದು ದೂರಿದರು. ಅದಕ್ಕೆ ಉತ್ತರಿಸಿದ ಮೀನುಗಾರಿಕೆ ಇಲಾಖೆ ಸಚಿವ ಮಂಕಾಳ ವೈದ್ಯ, ಈಗಿನ ನಿಮಯಗಳಲ್ಲಿ ಸಹಾಯಧನ ಹೆಚ್ಚಿಸಲು ಸಾಧ್ಯವಿಲ್ಲ. ಇಲಾಖೆಯಿಂದ ನೀಡಲಾಗುವ ಸಹಾಯಧನದ ಜೊತೆಗೆ ನರೇಗಾದಿಂದ ನೀಡಲಾಗುವ 30 ಸಾವಿರ ರೂ. ಸೇರಿದರೆ 1.50 ಲಕ್ಷ ರೂ. ಹಾಗೂ ಪರಿಶಿಷ್ಟ ಫಲಾನುಭವಿಗಳಿಗೆ 2 ಲಕ್ಷ ರೂ. ಗಳಾಗುತ್ತವೆ. ಮುಂದಿನ ದಿನಗಳಲ್ಲಿ ಸಹಾಯಧನವನ್ನು 3 ಲಕ್ಷ ರೂ. ಗೆ ಹೆಚ್ಚಿಸಲು ಪ್ರಯತ್ನಿಸಲಾಗುವುದ ಎಂದು ಭರವಸೆ ನೀಡಿದರು.



ಸಹಕಾರ ಸಂಘಗಳ ನೇಮಕಾತಿ ಪಾರದರ್ಶಕವಾಗಲಿ

ಇದೇ ವೇಳೆ ಸಹಕಾರ ಸಂಘಗಳ ನೇಮಕಾತಿಯನ್ನು ಪ್ರಸ್ತಾಪಿಸಿ ಕಾಂಗ್ರೆಸ್ ಶಾಸಕ ಎ. ವಸಂತ ಕುಮಾರ್, ಸಹಕಾರ ಸಂಘಗಳ ನೇಮಕಾತಿಯಲ್ಲಿ ರಾಜಕೀಯ ಹಸ್ತಕ್ಷೇಪ ತಡೆಯಬೇಕು. ನೇಮಕಾತಿ ಪ್ರಕ್ರಿಯೆಯನ್ನು ಪಾರದರ್ಶಕವಾಗಿಸುವ ಮೂಲಕ ಠೇವಣಿದಾರರ ವಿಶ್ವಾಸವನ್ನು ಗಟ್ಟಿಗೊಳಿಸಬೇಕು. ಅರ್ಹ ಅಭ್ಯರ್ಥಿಗಳಿಗೆ ನ್ಯಾಯ ಸಿಗುವಂತೆ ಮಾಡಬೇಕು ಎಂದು ಸರ್ಕಾರದ ಗಮನ ಸೆಳೆದರು.

ಶಾಸಕರ ಭವನ ಸುತ್ತಲಿನ ಹೋಟೆಲ್‌ಗಳಲ್ಲಿ ಊಟ-ತಿಂಡಿ ಸಿಗುತ್ತಿಲ್ಲ

ಮೇಲ್ಮನೆಯಲ್ಲೂ ಪ್ರತಿಧ್ವನಿಸಿದ ಅನಿಲ ಕೊರತೆ

ವಿಧಾನ ಪರಿಷತ್: ದೇಶದ ವಿವಿಧೆಡೆ ಉಂಟಾಗಿರುವ ಅಡುಗೆ ಅನಿಲ ಕೊರತೆ ಮೇಲ್ಮನೆಯಲ್ಲೂ ಪ್ರತಿಧ್ವನಿಸಿ ಹಲವಾರು ದಿನಗಳಿಂದ ಸರಿಯಾಗಿ ಊಟ, ತಿಂಡಿ ಸರಿಯಾಗಿ ಸಿಗುತ್ತಿಲ್ಲ ಎಂಬ ಸದಸ್ಯರ ಆಹಾರ ವಿಷಯವು ಕುತೂಹಲ ಮೂಡಿಸಿದೆ.

ಕಲಾಪ ಆರಂಭವಾಗುತ್ತಿದ್ದಂತೆ ಸಭಾಪತಿ ಬಸವರಾಜ್ ಹೊರಟ್ಟಿ ಪ್ರಶ್ನೋತ್ತರ ಕಲಾಪವನ್ನು ಪ್ರಾರಂಭಿಸಲು ಮುಂದಾದರು. ಈ ವೇಳೆ ಕಾಂಗ್ರೆಸ್ ಸದಸ್ಯ ಐವನ್ ಡಿಸೋಜಾ ಈ ವಿಷಯ ಪ್ರಸ್ತಾಪಿಸಿ, ಶಾಸಕರಿಗೆ ಶಾಸಕರ ಭವನ ಮತ್ತು ಸುತ್ತಲಿನ ಹೋಟೆಲ್‌ಗಳಲ್ಲಿ ಇಂದು ಇಡ್ಲಿ-ವಡೆ-ದೋಸೆ ಸೇರಿ ಯಾವುದೇ ಸರಿಯಾದ ಊಟ-ತಿಂಡಿ ಸಿಗುತ್ತಿಲ್ಲ. ಒಂದು ವಾರದಿಂದ ನಾವೆಲ್ಲಾ ಪರದಾಡುವಂತಾಗಿದೆ. ಕೊನೆಗೆ ಇಂದಿರಾ ಕ್ಯಾಂಟೀನ್‌ನಲ್ಲಿ ತಿನ್ನೋಣವೆಂದರೆ ಅಲ್ಲಿಯೂ ಗ್ಯಾಸ್ ಸಮಸ್ಯೆಯಿಂದ ಊಟ-ತಿಂಡಿ ಸಿಗುತ್ತಿಲ್ಲ. ಶಾಸಕರ ಪರಿಸ್ಥಿತಿ ಹೀಗಾದರೆ ಜನರ ಪರಿಸ್ಥಿತಿ ಹೇಗೆ ಸ್ವಾಮಿ. ಶೇ. 50 ರಷ್ಟು ಹೋಟೆಲ್‌ಗಳು ಬಂದ್ ಆಗಿವೆ. ದಯಮಾಡಿ ಸಮಸ್ಯೆಯನ್ನು ಪರಿಹರಿಸಿ ಎಂದು ಮನವಿ ಮಾಡಿದರು. ಈ ವೇಳೆ ಸಭಾಪತಿ ಬಸವರಾಜ್ ಹೊರಟ್ಟಿಅವರು, ಅದಕ್ಕೆಲ್ಲ ಸರ್ಕಾರವೇ ಉತ್ತರ ಕೊಡಬೇಕು. 10 ನಿಮಿಷ ಅನುಮತಿ ಕೊಡುತ್ತೇನೆ ತಿಂಡಿ ತಿಂದು ಬಾ ಎಂದು ಡಿಸೋಜಾಗೆ ಹೇಳಿದರು. ಆಗ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಡಿಸೋಜಾ ಅವರು ಹಸಿದು ಬಂದಿದ್ದಾರೆ. ದಯವಿಟ್ಟು ಇಡ್ಲಿ-ವಡಾ ತರಿಸಿಕೊಡಿ ಎಂದು ಹಾಸ್ಯ ಚಟಾಕಿ ಹಾರಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ಡಿಸೋಜಾ, ಗ್ಯಾಸ್ ಸಮಸ್ಯೆ ಇದೆ. ಕಟ್ಟಿಗೆಯೇ ಇಲ್ಲ. ಇನ್ನೂ ಇಡ್ಲಿ-ವಡೆ ಎಲ್ಲಿಂದ ತರುವುದು ಎಂದರು.

ಮಾತು ಮುಂದುವರಿಸಿದ ಐವಾನ್ ಡಿಸೋಜಾ, ಎಷ್ಟು ದಿನದೊಳಗೆ ಗ್ಯಾಸ್ ಸಿಗುತ್ತದೆ. 60 ರೂ. ಊಟ 100 ರೂ. ದರ ಹೆಚ್ಚಳ ಮಾಡಿದ್ದಾರೆ. ಜತೆಗೆ ಗ್ಯಾಸ್ ದರವೂ ಹಾಕುತ್ತಿದ್ದಾರೆ. ಆ ಮಟ್ಟಕ್ಕೆ ಇಂದು ಬಂದಿಳಿದಿದೆ ಎಂದರು. ಈ ವೇಳೆ ಆಡಳಿತ ಪಕ್ಷದ ಸದಸ್ಯರು ಎದ್ದು ನಿಂತು, ಇದು ಕೇಂದ್ರದ ಗ್ಯಾಸ್ ಟ್ರಬಲ್ ಕತೆ ಎಂದು ಪರೋಕ್ಷವಾಗಿ ಪ್ರತಿಪಕ್ಷದ ಸದಸ್ಯರನ್ನು ಕಿಚಾಯಿಸಿದರು.



ವಿಕಪಗಳ ನಡುವೆ ವಾಕ್ಸಮರ

ಮಧ್ಯಪ್ರಾಚ್ಯದಲ್ಲಿ ಯುದ್ಧದಿಂದಾಗಿ ಜಗತ್ತಿನಾದ್ಯಂತ ಅಡುಗೆ ಅನಿಲದ ಕೊರತೆ ಉಂಟಾಗಿದ್ದು, ಇದರ ಎಫೆಕ್ಟ್ ಭಾರತದ ಮೇಲೂ ಬಿದ್ದಿದೆ. ಆದರಲ್ಲೂ ಅಡಿಗೆ ಅನಿಲದ ಬೆಲೆ ಏರಿಕೆಯಿಂದಾಗಿ ಅಡುಗೆ ಅನಿಲದ ಮೇಲೆ ಹೆಚ್ಚು ಅವಲಂಬಿತವಾಗಿರುವ ಮನೆಗಳು ಹಾಗೂ ಹೊಟೇಲ್ ಗಳಿಗೂ ಭಾರಿ ಹೊಡೆತ ಬಿದ್ದಿದ್ದು, ಇದು ವಿಧಾನಪರಿಷತ್‌ನಲ್ಲೂ ದೊಡ್ಡಮಟ್ಟದ ಚರ್ಚೆಯೇ ಉಂಟಾಗಿದ್ದು, ಆಡಳಿತ ಹಾಗೂ ವಿಪಕ್ಷದ ನಡುವೆ ವಾಕ್ಸಮರಕ್ಕೆ ಕಾರಣವಾಗಿದೆ.

ಸಂಪಾದಕೀಯ

ವರ್ಷಂಪ್ರತಿಯ ಬೊಗಳುವಿಕೆ

ಅಂತಾರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯದ ಮೇಲಿನ ಮೆರಿಕನ್ ಆಯೋಗಕ್ಕೆ (ಯುಎಸ್‌ಸಿಐಆರ್‌ಎಫ್) ವರ್ಷಂಪ್ರತಿ ಭಾರತದತ್ತ ನೋಡಿ ಬೊಗಳುವ ಚಟ. ಭಾರತದಲ್ಲಿ ಧಾರ್ಮಿಕ ಸ್ವಾತಂತ್ರ್ಯವಿಲ್ಲ, ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ನಡೆಯುತ್ತಿದೆ ಎಂದೆಲ್ಲಾ ಆರೋಪಿಸುತ್ತಿರುತ್ತದೆ. ಮೊದಲೆಲ್ಲ ಈ ಬೊಗಳಿಕೆ ದೊಡ್ಡ ಸುದ್ದಿ ಮಾಡುತ್ತಿದ್ದುದಿತ್ತು. ಆದರೆ ವರ್ಷ ಕಳೆದಂತೆ ಎಲ್ಲರಿಗೂ ಅದರ ಬೊಗಳುವಿಕೆಯ ಹಿಂದಿನ ಉದ್ದೇಶ ಅರ್ಥವಾಗತೊಡಗಿದೆ.



ಹಾಗಾಗಿ ಅದರ ವರದಿಗೆ ಈಗ ಯಾರೂ ಮಹತ್ವ ಕೊಡುತ್ತಿಲ್ಲ. ಕೇವಲ ಭಾರತದಲ್ಲಿರುವ ತಥಾಕಥಿತ ಜಾತ್ಯತೀತರು, ಕಾಂಗ್ರೆಸಿಗರು, ಕೆಲವು ಎಡಪಂಥೀಯ ಮಾಧ್ಯಮಗಳು ಮಾತ್ರ ಇದೇನೋ ಬಹಳ ದೊಡ್ಡ ಸುದ್ದಿ ಎಂಬಂತೆ ಅರಚಾಡುವುದಿದೆ. ಹಿಂದುಗಳ ಮೇಲೆ ಪ್ರತಿವರ್ಷವೂ ವಿಷ ಕಾರುವ ಹಾಗೂ ಭಾರತದಲ್ಲಿ ಧಾರ್ಮಿಕ ಸ್ವಾತಂತ್ರ್ಯವಿಲ್ಲವೆಂದು ವಾದಿಸುವ ಯುಎಸ್‌ಸಿಐಆರ್‌ಎಫ್‌ಗೆ ಪಾಕಿಸ್ತಾನ, ಬಾಂಗ್ಲಾ ದೇಶ ಮುಂತಾದ ಇಸ್ಲಾಮಿಕ್ ದೇಶಗಳಲ್ಲಿ ಅಲ್ಲಿನ ಅಲ್ಪಸಂಖ್ಯಾತರ ಮೇಲೆ ನಡೆಯುವ ದೌರ್ಜನ್ಯಗಳು ಕಾಣುವುದೇ ಇಲ್ಲ. ಅಲ್ಲಿ ಹಿಂದುಗಳ ಸಂಖ್ಯೆ ಕುಸಿಯುತ್ತಿರುವುದು ಕೂಡಾ ಪರಿಗಣನೆಗೆ ಬರುವುದಿಲ್ಲ. ಅಮೆರಿಕದಲ್ಲೇ ಭಾರತೀಯರು ಎದುರಿಸುತ್ತಿರುವ ಪಕ್ಷಪಾತ, ಹಿಂದುಗಳ ಮೇಲೆ ನಡೆಯುತ್ತಿರುವ ದಾಳಿಗಳ ಕುರಿತೂ ಅದು ಗಮನ ಹರಿಸುವುದಿಲ್ಲ.

ಈ ಬಾರಿಯಂತೂ ಯುಎಸ್‌ಸಿಐಆರ್‌ಎಫ್ ಭಾರತದ ಗುಪ್ತಚರ ಸಂಸ್ಥೆ 'ರಾ' ಮತ್ತು ಆರೆಸ್ಸೆಸ್ಸನ್ನು ನಿಷೇಧಿಸಬೇಕೆಂದು ಅಮೆರಿಕನ್ ಸರಕಾರಕ್ಕೆ ತನ್ನ ವಾರ್ಷಿಕ ವರದಿಯಲ್ಲಿ ಹೇಳಿದೆ. ಇವೆರಡೂ ಹಿಂದುಯೇತರರ ಧಾರ್ಮಿಕ ಸ್ವಾತಂತ್ರ್ಯವನ್ನು ಹರಣ ಮಾಡುತ್ತಿದೆ ಎಂದು ಆರೋಪಿಸಿದೆ. ಯುಎಸ್‌ಸಿಐಆರ್‌ಎಫ್‌ನಲ್ಲಿ ಇರುವುದು ಯಾರೆಂಬುದನ್ನು ತಿಳಿದರೆ ಅದು ನಿರಂತರವಾಗಿ ಹಿಂದೂ ದ್ವೇಷ ಹಾಗೂ ಆರೆಸ್ಸೆಸ್ ಮೇಲೆ ರೋಷ ಹೊಂದಿರುವುದು ಏಕೆಂಬುದು ತಿಳಿಯದಿರದು. ಪಾಕಿಸ್ತಾನಿ-ಅಮೆರಿಕನ್ ಆ್ಯಕ್ಟಿವಿಸ್ಟ್ ಆಸಿಫ್ ಮೊಹಮ್ಮದ್ ಇದರ ಕಮಿಷನರ್ ಮತ್ತು ಉಪಾಧ್ಯಕ್ಷ. ಇನ್ನೊಬ್ಬ ಕಮಿಷನರ್ ಮೊಹಮ್ಮದ್ ಎಲನೌಸಿ ಪಾಕಿಸ್ತಾನದ ಇಸ್ಲಾಮಿಕ್ ವಿವಿಯಲ್ಲಿ ಕಲಿತವನು ಹಾಗೂ ಶರೀಯಾ ಕಾನೂನಿನಲ್ಲಿ ಪದವಿ ಪಡೆದವನು. ನೀತಿ ವಿಶ್ಲೇಷಣಕಾರ ಸೆಮಾ ಹಸನ್ ಕೂಡಾ ಪಾಕಿಸ್ತಾನಿ. ಮೌರೀನ್ ಫರ್ಗುಸನ್ ಮತ್ತು ವಿಕಿ ಹಾರ್ಟ್‌ಜ್ಲರ್ ಎಂಬಿಬ್ಬರು ಸದಸ್ಯರು ಮತಾಂತರ ನಡೆಸುವ ಮಿಷನರಿಗಳೊಡನೆ ಸಂಪರ್ಕ ಹೊಂದಿರುವವರು. ಒಟ್ಟಿನಲ್ಲಿ ಆ ಸಮಿತಿಯಲ್ಲಿ ಇರುವವರೆಲ್ಲರೂ ಇಸ್ಲಾಮಿಕ್‌ವಾದಿಗಳು ಮತ್ತು ಕ್ರೈಸ್ತ ಮಿಷನರಿಗಳ ಪರವಾಗಿರುವವರು. ಅವರಿಂದ ಇಂತಹ ವರದಿ ಮೂಡುವುದು ಸಹಜವೇ ಆಗಿದೆ.

ಯುಎಸ್‌ಸಿಐಆರ್‌ಎಫ್ ವರದಿಯು ಪ್ರತಿವರ್ಷವೂ ಕಸದಬುಟ್ಟಿಗೆ ಎಸೆಯಲಷ್ಟೇ ಯೋಗ್ಯವಾದುದಾಗಿದೆ. ಆದರೆ ನಮ್ಮಲ್ಲಿನ ಕೆಲವು ದೇಶವಿರೋಧಿಗಳು ಇದೇ ವರದಿಯನ್ನು ಹಿಡಿದು ಜಗಿಯುತ್ತಾ ವಿಕೃತಾನಂದ ಪಡೆಯುತ್ತಾರೆನ್ನುವುದೇ ದುರಂತ.

ಯುದ್ಧಗಳಿಗೆ ಪರಾಭವವಾಗಲಿ, ಅಹಂಕಾರಕ್ಕೆ ಸೋಲಾಗಲಿ

ಗುರುತರ
• ಸೋಮಶೇಖರ ಸಿ.ಜೆ.
sompreethi@gmail.com



ಯುಗಾದಿ ಹಬ್ಬ ಕೇವಲ ಪಂಚಾಂಗ ಬದಲು, ಬೇವು-ಬೆಲ್ಲ, ಹೋಳಿಗೆ-ಒಬ್ಬಟ್ಟಿನ ಹಬ್ಬವಲ್ಲ. ಅದು ಕಾಲಚಕ್ರದ ಒಂದು ಪವಿತ್ರ ತಿರುವು. ಹಳೆಯ ವರ್ಷದ ನೋವು-ನಲಿವುಗಳ ನೆನಪಿನ ಚೀಲವನ್ನು ಕೆಳಗಿಳಿಸಿ, ಹೊಸ ವರ್ಷದ ಆಶಯಗಳ ಬುತ್ತಿಯನ್ನು ಹೆಗಲೇರಿಸಿಕೊಂಡು ಮುಂದೆ ಸಾಗುವ ಸಮಯವಿದು. ಚೈತ್ರ ಶುಕ್ಲ ಪಾಡ್ಯಮಿಯ ಈ ಶುಭ ಮುಹೂರ್ತದಲ್ಲಿ ವಿಶ್ವವಸು ಸಂವತ್ಸರಕ್ಕೆ ವಿದಾಯ ಹೇಳಿ, ಪರಾಭವ ಸಂವತ್ಸರವನ್ನು ಸ್ವಾಗತಿಸುತ್ತಿರುವ ಈ ಹೊತ್ತಿನಲ್ಲಿ, ಜಗತ್ತಿನ ಕಡೆಗೊಂದು ನೋಟ ಹರಿಸುವುದು ಅವಶ್ಯ.

ಇದಕ್ಕೆ ಕಾರಣಗಳೂ ಇವೆ. ಕಳೆದ ವಿಶ್ವವಸು ಸಂವತ್ಸರ ಜಗತ್ತಿಗೆ ಹಲವು ಕಹಿ ಅನುಭವಗಳನ್ನು ಕೊಟ್ಟಿತು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕಗಳ ರಾಜಕೀಯ ಜಾಗತಿಕ ವ್ಯಾಪಾರ ವ್ಯವಸ್ಥೆಯನ್ನು ಅಲ್ಲೋಲ ಕಲ್ಲೋಲಗೊಳಿಸಿತು. ನನ್ನ ಮಾತು ಕೇಳದಿದ್ದರೆ ಟ್ಯಾರಿಫ್ ಹಾಕುತ್ತೇನೆ ಎಂಬ ಧೋರಣೆ ಅಂತಾರಾಷ್ಟ್ರೀಯ ಸಂಬಂಧಗಳನ್ನು ಕಲುಷಿತಗೊಳಿಸಿತು. ಮಿತ್ರ ರಾಷ್ಟ್ರಗಳನ್ನೂ ಬಿಡದೆ, ನ್ಯಾಟೋ ಒಕ್ಕೂಟದ ದೇಶಗಳನ್ನೂ ಬೆದರಿಸುವ ಮಾತುಗಳು ಬಂದವು. ಈ ವ್ಯಕ್ತಿಗೆ ತನ್ನ ಮಿತ್ರರು ಯಾರು? ಶತ್ರುಗಳು ಯಾರು ಎಂಬುದೂ ಗೊತ್ತಾಗದಂತಾಯಿತು. ಫ್ರಾನ್ಸ್ ಅಧ್ಯಕ್ಷರನ್ನೂ ಹೀಯಾಳಿಸಲಾಯಿತು. ಎಲ್ಲವೂ ನಾನೇ, ಎಲ್ಲವನ್ನೂ ನಾನೇ ಮಾಡಿದೆ, ಅಲ್ಲಿ ಯುದ್ಧ ನಿಲ್ಲಿಸಿದೆ, ಇಲ್ಲಿ ಶಾಂತಿ ತಂದೆ ಎಂಬ ಅಹಂಕಾರದ ನುಡಿಗಳು ವಿಶ್ವದ ಕಿವಿಗಳಲ್ಲಿ ಅನುರಣಿಸಿದವು. ಈ ಅಹಂಕಾರದ ಪರಾಕಾಷ್ಠೆ ಎಂದರೆ, ಓಮಾನ್ ಮಧ್ಯಸ್ಥಿಕೆಯಲ್ಲಿ ಇರಾನ್ ತನ್ನ ಪರಮಾಣು ಕಾರ್ಯಕ್ರಮವನ್ನು ಕಡಿಮೆ ಮಾಡಲು ಒಪ್ಪಿ, ಶಾಂತಿಯ ಹಾದಿ ತೆರೆದಿದ್ದಾಗಲೇ, ಫೆಬ್ರವರಿ ಇಪ್ಪತ್ತೆಂಟರಂದು ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ಮಿಲಿಟರಿ ದಾಳಿ ನಡೆಸಿದವು. ಯುಗಾದಿ ಹಬ್ಬದ ಈ ಹೊತ್ತಿನಲ್ಲೂ ಆ ಯುದ್ಧ ಮುಂದುವರಿದಿದೆ. ಸಾವಿರಕ್ಕೂ ಹೆಚ್ಚು ನಾಗರಿಕರು ಪ್ರಾಣ ಕಳೆದುಕೊಂಡಿದ್ದಾರೆ. ಗಲ್ಫ್ ಪ್ರದೇಶದಲ್ಲಿ ಕ್ಷಿಪಣಿಗಳ ಮಳೆ ಸುರಿಯುತ್ತಿದೆ. ದುಬೈ ವಿಮಾನ ನಿಲ್ದಾಣದಲ್ಲಿ ವಿಮಾನ ಸೇವೆ ಸ್ಥಗಿತಗೊಂಡಿತ್ತು. ಇಡೀ ಮಧ್ಯಪ್ರಾಚ್ಯ ಮತ್ತೊಮ್ಮೆ ಕಂಪಿಸುತ್ತಿದೆ. ದುರಂತವೆಂದರೆ, ಈ ಯುದ್ಧ ಅರಿವಿಲ್ಲದೆಯೇ ಎಲ್ಲ ದೇಶಗಳನ್ನೂ ತನ್ನ ಸುಳಿಯೊಳಗೆ ತೆಗೆದುಕೊಂಡಿದೆ. ಒಂದಲ್ಲ ಒಂದು ರೀತಿಯಲ್ಲಿ ಕಷ್ಟ ಕೊಡುತ್ತಲೇ ಇದೆ.

ಆದರೆ ಈ ಕತ್ತಲೆಯ ನಡುವೆಯೇ ಪರಾಭವ ಎಂಬ ಹೆಸರಿನ ಸಂವತ್ಸರ ಬಂದಿದೆ. ಪರಾಭವ ಎಂದರೆ ಸೋಲು ಎಂಬ ಅರ್ಥವಿದ್ದರೂ, ವೈದಿಕ ಪರಂಪರೆಯಲ್ಲಿ ಈ ಪದಕ್ಕೆ ಹೆಚ್ಚು ಆಳವಾದ ಅರ್ಥವಿದೆ. ಅಹಂಕಾರದ ಸೋಲು, ಅಹಮಿಕೆಯ ಪತನ, ಜಂಭದ ಅಂತ್ಯ ಎಂಬುದೇ ಪರಾಭವ ಸಂವತ್ಸರದ ನಿಜವಾದ ಸಂದೇಶ. ಅರವತ್ತು ಸಂವತ್ಸರಗಳ ಚಕ್ರದಲ್ಲಿ ನಲವತ್ತನೇ ಸ್ಥಾನದಲ್ಲಿರುವ ಈ ಸಂವತ್ಸರ, ಜಗತ್ತಿಗೆ ವಿನಮ್ರತೆಯ ಪಾಠ ಕಲಿಸಲು ಬಂದಿದೆ ಎಂದು ಭಾವಿಸಬಹುದು. ತಾನೇ ಶ್ರೇಷ್ಠ, ತನ್ನ ಮಾತೇ ಅಂತಿಮ, ತನ್ನ ಬಲವೇ ಸರ್ವಸ್ವ ಎಂಬ ಭ್ರಮೆಯನ್ನು ಈ ಸಂವತ್ಸರ ಹೋಗಲಾಡಿಸಬೇಕಿದೆ.

ಹಾಗಾದರೆ ಈ ಹೊಸ ಸಂವತ್ಸರದಲ್ಲಿ ಜಗತ್ತಿಗೆ ಏನು ಬೇಕು? ಮೊದಲನೆಯದಾಗಿ, ಶಾಂತಿ.ಯುದ್ಧಗಳು ನಿಲ್ಲಬೇಕು. ಯಾವುದೇ ದೇಶ ಎಷ್ಟೇ ಬಲಶಾಲಿಯಾದರೂ, ಇನ್ನೊಂದು ದೇಶದ ಮೇಲೆ ದಾಳಿ ನಡೆಸಿ ಆಡಳಿತ ಬದಲಾವಣೆ ಮಾಡುವ ಹಕ್ಕು ಯಾರಿಗೂ ಇಲ್ಲ. ಬಾಂಬುಗಳಿಂದ ಬದಲಾವಣೆ ಬರುವುದಿಲ್ಲ, ಸಂವಾದದಿಂದ ಬರಬೇಕು. ಓಮಾನ್ ಮಧ್ಯಸ್ಥಿಕೆಯಲ್ಲಿ ಮುರಿದುಹೋದ ಶಾಂತಿ ಮಾತುಕತೆಯನ್ನು ಮತ್ತೆ ಕಟ್ಟಬೇಕಿದೆ. ರಾಜತಾಂತ್ರಿಕ ಮಾರ್ಗವನ್ನು ಪುನಃ ಆಯ್ಕೆ ಮಾಡಿಕೊಳ್ಳುವುದೇ ಪರಾಭವ ಸಂವತ್ಸರದ ಮೊದಲ ಆಶಯ. ಹಾಗೆಯೇ, ರಷ್ಯಾ-ಉಕ್ರೇನ್, ಇಸ್ರೇಲ್-ಪ್ಯಾಲೇಸ್ತೀನ್ ಮತ್ತು ಆಫ್ಘಾನಿಸ್ತಾನ-ಪಾಕಿಸ್ತಾನ ನಡುವಿನ ಯುದ್ಧಗಳೂ ನಿಲ್ಲಬೇಕು.

ಎರಡನೆಯದಾಗಿ, ಜಾಗತಿಕ ವ್ಯಾಪಾರ ವ್ಯವಸ್ಥೆ ಮತ್ತೆ ನ್ಯಾಯಸಮ್ಮತವಾಗಬೇಕು. ಸುಂಕಗಳನ್ನು ಆಯುಧವಾಗಿ ಬಳಸುವ ಪ್ರವೃತ್ತಿ ನಿಲ್ಲಬೇಕು. ಒಂದು ದೇಶದ ರೈತರ ಬೆವರು ಇನ್ನೊಂದು ದೇಶದ ರಾಜಕೀಯ ಲಾಭಕ್ಕೆ ಬಲಿಯಾಗಬಾರದು. ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕತೆಯನ್ನು ಹಿಂಡಿ ಹಿಪ್ಪೆ ಮಾಡುವ ಸುಂಕ ನೀತಿ ಬದಲಾಗಬೇಕು. ಜಗತ್ತಿನ ಎಲ್ಲ ದೇಶಗಳೂ ಸಮಾನ ಗೌರವದಿಂದ ವ್ಯಾಪಾರ ಮಾಡುವಂಥ ವಾತಾವರಣ ನಿರ್ಮಾಣವಾಗಬೇಕು. ಇದು ಕೇವಲ ಆರ್ಥಿಕ ಬೇಡಿಕೆಯಲ್ಲ, ಮಾನವೀಯ ಬೇಡಿಕೆ.



ಮೂರನೆಯದಾಗಿ, ಹವಾಮಾನ ಬದಲಾವಣೆಯ ವಿಷಯದಲ್ಲಿ ಜಗತ್ತು ಇನ್ನಷ್ಟು ಗಂಭೀರವಾಗಬೇಕಿದೆ. ಯುದ್ಧಗಳಿಗೆ ಸುರಿಯುವ ಹಣದ ಒಂದು ಭಾಗವನ್ನಾದರೂ ಪರಿಸರ ಸಂರಕ್ಷಣೆಗೆ ಮೀಸಲಿಟ್ಟರೆ, ಮುಂದಿನ ಪೀಳಿಗೆಗೆ ಬದುಕಲು ಯೋಗ್ಯವಾದ ಭೂಮಿಯನ್ನು ಉಳಿಸಬಹುದು. ಕ್ಷಿಪಣಿಗಳ ಬದಲು ಮರಗಳನ್ನು ನೆಡುವ, ಬಾಂಬುಗಳ ಬದಲು ನೀರಿನ ಯೋಜನೆಗಳನ್ನು ಕಟ್ಟುವ ಸಂಕಲ್ಪ ಈ ಪರಾಭವ ಸಂವತ್ಸರದ ಆಶಯವಾಗಬೇಕಿದೆ. ಭೂಮಿ ತಾಯಿಯ ಆರೋಗ್ಯ ಕಾಪಾಡುವುದು ಪ್ರತಿಯೊಂದು ರಾಷ್ಟ್ರದ ಕರ್ತವ್ಯ.

ನಾಲ್ಕನೆಯದಾಗಿ, ವಿಶ್ವಸಂಸ್ಥೆಯಂತಹ ಅಂತಾರಾಷ್ಟ್ರೀಯ ಸಂಸ್ಥೆಗಳು ಹೊಸ ಜೀವ ಪಡೆಯಬೇಕಿದೆ. ಒಂದು ದೇಶ ಇನ್ನೊಂದು ದೇಶದ ಮೇಲೆ ಯುದ್ಧ ಸಾರಿದಾಗ, ಭದ್ರತಾ ಮಂಡಳಿ ಮೌನವಾಗಿರುವುದು ನೋವಿನ ಸಂಗತಿ. ವಿಟೋ ಅಧಿಕಾರ ಎಂಬ ವಿಶೇಷ ಹಕ್ಕು ನ್ಯಾಯಕ್ಕೆ ಅಡ್ಡಗಾಲಾಗುತ್ತಿರುವುದನ್ನು ಜಗತ್ತು ಕಾಣುತ್ತಿದೆ. ಅಂತಾರಾಷ್ಟ್ರೀಯ ಕಾನೂನಿಗೆ ಬಲ ಬರಬೇಕು, ದೊಡ್ಡ ದೇಶಗಳಿಗೂ ಚಿಕ್ಕ ದೇಶಗಳಿಗೂ ಒಂದೇ ನಿಯಮ ಅನ್ವಯಿಸಬೇಕು ಎಂಬ ಕೂಗು ಬಲಗೊಳ್ಳಬೇಕಿದೆ.

ಐದನೆಯದಾಗಿ, ಭಾರತದ ಪಾತ್ರ ಈ ಸಂದರ್ಭದಲ್ಲಿ ಬಹಳ ಮಹತ್ವದ್ದಾಗಿದೆ. ಭಾರತ ಸದಾ ಅಹಿಂಸೆ ಮತ್ತು ಶಾಂತಿಯ ಧ್ವಜವಾಹಕನಾಗಿ ನಿಂತಿರುವ ದೇಶ. ಬುದ್ಧ ಮತ್ತು ಗಾಂಧಿಯ ನಾಡಿನಿಂದ ಜಗತ್ತಿಗೆ ಶಾಂತಿಯ ಸಂದೇಶ ಹೋಗಬೇಕು. ಇರಾನ್ ಸಂಕಷ್ಟದ ಸಮಯದಲ್ಲಿ ಮಧ್ಯಸ್ಥಿಕೆಯ ಪಾತ್ರ ವಹಿಸಬಹುದಾದ ದೇಶಗಳ ಸಾಲಿನಲ್ಲಿ ಭಾರತ ಮುಂದೆ ಬರಬೇಕಿದೆ. ಜಗತ್ತಿನ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಭಾರತ, ಕೇವಲ ಆರ್ಥಿಕ ಬೆಳವಣಿಗೆಯಲ್ಲಿ ಮಾತ್ರ ಮುಂದೆ ಹೋಗದೆ, ನೈತಿಕ ನಾಯಕತ್ವದಲ್ಲೂ ಮುಂಚೂಣಿಯಲ್ಲಿ ನಿಲ್ಲಬೇಕಿದೆ. ವಸುಧೈವ ಕುಟುಂಬಕಂ ಎಂಬ ಮಾತು ಕೇವಲ ಶಿಖರ ಸಮ್ಮೇಳನಗಳ ಘೋಷಣೆಯಾಗದೆ, ನಿಜ ಜೀವನದ ಆಚರಣೆಯಾಗಬೇಕಿದೆ.

ಯುಗಾದಿಯ ಬೇವು-ಬೆಲ್ಲ ನಮಗೆ ಕಲಿಸುವ ಪಾಠ ಏನೆಂದರೆ, ಜೀವನ ಸಿಹಿ-ಕಹಿಗಳ ಮಿಶ್ರಣ ಎಂಬುದು. ಕಳೆದ ವರ್ಷ ಕಹಿ ಹೆಚ್ಚಿತ್ತು, ಯುದ್ಧ-ಸಂಘರ್ಷ-ಅಹಂಕಾರಗಳ ಬೇವಿನ ರುಚಿ ಬಹುವಾಗಿತ್ತು. ಆದರೆ ಈ ಹೊಸ ಸಂವತ್ಸರದಲ್ಲಿ ಬೆಲ್ಲದ ಸಿಹಿ ಹೆಚ್ಚಾಗಲಿ ಎಂಬ ಆಸೆ ಪ್ರತಿಯೊಬ್ಬರದು.

ಪರಾಭವ ಸಂವತ್ಸರ ಕೇವಲ ಅಹಂಕಾರಿಗಳ ಸೋಲನ್ನು ಸೂಚಿಸುವುದಿಲ್ಲ, ಅದು ವಿನಮ್ರತೆಯ ವಿಜಯವನ್ನೂ ಸೂಚಿಸುತ್ತದೆ. ಯಾವ ರಾಷ್ಟ್ರ ತನ್ನ ಸೈನಿಕ ಬಲದಿಂದ ಜಗತ್ತನ್ನು ಆಳಬಯಸುತ್ತದೋ ಆ ರಾಷ್ಟ್ರ ಅಂತಿಮವಾಗಿ ಸೋಲನ್ನೇ ಅನುಭವಿಸುತ್ತದೆ ಎಂಬುದನ್ನು ಇತಿಹಾಸ ಮತ್ತೆ ಮತ್ತೆ ಹೇಳಿದೆ. ರೋಮನ್ ಸಾಮ್ರಾಜ್ಯದಿಂದ ಹಿಡಿದು ಬ್ರಿಟಿಷ್ ಸಾಮ್ರಾಜ್ಯದವರೆಗೆ, ಎಲ್ಲ ಅಹಂಕಾರಿ ಶಕ್ತಿಗಳೂ ಕೊನೆಗೆ ಪರಾಭವವನ್ನೇ ಕಂಡಿವೆ. ಇಂದಿನ ಅಮೆರಿಕವೂ ಈ ಪಾಠ ಕಲಿಯಲೇಬೇಕಿದೆ. ಬಲವಂತದಿಂದ ಶಾಂತಿ ಸ್ಥಾಪಿಸಲು ಸಾಧ್ಯವಿಲ್ಲ, ಬಾಂಬುಗಳಿಂದ ಪ್ರಜಾಪ್ರಭುತ್ವ ನಿರ್ಮಿಸಲಾಗದು ಎಂಬುದನ್ನು ಇರಾಕ್, ಅಫ್ಘಾನಿಸ್ತಾನ, ಲಿಬಿಯಾಗಳ ಉದಾಹರಣೆಗಳು ಸಾಬೀತುಪಡಿಸಿವೆ.

ಪರಾಭವ ಸಂವತ್ಸರದ ವಸಂತ ಋತುವಿನೊಂದಿಗೆ ಹೊಸ ಚಿಗುರುಗಳು ಮೂಡುತ್ತಿವೆ. ಪ್ರಕೃತಿ ಪ್ರತಿ ವರ್ಷ ಹೊಸದಾಗಿ ಹೂವರಳಿಸುತ್ತದೆ. ಅದೇ ರೀತಿ ಮಾನವ ಸಮಾಜವೂ ಹೊಸ ಆಶಾವಾದದಿಂದ ಚಿಗುರಬೇಕಿದೆ. ಈ ಸಂವತ್ಸರದಲ್ಲಿ ಪ್ರತಿಯೊಂದು ಕುಟುಂಬದಲ್ಲಿ ಆರೋಗ್ಯ ತುಂಬಿರಲಿ, ಪ್ರತಿ ಮಗುವಿನ ಕೈಯಲ್ಲಿ ಪುಸ್ತಕವಿರಲಿ, ಪ್ರತಿ ರೈತನ ಹೊಲದಲ್ಲಿ ನೀರಿರಲಿ. ಯುದ್ಧಗಳ ಶಬ್ದ ಮಾಯವಾಗಿ, ಮಕ್ಕಳ ನಗುವಿನ ಶಬ್ದ ಕೇಳಿಸಲಿ. ಬಂದೂಕುಗಳ ಜಾಗದಲ್ಲಿ ಪುಸ್ತಕಗಳು, ಕ್ಷಿಪಣಿಗಳ ಜಾಗದಲ್ಲಿ ರೋಗಿಗಳಿಗೆ ಔಷಧಿ ಇರಲಿ.

ಶ್ರೀ ಪರಾಭವ ನಾಮ ಸಂವತ್ಸರ ಅಹಂಕಾರಿಗಳಿಗೆ ಎಚ್ಚರಿಕೆಯ ಗಂಟೆ, ಆದರೆ ಸಜ್ಜನರಿಗೆ ಆಶಾಕಿರಣ. ಬೇವಿನ ಕಹಿಯನ್ನು ಸ್ವೀಕರಿಸಿ, ಬೆಲ್ಲದ ಸಿಹಿಯನ್ನು ಹಂಚಿ ತಿನ್ನೋಣ. ಈ ವರ್ಷ ಜಗತ್ತು ಸ್ವಲ್ಪವಾದರೂ ಒಳ್ಳೆಯದಾಗಲಿ, ಅಹಂಕಾರ ಕಳಚಲಿ, ವಿನಮ್ರತೆ ತುಂಬಲಿ, ಯುದ್ಧ ನಿಲ್ಲಲಿ, ಶಾಂತಿ ಹರಡಲಿ ಎಂಬ ಸಂಕಲ್ಪದೊಂದಿಗೆ ಎಲ್ಲರಿಗೂ ಪರಾಭವ ಸಂವತ್ಸರದ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು.

ಶಾಂತಿಯತ್ತ ಮನಸ್ಸಿರಲಿ

ರತ್ನೋದಾರಚತುಃಸಮುದ್ರರಶನಾಂ ಭುಕ್ತ್ವಾ ಭುವಂ ಕೌರವೋ
ಭಗ್ನೋರುಃ ಪತಿತಃ ಸ ನಿಷ್ಪರಿಜನೋ ಜೀವನ್ನ ಕೈರ್ಭಕ್ಷಿತಃ ।
ಗೋಪೈರ್ವಿಶ್ವಜಯೀ ಜಿತಃ ಸ ವಿಜಯಃ ಕಕ್ಷೈಃ ಕ್ಷಿತಾ ವೃಷ್ಣಯಃ
ತಸ್ಮಾತ್ ಸರ್ವಮಿದಂ ವಿಚಾರ್ಯ ಸುಚಿರಂ ಶಾಂತ್ಯೈ ಮನೋಽಯತಾಮ್॥

-ಕ್ಷೇಮೇಂದ್ರ ಭಾರತ ಮಂಜರಿ

ಚತುಸಮುದ್ರ ಮುದ್ರಿತವಾದ ಭೂಮಿಯ ಒಡೆತನವನ್ನು ಭೋಗಿಸಿದ ದುರ್ಯೋಧನನು ಕೊನೆಗೆ ತೊಡೆ ಮುರಿದು ಬಿದ್ದು, ಪರಿಜನರೊಬ್ಬರೂ ಇಲ್ಲದೆ ಜೀವವಿರುವಾಗಲೇ ತೋಳಗಳಿಗೆ ತುತ್ತಾದನು. ಜಗತ್ತನ್ನೇ ಜಯಿಸಿದ ಅರ್ಜುನನು ಗೊಲ್ಲರಿಗೆ ಸೋತು ಹೋದನು. ವೃಷ್ಣಿ ಕುಲದವರು ಜೊಂಡು ಹುಲ್ಲುಗಳಿಂದ ಹೊಡೆದಾಡಿ ನಾಶ ಹೊಂದಿದರು.ಇವೆಲ್ಲವನ್ನೂ ದೀರ್ಘಕಾಲ ವಿಚಾರ ಮಾಡಿ ಶಾಂತಿಯ ಕಡೆ ಮನಸ್ಸನ್ನು ಕೊಡಿ- ಎಂಬುದು ಶ್ಲೋಕಾರ್ಥ.



• ಡಾ.ಸೋಂದಾ ಭಾಸ್ಕರ ಭಟ್

ಎಲ್ಲರೂ ಬಯಸುವುದು ಶಾಂತಿ-ನೆಮ್ಮದಿಯ ಬದುಕನ್ನು. ಇದು ಹೊರಗೆ ಸಿಗುವಂಥದ್ದಲ್ಲ. ಹಣ ಕೊಟ್ಟು ಕೊಂಡು ಕೊಳ್ಳುವಂಥದ್ದೂ ಅಲ್ಲ. ನಾವು ನಮ್ಮಲ್ಲಿಯೇ ಕಂಡುಕೊಳ್ಳಬೇಕಾದದ್ದು. ತನ್ನೊಳಗೆ ಕಂಡುಕೊಳ್ಳಲಾಗದವನು ಹೊರಗಡೆ ಕಂಡುಕೊಳ್ಳಲು ಮುಂದಾಗಿ ಸೋಲುತ್ತಾನೆ. ನಮ್ಮೊಳಗೆ ನಾವು ಕಂಡುಕೊಳ್ಳುವುದು ಹೇಗೆ? ನಿರಂತರ ಸಾಧನೆ, ಉತ್ತಮ ಸಂಸ್ಕಾರ, ತ್ಯಾಗದ ಮನೋಭಾವ, ಅಲ್ಪತೃಪ್ತಿ... ಇತ್ಯಾದಿ ಸದಂಶಗಳನ್ನು ಅಳವಡಿಸಿಕೊಳ್ಳುವುದರಿಂದ ಸಾಧ್ಯವಿದೆ. ಸಂಪತ್ತಿನ ಬೆನ್ನೇರಿ ಸಾಗುವುದು, ಅಧಿಕಾರದ ಮದವೇರುವುದು, ಸೌಂದರ್ಯದ ದಾಸರಾಗುವುದು ಅಶಾಂತಿಯನ್ನು ತಂದುಕೊಡುತ್ತದೆಯೇ ವಿನಾ ಶಾಂತಿಯನ್ನು ತಂದುಕೊಡದು.

ಸುಯೋಧನನಿಗೆ ಯಾವ ಕೊರತೆಯಿತ್ತು? ಅಪಾರ ಭೂಮಿಯ ಒಡೆಯನಾತ. ವೈಭೋಗಗಳ ಕೊರತೆಯೇ ಇಲ್ಲ. ಆಳು-ಕಾಳುಗಳು, ರಕ್ಷಕ ಭಟರು ಯಾವುದೂ ಇಲ್ಲವೆಂದಿಲ್ಲ. ಇಷ್ಟೆಲ್ಲ ಇದ್ದು ಶಾಂತಿ ಮಾತ್ರ ಇರಲಿಲ್ಲ. ಜೀವನದ ಕೊನೆ ಭೀಭತ್ಸವಾಗಿ ಹೋಯಿತು. ರಣಾಂಗಣದಲ್ಲಿ ತೊಡೆ ಮುರಿದು ಬಿದ್ದು, ಸುಖದಲ್ಲಿ ಜತೆಯಲ್ಲಿದ್ದವರಾರೂ ಇಲ್ಲ. ಪರಿಜನರು ಇಲ್ಲದೇ ಒದ್ದಾಡುವ ಸ್ಥಿತಿ. ಒಂಟಿಯಾಗಿ, ಅಸಹಾಯಕನಾಗಿ ಬಿದ್ದಿರುವಾಗ ತೋಳಗಳಿಗೆ ಆಹಾರವಾಗಬೇಕಾಯ್ತು.

ಜಗತ್ತನ್ನೇ ಜಯಿಸಿದ ತ್ರಿಲೋಕ ವಿಜಯಿಯಾದ ಅರ್ಜುನನ ಕಥೆಯೂ ಅಷ್ಟೆ! ಮೂರು ಲೋಕದ ಗಂಡನೆನಿಸಿ, ದಶನಾಮಗಳಿಂದ ಖ್ಯಾತನಾದ ಅವನು ಗೊಲ್ಲರಿಗೆ ಸೋತುಹೋದ. ಕಣ್ಣೆದುರೇ ಸ್ತ್ರೀಯರನ್ನು ಹಿಂಸಿಸುತ್ತಿರುವಾಗ ಏನೂ ಮಾಡಲಾರದ ಅಸಹಾಯಕನಾದ. ಅವನ ಪರಾಕ್ರಮದ ಕಥೆ ಶಾಂತಿಯನ್ನು ತಂದುಕೊಡಲಿಲ್ಲ.ಯಾದವರು ಜೊಂಡು ಹುಲ್ಲಿನಿಂದ ಹೊಡೆದಾಡಿಕೊಂಡು ತಮ್ಮನ್ನು ತಾವೇ ನಾಶಪಡಿಸಿಕೊಂಡರು. ಅಶಾಂತಿಯ ಬದುಕಾಗಿ ಬದಲಾಯಿತು. ಈ ಎಲ್ಲ ಘಟನೆಗಳನ್ನು ಅವಲೋಕಿಸಿದಾಗ ಬಾಹ್ಯ ವಸ್ತುಗಳಲ್ಲಿ ಸುಖ, ಶಾಂತಿ, ನೆಮ್ಮದಿ ಸಿಗದು ಎಂಬುದು ಸುಸ್ಪಷ್ಟ. ದೀರ್ಘಕಾಲ ಯೋಚಿಸಬೇಕು; ಆತ್ಮಾವಲೋಕನ ಮಾಡಿ ಕೊಳ್ಳಬೇಕು. ಅಂತರ್‌ಮುಖಿಯಾಗುವುದನ್ನು ಅರಿತುಕೊಳ್ಳಬೇಕು ಆಗ ಶಾಂತಿಯತ್ತ ಮನಸ್ಸಲು ಹೊರಳಲು ಪ್ರಾರಂಭವಾಗುತ್ತದೆ. ಜೀವನದಲ್ಲಿ ಶಾಂತಿ ಲಭಿಸುತ್ತದೆ. 'ಶಾಂತಿ ತುಲೋಲ ತಪೋನಾಸ್ತಿ' ಶಾಂತಿಯೆಂಬ ಅಸ್ತ್ರವನ್ನು ಕಂಡುಕೊಂಡು ಧರಿಸಿದರೆ ನಿತ್ಯ ನೆಮ್ಮದಿ.

ವಿಷಾದವೆಂಬ ವರ್ತುಲದೊಳಗೆ

ನಾವು ನಮ್ಮೊಳಗೆ ನೆಮ್ಮದಿಯನ್ನು ಕಂಡುಕೊಳ್ಳಬೇಕು. ಅದಕ್ಕಾಗಿ ನೆಮ್ಮದಿಯನ್ನು ಕಲಕುವ ಸಂಗತಿಗಳನ್ನು ನಿವಾರಿಸುವುದಕ್ಕೆ ಕಲಿಯಬೇಕು. ಆದಾಗದಿದ್ದರೆ ಮರೆಯುವುದಕ್ಕೆ ಕಲಿಯಬೇಕು.


ಆ-ಲೋಚನ
• ರಾಧಾಕೃಷ್ಣ ಕಲ್ಚಾರ್
rkkalchar@gmail.com



ಸದಾ ಸಂತೋಷವಾಗಿರಬೇಕು ಎಂಬುದು ಎಲ್ಲರ ಬಯಕೆ. ಅದು ಜೀವಿಯ ಸ್ವಭಾವ. ಅದಕ್ಕಾಗಿ ನಿತ್ಯ ಪ್ರಯತ್ನ. ದುಃಖ ಬೇಕು ಎಂದು ಯಾರೂ ಬಯಸುವುದಿಲ್ಲ. ಆದರೂ ಜೀವನದಲ್ಲಿ ನೋವಿನ, ದುಃಖದ ಗಳಿಗೆಗಳು ಬಂದೇ ಬರುತ್ತವೆ. ಪ್ರಮಾಣದಲ್ಲಿ, ತೀವ್ರತೆಯಲ್ಲಿ ವ್ಯತ್ಯಾಸವಿರಬಹುದು. ದುಃಖವೇ ಇಲ್ಲ ಎನ್ನುವ ಭಾಗ್ಯ ಯಾರಿಗೂ ಇಲ್ಲ. ಕೆಲವು ಸಲ ನಮ್ಮ ಜೀವನದ ಸಂಕಟಗಳಿರಲಿ, ವೈಯಕ್ತಿಕವಲ್ಲದ ಕಾರಣಗಳಿಗೂ ನಾವು ವಿಷಾದವನ್ನು ಅನುಭವಿಸುತ್ತೇವೆ. ಅದು ಕಣ್ಣೀರಿಳಿಸುವ ದುಃಖವಲ್ಲ. ಎದೆಯನ್ನು ಭಾರವಾಗಿಸುವ ಭಾವ. ಕುರುಕ್ಷೇತ್ರದಲ್ಲಿ ಉಭಯ ಸೇನಾ ಮಧ್ಯದಲ್ಲಿ ನಿಂತು ಎದುರಾಳಿಗಳನ್ನು ಕಂಡಾಗ ಅರ್ಜುನನಲ್ಲಿ ಹುಟ್ಟಿದಂತಹ ವಿಷಾದ. ಅವನು ಏನೋ ಮಾಡಿದ್ದಕ್ಕಾಗಿ ಅದರ ಪರಿಣಾಮವನ್ನು ನೆನೆದು ಹುಟ್ಟಿದ ಪಶ್ಚಾತ್ತಾಪದ ದುಃಖವು ಅದಲ್ಲ. ಮಾಡಬೇಕಾಗಿರುವ ಕಾರ್ಯದ ಪರಿಣಾಮವನ್ನು ನೆನೆದು ಹುಟ್ಟಿದ್ದು. ಅದಕ್ಕೆ ಅರ್ಜುನ ಕಾರಣನಲ್ಲ. ಅಲ್ಲಿ ಸಂಭವಿಸಿದ್ದರ ಅಥವಾ ಸಂಭವಿಸಲಿರುವ ಯಾವುದಕ್ಕೂ ಅವನಿಗೆ ಉತ್ತರದಾಯಿತ್ವವಿಲ್ಲ. ಆದರೂ ವಿಷಾದ ಆವರಿಸಿತು. ಕೃಷ್ಣ ಆ ವಿಷಾದವನ್ನು ತೊಡೆದು ಕರ್ತವ್ಯಕ್ಕೆ ಸಿದ್ಧನಾಗಿಸಿದ. ಅದು ನಮ್ಮ ವಿವಕ್ಷೆಯಲ್ಲ. ನಮ್ಮನ್ನು ಸಾಂತ್ವನಗೊಳಿಸುವುದಕ್ಕೆ ಯಾವ ಕೃಷ್ಣನೂ ಬರಲಾರ.

ಹಾಗೆಂದು ತೀವ್ರವಾದ ವಿಷಾದ ಅಥವಾ ವಿಷಣ್ಣತೆಗೆ ಮನಶ್ಶಾಸ್ತ್ರದಲ್ಲಿ ಇನ್ನೊಂದು ಹೆಸರಿದೆ. ಅದು ಖಿನ್ನತೆ ಅಥವಾ ಡಿಪ್ರೆಷನ್. ಅದು ಮನೋರೋಗ. ಅದು ಉಲ್ಬಣಿಸಿದರೆ ಅದರ ಪರಿಣಾಮಗಳು ಗಂಭೀರ. ತಾನು ನಿರುಪಯುಕ್ತ, ಯಾರಿಗೂ ತಾನು ಬೇಡದವನು ಎಂಬ ಅನಿಸಿಕೆ ಪ್ರಬಲಿಸಿ, ಯಾರಿಗೂ ಬೇಡದ ತಾನು ಯಾಕಿರಬೇಕು ಎನ್ನುವಲ್ಲಿಗೆ ತಲುಪಿ, ಜೀವ ಕಳೆದುಕೊಳ್ಳುವ ಪ್ರಯತ್ನಕ್ಕೂ ರೋಗಿ ಕೈಯಿಕ್ಕಬಹುದು. ಈ ಖಿನ್ನತೆಯು ತನ್ನಲ್ಲಿದೆ ಎಂಬ ಅರಿವೂ ಅದಕ್ಕೆ ಒಳಗಾದವನಿಗೆ ತಿಳಿಯುವುದೇ ಇಲ್ಲ. ಬೇರೆಯವರು ಹೇಳಿದರೂ ಅವನು ಸುಲಭದಲ್ಲಿ ಒಪ್ಪುವುದಿಲ್ಲ. ಇರಲಿ, ಇದಕ್ಕೆ ಕಾರಣಗಳಿರುತ್ತವೆ. ಕಾರಣಗಳಿರುವುದರಿಂದ ಚಿಕಿತ್ಸೆಯೂ ಇರುತ್ತದೆ. ಚಿಕಿತ್ಸೆಯಿಂದ ವ್ಯಕ್ತಿ ಚೇತರಿಸಿ, ಆರೋಗ್ಯಪೂರ್ಣ ಜೀವನವನ್ನು ನಡೆಸುವಂತಾಗುತ್ತದೆ. ಇಲ್ಲಿ ಹೇಳುತ್ತಿರುವ ವಿಷಾದ ಆ ಬಗೆಯದ್ದಲ್ಲ.

ನಾವು ಕಾರಣವಲ್ಲದ, ಎಷ್ಟೋ ಸಲ ನಮಗೆ ಸಂಬಂಧವೂ ಇಲ್ಲದ ಜಗತ್ತಿನ ವಿದ್ಯಮಾನಗಳ ಪರಿಣಾಮದಿಂದ ನಮ್ಮಲ್ಲಿ ಬೇಸರ ಹುಟ್ಟುತ್ತದೆ. ಆ ಬೆಳವಣಿಗೆಯಿಂದ ಎಷ್ಟೋ ಜೀವಗಳು ಸಂಕಟ ಪಡುತ್ತವಲ್ಲ ಎಂದು ನೆನೆದು ತಳಮಳವಾಗುತ್ತದೆ. ಹಾಗೆಂದು ಅದನ್ನು ಬದಲಾಯಿಸಲಾಗದ ಅಸಹಾಯಕತೆಯ ಅರಿವು ನಮಗಿರುತ್ತದೆ. ಅದರ ಅರಿವು ಇರುವುದರಿಂದಲೇ ವಿಷಾದವು ಗಾಢವಾಗುವುದು. ಒಮ್ಮೆ ಉಂಟಾದರೆ ಗಂಟೆಗಳೋ, ದಿನಗಳೋ ಅದು ಕಾಡುವುದು. ನಮ್ಮ ಖಾಸಗಿ ಬದುಕಿನಲ್ಲಿ ಸುಖವಾಗಿದ್ದಾಗಲೂ ಈ ವಿಷಾದವು ಬಿಡುವುದಿಲ್ಲ. ಉದಾಹರಣೆಗೆ ನಮಗೆ ಸಂಬಂಧಿಸದ ಎರಡು ದೇಶಗಳ ನಡುವೆ ಯುದ್ಧವಾಗುತ್ತಿದೆ ಎಂದು ಭಾವಿಸೋಣ. ಅದರಿಂದಾಗಿ ಆ ದೇಶಗಳಿಗಾಗುವ ನಷ್ಟ, ಭಯಂಕರವಾದ ಕ್ಷಿಪಣಿಗಳ, ಸ್ಫೋಟಕಗಳ ಪ್ರಯೋಗ, ಅದರಿಂದಾಗುವ ವಿನಾಶ, ಸೈನಿಕರ ಸಾವು, ನೋವುಗಳು ನಮ್ಮ ಕಣ್ಣೆದುರು ಕಾಣಿಸುತ್ತವೆ. ಮಾಧ್ಯಮಗಳು ಅಷ್ಟು ದೃಶ್ಯಗಳನ್ನು ನಮ್ಮ ಮನೆಯಲ್ಲಿ ಸಿನಿಮಾದಂತೆ ತೋರಿಸುತ್ತವೆ. ಆ ಭಯಾನಕತೆ ನಮ್ಮನ್ನು ನಡುಗಿಸುತ್ತದೆ. ಏನೇನೂ ಅಪರಾಧ ಮಾಡದ ನಮ್ಮಂತಿರುವ ಸಾಮಾನ್ಯ ಜನ ಯುದ್ಧದ ಬೆಂಕಿಗೆ ಬಲಿಯಾಗುವುದನ್ನು ಕಂಡು 'ಅಯ್ಯೋ ಯಾಕೆ ಹೀಗಾಗುತ್ತದೆ?' ಎಂದು ಕೇಳಿಕೊಳ್ಳುತ್ತೇವೆ. ಅಷ್ಟೇ ನಮ್ಮಿಂದ ಸಾಧ್ಯವಿರುವುದು. ಈ ಮಿತಿಯನ್ನೆಣಿಸಿ ವಿಷಾದವು ಕಾಣಿಸುವುದು.



ಅದಕ್ಕಿಂತ ಹೆಚ್ಚು ಆ ದೃಶ್ಯಗಳನ್ನು ಕಂಡು ಸಂಭ್ರಮಿಸುವ ಸಮೂಹದ ಆವೇಶ ಉಂಟಲ್ಲ, ಅದು ಇನ್ನೂ ಭಯಾನಕವಾದುದು. ನಮ್ಮ ಜತೆಗಿರುವ ಮಂದಿಯೇ, ಸಾಮಾಜಿಕ ಕೂಟಗಳಲ್ಲಿ ನಮ್ಮೊಂದಿಗೆ ಸೇರಿಕೊಳ್ಳುವವರೇ, ಗೆಳೆಯರೇ, ಬಂಧುಗಳೇ ಈ ನೆತ್ತರಿನ ಓಕುಳಿಯನ್ನು ಕಂಡು ಕೇಕೆ ಹಾಕುತ್ತಾರಲ್ಲ, ಆಗ ಉಂಟಾಗುವ ವಿಷಾದ ಇದಕ್ಕಿಂತ ಅಧಿಕವಾದುದು, ಗಾಢವಾದುದು. ಈ ಮನುಷ್ಯರು ಯಾಕಿಷ್ಟು ಕಠೋರವಾದ ಮನಸ್ಸನ್ನು ಹೊಂದಿದ್ದಾರೆ ಎಂಬ ಪ್ರಶ್ನೆ ಮೂಡುವುದು. ನಾವೆಷ್ಟು ಅಸಹಾಯಕರು, ಅಮಾಯಕರು ಎನ್ನುವುದನ್ನು ಭಾವಿಸಿ ಕಾಡುವ ನೋವು ಅದು. ಇದು ನಮ್ಮ ಕೈಮೀರಿದ ಸಂಗತಿ. ಇದನ್ನು ನಿಲ್ಲಿಸಲು ಅಥವಾ ಬದಲಾಯಿಸಲು ನಾವು ಶಕ್ತರಲ್ಲ. ಮನುಷ್ಯರು ಸಾಯುವುದನ್ನೂ, ಅದಕ್ಕಾಗಿ ಸಂಭ್ರಮಿಸುವವರನ್ನೂ ಸುಮ್ಮನೆ ನೋಡುತ್ತಿರುವ ನಮ್ಮ ಸ್ಥಿತಿಯನ್ನು ನೆನೆದು ಹುಟ್ಟುವ ವಿಷಾದ. ಇದಕ್ಕೆ ಕಾರಣ ನಾವಲ್ಲ ಎಂಬುದು ತಿಳಿದಿದೆ. ಅದರ ಹೊಣೆಯನ್ನು ನಮ್ಮ ಹೆಗಲ ಮೇಲೆ ಹೊರಬೇಕಾದ ಅಗತ್ಯವಿಲ್ಲ, ನಿಜವೇ. ಹಾಗಿದ್ದಾಗಲೂ ಇದನ್ನು ತಡೆಯುವುದಕ್ಕೆ ನಮ್ಮಿಂದಾಗುವುದಿಲ್ಲವಲ್ಲ ಎಂಬ ಚಿಂತೆಯಿಂದ ಹುಟ್ಟುವ ವಿಷಾದ.

ನಾವೇನೂ ಮಾಡಲಾರೆವು ಎಂಬ ಪರಿಸ್ಥಿತಿಯಲ್ಲಿ ಮನಸ್ಸು ವಿಷಾದವನ್ನು ಅನುಭವಿಸುತ್ತ ಇರಬೇಕೇ? ಹೀಗೇ ಚಿಂತಿಸಿದಷ್ಟೂ ಗಾಢವಾಗುವ ವಿಷಾದ ವರ್ತುಲದಿಂದ ಹೊರಗೆ ಬರುವ ದಾರಿಯೇ ಇಲ್ಲವೇ? ಉಂಟು. ಮನಸ್ಸಿನ ಈ ಕುಗ್ಗುವಿಕೆಗೆ ಹೊರ ಜಗತ್ತಿನ ಬೆಳವಣಿಗೆಗಳು ಅಹಿತಕರವಾಗಿರುವುದು ಕಾರಣ. ಜಗತ್ತಿನಲ್ಲಿ ಅಹಿತ ಮಾತ್ರವಲ್ಲ, ಹಿತಕರವಾದುದು ಇದೆಯಷ್ಟೆ? ಅದನ್ನು ಗುರುತಿಸಿಕೊಂಡರೆ ಈ ವಿಷಾದ ಮರೆಯಾಗುತ್ತದೆ.

ಡಿ ವಿ ಜಿ ಅವರು ಹೇಳಿದ ಮಾತು ನೆನಪಾಗುತ್ತದೆ. 'ಗುರುತಿಸೊಳಿತಿರುವುದನು ಕೇಡುಗಳ ನಡುವೆ' ಅನ್ನುತ್ತಾರೆ ಅವರು. ಕೆಟ್ಟದ್ದು ತುಂಬ ಇದೆ, ನಿಜ. ಆದರೆ ಅವುಗಳ ನಡುವೆ ಒಳಿತೂ ಇದೆ. ಅದನ್ನು ಗುರುತಿಸು. 'ಹರುಷಕಿದೆ ದಾರಿ'. ಎಲ್ಲವೂ ಕೆಡುಕಲ್ಲ, ಒಳ್ಳೆಯದೂ ಇದೆ ಎನ್ನುವ ಭರವಸೆ ವಿಷಾದದ ಪ್ರವಾಹವನ್ನು ದಾಟುವುದಕ್ಕೆ ಸಹಾಯಕವಾಗುತ್ತದೆ.

ಇನ್ನೊಂದು ದಾರಿಯೂ ಇದೆ. ತತ್ಕಾಲಕ್ಕೆ ಇದನ್ನು ಮರೆಯುವುದು. ಆಡಳಿತದ ಭ್ರಷ್ಟಾಚಾರವೋ, ಯಾರದೋ ಅಮಾನವೀಯ ವರ್ತನೆಯೋ ಮನಸ್ಸಿಗೆ ಘಾಸಿಯುಂಟು ಮಾಡಿದೆ ಒಂದು ಎಂದಿಟ್ಟುಕೊಳ್ಳಿ. ವ್ಯಾವಹಾರಿಕವಾಗಿ ಅದು ನಮಗೆ ಬಾಧಕವಲ್ಲ. ಎಲ್ಲೋ ನಡೆದುದು. ಅದನ್ನು ಒಮ್ಮೆ ಮರೆತರೆ ಮತ್ತೆ ಅದರ ಪರಿಣಾಮ ಗಾಢವಾಗಿರುವುದಿಲ್ಲ. ಅದಕ್ಕಾಗಿ, ಒಂದಿಷ್ಟು ಹೊತ್ತು ಇಂಪಾದ ಹಾಡು ಸಂಗೀತ ಕೇಳಿ. ಅದಾಗುವುದಿಲ್ಲವೆ? ಆತ್ಮೀಯರಾದ ಯಾರಿಗಾದರೂ ಕರೆ ಮಾಡಿ. ಸುಮ್ಮನೆ ಅದೂ ಇದೂ ಮಾತನಾಡಿ. ಏನೋ ತಮಾಷೆಯ ಸಂದರ್ಭವನ್ನು ನೆನೆದುಕೊಳ್ಳಿ. ಸುಮ್ಮನೆ ಅಡುಗೆ ಮನೆಯೊಳಗೆ ಹೋಗಿ ಏನೋ ಒಂದು ತಿಂಡಿ ಮಾಡಿ. ನೀವು ಸಾಕಿದ ನಾಯಿಯೋ, ಬೆಕ್ಕೋ ಇದ್ದರೆ ಅದರೊಂದಿಗೆ ಆಟವಾಡಿ. ಎಳೆಯ ಮಗುವನ್ನು (ಇದ್ದರೆ) ಎತ್ತಿಕೊಂಡು ಓಡಾಡಿ.

ಹತ್ತಿರದಲ್ಲಿ ದೇವಸ್ಥಾನ ಇದ್ದರೆ ಅಲ್ಲಿ ಹೋಗಿ. ಮೌನವಾಗಿ ಕೊಂಚ ಹೊತ್ತು ಕುಳಿತುಕೊಳ್ಳಿ. ಯಾರೋ ಬಾರಿಸಿದ ಘಂಟೆಯ ನಾದಕ್ಕೆ ಕಿವಿಗೊಡಿ. ಅದರ ಅನುರಣನ ನಿಮ್ಮಲ್ಲಿಯೂ ಪ್ರತಿಧ್ವನಿಸುವುದ ನೋಡಿ.

ಇದಾವುದೂ ಆಗುವುದಿಲ್ಲವೆ? ಸುಮ್ಮನೆ ಕುಳಿತಲ್ಲಿಯೇ ಕಣ್ಣು ಮುಚ್ಚಿ ಕಲ್ಪನೆಯ ದಾರಿಯಲ್ಲಿ ಪ್ರಯಾಣ ಹೊರಡಿ. ಮನಸ್ಸು ಅದಕ್ಕಿಷ್ಟ ಬಂದತ್ತ ನಿಮ್ಮನ್ನು ಕರೆದೊಯ್ಯಲಿ. ಕಾಲ್ಪನಿಕ ಪ್ರಯಾಣವು ಕಾಣಿಸುವ ಬಣ್ಣಬಣ್ಣದ ಚಿತ್ರಗಳನ್ನು ನೋಡಿ ಆನಂದಿಸಿ. ಮುಖ್ಯವಾಗಿ ನಿಮ್ಮನ್ನು ಕಾಡುವ ವಿಷಾದಕ್ಕಿಂತ ಬೇರೆಯಾದ ಏನನ್ನಾದರೂ ಧ್ಯಾನಿಸಿ. ಕಾಲುಗಂಟೆ, ಅರ್ಧಗಂಟೆ... ಈಗ ನೋಡಿ ಆ ವಿಷಾದದ ಜಾಗದಲ್ಲಿ ಏನೋ ಉಲ್ಲಾಸದ ಸಂಗತಿ ನಿಮ್ಮ ಮನಸ್ಸನ್ನು ಹಗುರಾಗಿಸಿರುತ್ತದೆ.

ಇಂತಹ ಉಪಾಯಗಳು ನಮ್ಮ ಮನಸ್ಸನ್ನು ಪ್ರಕ್ಷುಬ್ಧಗೊಳ್ಳದಂತೆ ಕಾಯತಕ್ಕವು. ಯಾಕೆಂದರೆ ಸಮಸ್ಯೆಗಳಿಲ್ಲದ ಜಗತ್ತು ಇಲ್ಲ. ಮುಂದೆಯೂ ಇನ್ನಷ್ಟು ಜಟಿಲ ಸಮಸ್ಯೆಗಳು ಉದ್ಭವಿಸಿಯಾವೇ ಹೊರತು ಕಡಿಮೆಯಾಗಲಾರವು. ಹಾಗಾಗಿ ನಾವು ನಮ್ಮೊಳಗೆ ನೆಮ್ಮದಿಯನ್ನು ಕಂಡುಕೊಳ್ಳಬೇಕು. ಅದಕ್ಕಾಗಿ ನೆಮ್ಮದಿಯನ್ನು ಕಲಕುವ ಸಂಗತಿಗಳನ್ನು ನಿವಾರಿಸುವುದಕ್ಕೆ, ಆದಾಗದಿದ್ದರೆ ಮರೆಯುವುದಕ್ಕೆ ಕಲಿಯಬೇಕು.

ಕಾಲಗಣನೆಯ ಕನ್ನಡಿ ಈ 'ಯುಗಾದಿ'

▸ ಡಾ. ಮೈತ್ರಿ ಭಟ್, ವಿಟ್ಲ



'ವರುಷ ವರುಷವೂ ಮತ್ತೆ ಯುಗಾದಿ;
ಕಾಲವಿದಂತು ಅನಂತ ಅನಾದಿ,
ತೋರಣ ಕಟ್ಟಿದೆ ಬದುಕಿನ ಬೀದಿ;
ಏಳುಬೀಳುಗಳ ಬಳಸಿನ ಹಾದಿ" (ಕೆ.ಎಸ್.ನ)

ಹಾದಿಯುದ್ದಕ್ಕೂ ಹೊಂಗೆ ಮರಗಳ ಹೂವು ಚೆಲ್ಲಿದ ಹಾದಿ... ಕೆಳಗೆ ಕಣ್ಣಾಡಿಸಿದರೆ ಬಿದ್ದ ನಾಜೂಕಿನ ಹೂಗಳು... ಮೇಲೆ ಕಣ್ಣೆತ್ತಿದ್ದರೆ ನಳನಳಿಸುವ ಹಸಿರು ಎಲೆಗಳ ಮುಚ್ಚುವಂತೆ ಹೂಗಳ ರಾಶಿ ರಾಶಿ. ಮೇಲೂ ವರ್ಣ.. ಕೆಳಗೂ ಬಣ್ಣ.. ಆಹಾ.. ಚೈತ್ರದ ಸೊಬಗು... ಹೌದು. ಯುಗಾದಿ ಎಂದರೆ ಹೀಗೇ. ಕಣ್ಣಿಗೂ ಮನಸ್ಸಿಗೂ ಹೊಸ ಹುರುವು, ಉಲ್ಲಾಸ ತುಂಬುವ ಕ್ಷಣ. ಎಲೆಗಳು ಚಿಗುರಿ, ಮೊಗ್ಗು ಮೂಡಿ, ಹೂ ಅರಳಿ ಕಂಗೊಳಿಸುವ ಗಿಡಮರಗಳು ಕಣ್ಣಿಗೆ ಹಬ್ಬವಾಗುತ್ತವೆ. ಬಣ್ಣ-ಬಣ್ಣದ ಪಕ್ಷಿಗಳು ಗಿಡಮರಗಳ ರೆಂಬೆ-ಕೊಂಬೆಗಳನ್ನು ಅಲಂಕರಿಸುತ್ತವೆ.

ಚೈತ್ರ ಮಾಸ ಬಂತೆಂದರೆ ಸಾಕು.. ಇಡೀ ವಾತಾವರಣವೇ ಬದಲಾಗಿ ಹೊಸತನದಿಂದ ತುಂಬಿ ತುಳುಕುತ್ತದೆ. ಬಿಸಿಲಿನ ತಾಪ ಹೆಚ್ಚಾದರೂ, ಬೀಸುವ ತಂಗಾಳಿ ಮನಸ್ಸಿಗೆ ತಂಪೆರೆಯುತ್ತದೆ. ಹೊಸ ಚೈತನ್ಯವನ್ನು ಮನ ಮನಗಳಲ್ಲಿ ಮೂಡಿಸುವ, ನೋವು-ನಲಿವುಗಳಿಗೆ ವಿರಾಮ ಹೇಳುವ ಈ ಹಬ್ಬದ ಆಗಮನದ ಕ್ಷಣ ಪ್ರಕೃತಿಯೇ ಮೈದುಂಬಿ ಅಲಂಕೃತಳಾಗುತ್ತಾಳೆ. ಹೇಮಂತ ಋತುವಿನಲ್ಲಿ ಎಲೆಯುದುರಿಸಿಕೊಂಡು ಬೋಳಾಗಿ ನಿಂತ ಮರಗಿಡಗಳು, ಶಿಶಿರ ಋತುವಿನಲ್ಲಿ ಪ್ರಕೃತಿಯ ಕಠಿಣತೆಯನ್ನು ಎದುರಿಸಿ, ವಸಂತಾಗಮನದಿಂದ ಮತ್ತೆ ಚಿಗುರಿ ಹಸುರುಡುಗೆಯನ್ನುಟ್ಟು ಕಂಗೊಳಿಸುವ ಈ ಕ್ಷಣ ಜೀವನದ ಪಾಠವಾಗಿಯೂ ಕಂಡುಬರುತ್ತದೆ. ಪ್ರಕೃತಿಯಲ್ಲೂ ನವಚೈತನ್ಯವಿರುವ ಈ ಹಬ್ಬ ನಮ್ಮಲ್ಲಿಯೂ ನವಚೈತನ್ಯ ತುಂಬುವಂತದ್ದಾಗಿದೆ.

ಎರಡು ತುದಿಗಳ ನಡುವೆ ಸಾಗುವುದಕ್ಕೆ ಒಂದು ಅಂತ್ಯವಿದೆ. ಅನಂತವೇ ಆಗಿದ್ದರೂ, ಅದಕ್ಕೊಂದು ಅಂತ್ಯದ ಸಾಧ್ಯತೆ ಇದೆ. ವೃತ್ತ ಅಥವಾ ಚಕ್ರದಲ್ಲಿ ಹಾಗಲ್ಲ. ಕಾಲ ಒಂದು ನಿರ್ದಿಷ್ಟ ವಿನ್ಯಾಸದಲ್ಲಿ ಮರುಕಳಿಸುತ್ತಲೇ ಇರುವುದರಿಂದ ಅದು 'ಚಕ್ರ'ವಾಗಿದೆ. ಇಂತಹ ಕಾಲವೊಂದು ಅನಾದಿ ಅನಂತಗಳ ನಡುವಿನ ತಂತು. ಓಡುವ ಕಾಲವ ಹಿಡಿದು ನಿಲ್ಲಿಸುವ ಭರದಿ ನಮ್ಮ ಕೈಗೆ ನಿಲುಕಿದ್ದು ಈ ಯುಗಾದಿ ಹಬ್ಬ.

ಯುಗಾದಿ ಕಾಮನಬಿಲ್ಲಿನ ಹಾಗೆ. ಆ ಕ್ಷಣಕ್ಕೆ ಮನಕ್ಕೆ ಮುದವನ್ನೂ, ಭರವಸೆಯನ್ನೂ ತುಂಬುವುದು. ಬುದ್ಧಿ-ಭಾವಗಳ ಪ್ರಯತ್ನಗಳಲ್ಲಿ ಏನನ್ನೇ ಮಾಡಿದರೂ ಕಾಲನ ಗಾಣದಲ್ಲಿ ನಾವು ಸುತ್ತುವ ಎತ್ತುಗಳಷ್ಟೇ. ಹೊರಟ ಬಿಂದುವಿಗೇ ಮತ್ತೆ ಸೇರುವುದಷ್ಟೆ ಈ ಬದುಕಿನ ಪಯಣ.



ಈ ಯುಗಾದಿ ಹಬ್ಬದ ದಿನ ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು ರಂಗವಲ್ಲಿ ಇಟ್ಟು, ಮಾವು-ಬೇವಿನ ತೋರಣಗಳಿಂದ ಸಿಂಗರಿಸಿ, ಅಭ್ಯಂಜನ ಮಾಡಿ, ದೇವರಿಗೆ ಪೂಜೆ ಮಾಡಿ, ಬೇವು-ಬೆಲ್ಲಗಳ ನೈವೇದ್ಯವನ್ನು ಪ್ರಸಾದ ರೂಪದಲ್ಲಿ ಸ್ವೀಕರಿಸಿ, ಪಂಚಾಂಗ ಶ್ರವಣ ಮಾಡುತ್ತಾರೆ. ಬೇವು-ಬೆಲ್ಲ ನಮ್ಮ ಬದುಕಿನ ಸಿಹಿ-ಕಹಿಗಳ ಪ್ರತೀಕ. ಸುಖ ಬಂದಾಗ ಹಿಗ್ಗದೆ, ದುಃಖ ಬಂದಾಗ ಕುಗ್ಗದೆ ಎರಡನ್ನೂ ನಮ್ಮ ಜೀವನದಲ್ಲಿ ಸಮಚಿತ್ತದಿಂದ ಸ್ವೀಕರಿಸಬೇಕೆಂಬ ಭಾವವು ಇದರಲ್ಲಿದೆ. ಬೇವು ಕಹಿಯ ಸಂಕೇತವಾದರೆ, ಬೆಲ್ಲ ಸಿಹಿಯ ಸಂಕೇತ. ಮನುಷ್ಯರ ಬದುಕಿನಲ್ಲಿ ಸುಖ-ದುಃಖಗಳು ಯಾವ ಕಾಲಕ್ಕೂ ಇರುವುದೇ. ಪ್ರತಿಯೊಬ್ಬರ ಜೀವನದಲ್ಲಿಯೂ ಕೇವಲ ಸುಖವೊಂದೇ ಬರುವುದು ಸಾಧ್ಯವಿಲ್ಲ. ಆಗಾಗ ಕಷ್ಟಗಳು ಬರುತ್ತಿರುತ್ತವೆ. ಆಗ ನಾವು ಜೀವನದಲ್ಲಿ ನಿರಾಶೆ ಹೊಂದಬಾರದು ಎನ್ನುವುದರ ಸೂಚಕವಾಗಿ ಬೇವು-ಬೆಲ್ಲ ಎರಡನ್ನೂ ಸೇವಿಸುವುದು.

ಯುಗಾದಿ ಎಂದರೆ ಚಿಗುರಿನೆಲೆಗಳು ಹಾಡುವ ಪಲ್ಲವಿ. ಹಳೆಯ ನೋವ ನೆನಪಿನ ಕೊನೆ. ಹೊಸತಿನ ಆಗಮನ. ಕಳೆದ ದಿನಗಳಿಗೆ ವಿದಾಯ ಮತ್ತು ಮುಂದಿನ ದಿನಗಳ ಬಗೆಗಿನ ಆಕಾಂಕ್ಷೆ. ಅಚ್ಚುಕಟ್ಟಾಗುವ ಮನೆ, ಬಾಗಿಲಿಗೆ ತಳಿರು ತೋರಣ, ದೇವರ ಮನೆಯ ಬಾಗಿಲಿಗೆ ಹಸಿರಿನ ಚಿಗುರು ಮಾವಿನ ಎಲೆಯ ಸಿಂಗಾರ, ಮನೆಯ ಮುಂದೆ ಚಿಕ್ಕಿಯ ಬಣ್ಣದ ರಂಗೋಲಿ, ಶುಭ್ರವಾಗುವ ರಾಸುಗಳು, ಅಭ್ಯಂಜನದ ಸ್ನಾನ, ಬೆಳಗುವ ಮನಸ್ಸು, ಪೂಜೆ-ಪುನಸ್ಕಾರ, ಮುಂದಿನ ಶುಭ ದಿನಗಳಿಗಾಗಿ ದೇವರಲ್ಲಿ ಪ್ರಾರ್ಥನೆ, ಹೊಸ ಬಟ್ಟೆ, ಒಬ್ಬಟ್ಟಿನ ತಟ್ಟೆ, ಒಳ್ಳೆಯ ಮಾತು, ಶುಭ ಹಾರೈಕೆ, ಸಂಕಲ್ಪಗಳ ಹೂಮಾಲೆಯನ್ನು ಹೊಸೆಯುವ ಮತ್ತು ಕಳೆದ ಕಾಲದ ಪುನರಾವಲೋಕನಕ್ಕೆ ಅವಕಾಶ- ಎಲ್ಲವೂ ಹೌದು.

ಹೀಗೆ ಹಳೆಯ ನೆನಪುಗಳೊಂದಿಗೆ ಹೊಸ ಭರವಸೆಯೊಂದು ಚಿಗುರೊಡೆಯುವ ಯುಗಾದಿ ಮತ್ತೆ ಬಂದಿದೆ. ಬದುಕಿನ ಅನಂತ ಸಾಧ್ಯತೆಗಳು ಹೇಗೆ, ಎಲ್ಲಿ ಅಡಗಿರಬಹುದು, ಯಾವ ಬೆಳಕಿನ ಹಾದಿ, ಯಾವ ಹೊಸ ಬೆಳಕು, ಯಾವ ಯುಗಾದಿ ಅದನ್ನು ನಮಗೆ ಕಾಣಿಸಬಹುದು ಎಂದು ಕಾಯಬೇಕು. ಈ ಕ್ಷಣ ನಮ್ಮ ಪರಿಸರ, ಸಮುದಾಯ ಇವೆಲ್ಲವನ್ನು ಜವಾಬ್ದಾರಿಯುತವಾಗಿ ಎಚ್ಚರಿಕೆಯಿಂದ ನೋಡಿಕೊಳ್ಳುವ, ಸ್ಪಂದಿಸುವ ಮನೋಭಾವ ನಮ್ಮದಾಗಲಿ. ಎಲ್ಲ ನೋವು-ನಗೆಗಳ ಜೊತೆಗೆ ಹೊಸತಿಗೆ, ಹೊಸ ನಾಳೆಗೆ, ಹೊಸ ಆಲೋಚನೆಗಳಿಗೆ ತೆರೆದುಕೊಳ್ಳುತ್ತ ಈ ಯುಗಾದಿಯನ್ನು ಬರಮಾಡಿಕೊಳ್ಳೋಣ. ಮನದಲ್ಲಿ ಬೆರೆತಿರುವ ವಿರಸವೆಂಬ ವಿಷಯವನ್ನು ಕಳೆದು, ಸೌಹಾರ್ದತೆಯನ್ನು ಈ ಯುಗಾದಿಯು ನೆಲೆಗೊಳಿಸಲಿ.

ಹಳೆ ನೆನಪುಗಳುದರಲಿ ಬಿಡುಬೀಸುವ ಚಳಿಗಾಳಿಗೆ. ತರಗೆಲೆಗಳ ಚಿತೆಯುರಿಯಲಿ ಚೈತ್ರೋದಯ ಜ್ವಾಲೆಗೆ. ಹೊಸ ಭರವಸೆ ಚಿಗುರುವಂತೆ ಎಲೆಯುದುರಿದ ಕೊಂಬೆಗೆ. ಅರಳಿ ನಗುವ ಹೂಗಳಲ್ಲಿ ಮೊಳೆಯಲಿ ಹೊಸ ನಂಬಿಕೆ. ಒಟ್ಟಿನಲ್ಲಿ, ತೊಲಗಲಿ ದುಃಖ, ತೊಲಗಲಿ ಮತ್ಸರ, ಪ್ರೇಮಕ್ಕೆ ಮೀಸಲಾಗಲಿ ನವ ಸಂವತ್ಸರ ಅಷ್ಟೇ.

ಕಿರುಸುದ್ದಿ

ಕಾವಿ ಕಲೆಯ ಕುರಿತು ಪರಿಚಯ, ಪ್ರಾತ್ಯಕ್ಷಿಕೆ ಕಾರ್ಯಕ್ರಮ


ಕುಂದಾಪುರ: ನಡೂರಿನ ಶ್ರೀವಾಣಿ ಪ್ರೌಢ ಶಾಲೆಯಲ್ಲಿ ನಡೆಯುತ್ತಿರುವ ಕುಂದಾಪುರ ಕೋಟೇಶ್ವರದ ಶ್ರೀ ಕಾಳವರ ವರದರಾಜ ಎಂ. ಶೆಟ್ಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ ರಾಷ್ಟ್ರೀಯ ಸೇವಾ ಯೋಜನೆ ಇದರ 2025-26ನೇ ಸಾಲಿನ ವಾರ್ಷಿಕ ವಿಶೇಷ ಶಿಬಿರದಲ್ಲಿ ಕಾವಿ ಕಲೆಯ ಕುರಿತು ಪರಿಚಯ ಮತ್ತು ಪ್ರಾತ್ಯಕ್ಷಿಕೆ ಕಾರ್ಯಕ್ರಮ ನಡೆಯಿತು.

ಕಲಾವಿದರಾದ ಜನಾರ್ದನ ಹಾವಂಜೆ ಅವರು ಈ ಕಲೆಯ ವಿಶಿಷ್ಟತೆ, ಇತಿಹಾಸ ಮತ್ತು ಸಮಕಾಲೀನ ಸಂದರ್ಭದಲ್ಲಿ ಅದರ ಸಂರಕ್ಷಣೆಯ ಕುರಿತು ಶಿಬಿರಾರ್ಥಿಗಳಿಗೆ ಮಾಹಿತಿ ನೀಡಿ, ಚಿತ್ರಕಲೆಯ ವಿವಿಧ ಪ್ರಕಾರಗಳಲ್ಲಿ ಕಾವಿ ಕಲೆಯ ವೈಶಿಷ್ಟ್ಯ ಮತ್ತು ವಿಭಿನ್ನತೆಯ ಕುರಿತು ಮಾತನಾಡಿದರು. ಕಲೆಯ ಕುರಿತಾದ ಆಸಕ್ತಿಗಳನ್ನು ವಿದ್ಯಾರ್ಥಿಗಳಲ್ಲಿ ಧನಾತ್ಮಕ ಚಿಂತನೆ ಸೌಂದರ್ಯ ಪ್ರಜ್ಞೆ, ನಾಗರಿಕ ಪ್ರಜ್ಞೆಯನ್ನು ಮೂಡಿಸುವಲ್ಲಿ ಸಹಕಾರಿ ಆಗಬಲ್ಲದು ಎಂದು ಹೇಳಿದ ಅವರು, ಲಲಿತ ಕಲೆಗಳ ಕ್ಷೇತ್ರದಲ್ಲಿ ಲಭ್ಯವಿರುವ ಉದ್ಯೋಗಾವಕಾಶಗಳ ಸಾಧ್ಯತೆಯ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಕಾಲೇಜಿನ ಸಹಪ್ರಾಧ್ಯಾಪಕ ಡಾ. ಉದಯ್ ಶೆಟ್ಟಿ ಮತ್ತು ಶಿಬಿರಾಧಿಕಾರಿಗಳಾದ ನಿರಂಜನ ಶರ್ಮ, ಶ್ರುತಿ ಆಚಾರ್ಯ, ರಂಜಿತ್ ಹಾಗೂ ಘಟಕ ನಾಯಕರು ಉಪಸ್ಥಿತರಿದ್ದರು.

ಸಮಾಧಾನ ಮಹೋತ್ಸವ ಕ್ರೈಸ್ತ ಸಮುದಾಯದ ಭಕ್ತಿ ಸಂಜೀವನ :ಕೂಟ ಜತ್ತನ ಹೇಳಿಕೆ

ಉಡುಪಿ: ನಗರದ ಮಿಷನ್ ಕಾಂಪೌಂಡ್ ಮೈದಾನದಲ್ಲಿ ಮಾ.20ರಿಂದ 22 ರವರೆಗೆ ಆಯೋಜಿಸಲಾಗಿರುವ 'ಸಮಾಧಾನ ಮಹೋತ್ಸವ' ಕಾರ್ಯಕ್ರಮವು ಕ್ರೈಸ್ತ ಸಮುದಾಯದವರಿಗಾಗಿ ಹಮ್ಮಿಕೊಳ್ಳಲಾದ ಭಕ್ತಿ ಸಂಜೀವನ ಕೂಟವಾಗಿದ್ದು, ಇದರ ವಿರುದ್ಧ ಕೇಳಿಬರುತ್ತಿರುವ ಮತಾಂತರದ ಆರೋಪಗಳನ್ನು ಭಾರತೀಯ ಕ್ರೈಸ್ತ ಒಕ್ಕೂಟದ ರಾಜ್ಯಾಧ್ಯಕ್ಷ ಪ್ರಶಾಂತ್ ಜತ್ತನ್ನ ಅಲ್ಲಗೆಳೆದಿದ್ದಾರೆ.

ಈ ಕೂಟವು ಯಾವುದೇ ಸಾರ್ವಜನಿಕ ಸ್ಥಳದಲ್ಲಿ ನಡೆಯುತ್ತಿಲ್ಲ, ಬದಲಾಗಿ ಚರ್ಚ್ ಆಡಳಿತಕ್ಕೆ ಒಳಪಟ್ಟ ಶಾಲಾ ಮೈದಾನದಲ್ಲಿ ನಡೆಯುತ್ತಿದೆ. ಇದನ್ನು ವಿರೋಧಿಸುವ ಮೂಲಕ ಕೆಲವರು ಸಮಾಜದಲ್ಲಿ ಅನಾವಶ್ಯಕವಾಗಿ ಶಾಂತಿ ಕದಡುವ ಕೆಲಸ ಮಾಡುತ್ತಿದ್ದಾರೆ ಎಂದರು. ಮೋಹನ್ ಸಿ. ಲಾಝುರಸ್ ಅವರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ಆರೋಪಕ್ಕೆ ಪ್ರತಿಕ್ರಿಯಿಸಿದ ಜತ್ತನ್ನ ಅವರು, ಸಾಮಾಜಿಕ ಕ್ಷೇತ್ರದಲ್ಲಿರುವವರ ಮೇಲೆ ಸುಳ್ಳು ಪ್ರಕರಣಗಳು ದಾಖಲಾಗುವುದು ಸಾಮಾನ್ಯ. ಅವರ ಮೇಲಿದ್ದ ಹಳೆಯ ಪ್ರಕರಣಗಳೆಲ್ಲವೂ ಖುಲಾಸೆಯಾಗಿದ್ದು, 2018ರ ಬಳಿಕ ಯಾವುದೇ ಹೊಸ ಪ್ರಕರಣಗಳು ದಾಖಲಾಗಿಲ್ಲ. ಅವರ ಹಿನ್ನೆಲೆಯನ್ನು ಪರಿಶೀಲಿಸಿದ ನಂತರವೇ ಆಹ್ವಾನಿಸಲಾಗಿದೆ ಮತ್ತು ಕಾರ್ಯಕ್ರಮಕ್ಕೆ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆಯಿಂದ ಅಧಿಕೃತ ಪರವಾನಗಿ ಪಡೆಯಲಾಗಿದೆ ಎಂದು ಹೇಳಿಕೊಂಡರು.



ಇತಿಹಾಸ ಪ್ರಸಿದ್ಧ ಎಮ್ಮೆಮಾಡು ಉರೂಸ್ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಹ್ವಾನಿಸಲಾಯಿತು. ಈ ಸಂದರ್ಭ ಶಾಸಕ ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ಎ. ಎಸ್. ಪೊನ್ನಣ್ಣ, ತಾಜಲ್ ಇಸ್ಲಾಂ ಮುಸ್ಲಿಂ ಜಮಾತ್ ಅಧ್ಯಕ್ಷ ಕೆ.ಎಂ. ಹುಸೇನ್ ಸಖಾಫಿ, ಮಾಜಿ ಅಧ್ಯಕ್ಷ ಅಬೂಬಕರ್ ಸಖಾಫಿ, ಆಡಳಿತ ಮಂಡಳಿ ಸದಸ್ಯರಾದ ಮೆನ್ ಮಹಮ್ಮದ್, ಹನೀಫ್ ಎಮ್.ಎ. ಮೊದಲಾದವರಿದ್ದರು.

ಉತ್ತುಂಗಕ್ಕೇರಿದ ಕೊಡಗಿನ ತಾಪಮಾನ

ಮಡಿಕೇರಿ: ಆಹ್ಲಾದಕರ ಹವಾಮಾನ ಮತ್ತು ಹಚ್ಚ ಹಸಿರಿನ ಬೆಟ್ಟಗುಡ್ಡಗಳಿಗೆ ಹೆಸರುವಾಸಿಯಾದ ಕೊಡಗು ಜಿಲ್ಲೆಯಲ್ಲಿ ಈ ಬಾರಿ ಅಸಾಮಾನ್ಯವಾದ ಅಧಿಕ ತಾಪಮಾನ ದಾಖಲಾಗಿದ್ದು, ಬೇಸಿಗೆಗೆ ಮೊದಲೇ ಜನರು ತಾಪಮಾನದ ಉತ್ತುಂಗವನ್ನು ಅನುಭವಿಸುತ್ತಿದ್ದಾರೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರದ ಮಾಹಿತಿಯ ಪ್ರಕಾರ, ಜಿಲ್ಲೆಯಲ್ಲಿ ಮಾ.10 ಮತ್ತು 12ರಂದು ಗರಿಷ್ಠ ತಾಪಮಾನ 35 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಅಧಿಕ ಇದು ಇದುವರೆಗಿನ ಋತುವಿನ ಅತ್ಯಂತ ಬಿಸಿಲಿನ ಸಮಯಗಳಾಗಿದೆ. ಈ ವಾರದ ಆರಂಭದಲ್ಲಿ ಜಿಲ್ಲೆಯಲ್ಲಿ ತಾಪಮಾನವು 33ಲಿಅ ಮತ್ತು 34ಲಿಅ ನಡುವೆ ಇದ್ದು, ಮಂಗಳವಾರ ಅಪರಾಹ್ನದಿಂದ ಜಿಲ್ಲೆಯಲ್ಲಿ ಮೋಡ ಕವಿದ ವಾತಾವರಣ ಹಾಗೂ ಕೆಲವೆಡೆ ಮಳೆಯಾಗಿರುವುದರಿಂದ ತಾಪಮಾನದಲ್ಲಿ ಕೊಂಚ ಮಟ್ಟಿಗೆ ಇಳಿಕೆಯಾಗಿದೆ. ಕರ್ನಾಟಕದ ಇತರ ಭಾಗಗಳಿಗೆ ಹೋಲಿಸಿದರೆ ಸಾಮಾನ್ಯವಾಗಿ ಮಧ್ಯಮ ಹವಾಮಾನವನ್ನು ಅನುಭವಿಸುವ ಕೊಡಗು ಜಿಲ್ಲೆಯಲ್ಲಿ ಈಗ ಸಾಮಾನ್ಯಕ್ಕಿಂತ ಹೆಚ್ಚಿನ ತಾಪಮಾನ ದಾಖಲಾಗುತ್ತಿರುವುದು ಜಿಲ್ಲೆಯ ಜನರಲ್ಲಿ ಮತ್ತು ರೈತರಲ್ಲಿ ಕಳವಳವನ್ನುಂಟುಮಾಡಿದೆ. ಸಾಮಾನ್ಯವಾಗಿ ಹದವಾದ ಹವಾಮಾನ ಪರಿಸ್ಥಿತಿಯನ್ನು ಅನುಭವಿಸುವ ಈ ಸಮಯದಲ್ಲಿ ಈ ಉಷ್ಣತೆ ಅಸಾಮಾನ್ಯವಾಗಿದೆ ಎಂದು ಕಾಫಿ ಬೆಳೆಗಾರರು ಮತ್ತು ತೋಟ ಕಾರ್ಮಿಕರು ಹೇಳುತ್ತಾರೆ.

ಏರುತ್ತಿರುವ ತಾಪಮಾನವು ವ್ಯಾಪಕ ಹವಾಮಾನ ಬದಲಾವಣೆಗಳಿಗೆ ಕಾರಣವಾಗಿದೆ. ಫೆಬ್ರವರಿಯಿಂದ ಕರ್ನಾಟಕದ ಹಲವಾರು ಭಾಗಗಳು, ವಿಶೇಷವಾಗಿ ಕರಾವಳಿ ಪ್ರದೇಶಗಳು, ಸಾಮಾನ್ಯಕ್ಕಿಂತ ಹೆಚ್ಚಿನ ತಾಪಮಾನವನ್ನು ಕಂಡಿವೆ ಎಂದು ಹವಾಮಾನ ತಜ್ಞರು ಹೇಳಿದ್ದಾರೆ.

ರಾಜ್ಯದ ಪ್ರಮುಖ ಜಲಾಶಯಗಳಿಗೆ ಒಳಹರಿವು ಕಡಿಮೆಯಾಗತೊಡಗಿದ್ದು, ಇದು ದೀರ್ಘಕಾಲದ ಬರಗಾಲದ ಪರಿಣಾಮವನ್ನುಪ್ರತಿಬಿಂಬಿಸುತ್ತಿದೆ. ಆದಾಗ್ಯೂ, ಮುಂಬರುವ ದಿನಗಳಲ್ಲಿ ಅಲ್ಲಲ್ಲಿ ಲಘು ಮಳೆಯಾಗಲಿರುವುದರಿಂದ ತಾಪಮಾನ ಸ್ವಲ್ಪ ಮಟ್ಟಿಗೆ ಇಳಿಕೆಯಾಗಬಹುದು. ಈ ಪ್ರತ್ಯೇಕ ಮಳೆಗಳು ಬಿಸಿಲಿನಿಂದ ತಾತ್ಕಾಲಿಕವಾಗಿ ವಿಶ್ರಾಂತಿ ನೀಡಬಹುದು ಎಂದು ಹವಾಮಾನ ತಜ್ಞರು ಹೇಳುತ್ತಾರೆ. ಆದರೂ ಮುಂದಿನ ದಿನಗಳಲ್ಲಿ ಕೊಡಗು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಶುಷ್ಕ ಹವಾಮಾನ ಮುಂದುವರಿಯುವ ನಿರೀಕ್ಷೆಯಿದೆ ಎನ್ನಲಾಗಿದೆ.

ಆರ್‌ಬಿಐ ಸಹಾಯಕ ಜನರಲ್ ಮ್ಯಾನೇಜರ್ ನಿಶಾ ಠಾಕೂರ್ ಕಟ್ಟುನಿಟ್ಟಿನ ಸೂಚನೆ

ಗುರಿ ಸಾಧನೆಗೆ ಬ್ಯಾಂಕುಗಳು ಆದ್ಯತೆ ನೀಡಲಿ

ಉಡುಪಿ: ಜಿಲ್ಲೆಯ ಬ್ಯಾಂಕುಗಳು ಪ್ರಸಕ್ತ ಆರ್ಥಿಕ ವರ್ಷದಲ್ಲಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಮಾರ್ಗಸೂಚಿಯಂತೆ ನಿಗದಿಪಡಿಸಲಾದ ಗುರಿಗಳನ್ನು ಸಾಧಿಸುವ ಕಾರ್ಯವನ್ನು ಆದ್ಯತೆಯ ಮೇಲೆ ಕೈಗೊಳ್ಳಬೇಕು ಎಂದು ಆರ್‌ಬಿಐ ಸಹಾಯಕ ಜನರಲ್ ಮ್ಯಾನೇಜರ್ ನಿಶಾ ಠಾಕೂರ್ ಅವರು ಬ್ಯಾಂಕ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಮಣಿಪಾಲದ ಜಿಲ್ಲಾ ಪಂಚಾಯತ್ ಡಾ. ವಿ.ಎಸ್. ಆಚಾರ್ಯ ಸಭಾಂಗಣದಲ್ಲಿ ಬುಧವಾರ ನಡೆದ ಜಿಲ್ಲಾ ಲೀಡ್ ಬ್ಯಾಂಕ್ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು. ಜಿಲ್ಲೆಯ ಬ್ಯಾಂಕಿಂಗ್ ಠೇವಣಿ ಅನುಪಾತವು ಕಳೆದ ಬಾರಿ ಶೇ. 48.47 ಇದ್ದು, ಪ್ರಸಕ್ತ ಸಾಲಿನಲ್ಲಿ ಶೇ. 49.54 ಕ್ಕೆ ಏರಿಕೆಯಾಗುವ ಮೂಲಕ ಶೇ. 1.07 ರಷ್ಟು ಗಮನಾರ್ಹ ವೃದ್ಧಿ ಕಂಡಿದೆ. ಮುಂದಿನ ದಿನಗಳಲ್ಲಿ ಆರ್.ಬಿ.ಐ ಮಾರ್ಗದರ್ಶನದಂತೆ ಸಿ.ಡಿ ಅನುಪಾತವನ್ನು ಇನ್ನಷ್ಟು ಹೆಚ್ಚಿಸಲು ಎಲ್ಲಾ ಬ್ಯಾಂಕ್ ಅಧಿಕಾರಿಗಳು ಸಕ್ರಿಯವಾಗಿ ಕಾರ್ಯಪ್ರವೃತ್ತರಾಗಬೇಕು ಎಂದು ಅವರು ತಿಳಿಸಿದರು.

ಜಿಲ್ಲೆಯ ಹೆಬ್ರಿ ತಾಲೂಕಿನಲ್ಲಿ ಬ್ಯಾಂಕಿಂಗ್ ವ್ಯವಹಾರ ಹಾಗೂ ಶಾಖೆಗಳ ಸಂಖ್ಯೆ ಕಡಿಮೆ ಇರುವುದನ್ನು ಗಂಭೀರವಾಗಿ ಪರಿಗಣಿಸಿದ ಎ.ಜಿ.ಎಂ ಅವರು, ಈ ವ್ಯಾಪ್ತಿಯಲ್ಲಿ ವ್ಯವಹಾರ ವಿಸ್ತರಿಸಲು ಅಧಿಕಾರಿಗಳು ವಿಶೇಷ ಗಮನಹರಿಸಬೇಕು ಎಂದರು. ಬ್ಯಾಂಕಿನಿಂದ ದೊರೆಯುವ ಸಾಲ ಹಾಗೂ ಸಹಾಯಧನ ಸೌಲಭ್ಯಗಳ ಬಗ್ಗೆ ಗ್ರಾಹಕರಿಗೆ ಮಾಹಿತಿ ನೀಡುವ ಕಾರ್ಯಕ್ರಮಗಳನ್ನು ನಿರಂತರವಾಗಿ ಆಯೋಜಿಸಬೇಕು. ವಿಶೇಷವಾಗಿ ಕೇಂದ್ರ ಸರ್ಕಾರದ ಪ್ರಾಯೋಜಿತ ಯೋಜನೆಗಳಿಗೆ ಬ್ಯಾಂಕುಗಳ ಕೊಡುಗೆ ಉತ್ತಮವಾಗಿದ್ದು, ಇದನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು ಎಂದರು.



ಪಿಎಂ ಉದ್ಯೋಗ ಸೃಜನ ಯೋಜನೆಗೆ 6.59 ಕೋಟಿ ರೂ.

ಜಿಲ್ಲೆಯ ಯುವ ಉದ್ಯೋಗಾಸಕ್ತರಿಗಾಗಿ ಪ್ರಧಾನಮಂತ್ರಿ ಉದ್ಯೋಗ ಸೃಜನಾ ಯೋಜನೆಯಡಿ ನಿಗದಿತ ಗುರಿ ಮೀರಿ 165 ಫಲಾನುಭವಿಗಳಿಗೆ 6.59 ಕೋಟಿ ರೂ. ಆರ್ಥಿಕ ನೆರವು ನೀಡಲಾಗಿದೆ. ಅದೇ ರೀತಿ ಪಿ.ಎಂ. ವಿಶ್ವಕರ್ಮ ಯೋಜನೆಯಡಿ ಸ್ವೀಕೃತವಾದ 5,865 ಅರ್ಜಿಗಳ ಪೈಕಿ 4,028 ಫಲಾನುಭವಿಗಳಿಗೆ 36.65 ಕೋಟಿ ರೂ. ಸಾಲ ವಿತರಿಸಲಾಗಿದ್ದು, ತಿರಸ್ಕೃತ ಅರ್ಜಿಗಳ ಸಂಖ್ಯೆಯನ್ನು ತಗ್ಗಿಸಿ ಅರ್ಹರಿಗೆ ಶೀಘ್ರವಾಗಿ ಸಬ್ಸಿಡಿ ತಲುಪಿಸಲು ಕ್ರಮ ಕೈಗೊಳ್ಳಬೇಕು ಎಂದು ಅವರು ನಿರ್ದೇಶನ ನೀಡಿದರು.

ಪಿಎಂಎಫ್ ಎಂಇ ಅಡಿ 20 ಕೋಟಿ ರೂ. ಮೀಸಲು

ಶಿಕ್ಷಣ ವಲಯದಲ್ಲಿ ಆರ್ಥಿಕ ನೆರವು ನೀಡುವ ಪ್ರಮಾಣವನ್ನು ಹೆಚ್ಚಿಸುವ ಅಗತ್ಯವಿದ್ದು, ಬ್ಯಾಂಕ್ ಅಧಿಕಾರಿಗಳು ನೇರವಾಗಿ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಲದ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಬೇಕು.

ಉಡುಪಿ ಜಿಲ್ಲಾ ಬ್ಯಾಂಕಿಂಗ್ ಪ್ರಗತಿಯ ಹೂರಣ

ಜಿಲ್ಲೆಯಲ್ಲಿ ಒಟ್ಟು 439 ಬ್ಯಾಂಕ್ ಶಾಖೆಗಳಿದ್ದು (ಗ್ರಾಮೀಣ-239, ಅರೆನಗರ-94, ನಗರ-106), ಒಟ್ಟಾರೆಯಾಗಿ 67,840 ಕೋಟಿ ರೂ. ಬ್ಯಾಂಕಿಂಗ್ ವ್ಯವಹಾರ ನಡೆದಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ವ್ಯವಹಾರದಲ್ಲಿ ಶೇ. 9.96 ಹಾಗೂ ಸಾಲ ವಿತರಣೆಯಲ್ಲಿ ಶೇ. 11.58 ರಷ್ಟು ಬೆಳವಣಿಗೆಯಾಗಿದೆ. ವಾರ್ಷಿಕ ಕ್ರೆಡಿಟ್ ಯೋಜನೆಯಡಿ ಕೃಷಿ, ಎಂ.ಎಸ್.ಎಂ.ಇ ಮತ್ತು ಶಿಕ್ಷಣ ವಲಯಗಳಲ್ಲಿ ಶೇ. 81 ಕ್ಕೂ ಅಧಿಕ ಗುರಿ ಸಾಧನೆಯಾಗಿದ್ದರೂ, ವಸತಿ ವಲಯದಲ್ಲಿ (ಶೇ. 34.28) ಪ್ರಗತಿ ಕುಂಠಿತವಾಗಿರುವುದು ಕಂಡುಬಂದಿದೆ.

ಜಿಲ್ಲೆಯಲ್ಲಿ ಪ್ರಸ್ತುತಅಡಿ ಪಿ.ಎಂ.ಎಫ್.ಎಂ.ಇ ಯೋಜನೆಯಡಿ 154 ಫಲಾನುಭವಿಗಳಿಗೆ 20.53 ಕೋಟಿ ರೂ. ಹಾಗೂ ಪಿ.ಎಂ.ಎಸ್.ಜಿ.ಎಂ.ಬಿ.ವೈ ಅಡಿಯಲ್ಲಿ 444 ಫಲಾನುಭವಿಗಳಿಗೆ 9.05 ಕೋಟಿ ರೂ. ಆರ್ಥಿಕ ನೆರವು ಮಂಜೂರು ಮಾಡಲಾಗಿದೆ.

ಸಭೆಯಲ್ಲಿ ಕೆನರಾ ಬ್ಯಾಂಕ್ ಪ್ರಾದೇಶಿಕ ಕಚೇರಿಯ ಮ್ಯಾನೇಜರ್ ತದಿನಾಡ ನಾಗ ಪೂರ್ಣಾನಂದ್ ಅವರು ಜಿಲ್ಲೆಯ ಒಟ್ಟಾರೆ ಬ್ಯಾಂಕಿಂಗ್ ಚಿತ್ರಣವನ್ನು ನೀಡುತ್ತಾ, ಜಿಲ್ಲೆಯ 439 ಶಾಖೆಗಳ ಮೂಲಕ ಒಟ್ಟು 67,840 ಕೋಟಿ ರೂ. ವಹಿವಾಟು ನಡೆಸಲಾಗಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಶೇ. 9.96 ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ಮಾಹಿತಿ ನೀಡಿದರು.

ಜಿಲ್ಲೆಯ ವಾರ್ಷಿಕ ಕ್ರೆಡಿಟ್ ಯೋಜನೆಗೆ ಸಂಬಂಧಿಸಿದಂತೆ ಒಟ್ಟು 15,514.16 ಕೋಟಿ ರೂ. ಗುರಿಯ ಪೈಕಿ ಈವರೆಗೆ 13,060.39 ಕೋಟಿ ರೂ. ಸಾಧನೆಯಾಗಿದ್ದು, ಇದು ಶೇ. 84.18 ರಷ್ಟು ಗುರಿ ಮುಟ್ಟಿದಂತಾಗಿದೆ. ಕೃಷಿ ವಲಯದಲ್ಲಿ ಶೇ. 81.05, ಎಂ.ಎಸ್.ಎಂ.ಇ ವಲಯದಲ್ಲಿ ಶೇ. 81.91 ಹಾಗೂ ಶಿಕ್ಷಣ ವಲಯದಲ್ಲಿ ಶೇ. 81.90 ರಷ್ಟು ಸಾಧನೆಯಾಗಿದೆ. ಆದರೆ ವಸತಿ ಕ್ಷೇತ್ರಗಳಲ್ಲಿ ಶೇ. 34.28 ರಷ್ಟು ಮಾತ್ರ ಪ್ರಗತಿಯಾಗಿದ್ದು, ಎಲ್ಲಾ ವಲಯಗಳಲ್ಲೂ ನೂರಕ್ಕೆ ನೂರರಷ್ಟು ಸಾಧನೆ ಮಾಡಲು ಬ್ಯಾಂಕುಗಳು ಶ್ರಮಿಸಬೇಕು ಎಂದು ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ವಿಜಯ್ ಕುಮಾರ್, ಎಸ್.ಸಿ.ಡಿ.ಸಿ.ಸಿ ಬ್ಯಾಂಕ್ ಎ.ಜಿ.ಎಂ ರಾಜೇಶ್ ಶೆಟ್ಟಿ, ರುಡ್‌ಸೆಟ್ ನಿರ್ದೇಶಕ ಡಾ. ಬೊಮ್ಮಾಯಿ ಹಾಗೂ ವಿವಿಧ ಬ್ಯಾಂಕುಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಕೆ. ಜನಾರ್ದನ, ಶಿವಶಕ್ತಿ ಭಜನಾ ಮಂದಿರದ ಬಳಿ, ಮೂಡುಶೆಡ್ಡೆ.
2. ದೀಕಮ್ಮ ಗಂಗಾಧರ ಪೂಜಾರಿ, ಶಿಮ್ಮೊಟ್ಟು, ಕೊಡಂಬೆಟ್ಟು, ವಾಮದಪದವು, ಬಂಟ್ವಾಳ (ತಾ).
3. ದಿ| ರಥಿ ಶೆಟ್ಟಿ ಸ್ಮರಣಾರ್ಥ ಮಕ್ಕಳು, ನಡಿಗುತ್ತು, ಪಡುಪೆರಾರ, ಹಳೆ ಕಾನ್ವೆಂಟ್ ರಸ್ತೆ, ಬಜಪೆ.
4. ರಾಜು, 'ಗುರು ನಿಲಯ', ತಲೆಂಗಳ, ಬಾಯಾರು.
5. ಐತಪ್ಪ ಗೌಡ, ಕಾರಂಬಡೆ ಮನೆ, 'ಶಿವಪ್ರಸಾದ್ ನಿಲಯ', ರಾಯಿ, ಬಂಟ್ವಾಳ (ತಾ).
6. ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ, ಕಲ್ಲಬೆಟ್ಟು, ನೈನಾಡು.
7. ರಾಜಾರಾಮ ಶೆಟ್ಟಿ, ಕೊಂಡಾಡಿ, ಹಿರಿಯಡ್ಕ - ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.

ಶ್ರೀ ಧರ್ಮಸ್ಥಳ ಮೇಳ
ಬಾಳೆಹೊಳೆಯಲ್ಲಿ
ಶ್ರೀ ಬಾಬು ಶೆಟ್ಟಿ, S/o ಪದ್ದಯ್ಯ ಶೆಟ್ಟಿ, ಭದ್ರಾ ಸೈಟ್, ಹೆಮ್ಮಕ್ಕಿ

ಶ್ರೀ ಸಾಲಿಗ್ರಾಮ ಮೇಳ
ಕಾರ್ಕೋಡ್ಲುವಿನಲ್ಲಿ- ಷಣ್ಮುಖಪ್ರಿಯ

ಶ್ರೀ ಪೆರ್ಡೂರು ಮೇಳ
ಕರೂರುನಲ್ಲಿ-ಕಾರ್ತವೀರ್ಯ, ಮಾಗಧವಧೆ, ವೀರ ಅಭಿಮನ್ಯು

ಶ್ರೀ ಹನುಮಗಿರಿ ಮೇಳ
ಬಿ.ಸಿ.ರೋಡ್ ಸ್ಪರ್ಶ ಕಲಾ ಮಂದಿರದಲ್ಲಿ

ಶ್ರೀ ಪಾವಂಜೆ ಮೇಳ
ಕುಂಜರ್ವ ಉಬೆರೆಯಲ್ಲಿ
ತಿರುಪತಿ ಕ್ಷೇತ್ರ ಮಹಾತ್ಮೆ

ದ.ಕ.ಜಿಲ್ಲಾ ರೆಡ್‌ಕ್ರಾಸ್‌ಗೆ ಪಾರುಲ್ ವಿ.ವಿ. ವಿದ್ಯಾರ್ಥಿ ತಂಡ ಭೇಟಿ



ಮಂಗಳೂರು: ಗುಜರಾತ್‌ನ ವಡೋದರದ ಪಾರುಲ್ ವಿಶ್ವವಿದ್ಯಾಲಯದ ಬಿಎಸ್‌ಸಿ ಮತ್ತು ಎಂಎಸ್‌ಸಿ ನರ್ಸಿಂಗ್ ವಿದ್ಯಾರ್ಥಿಗಳ ತಂಡ ತಮ್ಮ ಅಧ್ಯಯನ ಪ್ರವಾಸದ ಅಂಗವಾಗಿ ದ.ಕ.ಜಿಲ್ಲಾ ರೆಡ್‌ಕ್ರಾಸ್ ಕಚೇರಿಗೆ ಸೋಮವಾರ ಭೇಟಿ ನೀಡಿ ಸಂಸ್ಥೆಯ ಸೇವಾ ಕಾರ್ಯಗಳ ಬಗ್ಗೆ ಮಾಹಿತಿ ಪಡೆದರು.

ರೆಡ್‌ಕ್ರಾಸ್ ದ.ಕ.ಜಿಲ್ಲಾ ಘಟಕದ ಚೇರ್ಮನ್ ಸಿಎ ಶಾಂತಾರಾಮ ಶೆಟ್ಟಿ ಮಾತನಾಡಿ, ದ.ಕ.ಜಿಲ್ಲಾ ರೆಡ್ ಕ್ರಾಸ್ ತನ್ನ ಅತ್ಯಪೂರ್ವ ಸೇವಾ ಕಾರ್ಯಗಳ ಮೂಲಕ ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಸುಮಾರು 7 ಕೋಟಿ ರೂ. ವೆಚ್ಚದಲ್ಲಿ ಭವ್ಯ ಶತಮಾನೋತ್ಸವ ನಿರ್ಮಾಣವಾಗಿರುವದು ಹೆಮ್ಮೆಯ ಸಾಧನೆಯಾಗಿದೆ. ಸರ್ಕಾರಿ ಲೇಡಿ ಗೋಶನ್ ಆಸ್ಪತ್ರೆಗೆ ದಾಖಲಾಗುವ ಗರ್ಭಿಣಿಯರು ಸಹಿತ ಅವಶ್ಯ ಇರುವ ರೋಗಿಗಳಿಗೆ ಉಚಿತವಾಗಿ ರಕ್ತ ಪೂರೈಸಲಾಗುತ್ತಿದೆ. ಪ್ರತೀ ತಿಂಗಳು ಸುಮಾರು 500 ಯುನಿಟ್ ರಕ್ತ ಉಚಿತವಾಗಿ ಒದಗಿಸಲಾಗುತ್ತಿದೆ. ಸರ್ಕಾರಿ ವೆನ್ಲಾಕ್ ಆಸ್ಪತ್ರೆಯಲ್ಲಿ ಹೆಲ್ಪ್ ಡೆಸ್ಕ್ ಮೂಲಕ ಸೇವೆ ನೀಡಲಾಗುತ್ತಿದೆ ಎಂದು ಸಂಸ್ಥೆಯ ಕಾರ್ಯಚಟುವಟಿಕೆಗಳ ಪರಿಚಯ ನೀಡಿದರು.

ವಿದ್ಯಾರ್ಥಿಗಳ ಜತೆ ಸಂವಾದ ನಡೆಸಿದ ರೆಡ್‌ಕ್ರಾಸ್ ದ.ಕ. ಜಿಲ್ಲಾ ಘಟಕದ ನಿರ್ದೇಶಕರಾದ ಡಾ.ಸತೀಶ್ ರಾವ್ ಅವರು ರಕ್ತದಾನ ಶಿಬಿರದ ಬಗ್ಗೆ, ಡಾ. ಬಿ.ಸಚ್ಚಿದಾನಂದ ರೈ ಅವರು ಅಂಗಾಂಗ ದಾನದ ಜಾಗೃತಿ ಬಗ್ಗೆ, ಸಚೇತ ಸುವರ್ಣ ಅವರು ಪ್ರಥಮ ಚಿಕಿತ್ಸೆ ತರಬೇತಿ ಬಗ್ಗೆ ಮತ್ತು ಡಾ.ಸುಮನ ಬಿ. ಅವರು ಮಹಿಳಾ ಆರೋಗ್ಯ ಜಾಗೃತಿ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ನಿರ್ದೇಶಕರಾದ ಗುರುದತ್ ನಾಯಕ್, ಪಿ.ಬಿ.ಹರೀಶ್ ರೈ, ಅಧ್ಯಯನ ತಂಡದ ಸಂಯೋಜಕ ಅಲೆಕ್ಸ್ ಉಪಸ್ಥಿತರಿದ್ದರು. ರೆಡ್‌ಕ್ರಾಸ್ ಕಾರ್ಯದರ್ಶಿ ಕಿಶೋರ್‌ಚಂದ್ರ ಹೆಗ್ಡೆ ಕಾರ್ಯಕ್ರಮ ನಿರೂಪಿಸಿದರು.


ಬಾಳ-ಕಳುವಾರು ಶ್ರೀ ಬೆಂಕಿನಾಥೇಶ್ವರ ದೇವಸ್ಥಾನ

ಮಾ.20-29ರವರೆಗೆ ಅಷ್ಟಬಂಧ ಬ್ರಹ್ಮಕಲಶೋತ್ಸವ

ಮಂಗಳೂರು: ಮಂಗಳೂರುತಾಲೂಕಿನ ಬಾಳ-ಕಳುವಾರು ಶ್ರೀ ಬೆಂಕಿನಾಥೇಶ್ವರ ದೇವಸ್ಥಾನದಲ್ಲಿ ಮಾ.20ರಿಂದ 29ರವರೆಗೆ ಅಷ್ಟಬಂಧ ಬ್ರಹ್ಮಕಲಶೋತ್ಸವ ಜರಗಲಿದೆ.

ಮಾ.20ರಂದು ಸಾಮೂಹಿಕ ಪ್ರಾರ್ಥನೆ, ತೋರಣ ಮುಹೂರ್ತದೊಂದಿಗೆ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ಆರಂಭಗೊಳ್ಳಲಿವೆ. ಮಾ.27ರಂದು ಬೆಳಗ್ಗೆ 10.15ಕ್ಕೆ ಒದಗುವ ವೃಷಭ ಲಗ್ನ ಸುಮುಹೂರ್ತದಲ್ಲಿ ಎಡಪದವು ರಾಧಾಕೃಷ್ಣ ತಂತ್ರಿ ಅವರ ನೇತೃತ್ವದಲ್ಲಿ ಶ್ರೀ ಬೆಂಕಿನಾಥೇಶ್ವರ ದೇವರಿಗೆ ಅಷ್ಟಬಂಧ ಬ್ರಹ್ಮಕಲಶೋತ್ಸವ ನೆರವೇರಲಿದೆ ಎಂದು ಬ್ರಹ್ಮಕಲಶೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಬಿ.ರವೀಂದ್ರ ರಾವ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ದೇಗುಲದಲ್ಲಿ ಕಾಲಕಾಲಕ್ಕೆ ಆಗಬೇಕಾದ ಜೀರ್ಣೋದ್ಧಾರ ಕೆಲಸಗಳು, ಬ್ರಹ್ಮಕಲಶೋತ್ಸವಗಳು ನಡೆದಿವೆ. ಈ ಹಿಂದೆ 1892ರಲ್ಲಿ, 1953ರಲ್ಲಿ, 1987ರಲ್ಲಿ, 2001ರಲ್ಲಿ ಹಾಗೂ 2014ರಲ್ಲಿ ಬ್ರಹ್ಮಕಲಶೋತ್ಸವ ನಡೆದಿದೆ. ಸುಮಾರು 1,200 ವರ್ಷಗಳ ಇತಿಹಾಸವಿರುವ ಈ ದೇವಾಲಯ ಈಶ್ವರ ಶಕ್ತಿಯ ಪವಿತ್ರ ಸ್ಥಳವಾಗಿದೆ. ಈ ಬಾರಿಯ ಬ್ರಹ್ಮಕಲಶೋತ್ಸವದ ಸಂದರ್ಭದಲ್ಲಿ ದೇವಸ್ಥಾನದ ವಿಷಯಗಳನ್ನು ದಾಖಲೀಕರಿಸುವ ಉದ್ದೇಶದಿಂದ 'ಶಿವಸ್ಮೃತಿ' ಸ್ಮರಣ ಸಂಚಿಕೆಯನ್ನು ಹೊರತರಲಾಗುವುದು ಎಂದು ತಿಳಿಸಿದರು.



ಮಾ.20ರಂದು ಸಾಮೂಹಿಕ ಪ್ರಾರ್ಥನೆ, ತೋರಣ ಮುಹೂರ್ತ, ಉಗ್ರಾಣ ಮುಹೂರ್ತ ಇತ್ಯಾದಿ, ಸಾಂಸ್ಕೃತಿಕ ಕಾರ್ಯಕ್ರಮ, ಮಾ.21ರಂದು ಅಥರ್ವಶೀರ್ಷ ಗಣಯಾಗ, ಸಾಂಸ್ಕೃತಿಕ ಕಾರ್ಯಕ್ರಮ, ಮಾ.22ರಂದು ಬೆಳಗ್ಗೆ ಮಹಾಮೃತ್ಯುಂಜಯ ಯಾಗ, ನವಗ್ರಹಯಾಗ, ಸಂಜೆ ಧಾರ್ಮಿಕ ಸಭಾ ಕಾರ್ಯಕ್ರಮ, ಬೆಳಗ್ಗೆ ಕರ್ನಾಟಕ ಶಾಸ್ತ್ರೀಯ ಸಂಗೀತ, ಸಂಜೆ ಭರತನಾಟ್ಯ, ಶಿವದೂತೆ ಗುಳಿಗೆ ನಾಟಕ ಪ್ರದರ್ಶನ, ಮಾ.23ರಂದು ಬೆಳಗ್ಗೆ ರುದ್ರಯಾಗ, ಬೆಳಗ್ಗೆ ಮತ್ತು ಸಂಜೆ ಭಜನಾ ಕಾರ್ಯಕ್ರಮ, ಮಾ.24ರಂದು ಬೆಳಗ್ಗೆ ಸಂಜೀವಿನಿ ಮೃತ್ಯುಂಜಯ ಯಾಗ, ಚಂಡಿಕಾಯಾಗ, ಸಂಜೆ ಆಶ್ಲೇಷ ಬಲಿ, ಬೆಳಗ್ಗೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ, ರಾತ್ರಿ 7.30ರಿಂದ ಓಂ ನಮಃ ಶಿವಾಯ ಯಕ್ಷಗಾನ ಬಯಲಾಟ, ಮಾ.25ರಂದು ಬೆಳಗ್ಗೆ ಅಷ್ಟಬಂಧ ಪ್ರತಿಷ್ಠೆ, ಭದ್ರಕ ಮಂಡಲ ಪೂಜೆ, ಬೆಳಗ್ಗೆ ಭಜನೆ, ಸಂಜೆ ವೇಣುವಾದನ ಕಾರ್ಯಕ್ರಮ, ರಾತ್ರಿ 7.30ರಿಂದ ಕಾಪು ರಂಗತರಂಗ ಕಲಾವಿದರಿಂದ ನಾಟಕ ಪ್ರದರ್ಶನ, ಮಾ.26ರಂದು ತತ್ವಹೋಮ, ಬ್ರಹ್ಮಕಲಶ ಮಂಡಲ ರಚನೆ ಇತ್ಯಾದಿ, ಬೆಳಗ್ಗೆ ಮತ್ತು ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ, ಮಾ.27ರಂದು ಬೆಳಗ್ಗೆ ಬ್ರಹ್ಮಕಲಶಾಭಿಷೇಕ, ಮಧ್ಯಾಹ್ನ ಮಹಾ ಅನ್ನಸಂತರ್ಪಣೆ, ಬೆಳಗ್ಗೆ ಮತ್ತು ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ, ರಾತ್ರಿ 8.30ರಿಂದ ಶ್ರೀ ದೇವರ ಬಲಿ, ಉತ್ಸವ, ಮಾ.28ರಂದು ಬೆಳಗ್ಗೆ ಮಹಾ ಸಂಪ್ರೋಕ್ಷಣೆ, ಮಹಾ ಮಂತ್ರಾಕ್ಷತೆ, ಮಧ್ಯಾಹ್ನ ಅನ್ನಸಂತರ್ಪಣೆ, ಸಂಜೆ 4ರಿಂದ ಧಾರ್ಮಿಕ ಸಭಾ ಕಾರ್ಯಕ್ರಮ, ಸಂಜೆ 7ರಿಂದ 48 ದಿನಗಳ ಅಖಂಡ ಸಂಧ್ಯಾ ಭಜನಾ ಕಾರ್ಯಕ್ರಮದ ಮಂಗಲೋತ್ಸವ, ಮಾ.29ರಂದು ಸಂಜೆ 6ರಿಂದ ಹನುಮಗಿರಿ ಮೇಳದವರಿಂದ ಯಕ್ಷಗಾನ ಬಯಲಾಟ ನಡೆಯಲಿದೆ ಎಂದು ವಿವರಿಸಿದರು.

ಉಪಾಧ್ಯಕ್ಷ ಜಗಜೀವನ್ ಶೆಟ್ಟಿ, ಧಾರ್ಮಿಕ ಸಭಾ ಕಾರ್ಯಕ್ರಮದ ಸಂಚಾಲಕ ಪದ್ಮನಾಭ ಬಿ., ಸ್ಮರಣ ಸಂಚಿಕೆ ವಿಭಾಗದ ಸಂಚಾಲಕ ಬಾಳ ಗಂಗಾಧರ ಪೂಜಾರಿ, ವಾರ್ತಾ ಮತ್ತು ಪ್ರಚಾರ ವಿಭಾಗದ ಯತಿರಾಜ್ ಡಿ.ಸಾಲ್ಯಾನ್ ಸುರತ್ಕಲ್, ಚೇತನ್ ಕುಮಾರ್ ಜೋಗಿ ಕಿನ್ನಿಗೋಳಿ ಉಪಸ್ಥಿತರಿದ್ದರು.

ಕೊಲ್ಲೂರು ಓಲಗ ಮಂಟಪ ನವೀಕರಿಸಿದ ಮಹಾಲಿಂಗ ನಾಯ್ಕ ಸನ್ಮಾನದಲ್ಲಿ ಗಂಟಿಹೊಳೆ

ಸಂಪಾದನೆಯ ಸದ್ವಿನಿಯೋಗ ದೇವರಿಗೂ ಪ್ರಿಯ

ಬೈಂದೂರು: ನಾವುಗಳು ಮುಖ್ಯವಾಗಿ ಮಾನವೀಯತೆ ಮತ್ತು ಮನುಷ್ಯತ್ವ ಗುಣಗಳನ್ನು ಅಳವಡಿಸಿಕೊಳ್ಳಬೇಕು. ಹೆತ್ತ ತಾಯಿ, ಬೋಧಿಸಿದ ಗುರುಗಳು, ಕಲಿತ ಶಾಲೆ, ಹುಟ್ಟೂರ ಋಣ ಪೂರೈಸುವುದು ಮಾನವ ಧರ್ಮವಾಗಿದೆ. ಸಂಪಾದನೆಯ ಒಂದಿಷ್ಟು ಭಾಗ ಉತ್ತಮ ಅವಕಾಶಗಳಿಗೆ ಬಳಸಿದಾಗ ನಮ್ಮ ಋಣ ಸಂದಾಯವಾಗುವುದು. ಶೈಕ್ಷಣಿಕ, ಧಾರ್ಮಿಕ ಹಾಗೂ ಸಾಮಾಜಿಕ ಕಳಕಳಿಯಿಂದ ಉತ್ತಮ ಕಾರ್ಯ ಮಾಡಿದರೆ ದೇವರಿಗೂ ಪ್ರಿಯವಾಗಲಿದೆ ಎಂದು ಶಾಸಕ ಗುರುರಾಜ ಗಂಟಿಹೊಳೆ ಹೇಳಿದರು.

ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ಓಲಗ ಮಂಟಪವನ್ನು ಸುಮಾರು ಒಂದು ಕೋಟಿ ವೆಚ್ಚದಲ್ಲಿ ಸೇವಾರೂಪವಾಗಿ ನೂತನ ಶಿಲಾಮಯವನ್ನಾಗಿ ನವೀಕರಿಸಿ ನಿರ್ಮಿಸಿಕೊಟ್ಟ ಕೊಲ್ಲೂರು ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಸದಸ್ಯ ಮಹಾಲಿಂಗ ವಿ. ನಾಯ್ಕ ಮತ್ತು ಮಲ್ಲಿಕಾ ಎಂ. ನಾಯ್ಕ ದಂಪತಿ ಪೌರಸನ್ಮಾನ ಸಮಾರಂಭದಲ್ಲಿ ಮಾತನಾಡಿದರು.



ದಕ್ಷಿಣ ಭಾರತದ ಪವಿತ್ರ ಯಾತ್ರಾ ಸ್ಥಳವಾದ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಸದಸ್ಯರೊಬ್ಬರು ತಮ್ಮ ಸ್ವಂತ ಖರ್ಚಿನಲ್ಲಿ ಶ್ರೀ ಮೂಕಾಂಬಿಕಾ ದೇವಸ್ಥಾನದ ಓಲಗ ಮಂಟಪವನ್ನು ಮೂಲಾಕೃತಿಗೆ ಚ್ಯುತಿಬಾರದಂತೆ ಶಿಲಾಮಯವನ್ನಾಗಿ ಪರಿವರ್ತಿಸಿ, ಅತ್ಯಂತ ವಿನೂತನ ಮಾದರಿಯಲ್ಲಿ ನಿರ್ಮಿಸಿಕೊಟ್ಟಿದ್ದು ಕ್ಷೇತ್ರದ ಇತಿಹಾಸದಲ್ಲಿ ಪ್ರಥಮವಾಗಿದೆ. ಅಲ್ಲದೇ ಶೀಘ್ರದಲ್ಲಿ ಕ್ಷೇತ್ರವು ಪ್ರಾಧಿಕಾರವಾಗಲಿದ್ದು, ಇನ್ನು ಮುಂದೆ ಕೊಲ್ಲೂರು ದೇವಳದ ವ್ಯವಸ್ಥಾಪನಾ ಸಮಿತಿ ರಚನೆ ಇತಿಹಾಸ ಪುಟ ಸೇರಲಿದೆ ಎಂದರು.

ಮಹಾಲಿಂಗ ವಿ. ನಾಯ್ಕ ಮತ್ತು ಮಲ್ಲಿಕಾ ಎಂ. ನಾಯ್ಕ ದಂಪತಿಗೆ ಕೊಲ್ಲೂರು, ದಳಿ, ಸಲಗೇರಿ, ಹಳ್ಳಿಬೇರು ಗ್ರಾಮಸ್ಥರು, ಆಟೋ ಚಾಲಕ-ಮಾಲಕರ ಸಂಘದ ವತಿಯಿಂದ ಸನ್ಮಾನಿಸಲಾಯಿತು. ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ. ಬಾಬು ಶೆಟ್ಟಿ, ಸದಸ್ಯರಾದ ರಘುರಾಮ ದೇವಾಡಿಗ, ಸುರೇಂದ್ರ ಶೆಟ್ಟಿ, ಧನಾಕ್ಷಿ ವಿಶ್ವನಾಥ, ಸುಧಾ ಕೆ., ಗ್ರಾಪಂ ಮಾಜಿ ಅಧ್ಯಕ್ಷ ಶಿವರಾಮಕೃಷ್ಣ ಭಟ್ ಮೊದಲಾದವರು ಇದ್ದರು. ಚಂದ್ರ ಬಳೆಗಾರ್ ಸ್ವಾಗತಿಸಿ, ಸಂದೀಪ್ ನಿರೂಪಿಸಿದರು. ನಂತರ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಖ್ಯಾತ ಚಲನಚಿತ್ರ, ನಾಟಕ, ನಿರ್ದೇಶಕ ವಿಜಯ್ ಕುಮಾರ್ ಕೊಡಿಯಾಲ್‌ಬೈಲ್ ಇವರ ರಚನೆಯ ಛತ್ರಪತಿ ಶಿವಾಜಿ ನಾಟಕ ಪ್ರದರ್ಶನಗೊಂಡಿತು.

ಶ್ರೀ ರಾಮಕೃಷ್ಣ ಕಾಲೇಜಿನಲ್ಲಿ 100 ಯುನಿಟ್ ರಕ್ತ ಸಂಗ್ರಹ

ರಕ್ತದಾನ ಪುಣ್ಯದ ಕಾರ್ಯ: ಸಿಎ ಶಾಂತಾರಾಮ ಶೆಟ್ಟಿ

ಮಂಗಳೂರು: ರಕ್ತದಾನ ಇನ್ನೊಬ್ಬರ ಜೀವ ಉಳಿಸಲು ನೆರವಾಗುವ ಅತ್ಯಂತ ಪುಣ್ಯದ ಕಾರ್ಯವಾಗಿದೆ. ವಿದ್ಯಾರ್ಥಿಗಳು ಹಾಗೂ ಯುವ ಜನತೆ ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡುವ ಮೂಲಕ ಈ ಮಹತ್ವದ ಸೇವಾ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿ ಕೊಳ್ಳಬೇಕು ಎಂದು ರೆಡ್ ಕ್ರಾಸ್ ದ.ಕ.ಜಿಲ್ಲಾ ಘಟಕದ ಚೇರ್ಮನ್ ಸಿಎ ಶಾಂತಾರಾಮ ಶೆಟ್ಟಿ ಹೇಳಿದರು.

ನಗರದ ಶ್ರೀ ರಾಮಕೃಷ್ಣ ಕಾಲೇಜಿನ ಯೂತ್ ರೆಡ್ ಕ್ರಾಸ್, ರಾಷ್ಟ್ರೀಯ ಸೇವಾ ಯೋಜನೆ, ಹಿರಿಯ ವಿದ್ಯಾರ್ಥಿ ಸಂಘ ಹಾಗೂ ಅಕ್ಷರ ಚಾರಿಟೇಬಲ್ ಟ್ರಸ್ಟ್ ಆಶ್ರಯದಲ್ಲಿ ಲಯನ್ಸ್ ಕ್ಲಬ್ ನೇತ್ರಾವತಿ ಸಹಯೋಗದಲ್ಲಿ ಬುಧವಾರ ರಾಮಕೃಷ್ಣ ಕಾಲೇಜಿನ ಗೀತಾ ಎಸ್. ಎಂ. ಶೆಟ್ಟಿ ಸಭಾಂಗಣದಲ್ಲಿ ನಡೆದ ರಕ್ತದಾನ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಲಯನ್ಸ್ ಕ್ಲಬ್ ನೇತ್ರಾವತಿ ಅಧ್ಯಕ್ಷೆ ವಿನಯ ಶೆಟ್ಟಿ, ಲಯನ್ಸ್ ಪ್ರಾದೇಶಿಕ ಅಧ್ಯಕ್ಷೆ ಗಾಯತ್ರಿ ರಾವ್, ವಲಯ ಅಧ್ಯಕ್ಷೆ ನಿರ್ಮಲಾ ಪ್ರಮೋದ್, ಖಜಾಂಚಿ ಚಂಚಲಾಕ್ಷಿ ಶೆಟ್ಟಿ, ರೆಡ್ ಕ್ರಾಸ್ ಜಿಲ್ಲಾ ಘಟಕದ ಆಡಳಿತ ಮಂಡಳಿ ನಿರ್ದೇಶಕ ಡಾ ಸಚ್ಚಿದಾನಂದ ರೈ, ಬ್ಲಡ್ ಬ್ಯಾಂಕ್‌ನ ಡಾ. ಸುಕೇಶ್ ಅತಿಥಿಗಳಾಗಿದ್ದರು.



ಯುವ ಜನತೆ ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡುವ ಮೂಲಕ ಈ ಮಹತ್ವದ ಸೇವಾ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಿ

ಶ್ರೀ ರಾಮಕೃಷ್ಣ ಶಿಕ್ಷಣ ಸಂಸ್ಥೆಗಳ ಸಂಚಾಲಕ ಡಾ. ಬಿ. ಸಂಜೀವ ರೈ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಪ್ರಾಂಶುಪಾಲೆ ಡಾ. ಅನಸೂಯ ರೈ, ಉಪ ಪ್ರಾಂಶುಪಾಲೆ ಪ್ರತಿಭಾ ಶೆಟ್ಟಿ, ಕಾರ್ಯಕ್ರಮಾಧಿಕಾರಿ ಸುಮನಾ ರೈ ಉಪಸ್ಥಿತರಿದ್ದರು.

ರಾಮಕೃಷ್ಣ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಸುಮಾರು 100 ಯುನಿಟ್ ರಕ್ತದಾನ ಮಾಡಿದರು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ

ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.ಕಾನಿಇಂಹಾ/ಪಿಬಿ/ಗುತ್ತಿಗೆ/4059–ಎಸ್‌ಸಿಪಿ–ಟಿಎಸ್‌ಪಿ–3054–2059/2025–26/5649/ ದಿನಾಂಕ : 17–03–2026

ಇ–ಟೆಂಡರ್ ಪ್ರಕಟಣೆ

ದಿನಾಂಕ: 17–03–2026ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ, ಕಾಮಗಾರಿಗಳ ಇಂಡೆಂಟ್ ಸಂಖ್ಯೆ 34330, 34324, 34314, 34313, 34840, 34485, 34490, 34361, 34853, 33686, 34001, 34804, 34805, ಕ್ರಸಂ.14, 34315, 34909, 34501, 34358, 34577, 34587, 34404, 34002, 34807, 34000 ಮತ್ತು 34475ರ ಕಾಮಗಾರಿಗಳಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **25–03–2026** (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬ್‌ಸೈಟ್ http://www.kppp.karnataka.gov.in ನ್ನು ಸಂಪರ್ಕಿಸಲು ಕೋರಲಾಗಿದೆ.

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಪಡಿಸಿದ ಗುತ್ತಿಗೆ ದಿನಾಂಕಗಳು ಬದಲಾದಲ್ಲಿ, ಮರು ಗುತ್ತಿಗೆ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಸಹಿ/– (ಎನ್.ಎನ್.ಪಾಟೀಲ) ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/821/2025–26

PUBLIC NOTICE

The General Public are hereby informed that, my client **Mr.Rajendra Prakash Pawar,** S/o Prakash Pawar and Mr.Habeeb Sufikhan S/o S.Abdul Rahim intend to purchase the immoveable properties morefully described in the schedule herebelow held by Shell India Markets Private Limited.In case any person/s, Banks, societies or any other financial institutions have got any claim or objection in respect of the schedule properties, they can lodge any claim in writing with necessary documents with under singed within 10 days from this date. No claim shall be considered after 10 days.

SCHEDULE

(Description of the Properties)

Non-agricultural immovable properties held on warg right situated in Derebail Village of Mangalore City within the limits of Mangalore City Corporation, within the registration sub-district of Mangalore City, District of Dakshina Kannada and comprised in:

Item No.	S.No	KISSAM	EXTENT (A-C)	Portion
1	31-5C	Converted	0-11	Whole
2	31-6	Converted	0-12	Whole
3	31-8C	Converted	0-09	Whole
4	31-10	Converted	0-08.45	Western
5	100-06	Converted	0-02.25	Northern
6	100-3	Converted	0-19.51	Whole
7	31-2A3	Converted	0-02	Eastern
8	31-2A3	Converted	0-06	Western

Sd/- Shamith Prasad H.T
Advocate, No.20 S-3, Second Floor, Empire Mall, M.G. Road, Mangalore. Mobile No.9448150882.

ಪುತ್ತೂರು ಮಾರುಕಟ್ಟೆ ಧಾರಣೆ

18-03-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	: 260 - 460	ಹಳೆ ಕರಿಗೋಟು	: 230 - 260
ಚೋಲ್ ಅಡಿಕೆ	: 505 - 530	ಹಸಿ ಕೊಕ್ಕೋ	: 70 - 100
ಡಬಲ್ ಚೋಲ್	: 505 - 530	ಒಣ ಕೊಕ್ಕೋ	: 270 - 300
ಹೊಸ ಪಟೋರ	: 340 - 390	**ಕಾಳುಮೆಣಸು ಧಾರಣೆ**	
ಹಳೆ ಪಟೋರ	: 380 - 410	ಕಾಳುಮೆಣಸು	: 465 - 665
ಹೊಸ ಉಳ್ಳಿ	: 115 - 290	**ರಬ್ಬರ್ ಧಾರಣೆ : ಗ್ರೇಡ್**	
ಹಳೆ ಉಳ್ಳಿ	: 105 - 290	ಆರ್‌ಎಸ್‌ಎಸ್ 1	- 213.00
ಹೊಸ ಕೋಕಾ	: 325 - 345	ಆರ್‌ಎಸ್‌ಎಸ್ 2	- 197.00
ಹಳೆ ಕೋಕಾ	: 330 - 350	ಸ್ಕ್ರಾಪ್ 1	- 130.00
ಹೊಸ ಕರಿಗೋಟು	: 230 - 260	ಸ್ಕ್ರಾಪ್ 2	- 128.00

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸುವರ್ಣ ಕೇರಳಂ (ನಂ.SK-44) ಡ್ರಾ ಮಾರ್ಚ್ 18ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
DU 925315 (IRINJALAKKUDA)

Consolation Prize Rs.5,000/-
DN 925315 DO 925315 DP 925315 DR 925315
DS 925315 DT 925315 DV 925315 DW 925315
DX 925315 DY 925315 DZ 925315

2nd Prize Rs.30,00,000/- [30 Lakhs]
DS 877432 (MALAPPURAM)

3rd Prize Rs.5,00,000/- [5 Lakhs]
DS 561886 (KANNUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0342 0807 1362 1878 2467 2897 3350 3499 3682 4337 4357 4412 4587 4992 5760 6703 7094 8712 9108

5th Prize Rs.2,000/-
4196 4423 6319 6428 7725 8051

6th Prize Rs.1,000/-
0078 0089 0238 1112 2012 2018 2975 3161 4668 4909 5021 5769 5919 6303 6459 6620 7253 7356 8048 8162 8874 9093 9456 9665 9897

7th Prize Rs.500/-
0065 0131 0366 0517 0555 0819 1004 1192 1377 1390 1515 1631 1655 1764 1864 2069 2314 2444 2712 2956 2974 3010 3167 3172 3261 3283 3292 3462 3629 3724 3958 4374 4502 4606 4646 4762 4768 4776 5393 5568 5834 5897 5927 5937 5976 6149 6418 6824 6855 6966 7069 7100 7105 7183 7722 7759 8005 8070 8127 8197 8354 8418 8685 8715 8743 8777 8828 8915 9110 9381 9388 9420 9472 9679 9774 9792

8th Prize Rs.200/-
0195 0336 0419 0719 0783 1091 1177 1234 1255 1281 1304 1617 1657 1780 1796 1802 1872 1899 2051 2588 2690 2968 2981 3119 3156 3190 3274 3417 3426 3434 3450 3696 3701 3760 3844 3920 4018 4169 4236 4260 4428 4659 4790 4839 4989 5205 5280 5499 5580 5663 5670 5707 6070 6154 6333 6550 6627 6884 6910 6927 6932 7193 7208 7222 7226 7257 7307 7860 7996 8053 8096 8129 8175 8228 8270 8314 8343 8468 8471 8531 8658 8708 8830 9045 9236 9289 9429 9440 9510 9542 9640 9650 9745 9800 9941 9969

9th Prize Rs.100/-
0015 0123 0244 0266 0367 0438 0785 0825 0955 0994 1030 1186 1274 1333 1388 1454 1468 1579 1580 1863 1898 1971 2005 2157 2210 2240 2290 2303 2335 2463 2501 2555 2565 2641 2680 2818 2867 2881 2953 3063 3067 3128 3169 3199 3316 3563 3591 3650 3925 4049 4302 4303 4388 4392 4406 4414 4512 4539 4622 4658 4741 4760 4765 4849 5008 5109 5219 5267 5295 5344 5411 5429 5515 5522 5734 5743 5756 5843 5871 6037 6043 6259 6352 6361 6366 6382 6473 6537 6677 6762 6789 6837 6852 6890 6891 6914 7113 7254 7263 7358 7385 7409 7534 7756 7766 7780 7796 7818 7825 7844 7894 7910 8006 8014 8150 8259 8301 8415 8558 8595 8621 8801 8819 8841 8843 8862 8864 8903 9122 9224 9257 9316 9390 9431 9515 9685 9866 9997

ಮಾನ್ಯ 4ನೇ ಜೆ.ಎಮ್.ಎಫ್.ಸಿ.
ನ್ಯಾಯಾಲಯ ಮಂಗಳೂರು, ದ.ಕ.
ಕ್ರಿ.ಮಿಸ್ ಕೇಸ್ ನಂ 253/2026

ಇವರೊಳಗೆ,
ವಿನೋದ್ ಭಂಡಾರಿ
...ಅರ್ಜಿದಾರರು
ಮತ್ತು
ಜನನ ಮತ್ತು ಮರಣ ನೋಂದಾಣಾಧಿಕಾರಿಗಳು, ತಹಶೀಲ್ದಾರರು, ಮಂಗಳೂರು ತಾಲೂಕು,
...ಪ್ರತಿವಾದಿಗಳು

ಸಾರ್ವಜನಿಕ ಪ್ರಕಟಣೆ

ಈ ಮೇಲಿನ ಪ್ರಕರಣವನ್ನು ಮಾನ್ಯ ನ್ಯಾಯಾಲಯದಲ್ಲಿ ಅರ್ಜಿದಾರರ ಅಕ್ಕನಾದ **ಕುಮಾರಿ ಅಮಿತರವರು ದಿನಾಂಕ 07.03.1981** ರಂದು ಅಡ್ಯಾರ್ ಮಂಗಳೂರು ಎಂಬಲ್ಲಿ ಮೃತಪಟ್ಟಿರುತ್ತಾರೆಂದು, ಈ ಬಾಬ್ತು ಪ್ರತಿವಾದಿಯ ಕಾರ್ಯಕ್ಕೊಳಪಟ್ಟು ಮರಣ ನೋಂದಣಿ ವಹಿಯಲ್ಲಿ ತಡದಾಖಲು ಮಾಡುವರೇ ವಿಳಂಬ ವಿನಾಯಿತಿ ಕೋರಿ ಮಾನ್ಯ ನ್ಯಾಯಲಯಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ಸದ್ರಿ ಪ್ರಕರಣವು **ದಿನಾಂಕ 15–04–2026ರಂದು** ಹಾಜರಾತಿಗಿದ್ದು, ಆ ದಿನ ಯಾರದಾದರೂ ತಕರಾರುಗಳಿದ್ದಲ್ಲಿ ನ್ಯಾಯಾಲಯದ ಮುಂದೆ ವೈಯುಕ್ತಿಕವಾಗಿ ಅಥವಾ ತಮ್ಮ ವಕೀಲರ ಮುಖಾಂತರ ಈ ನ್ಯಾಯಾಲಯದ ಮುಂದೆ ಪೂರ್ವಾಹ್ನ 11.00 ಗಂಟೆಗೆ ಹಾಜರಾಗತಕ್ಕದು.

ನನ್ನ ಸಹಿ ಮತ್ತು ನ್ಯಾಯಾಲಯ ಮೊಹರಿನೊಂದಿಗೆ 16ನೇ ಮಾರ್ಚ್ 2026 ರಂದು ನೀಡಲಾಗಿದೆ.

(ನ್ಯಾಯಲಯದ ಆದೇಶದ ಮೇರೆಗೆ)
ಸಹಿ/– ಮುಖ್ಯ ಲಿಪಿಕಾಧಿಕಾರಿ,
4ನೇ ಜೆ.ಎಂ.ಎಫ್.ಸಿ.,
ನ್ಯಾಯಾಲಯ, ಮಂಗಳೂರು

IN THE COURT OF THE I ADDITIONAL DISTRICT JUDGE AT MANGALURU

COM. O.S.No. 33/2026

Between :
Karnataka Bank Limited ... **Plaintiff**
and
Mr. Mohith N and another ...**Defendants**

Defendant No. 1:
Mr. Mohith N.
S/o. B. Namdeva
Residing at: #3-3-123,
T.M.Compound,
Near Madhuvan Flat,
Bejai, Battagudda,
Mangaluru - 575 004.

Defendant No. 2:
Mrs. Yamini
W/o. Mohith N.
Residing at: #3-3-123,
T.M.Compound, Near Madhuvan Flat, Bejai, Battagudda,
Mangaluru - 575 004.

Please take notice, that the plaintiff has instituted a suit against you stands posted to for your appearance. If you fail to appear at 11 a.m. on **09.04.2026** the said date before the above said court either in person or through counsel, the same will be proceeded with by setting you exparte.

Given under my hand and seal of the court this the 17.03.2026.

(By the order of the Court
Chief Administrative Officer
District Court D.K., Mangaluru

(B. Guruprasad Shetty)
Advocate for Plaintiff
Mangaluru, 13.03.2026

ಕರ್ನಾಟಕ ಸರಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಲನಾಡು ಜಲಸಾರಿಗೆ ಇಲಾಖೆ)

ಕರ್ನಾಟಕ ಜಲಸಾರಿಗೆ ಮಂಡಳಿ

ಕಾರ್ಯನಿರ್ವಾಹಕ ಇಂಜಿನಿಯರ‌ರ ಕಛೇರಿ, ಬಂದರು ಮತ್ತು ಮೀನುಗಾರಿಕಾ ವಿಭಾಗ,
ಟಿಶ್ಯಾಮಿಲಿ ಹಾಲ್, 2ನೇ ಮಹಡಿ, ಅಂಬಲಪಾಡಿ, ಉಡುಪಿ -576103
ದೂ.: 0820–2532961, email: pfdudupi@gmail.com

ಸಂ: ಕಾನಿಇಂ: ಬಂಮೀವಿ:ಉಡುಪಿ:ಪ್ರಕಟಣೆ:31/2025–26 ದಿನಾಂಕ:17–03–2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ ಇವರು ಪ್ರತ್ಯೇಕ ಮೊಹರಾದ ಟೆಂಡರುಗಳನ್ನು ಮ್ಯಾನುವಲ್ ಟೆಂಡರ್ ಮುಖಾಂತರ, KPWD ಇಲಾಖೆಯಲ್ಲಿ ಹೆಸರನ್ನು ನೋಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ "Ferry Service between Mangalore to Maravanthe" (ಟೆಂಡರಿಗಿಟ್ಟ ಮೊತ್ತ ರೂ.4.00 ಲಕ್ಷಗಳು) ಕಾಮಗಾರಿಗಳಿಗೆ ಟೆಂಡರ್ ಅಹ್ವಾನಿಸಲಾಗಿದೆ.

ಖಾಲಿ ಟೆಂಡರ್ ಫಾರಂಗಳನ್ನು ದಿ:24–03–2026 ರವರೆಗೆ ಕಛೇರಿ ಕೆಲಸದ ವೇಳೆಯಲ್ಲಿ ವಿತರಿಸಲಾಗುವುದು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ದಿ.23–03–2026 ರಂದು ಸಂಜೆ 5 ಗಂಟೆಯೊಳಗೆ ಸ್ವೀಕರಿಸಲಾಗುವುದು. ಹೆಚ್ಚಿನ ವಿವರಗಳನ್ನು ವಿಭಾಗೀಯ ಕಛೇರಿಯಲ್ಲಿ ಎಲ್ಲಾ ಕೆಲಸದ ದಿನಗಳಂದು ಕಛೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು.

ತಮ್ಮ ವಿಶ್ವಾಸಿ,
ಕಾರ್ಯನಿರ್ವಾಹಕ ಇಂಜಿನಿಯರ್
ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ

ಕರ್ನಾಟಕ ಸರ್ಕಾರ

ಪುರಸಭೆ ಕಾರ್ಯಾಲಯ, ಗಜೇಂದ್ರಗಡ

ಕ್ರಸಂ:ಪುಸಗ/ಕಾವಿ/15ನೇ ಹಣಕಾಸು/ಉಳಿಕೆ ಮೊತ್ತ/ವಹಿ/ವಿ.ಅ/2025–26 ದಿನಾಂಕ:17–03–2026

(ಅಲ್ಪಾವಧಿ ಟೆಂಡರ್ ಪ್ರಕಟಣೆ
ಇ–ಪ್ರೋಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ಪಾರದರ್ಶಕತೆ ಅಧಿನಿಯಮ–2000ರ ಪ್ರಕಾರ "ಇ–ಪ್ರೋಕ್ಯೂರ್‌ಮೆಂಟ್" ಪದ್ಧತಿಯಲ್ಲಿ ಗಜೇಂದ್ರಗಡ ಪುರಸಭೆಗೆ ಸರ್ಕಾರದಿಂದ ಬಿಡುಗಡೆಯಾದ ಸನ್–2023–24 ಮತ್ತು 2024–25ನೇ ಸಾಲಿನ 15ನೇ ಹಣಕಾಸು ಯೋಜನೆಯ ಉಳಿಕೆ ಅನುದಾನದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ **1) DMA/2025-26/BR/WORK_INDENT56546,** ರೂ. 9.33 ಲಕ್ಷ, **2) DMA/2025-26/BR/WORK_INDENT56543** ರೂ.14.15ಲಕ್ಷ, ಒಟ್ಟು 02 ಕಾಮಗಾರಿಗಳ ಮೊತ್ತ **ರೂ. 23.48 ಲಕ್ಷ**ಗಳ ಕಾಮಗಾರಿಗಳ ಅನುಷ್ಠಾನಕ್ಕಾಗಿ ಕೆ.ಡಬ್ಲ್ಯೂ–1 ದಸ್ತಾವೇಜ್‌ನಲ್ಲಿ ಇ–ಪ್ರೊಕ್ಯೂರವೆಂಟ್ ಪೋರ್ಟ್‌ಲ್‌ನಲ್ಲಿ ನೊಂದಾಯಿಸಲ್ಪಟ್ಟ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಅಹ್ವಾನಿಸಲಾಗಿದೆ. ಇ–ಪ್ರೋಕ್ಯೂರ್‌ಮೆಂಟ್ ದಾಖಲೆಗಳಿಗಾಗಿ **http://eproc.karnataka.gov.in** ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕವೇ ಟೆಂಡರ್ ಸಲ್ಲಿಸುವುದು.

1. ಇ–ಪ್ರ್ಯೋಕ್ಯೂರಮೆಂಟ್ ಪದ್ಧತಿಯಲ್ಲಿ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 25–03–2026 ಸಾಯಂಕಾಲ 4:30 ಗಂಟೆ**ಯ ವರೆಗೆ
2. ಟೆಂಡರ್‌ನ್ನು ತೆರೆಯುವ ದಿನಾಂಕ: **26–03–2026ರಂದು ಸಮಯ ಸಂಜೆ 4:30.00 ಗಂಟೆಗೆ.**

ನಿಗದಿಪಡಿಸಿದ ದಿನಾಂಕಗಳು ಒಂದು ವೇಳೆ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು. ಈ ಕಚೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲಾ. ಕಾಮಗಾರಿ ಇ.ಎಮ್.ಡಿ ಪೂರ್ಣಗೊಳಿಸುವ ಅವಧಿ, ಗುತ್ತಿಗೆದಾರರ ದರ್ಜೆ ಹಾಗೂ ಇನ್ನಿತರ ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಕಚೇರಿಯ ವೆಬ್‌ಸೈಟ್. **http://eproc.karnataka.gov.in** ಹಾಗೂ ಕಚೇರಿ ವೇಳೆಯಲ್ಲಿ ಸಂಬಂಧಿಸಿದ ಶಾಖೆಯಲ್ಲಿ ಮಾಹಿತಿಯನ್ನು ಪಡೆಯಬಹುದು. ಇ–ಪೋರ್ಟ್‌ಲ್‌ನ ಎಲ್ಲ ಷರತ್ತುಗಳು ಅನ್ವಯಿಸುತ್ತವೆ. ಹಾಗೂ ಟೆಂಡರ್ ಮಂಜೂರು ವ ನಾಮಂಜೂರ ಮಾಡುವ ಅಧಿಕಾರವನ್ನು ಪುರಸಭೆಯು ಕಾಯ್ದಿರಿಸಿಕೊಂಡಿದೆ.

ಸಹಿ/–ಮುಖ್ಯಾಧಿಕಾರಿ — **ಪುರಸಭೆ ಗಜೇಂದ್ರಗಡ**
ಸಹಿ/–ಆಡಳಿತಾಧಿಕಾರಿ — **ಪುರಸಭೆ ಗಜೇಂದ್ರಗಡ**

ವಾ.ಸಾ.ಇ/ಗದಗ/718/ದೇಶಪಾಂಡೆಪಬ್ಲಿಸಿಟಿ/2025–26

ನಗರಸಭಾ ಕಾರ್ಯಾಲಯ, ಉಡುಪಿ

ಸಂಖ್ಯೆ : ಉನಸ:ಬಿ4:ಸಿ.ಆರ್. :2025–26 ದಿನಾಂಕ : 18.03.2026

ಟೆಂಡರು ಪ್ರಕಟಣೆ

2025–26ನೇ ಸಾಲಿನ ನೀರು ಸರಬರಾಜು ಮತ್ತು ಒಳಚರಂಡಿ ನಿಧಿಯಡಿ ಈ ಕೆಳಗಿನ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಂದ Standard Bid Document K.W.-1 & K.W.-2 ರ ನಿಯಮ ನಿಬಂಧನೆಗೊಳಪಟ್ಟು(ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವಂತೆ) e-procurement ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ https://kppp.karntaka.gov.in ನಿಂದ ಪಡೆದುಕೊಳ್ಳಬಹುದು.

1) ತುಂಬಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 01.04.2026 ಸಂಜೆ 5.00 ಗಂಟೆಗೆ. 2) ಸ್ವೀಕರಿಸಲಾದ ಟೆಂಡರುಗಳನ್ನು ತೆರೆಯುವ ದಿನಾಂಕ: 02.04.2026 ಸಂಜೆ 5.01 ಗಂಟೆಗೆ

ಕ್ರ.ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ	ಇ.ಎಂ.ಡಿ	ಕಾಮಗಾರಿ ಪೂರ್ತಿಗೊಳಿಸುವ ಅವಧಿ
1	1 DMA/2025-26/WS/WORK_INDENT 56560	495000.00	12375.00	2 ತಿಂಗಳು
2	2 DMA/2025-26/OW/WORK_INDENT56422	3690000.00	73800.00	2 ತಿಂಗಳು
3	3 DMA/2025-26/OW/WORK_INDENT56423	480000.00	12000.00	2 ತಿಂಗಳು

ಸಹಿ/– ಪೌರಾಯುಕ್ತರು
ಉಡುಪಿ ನಗರಸಭೆ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)

ಪತ್ರ ಸಂಖ್ಯೆ ನಂ. ಎಚ್‌ಡಿಎಮ್‌ಸಿ/61/12/2025–26 ದಿನಾಂಕ: 17–03–2026

ಅಲ್ಪಾವಧಿ / ಇ–ಟೆಂಡರ್ ಅಧಿಸೂಚನೆ

ಉಲ್ಲೇಖ : ಜಾಹಿರಾತು ನಂ:–1267 ದಿನಾಂಕ:– 20–02–2026

ಹುಬ್ಬಳ್ಳಿ–ಧಾರವಾಡ ಮಹಾನಗರ ಸನ್ 2025–26ನೇ ಸಾಲಿನ ವಾರ್ಡ ವಾರು ಅನುದಾನ ಹಾಗೂ ಸನ್ 2025–26ನೇ ಸಾಲಿನ 15ನೇ ಹಣಕಾಸು ಯೋಜನೆ ಅಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999–2000ರ ಪ್ರಕಾರ ಆ್ಯಕ್ಟ್ 2000 ನಿಯಮದನ್ವಯ PWD ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಪರಿಶಿಷ್ಟ ಜಾತಿ **(SC)** ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 1) ಇಂಡೆಂಟ್ ನಂ–56542 ರೂ. 35.00ಲಕ್ಷ
ಪರಿಶಿಷ್ಟ ಪಂಗಡದ **(ST)** ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 2) ಇಂಡೆಂಟ್ ನಂ–55934 ರೂ. 3.92ಲಕ್ಷ
(CAT-1) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 3) ಇಂಡೆಂಟ್ ನಂ–56095 ರೂ. 4.85ಲಕ್ಷ
(CAT-2A) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 4) ಇಂಡೆಂಟ್ ನಂ–56539 ರೂ. 20.00ಲಕ್ಷ
ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 5) ಇಂಡೆಂಟ್ ನಂ–55933 ರೂ. 11.00ಲಕ್ಷ, 6) ಇಂಡೆಂಟ್ ನಂ–49820 ರೂ. 5.00ಲಕ್ಷ, 7) ಇಂಡೆಂಟ್ ನಂ–55902 ರೂ. 20.53ಲಕ್ಷ, 8) ಇಂಡೆಂಟ್ ನಂ–56550 ರೂ. 16.50ಲಕ್ಷ, 9) ಇಂಡೆಂಟ್ ನಂ–56552 ರೂ. 22.00ಲಕ್ಷ, 10) ಇಂಡೆಂಟ್ ನಂ–55935 ರೂ. 9.50ಲಕ್ಷ

ಮರು ಕರೆ ಕಾಮಗಾರಿ

(CAT-2A) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 11) ಇಂಡೆಂಟ್ ನಂ–55394 ರೂ. 20.00ಲಕ್ಷ (2ನೇ ಕರೆ)
ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 12) ಇಂಡೆಂಟ್ ನಂ–53042 ರೂ. 10.00ಲಕ್ಷ (3ನೇ ಕರೆ), 13) ಇಂಡೆಂಟ್ ನಂ–53039 ರೂ. 24.00ಲಕ್ಷ (3ನೇ ಕರೆ), 14) ಇಂಡೆಂಟ್ ನಂ–44230 ರೂ. 8.95ಲಕ್ಷ (5ನೇ ಕರೆ), 15) ಇಂಡೆಂಟ್ ನಂ–46141 ರೂ. 5.00ಲಕ್ಷ (6ನೇ ಕರೆ), 16) ಇಂಡೆಂಟ್ ನಂ–37838 ರೂ. 4.00ಲಕ್ಷ (7ನೇ ಕರೆ), 17) ಇಂಡೆಂಟ್ ನಂ–44536 ರೂ. 6.45ಲಕ್ಷ (7ನೇ ಕರೆ) 18) ಇಂಡೆಂಟ್ ನಂ–46020 ರೂ. 18.00ಲಕ್ಷ (7ನೇ ಕರೆ), 19) ಇಂಡೆಂಟ್ ನಂ–45540 ರೂ. 17.60ಲಕ್ಷ (7ನೇ ಕರೆ), 20) ಇಂಡೆಂಟ್ ನಂ–45514 ರೂ. 8.20ಲಕ್ಷ (7ನೇ ಕರೆ), 21) ಇಂಡೆಂಟ್ ನಂ–44209 ರೂ. 3.75ಲಕ್ಷ (7ನೇ ಕರೆ), 22) ಇಂಡೆಂಟ್ ನಂ–40855 ರೂ. 5.23ಲಕ್ಷ (2ನೇ ಕರೆ), 23) ಇಂಡೆಂಟ್ ನಂ–44210 ರೂ. 4.10ಲಕ್ಷ (3ನೇ ಕರೆ), 24) ಇಂಡೆಂಟ್ ನಂ–52872 ರೂ. 15.00ಲಕ್ಷ (3ನೇ ಕರೆ), 25) ಇಂಡೆಂಟ್ ನಂ–52387 ರೂ. 3.10ಲಕ್ಷ (3ನೇ ಕರೆ), 26) ಇಂಡೆಂಟ್ ನಂ–53504 ರೂ. 7.70ಲಕ್ಷ (3ನೇ ಕರೆ), 27) ಇಂಡೆಂಟ್ ನಂ–53963 ರೂ. 6.90ಲಕ್ಷ (3ನೇ ಕರೆ), 28) ಇಂಡೆಂಟ್ ನಂ–54176 ರೂ. 10.00ಲಕ್ಷ (3ನೇ ಕರೆ), 29) ಇಂಡೆಂಟ್ ನಂ–54259 ರೂ. 12.31ಲಕ್ಷ (3ನೇ ಕರೆ), 30) ಇಂಡೆಂಟ್ ನಂ–52870 ರೂ. 4.13ಲಕ್ಷ (3ನೇ ಕರೆ), 31) ಇಂಡೆಂಟ್ ನಂ–52391 ರೂ. 13.25ಲಕ್ಷ (3ನೇ ಕರೆ), 32) ಇಂಡೆಂಟ್ ನಂ–52868 ರೂ. 8.60ಲಕ್ಷ (3ನೇ ಕರೆ), 33) ಇಂಡೆಂಟ್ ನಂ–54260 ರೂ. 7.80ಲಕ್ಷ (3ನೇ ಕರೆ), 34) ಇಂಡೆಂಟ್ ನಂ–52389 ರೂ. 6.00ಲಕ್ಷ (3ನೇ ಕರೆ), 35) ಇಂಡೆಂಟ್ ನಂ–53982 ರೂ. 7.00ಲಕ್ಷ (3ನೇ ಕರೆ), 36) ಇಂಡೆಂಟ್ ನಂ–53984 ರೂ. 2.35ಲಕ್ಷ (3ನೇ ಕರೆ). 37) ಇಂಡೆಂಟ್ ನಂ–42614 ರೂ. 130.80ಲಕ್ಷ (2ನೇ ಕರೆ).

ಇ.ಎಂ.ಡಿ, ಕಾಮಗಾರಿ ಅವಧಿ ಹಾಗೂ ಇತರ ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಇವರ ಕಚೇರಿಯ ಕೆಲಸದ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ. ಕಚೇರಿಯ ದೂರವಾಣಿ ಸಂಖ್ಯೆ: **0836:2213834**ನ್ನು ಸಂಪರ್ಕಿಸಬಹುದಾಗಿದೆ ಮತ್ತು ಅಂತರ್‌ಜಾಲದ ವೆಬ್‌ಸೈಟ್ ವಿಳಾಸ : **kppp.karnataka.gov.in** ರಲ್ಲಿ ಪಡೆಯಬಹುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ **ದಿನಾಂಕ: 23–03–2026** ಪಡೆಯಬಹುದಾಗಿದೆ.

ಕ್ರ ಸಂ 01, 10 ರಿಂದ 21 ಹಾಗೂ 37ರ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:02–04–2026 ರಂದು ಸಾಯಂಕಾಲ 4.00 ಗಂಟೆಯವರೆಗೆ
ಕ್ರ ಸಂ 01, 10 ರಿಂದ 21 ಹಾಗೂ 37ರ ಟೆಂಡರ್ ತೆರೆಯುವ ದಿನಾಂಕ:04–04–2026 ಸಾಯಂಕಾಲ 4.30 ಗಂಟೆಯ ನಂತರ ತೆರೆಯಲಾಗುವುದು
ಕ್ರ ಸಂ 37 ಕಾಮಗಾರಿಯ ಆರ್ಥಿಕ ಬಿಡ್ ತೆರೆಯುವ ದಿನಾಂಕ: 08–04–2026 ರಂದು ತೆರೆಯಲಾಗುವುದು. ಇಲ್ಲದಿದ್ದಲ್ಲಿ ನಂತರದ ಅನುಕೂಲಕರ ದಿನಗಳಲ್ಲಿ ತೆರೆಯಲಾಗುವುದು.
ಕ್ರ ಸಂ 02 ರಿಂದ 09, 22 ರಿಂದ 36ರ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:06–04–2026 ರಂದು ಸಾಯಂಕಾಲ 4.00 ಗಂಟೆಯವರೆಗೆ
ಕ್ರ ಸಂ 02 ರಿಂದ 09, 22 ರಿಂದ 36ರ ಟೆಂಡರ್ ತೆರೆಯುವ ದಿನಾಂಕ:07–04–2026 ಸಾಯಂಕಾಲ 4.30 ಗಂಟೆಯ ನಂತರ ತೆರೆಯಲಾಗುವುದು.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ

ವಾ.ಸಾ.ಇ/ಧಾರವಾಡ/1370/ದೇಶಪಾಂಡೆಪಬ್ಲಿಸಿಟಿ/2025–26

ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ

ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಬಳ್ಳಾಪುರ

ಕೆ.ಪಿ.ಪಿ ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 17/2025–26 ದಿನಾಂಕ: 27.02.2026 ಕೆ.ಪಿ.ಪಿ ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂಖ್ಯೆ: 17(1)/2025–26 ದಿನಾಂಕ: 13.03.2026

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ– III & IV ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ2000ರ ಪ್ರಕಾರ ಐಟಂವಾರು ಇ–ಪ್ರಕ್ಯೂರ್‌ಮೆಂಟ್ ದ್ವಿ–ಲಕೋಟೆ ಪದ್ಧತಿಯಲ್ಲಿ (Double Cover System) ಚಿಕ್ಕಬಳ್ಳಾಪುರ ವಿಭಾಗ ವ್ಯಾಪ್ತಿಯ 2025–26 ನೇ ಸಾಲಿನ CMIDP ಲೆಕ್ಕಶೀರ್ಷಿಕೆಯಡಿ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅಧಿಕೃತ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು ಕೆ.ಪಿ.ಪಿ ಇ–ಪ್ರಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ **https://eproc.karnataka.gov.in** ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. (1) E-procurement ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿ ಗಳನ್ನು ವೆಬ್ ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ **ದಿನಾಂಕ: 26.03.2026** ರ **16.30 ರವರೆಗೆ** (2) ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 27.03.2026** ರಂದು **16.35 ನಂತರ** (3) ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 30.03.2026** ರಂದು **ಬೆಳಿಗ್ಗೆ 11.30 ನಂತರ (ಸಾಧ್ಯವಾದಲ್ಲಿ)** (4) ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ): e- Procurement ನಿಯಮಾನುಸಾರ

ಕ್ರ. ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ (ರೂ. ಗಳಲ್ಲಿ)	ಕಾಲಮಿತಿ ಮಳೆಗಾಲ ಸೇರಿ
1	Improvements to road from Dibburahalli-Shidlaghatta main road to Tatahalli village Shidlaghatta taluk. Chikkaballapur district (VR 261) **(RDPR/2025-26/RD/WORK_INDENT25318)**	168.09	252135.00	9 ತಿಂಗಳು
2	Improvements to road from fromT. Gollahalli-KY Road Via Tuluvanur chainage 0.00 Km to 3.40 Km Chintamani Taluk Chikkaballapur District. (**RDPR/2025-26/RD/WORK_INDENT25150)**	169.13	253695.00	9 ತಿಂಗಳು
3	Improvements to road from Pendlivarahalli cross to Kambarahalli Doddagummanahalli road to the border. Shidlaghatta taluk. Chikkaballapur District. (**RDPR/2025-26/RD/WORK_INDENT25320)**	117.63	200000.00	6 ತಿಂಗಳು
4	Improvements to road from From Muduganakunte Cross via Jakkenahalli to Kadaburu village in Gowribidanur Taluk Chikkaballapur District (**RDPR/2025-26/RD/WORK_INDENT25322)**	168.19	252285.00	9 ತಿಂಗಳು
5	Improvements to road from Kadabur village to Saragondlu village in Gowribidanur Taluk Chikkaballapur District (**RDPR/2025-26/RD/WORK_INDENT25323)**	99.80	199600.00	6 ತಿಂಗಳು
6	Improvements to road from NH 234 road via Bhaktarahalli village to Colonyin Gowribidanur Taluk Chikkaballapur District (**RDPR/2025-26/RD/WORK_INDENT25324)**	125.14	200000.00	6 ತಿಂಗಳು
7	Improvements to road from Huduguru village to Virupasandra Lakshmipur road via fishermens houses in Gowribidanur Taluk Chikkaballapur District (**RDPR/2025-26/RD/WORK_INDENT25326)**	100.51	200000.00	6 ತಿಂಗಳು
	Total	**948.49**		

ಸಹಿ/– ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:496/ಕೆಎಸ್‌ಎಂಸಿಎ/2025–26


ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾತಿ ಅಧಿಕಾರಿ, ಮಂಗಳೂರು ಉಪವಿಭಾಗ, ಮಂಗಳೂರು

ಇವರ ನ್ಯಾಯಾಲಯದಲ್ಲಿ

ಸ್ಥಿರಾಸ್ತಿಯ ಬಹಿರಂಗ ಹರಾಜು ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ(ನಿ.), ಪಡೀಲ್, ಮಂಗಳೂರು, ಇವರಿಗೆ ಬರತಕ್ಕ ಸಾಲದ ಬಾಬ್ತು ಸದ್ರಿ ಕೋರ್ಟಿನ ಆದೇಶದ ಪ್ರಕಾರ ಸಾಲಗಾರರು ಅಡವು ಮಾಡಿದ ಸ್ಥಿರಾಸ್ಥಿಗಳನ್ನು ಸಹಕಾರ ಸಂಘಗಳ ಕಾಯಿದೆ ಮತ್ತು ಕಾನೂನಿಗನುಸಾರವಾಗಿ **ದಿನಾಂಕ 25.03.2026** ರ ಬುಧವಾರದಂದು **ಪೂರ್ವಾಹ್ನ 11–00 ಗಂಟೆಗೆ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ** (ನಿ.), ಇದರ **ಪ್ರಧಾನ ಕಛೇರಿ, ಆತ್ಮಶಕ್ತಿ ಸೌಧ, ಬೈರಾಡಿಕೆರೆ ಹತ್ತಿರ, ಪಡೀಲ್ ಮಂಗಳೂರು, ದ.ಕ**–7 ಇಲ್ಲಿ ಬಹಿರಂಗ ಏಲಂ ಮಾಡಲಾಗುವುದು ಆಸಕ್ತಿ ಉಳ್ಳವರು ಈ ಏಲಂನಲ್ಲಿ ಭಾಗವಹಿಸಬಹುದು. ಸದ್ರಿ ಹರಾಜನ್ನು ಯಾವುದೇ ಕಾರಣ ನೀಡದೇ ಮುಂದೂಡುವ ಯಾ ರದ್ದುಗೊಳಿಸುವ ಹಕ್ಕನ್ನು ಮಾರಾಟಾಧಿಕಾರಿಯವರು ಕಾಯ್ದಿರಿಸಿಕೊಂಡಿರುವರು

ಹರಾಜು ಮಾಡಲ್ಪಡುವ ಸ್ಥಿರಾಸ್ತಿಯ ವಿವರಗಳು

ಕ್ರ. ಸಂ.	ಸಾಲಗಾರರ ಹೆಸರು ಮತ್ತು ಸದಸ್ಯ ಸಂಖ್ಯೆ ಹಾಗೂ ವಿಳಾಸ	ಆಸ್ತಿ ಇರುವ ಗ್ರಾಮ ಸರ್ವೆ ನಂ. ಮತ್ತು ವಿಸ್ತೀರ್ಣ	ಸಿ.ಇ.ಪಿ. ನಂ. ಮತ್ತು ವಸೂಲಾತಿಗೆ ಬಾಕಿ ಇರುವ ಮೊತ್ತ
1	1. **ಸದಸ್ಯತ್ವ ಸಂಖ್ಯೆ: ಎ02816** ಶ್ರೀ ಉಮ್ಮರ್ ಕುನ್ಹಿ S/o ಮೊೖದಿನಬ್ಬ #4–71ಬಿ, ಮಲಾರ್ ಕೋಡಿ ಮನೆ, ಹರೇಕಳ ಗ್ರಾಮ ಮತ್ತು ಅಂಚೆ, ಮಂಗಳೂರು, ದ.ಕ–574199  2. **ಸದಸ್ಯತ್ವ ಸಂಖ್ಯೆ: ಎ02817** ಶ್ರೀ ರಿಯಾಜ್ S/o ಉಮ್ಮರ್ ಕುನ್ಹಿ #4–71ಬಿ, ಮಲಾರ್ ಕೋಡಿ ಮನೆ, ಹರೇಕಳ ಗ್ರಾಮ ಮತ್ತು ಅಂಚೆ, ಮಂಗಳೂರು, ದ.ಕ–574199  3. **ಸದಸ್ಯತ್ವ ಸಂಖ್ಯೆ: ಎ02818** ಶ್ರೀ ಹನೀಫ್ ಎನ್.ಪಿ.ಎಮ್ S/o ಬಿ.ಕೆ.ಕುನ್ಹಮೋನು, #2–100, ಮಲ್ಲೂರು ಬೋಳಿ ಹೌಸ್, ಮಲ್ಲೂರು ಗ್ರಾಮ ಮತ್ತು ಅಂಚೆ, ಮಂಗಳೂರು, ದ.ಕ–575029 	ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ತಾಲೂಕಿನ ಹರೇಕಳ ಗ್ರಾಮದ ಸರ್ವೆ ನಂ. 80–6B (ಆರ್‌ಟಿಸಿ ಪ್ರಕಾರ 80/23) ರಲ್ಲಿ 0–10 ಸೆಂಟ್ಸ್ ಜಾಗ ಮತ್ತು ಇದರಲ್ಲಿರುವ ಮನೆ ಮತ್ತು ಸರ್ವ ಸೊತ್ತುಗಳು	ಸಿ.ಇ.ಪಿ. ನಂ. **52/2020–21**ರಲ್ಲಿ ಸಾಲ ಬಾಕಿ ರೂ. **17,53,052/– (ರೂಪಾಯಿ ಹದಿನೇಳು ಲಕ್ಷದ ಐವತ್ತಮೂರು ಸಾವಿರದ ಐವತ್ತೆರಡು ಮಾತ್ರ)** (ದಿನಾಂಕ 04.02.2026 ರ ವರೆಗೆ) + ಮುಂದುವರಿದ ಬಡ್ಡಿ ಮತ್ತು ಇತರೆ ಖರ್ಚು
2	1. **ಸದಸ್ಯ ಸಂಖ್ಯೆ: ಎ03224** ಶ್ರೀ ಮಹಾಬಲ ದಾಸ್ ಬಿನ್. ವಾಮನ್ ದಾಸ್, ಡೋರ್ ನಂ: 8–33 ಕಾಜಿಲ ಕೋಡಿ ಮನೆ, ಮಳಲಿ ಪೋಸ್ಟ್ ತೆಂಕಉಳಪಾಡಿ, ಮಳಲಿ, ಪಂಚಾಯತ್, ದ.ಕ. ಜಿಲ್ಲೆ.–574151  2. **ಸದಸ್ಯ ಸಂಖ್ಯೆ: ಸಿ00684** ಶ್ರೀ ಅಶೋಕ್ ದಾಸ್ ಬಿನ್.ವಿಶ್ವನಾಥ್ ದಾಸ್, ಡೋರ್ ನಂ. 4–102, ಗುಂಡಾಲ ಮನೆ, ಬಡಗ ಬೆಳ್ಳೂರು, ಬಂಟ್ವಾಳ, ದ.ಕ. ಜಿಲ್ಲೆ–574219  3. ಸದಸ್ಯ ಸಂಖ್ಯೆ:ಸಿ00685 ಶ್ರೀ ಪ್ರೀತಂ ಸಿಕ್ವೇರ ಬಿನ್. ಜೋನ್ ಬ್ಯಾಪ್ಟಿಸ್ಟ್ ಸಿಕ್ವೇರ ಡೋರ್ ನಂ.3–103/0, ವಾಮಂಜೂರು ಚರ್ಚ್ ಎದುರು ತಿರುವೈಲು ಗ್ರಾಮ, ಮಂಗಳೂರು, ದ.ಕ. ಜಿಲ್ಲೆ.–575028 	ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ತೆಂಕ ಉಳಿಪಾಡಿ ಗ್ರಾಮದ ಸರ್ವೆ ನಂ.78–1C ರಲ್ಲಿ 0–19.00 ಸೆಂಟ್ಸ್ ಭೂ ಪರಿವರ್ತಿತ ಜಾಗ ಮತ್ತು ಇದರಲ್ಲಿರುವ ಮನೆ, ಮಾಮೂಲು ದಾರಿ ಹಕ್ಕು, ರಸ್ತೆ, ನೀರು ಇತ್ಯಾದಿ ಹಾಗೂ ಇದರಲ್ಲಿ ಒಳಗೊಂಡಿರುವ ಸರ್ವ ಸೊತ್ತುಗಳು	ಸಿ.ಇ.ಪಿ. ನಂ. **469/2023–24** ರಲ್ಲಿ ಸಾಲ ಬಾಕಿ ರೂ. **33,06,459/– (ರೂಪಾಯಿ ಮೂವತ್ತಮೂರು ಲಕ್ಷದ ಆರು ಸಾವಿರದ ನಾಲ್ಕುನೂರ ಐವತ್ತೊಂಭತ್ತು ಮಾತ್ರ)** + ಮುಂದುವರಿದ ಬಡ್ಡಿ ಮತ್ತು ಇತರೆ ಖರ್ಚು (ದಿನಾಂಕ 03.02.2026 ರವರೆಗೆ) + ಮುಂದುವರಿದ ಬಡ್ಡಿ ಮತ್ತು ಇತರೆ ಖರ್ಚು

ವಿ.ಸೂ: 1. ಏಲಂನಲ್ಲಿ ಅತ್ಯಧಿಕ ಬಿಡ್ಡುದಾರರಿಗೆ ಮಾರಾಟದ ವಾಡಿಕೆಯಲ್ಲಿರುವ ಶರ್ತಗಳಿಗೆ ಒಳಪಟ್ಟು ಮಾರಾಟ ಮಾಡಲಾಗುವುದು.
2. ಏಲಂ ಆದ ತಕ್ಷಣ ಏಲಂ ಮೊಬಲಗಿನ 15% ಅಂಶ ಕೂಡಲೇ ಸಂಘಕ್ಕೆ ಪಾವತಿಸತಕ್ಕದ್ದು, ಉಳಿದ ಮೊಬಲಗನ್ನು 45 ದಿವಸಗಳೊಳಗಾಗಿ ಪಾವತಿಸತಕ್ಕದ್ದು ಜೊತೆಗೆ ಏಲಂ ಮೊತ್ತಕ್ಕೆ ಸಾಕಾಗುವಷ್ಟು ಮೊತ್ತದ ಸ್ಟಾಂಪ್ ಹಾಗೂ ನೋಂದಣಿ ಶುಲ್ಕ ಸರಕಾರಕ್ಕೆ ಪಾವತಿಸಿ, ಚಲನ್ ಪ್ರತಿಯನ್ನು ಸಲ್ಲಿಸತಕ್ಕದ್ದು.
3. ಏಲಂನಲ್ಲಿ ಭಾಗವಹಿಸುವವರು ರೂ. 1,000/– ಠೇವಣಿ ಪಾವತಿಸಿ ಭಾಗವಹಿಸತಕ್ಕದ್ದು.
4. ಆಸ್ತಿಯನ್ನು ಎಲ್ಲಿ ಹೇಗಿದೆಯೋ ಹಾಗೆಯೇ ಇದ್ದಂತೆ ಏಲಂ ಮಾಡಲಾಗುವುದು.
5. ಹೆಚ್ಚಿನ ವಿವರಗಳಿಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ (ನಿ.), ಪ್ರಧಾನ ಕಛೇರಿ ಪಡೀಲ್, ಮಂಗಳೂರು ಇವರನ್ನು ಸಂಪರ್ಕಿಸಬಹುದಾಗಿದೆ.

(ನ್ಯಾಯಾಲಯದ ಆದೇಶದ ಮೇರೆಗೆ)

ಸ್ಥಳ : ಮಂಗಳೂರು
ದಿನಾಂಕ : 17.03.2026

ಸಹಿ/–
ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ (ನಿ.), ಪಡೀಲ್, ಮಂಗಳೂರು

ಸಹಿ/–
ಮಾರಾಟಾಧಿಕಾರಿ
ಸಹಕಾರ ಸಂಘಗಳ ಸಹಾಯಕ ನಿಬಂಧಕರ ನ್ಯಾಯಾಲಯ, ಮಂಗಳೂರು

ಬಿಜೆಪಿ ಮಹಿಳಾ ಮೋರ್ಚಾದ ನೇತೃತ್ವದಲ್ಲಿ ಮಹಿಳಾ ದಿನಾಚರಣೆ



• **ಪುತ್ತೂರು:** ಬಿಜೆಪಿ ಪುತ್ತೂರು ಗ್ರಾಮಾಂತರ ಮಂಡಲದ ಮಹಿಳಾ ಮೋರ್ಚಾದ ನೇತೃತ್ವದಲ್ಲಿ ಮಹಿಳಾ ದಿನಾಚರಣೆಯನ್ನು ಉಪ್ಪಿನಂಗಡಿಯ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯದಲ್ಲಿ ಆಚರಿಸಲಾಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ನಿವೃತ್ತ ಶಿಕ್ಷಕಿ ದುರ್ಗಾಮಣಿ ಮಾತನಾಡಿ, ಮಹಿಳಾ ಜೀವನ ಪದ್ಧತಿ ಹಾಗೂ ರಕ್ಷಣೆಯ ಕುರಿತು ಮಾಹಿತಿ ನೀಡಿದರು. ಪರಿಸರ ಸಂರಕ್ಷಣೆ ವಿಷಯದಲ್ಲಿ ರಾಜ್ಯ ಮಟ್ಟದಲ್ಲಿ ಭಾಷಣ ಮಾಡಿ ಪ್ರಶಸ್ತಿ ಪಡೆದಿರುವ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿನಿ ನಿವೇದಿತಾ ಅವರನ್ನು ಗೌರವಿಸಲಾಯಿತು. ಈ ಸಂದರ್ಭ ಮಹಿಳಾ ಮೋರ್ಚಾ ಅಧ್ಯಕ್ಷೆ ಯಶೋಧ ಕೆ. ಗೌಡ, ಉಪ್ಪಿನಂಗಡಿ ಪಂಚಾಯತ್ ಮಾಜಿ ಅಧ್ಯಕ್ಷೆ ಉಷಾ ಮುಳಿಯ, ತಾಲೂಕು ಪಂಚಾಯತ್ ಮಾಜಿ ಸದಸ್ಯೆ ಸುಜಾತ ಕೃಷ್ಣ ಉಪ್ಪಿನಂಗಡಿ ಪಂಚಾಯತ್ ಸದಸ್ಯರಾದ ಶೋಭಾ, ವೀಣಾ, ಲತಾ ಹಾಗೂ ಖುಷಿತ ಉಪಸ್ಥಿತರಿದ್ದರು.

ಪಿಲಿಕುಳ: 7 ಮರಿಗಳ ತಾಯಿಯಾದ ಗೀತಾ!

• **ಮಂಗಳೂರು:** ಜನವರಿ ತಿಂಗಳಲ್ಲಿ ಪಿಲಿಕುಳ ಜೈವಿಕಉದ್ಯಾನವನದಲ್ಲಿ ಭಾರತೀಯತೋಳ ಗೀತಾ ಒಟ್ಟು ಏಳು ಮರಿಗಳಿಗೆ (ನಾಲ್ಕು ಗಂಡು ಮತ್ತು ಮೂರು ಹೆಣ್ಣು) ಜನ್ಮ ನೀಡಿದೆ. 3 ವರ್ಷಗಳಿಂದ ಪಿಲಿಕುಳ ಜೈವಿಕ ಉದ್ಯಾನವನದಲ್ಲಿ ಭಾರತೀಯ ತೋಳಗಳನ್ನು ಇರಿಸಲಾಗಿದ್ದು, ಭಾರತೀಯ ತೋಳಗಳ ಮೊದಲ ಯಶಸ್ವಿ ಸಂತಾನೋತ್ಪತ್ತಿ ಇದಾಗಿದ್ದು, ಉದ್ಯಾನವನದ ಸಂರಕ್ಷಣೆ ಸೇರಿಸಿಡಿಯಲಾದ ಸಂತಾನೋತ್ಪತ್ತಿ ಪ್ರಯತ್ನಗಳಲ್ಲಿ ಇದು ಒಂದು ಪ್ರಮುಖ ಮೈಲಿಗಲ್ಲಾಗಿದೆ.

ತಾಯಿ ತೋಳ ಮತ್ತು ಎಲ್ಲಾ ಏಳು ಮರಿಗಳು ಆರೋಗ್ಯವಾಗಿವೆ ಮತ್ತು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ ಮತ್ತು ಪಶುವೈದ್ಯರು ಮತ್ತು ಪ್ರಾಣಿ ಪಾಲಕರು ಅವುಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ಮರಿಗಳು ಈಗ ಆರೋಗ್ಯವಾಗಿ ಓಡಾಡುತ್ತಿದ್ದು, ಅವುಗಳನ್ನು ಸಂದರ್ಶಕರ ವೀಕ್ಷಣೆಗೆ ಮುಕ್ತಗೊಳಿಸಲಾಗಿದೆ.

ಮನೆ ಅಂಗಳಕ್ಕೆ ಬಂದ ಮೊಸಳೆ !

• **ಬಂಟ್ವಾಳ:** ನೇತ್ರಾವತಿ ನದಿ ತೀರದಲ್ಲಿರುವ ಮನೆಯ ಅಂಗಳಕ್ಕಾಗಮಿಸಿ ದಿಢೀರನೇ ಮುಖ್ಯ ಅತಿಥಿಯಾಗಿ ಬೃಹತ್ ಗಾತ್ರದ ಮೊಸಳೆಯೊಂದು ಮನೆಮಂದಿಯನ್ನು ಕೆಲಹೊತ್ತುಗಳ ಕಾಲ ಆತಂಕಕ್ಕೆ ತಳ್ಳಿದ ಘಟನೆ ನಡೆದಿದೆ.

ಬಂಟ್ವಾಳ ತಾಲೂಕಿನ ಪೂಪಾಡಿಕಟ್ಟೆ ನೆಕ್ಕಿಲಾರು ರಾಜೇಶ್ ನಾಯಕ್ ಎಂಬವರ ಮನೆಯ ಅಂಗಳದಲ್ಲಿ ಬುಧವಾರ ಮುಂಜಾನೆಯ ಹೊತ್ತಿಗೆ ಮೊಸಳೆ ಪ್ರತ್ಯಕ್ಷವಾಗಿದೆ. ನೇತ್ರಾವತಿ ನದಿ ತೀರದಿಂದ ಸುಮಾರು 200 ಮೀ.ದೂರದಲ್ಲಿ ಇವರ ಮನೆಯಿದ್ದು, ಮುಂಜಾನೆ ಸುಮಾರು 3 ಗಂಟೆ ಹೊತ್ತಿಗೆ ಮನೆಯ ಹೊರಗಡೆಯಿಂದ ಶಬ್ದ ಕೇಳಿ ಬಂದ ಹಿನ್ನೆಲೆಯಲ್ಲಿ ಹೊರಗೆ ಬಂದು ಟಾರ್ಚ್ ಬೆಳಕು ಹಾಕಿದಾಗ ಅಂಗಳದಲ್ಲಿ ಬೃಹತ್ ಗಾತ್ರದ ಮೊಸಳೆ ಕಂಡು ಬಂದಿದ್ದು, ಬಳಿಕ ಅದು ಮನೆಯ ಎದುರಿನ ತೋಟದತ್ತ ಸಾಗಿದ್ದು, ಮನೆ ಮಂದಿ ನಿಟ್ಟುಸಿರು ಬಿಟ್ಟರು. ಮೊಸಳೆ ಆಹಾರ ಹುಡುಕಿಕೊಂಡು ಬಂದಿರಬೇಕೆಂದು ಸ್ಥಳೀಯರು ಅನುಮಾನ ವ್ಯಕ್ತಪಡಿಸಿದ್ದಾರೆ.



ಗುರುವಾಯನಕೆರೆ : ಸಾವನ್ನಪ್ಪಿದ ಮೀನುಗಳ ದಫನ



• **ಬೆಳ್ತಂಗಡಿ:** ಕುವೆಟ್ಟು ಗ್ರಾಮದ ಗುರುವಾಯನಕೆರೆ ಇಲ್ಲಿನ ಕೆರೆಯಲ್ಲಿ ಕೆಲ ದಿನಗಳಿಂದ ನಿಗೂಢವಾಗಿ ಸಾವನ್ನಪ್ಪುತ್ತಿರುವ ಮೀನುಗಳನ್ನು ಸಾಂಕ್ರಾಮಿಕ ರೋಗ ಭೀತಿಯಿಂದ ಮತ್ತು ದುರ್ವಾಸನೆಯಿಂದ ಸಾರ್ವಜನಿಕರಿಗೆ ಆಗಬಹುದಾದ ತೊಂದರೆಯನ್ನು ಮನಗಂಡು ಗ್ರಾ.ಪಂ ವತಿಯಿಂದ ದಫನ ನಡೆಸಲಾಯಿತು.

ಸತ್ತು ಕೆರೆ ಪಾತ್ರದಲ್ಲಿ ಜಮಾವಣೆಗೊಂಡಿದ್ದ ಬೃಹತ್ ಗಾತ್ರದ ಮತ್ತು ಸಣ್ಣ ಮೀನುಗಳ ಕಳೇಬರಗಳನ್ನು ನುರಿತ ಈಜುಗಾರರ ಮೂಲಕ ತೆಪ್ಪದಲ್ಲಿ ತೆರಳಿ ಸಂಗ್ರಹಿಸಿ ಬಳಿಕ ಅದನ್ನು ಗುಂಡಿ ತೋಡಿ ಮುಚ್ಚಲಾಯಿತು.

ಕೆರೆಯ ನೀರಿಗೆ ಸ್ಥಳೀಯ ಖಾಸಗಿ ಶಿಕ್ಷಣ ಸಂಸ್ಥೆಯಿಂದ ಕೊಳಚೆ ಹಾಗೂ ರಾಸಾಯನಿಕ ಮಿಶ್ರಿತ ನೀರು ಯತೇಚ್ಛವಾಗಿ ಹರಿದು ಬರುತ್ತಿರುವ ಕಾರಣಕ್ಕೆ ಕೆರೆಯ ಸಾಕು ಮೀನುಗಳು ಆಮ್ಲಜನಕದ ಕೊರತೆ ಎದುರಾಗಿ ಸಾವನ್ನಪ್ಪುತ್ತಿದೆ ಎಂದು ದೂರು ಕೇಳಿಬಂದಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಮೀನುಗಳು ನೀರಿನ ಮೇಲ್ಪದರಕ್ಕೆ ಬಂದು ಗೋಚರಿಸಲಿವೆ ಎಂದು ಹೇಳಲಾಗುತ್ತಿದೆ. ಪ್ರತೀ ವರ್ಷ ಈ ಕೆರೆಗೆ ಪಂಚಾಯತ್ ವತಿಯಿಂದ ಸಾಕುವ ಮೀನಿನ ಮರಿಗಳನ್ನು ಲಕ್ಷಗಟ್ಟಲೆ ಸುರಿಯ ಲಾಗುತ್ತದೆ. ಮುಂದಿನ ವರ್ಷಕ್ಕೆ ಅದನ್ನು ಹಿಡಿದು ಮಾರಾಟ ಮಾಡಲು ಏಲಂ ನಡೆಸಲಾಗುತ್ತದೆ. ಗುರುವಾಯನಕೆರೆಯ ಕೆರೆಯ ಮೀನು ಹಿಡಿಯುವ ಸಮಯ ಸಾರ್ವಜನಿಕ ಪ್ರಕಟಣೆ ಹೊರಡಿಸಲಾಗುತ್ತಿದ್ದುದರಿಂದ ಜನ ಜಾತ್ರೆಯರೂಪದಲ್ಲಿ ಜಮಾಯಿಸುತ್ತಾ ಇದೊಂದು ಆದಾಯದ ಮೂಲ ಕೂಡ ಆಗಿದೆ.

ಇದೀಗ ಆಗಿರುವ ಘಟನೆ ಬಗ್ಗೆ ಜನರಲ್ಲಿ ತೀವ್ರ ಆಕ್ರೋಶ ಕಂಡು ಬಂದಿದ್ದು, ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸಬೇಕು ಎಂದು ಆಗ್ರಹ ಕೇಳಿಬಂದಿದೆ.

ಮರವಂತೆಯಲ್ಲಿ ನಾಳೆ ಸುವರ್ಣ ಕಿರೀಟ ಸಮರ್ಪಣೆ

• **ಕುಂದಾಪುರ :** ಮರವಂತೆ ಶ್ರೀರಾಮ ಮಂದಿರದಲ್ಲಿ ವರ್ಧಂತ್ಯುತ್ಸವ, 93ನೇ ವರ್ಷದ ಶ್ರೀರಾಮ ಭಜನೆ, ಅಖಂಡ ಏಕಾಹ ಭಜನೆ ಮಾ. 28ರವರೆಗೆ ನಡೆಯಲಿದೆ. ಮಾ.20ರಂದು ಮಧ್ಯಾಹ್ನ 2.30ಕ್ಕೆ ಶ್ರೀ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ಲಕ್ಷ್ಮಣ ದೇವರಿಗೆ ಸುವರ್ಣ ಕಿರೀಟ ಸಮರ್ಪಣೆ ನಡೆಯಲಿದ್ದು, ಶ್ರೀಗಳ ಆಶೀರ್ವಚನ ನಡೆಯಲಿದೆ. 21ರಂದು ಬೆಳಿಗ್ಗೆ ಶ್ರೀರಾಮ ಭಜನಾ ದೀಪ ಸ್ಥಾಪನೆ, ಮಧ್ಯಾಹ್ನ ಅನ್ನಸಂತರ್ಪಣೆ, 27ರಂದು ಅಖಂಡ ಏಕಾಹ ಭಜನೆ, ಮಧ್ಯಾಹ್ನ ಅನ್ನಸಂತರ್ಪಣೆ, 28ರಂದು ಬೆಳಿಗ್ಗೆ ಭಜನಾ ಮಂಗಲೋತ್ಸವ ನಡೆಯಲಿದೆ ಎಂದು ಮೀನುಗಾರರ ಸೇವಾ ಸಮಿತಿ ಅಧ್ಯಕ್ಷ ಸುರೇಶ ಖಾರ್ವಿ ತಿಳಿಸಿದ್ದಾರೆ.

ಮದ್ಯ ವಶ: ಇಬ್ಬರ ಸೆರೆ

• **ಕುಂಬಳೆ:** ಕರ್ನಾಟಕ ಮದ್ಯ ಹಾಗೂ ಸಾರಾಯಿ ತಯಾರಿಸುವ ಹುಳಿರಸ ಸಹಿತ ಇಬ್ಬರನ್ನು ಅಬಕಾರಿ ಅಧಿಕಾರಿಗಳು ಬಂಧಿಸಿದ್ದಾರೆ.

ಕನ್ಯಪ್ಪಾಡಿ ನಿವಾಸಿ ಜಿ.ಕೆ. ಸಂತೋಷ್ (35) ಎಂಬಾತನನ್ನು 50 ಲೀಟರ್ ಸಾರಾಯಿ, ಹುಳಿಸರ ಸಹಿತ ಗೋಳಿಯಡ್ಕದಿಂದ ಬದಿಯಡ್ಕ ರೇಂಜ್ ಅಬಕಾರಿ ಇನ್‌ಸ್ಪೆಕ್ಟರ್ ಜಿಷ್ಣು ಪಿ.ಆರ್. ನೇತೃತ್ವದ ತಂಡ ಬಂಧಿಸಿದೆ. ಇನ್ನೊಂದು ಪ್ರಕರಣದಲ್ಲಿ ಬಾಡೂರು ನೈಮುಗೇರು ನಿವಾಸಿ ಸೀತಾರಾಮ ರೈ ಎಂಬಾತನನ್ನು 3.78 ಲೀಟರ್ ಕರ್ನಾಟಕ ನಿರ್ಮಿತ ಮದ್ಯ ಸಹಿತ ಕುಂಬಳೆ ಅಬಕಾರಿ ರೇಂಜ್ ಇನ್‌ಸ್ಪೆಕ್ಟರ್ ಕೆ.ವಿ.ಶ್ರಾವಣ್ ನೇತೃತ್ವದ ತಂಡ ಬಂಧಿಸಿದೆ.

ಮೃತದೇಹ ಪತ್ತೆ

• **ಕಾಸರಗೋಡು:** ದುಬಾಯಿಯಿಂದ ಎರಡು ವಾರಗಳ ಹಿಂದೆ ಊರಿಗೆ ಹಿಂತಿರುಗಿದ ಯುವಕ ನೇಣು ಬಿಗಿದು ಸಾವನ್ನಪ್ಪಿದ ಸ್ಥಿತಿಯಲ್ಲಿ ಪತ್ತೆಯಾದ ಘಟನೆ ನಡೆದಿದೆ. ಮೈಲಾಟಿ ಕುಟ್ಟಪುನ್ನ ನಿವಾಸಿ ಎ.ಎಂ.ಸೂರಜ್ (32) ಮೃತಪಟ್ಟವರು. ಸೋಮವಾರ ಸಂಜೆ ಮನೆ ಯಿಂದ ತೆರಳಿದವರು ಮನೆಗೆ ಬಾರದಿರುವುದರಿಂದ ಹುಡುಕಾಟ ನಡೆಸಿದಾಗ ಮೈಲಾಟಿ ಕುಟ್ಟಪುನ್ನ ರಸ್ತೆ ಬದಿಯ ಮರವೊಂದರಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಮಂಗಳವಾರ ಪತ್ತೆಯಾಯಿತು. ಕುಂಞಿರಾಮನ್ ಮತ್ತು ಜಾನಕಿ ದಂಪತಿ ಪುತ್ರನಾದ ಮೃತರು ಸಹೋದರಿಯರಾದ ಎ.ಎಂ.ಸೌಮ್ಯಾ, ಸುರಮ್ಯ ಅವರನ್ನು ಅಗಲಿದ್ದಾರೆ.

ರೈತರು-ಅಧಿಕಾರಿಗಳ ನಡುವೆ ವಾಗ್ವಾದ

ಸೋಮವಾರಪೇಟೆ: ಅರಣ್ಯ ಜಮೀನು ತೆರವು ಕಾರ್ಯಾಚರಣೆ ಸಂದರ್ಭ ಅರಣ್ಯಾಧಿಕಾರಿ ಹಾಗೂ ರೈತರ ನಡುವೆ ಮಾತಿನ ಚಕಮಕಿ ನಡೆದ ಘಟನೆ ಇಂದು ಮಸಗೊಡು ಗ್ರಾಮದಲ್ಲಿ ನಡೆದಿದೆ. ಮಸಗೋಡು ಗ್ರಾಮದ ಸರ್ವೇ ನಂಬರ್ 24/1 ರಲ್ಲಿ2.50 ಎಕರೆ ಜಾಗವನ್ನು ಅರಣ್ಯ ಇಲಾಖೆಯವರು ಜೆಸಿಬಿಯಿಂದ ತೆರವುಗೊಳಿಸಲು ಯತ್ನಿಸಿದಾಗ ರೈತ ಹೋರಾಟ ಸಮಿತಿ ಹಾಗೂ ರೈತ ಸಂಘದ ಪದಾಧಿಕಾರಿಗಳು ಸ್ಥಳಕ್ಕೆ ಧಾವಿಸಿ ಅರಣ್ಯ ಇಲಾಖೆಯವರಿಗೆ ಘೆರಾವು ಹಾಕಿದರು. ರೈತರ ಪ್ರತಿಭಟನೆಗೆ ಮಣಿದ ಅರಣ್ಯ ಇಲಾಖೆ ತೆರವು ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದು, ಅರಣ್ಯ ಇಲಾಖೆಯ ಉನ್ನತ ಅಧಿಕಾರಿಗಳು ಸ್ಥಳಕ್ಕೆ ಬರುವವರೆಗೂ ಕದಲುವುದಿಲ್ಲವೆಂದು ರೈತರು ಸ್ಥಳದಲ್ಲಿ ಪ್ರತಿಭಟನೆ ಮುಂದುವರೆಸಿದರು.

ನಿಧನ ಸುದ್ದಿ

ಪುಷ್ಪಾವತಿ ಸಿ.ಎಚ್.



ಕಾಸರಗೋಡು: ಸಹಕಾರ ಭಾರತಿ ಮಾಜಿ ಜಿಲ್ಲಾಧ್ಯಕ್ಷ, ಕ್ಯಾಂಪ್ಕೋ ನಿರ್ದೇಶಕರೂ ಆಗಿದ್ದ ದಿ.ಗಣಪತಿ ಕೋಟೆಕಣಿ ಅವರ ಪತ್ನಿ ಪುಷ್ಪಾವತಿ ಸಿ.ಎಚ್. (78) ಸ್ವಗೃಹದಲ್ಲಿ ಮಂಗಳವಾರ ಸಂಜೆ ನಿಧನ ಹೊಂದಿದರು. ಇವರು ಕರ್ನಾಟಕ ಸರಕಾರದ ಕುಟುಂಬ ಸಮಾಜ ಕಲ್ಯಾಣ ಇಲಾಖೆಯಲ್ಲಿ ಉದ್ಯೋಗಿಯಾಗಿ ನಿವೃತ್ತಿ ಹೊಂದಿದ್ದರು. ಮೃತರು ಮಕ್ಕಳಾದ ಗುರುಪ್ರಸಾದ್ ಕೋಟೆಕಣಿ, ವರಪ್ರಸಾದ್ ಕೊಟೆಕಣಿ (ಕಾಸರಗೋಡು ನಗರಸಭಾ ಮಾಜಿ ಸದಸ್ಯ), ಪ್ರಸನ್ನ ವಿನಯಕುಮಾರ್ ಅವರನ್ನು ಅಗಲಿದ್ದಾರೆ.

ಬೊಳಿಂಜಡ್ಕ ರಾಮಕೃಷ್ಣಭಟ್



ಮಂಗಳೂರು: ಉಳ್ಳಾಲ ಬೈಲು ನಿವಾಸಿ ಬಾಯಾರು ಬೊಳಿಂಜಡ್ಕ ರಾಮಕೃಷ್ಣ ಭಟ್ (85) ಮಾ. 15 ರಂದು ಸ್ವಗೃಹದಲ್ಲಿ ಅಲ್ಪ ಕಾಲದ ಅನಾರೋಗ್ಯದ ಬಳಿಕ ನಿಧನರಾದರು. ಅವರು ಕರ್ಣಾಟಕ ಬ್ಯಾಂಕ್‌ನಲ್ಲಿ ವಿವಿಧ ಹುದ್ದೆಗಳಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿದ್ದರು. ಅವರು ಪತ್ನಿ, ಇಬ್ಬರು ಪುತ್ರರನ್ನು ಅಗಲಿದ್ದಾರೆ.

ಸಾಗರ್ ಎಸ್. ಪೂಜಾರಿ



ಮುಲ್ಕಿ: ಇಲ್ಲಿಗೆ ಸಮೀಪದ ಕೆಎಸ್ ರಾವ್ ನಗರ ನಿವಾಸಿ ಮುಲ್ಕಿ ನಗರ ಪಂಚಾಯತ್ ಮಾಜೀ ಸದಸ್ಯೆ ವಿಮಲಾ ಪೂಜಾರಿ ಅವರ ಪುತ್ರ ಸಾಗರ್ ಎಸ್ ಪೂಜಾರಿ (39) ಅನಾರೋಗ್ಯದಿಂದ ಮಂಗಳವಾರ ನಿಧನರಾದರು. ಅವರು ಪತ್ನಿ ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ. ಅವರು ಮಂಗಳೂರಿನಲ್ಲಿ ಉದ್ಯಮಿಯಾಗಿ ಸೇವೆ ಸಲ್ಲಿಸುತ್ತಿದ್ದರು.

ಪುರುಷೋತ್ತಮ ಹೊಸಮನೆ



ಮಂಜೇಶ್ವರ: ಬಂದ್ಯೋಡು ಸಮೀಪದ ಹೇರೂರು ಚಾರಮುಗೇರ್ ಪಾಂಡಿಬೈಲು ಹೊಸಮನೆ ನಿವಾಸಿ, ಪ್ರಸ್ತುತ ಮೇರ್ಕಳ ಪರಪ್ಪು ಎಂಬಲ್ಲಿ ವಾಸಿಸುತ್ತಿದ್ದ ಪುರುಷೋತ್ತಮ (48) ಮಂಗಳವಾರ ಬೆಳಗ್ಗೆ ಸ್ವಗೃಹದಲ್ಲಿ ಹೃದಯಾಘಾತ ಸಂಭವಿಸಿ ನಿಧನ ಹೊಂದಿದರು. ಅವರು ಬಿ.ಸಿ.ರೋಡ್ ಜಂಕ್ಷನ್ ಕೇಂದ್ರೀಕರಿಸಿ ಆಟೋ ಚಾಲಕರಾಗಿ ದುಡಿಯುತ್ತಿದ್ದರು. ಮೃತರು ಪತ್ನಿ ನಮಿತಾ, ಪುತ್ರಿ ಋಷಿಕಾ ಅವರನ್ನು ಅಗಲಿದ್ದಾರೆ.

ಗಿರಿಜಮ್ಮ ಚೆಪ್ಪಾರು



ಮಂಜೇಶ್ವರ: ವಿಟ್ಲ ಅರಮನೆ ದಿ.ಮರಿಯಯ್ಯ ವರ್ಮ ಅವರ ಪತ್ನಿ ಕಾರಡ್ಕಬೀಡು ಗಿರಿಜಮ್ಮ ಚೆಪ್ಪಾರು ಅರಮನೆ (90) ಮಂಗಳವಾರ ನಿಧನ ಹೊಂದಿದರು. ಮೃತರು ಮಕ್ಕಳಾದ ಕೆ.ನರಸಿಂಹ ಬಲ್ಲಾಳ್, ಕೆ.ಮುರಳೀಧರ ಬಲ್ಲಾಳ್, ಕೆ.ಪ್ರವೀಣಚಂದ್ರ ಬಲ್ಲಾಳ್, ಕೆ.ಶಿವಕುಮಾರ್ ಬಲ್ಲಾಳ್, ಕೆ.ರವಿರಾಜ್ ಬಲ್ಲಾಳ್, ಆಶಾದೇವಿ, ಪೂರ್ಣಮಾ ಅವರನ್ನು ಅಗಲಿದ್ದಾರೆ.

ಡೊಂಬಯ್ಯ ಪೂಜಾರಿ



ಕಿನ್ನಿಗೋಳಿ : ಕಲ್ಲಮುಂಡ್ಕೂರು ಅಬ್ಬಯ್ಯ ಪಂಜಾಡಿಯ ಡೊಂಬಯ್ಯ ಪೂಜಾರಿ (83) ಶನಿವಾರ ನಿಧನರಾದರು. ಕೃಷಿಕರಾಗಿದ್ದ ಅವರು ಮೂರ್ತೆದಾರಿಕೆ ವೃತ್ತಿಯನ್ನೂ ಮಾಡುತ್ತಿದ್ದರು. ಮೃತರು ಪತ್ನಿ, ನಾಲ್ವರು ಹೆಣ್ಣು ಹಾಗೂ ಇಬ್ಬರು ಗಂಡು ಮಕ್ಕಳನ್ನು ಅಗಲಿದ್ದಾರೆ.

ಗುರುಸ್ವಾಮಿ ಸಂಜೀವ ಪೂಜಾರಿ

ಬಂಟ್ವಾಳ:: ಅಯ್ಯಪ್ಪ ಗುರುಸ್ವಾಮಿ ಎಂದೇ ಪ್ರಖ್ಯಾತ ರಾಗಿದ್ದ, ಸತತ 42 ವರ್ಷ ಶಬರಿಮಲೆ ಯಾತ್ರೆಯ ಗುರುಸ್ಥಾಮಿ, ರಿಕ್ಷಾ ಚಾಲಕ ವೃತ್ತಿ ಮಾಡುತ್ತಿದ್ದು ಸಂಘಟನೆ ಯಲ್ಲಿ ಗುರುತಿಸಿಕೊಂಡಿದ್ದ, ಬಿ. ಮೂಡ ಗ್ರಾಮ ಗಾಂದೋಡಿ ನಿವಾಸಿ ಸಂಜೀವ ಪೂಜಾರಿ (69) ಅಲ್ಪ ಕಾಲದ ಅಸೌಖ್ಯದ ಬಳಿಕ ಸ್ವಗೃಹದಲ್ಲಿ ನಿಧನ ಹೊಂದಿದ್ದಾರೆ. ಮೃತರು ಮೂವರು ಪುತ್ರ, ಸೊಸೆ ಮೊಮ್ಮಕ್ಕಳನ್ನು ಅಗಲಿದ್ದಾರೆ.



ಕೇರಳ ವಿಧಾನಸಭಾ ಚುನಾವಣೆಯ ಪ್ರಚಾರಾರ್ಥ ಕಾಸರಗೋಡು ಜಿಲ್ಲೆಯ ವಿವಿಧೆಡೆಗಳಿಗೆ ಆಗಮಿಸಿದ ಖ್ಯಾತ ಮಲೆಯಾಳ ಚಲನಚಿತ್ರ ನಟ, ಕೇಂದ್ರ ಪ್ರವಾಸೋದ್ಯಮ, ಪೆಟ್ರೋಲಿಯಂ, ನೈಸರ್ಗಿಕ ಅನಿಲ ಖಾತೆ ರಾಜ್ಯ ಸಚಿವ ಸುರೇಶ್ ಗೋಪಿಯವರು ಬುಧವಾರ ಕಾಸರಗೋಡು ಕಸಬಾ ಕಡಪ್ಪುರದ ಶ್ರೀ ಕುರುಂಬಾ ಭಗವತೀ ಕ್ಷೇತ್ರಕ್ಕೆ ಭೇಟಿ ನೀಡಿದರು. ನಂತರ ಅಲ್ಲಿನ ಅಚ್ಚನ್ಮಾರರು ಮತ್ತು ಇತರರೊಂದಿಗೆ ಮಾತುಕತೆ ನಡೆಸಿ ಎನ್‌ಡಿಎ ಅಭ್ಯರ್ಥಿಗಳ ಪರವಾಗಿ ಮತಯಾಚಿಸಿದರು.

ಜಲಜೀವನ್ ಮಿಷನ್: ಮಹಿಳಾ ಸಾಧಕಿಯರಿಗೆ ಹೊಸದಿಲ್ಲಿಯಲ್ಲಿ 'ಜಲ ಮಹೋತ್ಸವ' ಸನ್ಮಾನ

ಬೆಳ್ತಂಗಡಿ: ಹೊಸದಿಲ್ಲಿಯ ವಿಜ್ಞಾನ ಭವನದಲ್ಲಿ ರಾಷ್ಟ್ರಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಪ್ರತಿಷ್ಠಿತ 'ಜಲ ಮಹೋತ್ಸವ' ಕಾರ್ಯಕ್ರಮದಲ್ಲಿ ಭಾಗವಹಿಸಿ, ಪ್ರಶಸ್ತಿ ಸ್ವೀಕರಿಸುವ ಮೂಲಕ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಮಹಿಳಾ ಸಾಧಕಿಯರು ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ.

ಜಲಶಕ್ತಿ ಸಚಿವಾಲಯವು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ಈ ವಿಶೇಷ ಕಾರ್ಯಕ್ರಮದಲ್ಲಿ, ಕುಡಿಯುವ ನೀರು ಮತ್ತು ನೈರ್ಮಲ್ಯ ಕ್ಷೇತ್ರದಲ್ಲಿ ಅಪೂರ್ವ ಸಾಧನೆ ಮಾಡಿದ ಮಹಿಳೆಯರನ್ನು ಗೌರವಿಸಲಾಯಿತು. ಉಡುಪಿ ಜಿಲ್ಲೆಯ ಬ್ರಹ್ಮಾವರ ತಾನ ಕೋಡಿ ಗ್ರಾಮ ಪಂಚಾಯತ್ ಅಧ್ಯಕ್ಷೆ ಗೀತಾ ಶಾಂಭವಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ತಣ್ಣೀರುಪಂತ ಗ್ರಾಮ ಪಂಚಾಯತ್‌ನ ಸವಿತಾ ಈ ಮಹತ್ವದ ವೇದಿಕೆಯಲ್ಲಿ ಪುರಸ್ಕೃತರಾಗಿದ್ದಾರೆ.



ತಣ್ಣೀರುಪಂತ ಗ್ರಾಮ ಪಂಚಾಯತ್ ವ್ಯಾಪ್ತಿಯ ಕರಾಯ ಗ್ರಾಮದ ನೀರು ಮತ್ತು ನೈರ್ಮಲ್ಯ ಸಮಿತಿಯ ಮಹಿಳಾ ಸದಸ್ಯೆಯಾದ ಸವಿತಾ ಅವರು ಮಾ. 11ರಂದು ದೆಹಲಿಯ ವಿಜ್ಞಾನ ಭವನದಲ್ಲಿ ಜಲಶಕ್ತಿ ಸಚಿವಾಲಯದಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ ಗೌರವಕ್ಕೆ ಪಾತ್ರರಾಗಿದ್ದಾರೆ. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ವತಿಯಿಂದ ಇವರು ದೆಹಲಿಗೆ ತೆರಳಿದ್ದು, ನೀರಿನ ಶುಲ್ಕ ಸಂಗ್ರಹ ವಿಭಾಗದಲ್ಲಿ ರಾಷ್ಟ್ರ ಮಟ್ಟದ ಗಮನ ಸೆಳೆದಿದ್ದಾರೆ.

ಜಲಜೀವನ್ ಮಿಷನ್ ಯೋಜನೆಯ ಯಶಸ್ವಿ ಅನುಷ್ಠಾನ, 24 ಗಂಟೆ ಕುಡಿಯುವ ನೀರಿನ ಪದ್ಧತಿಯ ಸಮರ್ಪಕ ನಿರ್ವಹಣೆ ಮತ್ತು ನಲ್ ಜಲ್ ಮಿತ್ರ ಸಮಿತಿಯಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಿದ ಇವರ ಸಾಧನೆಯನ್ನು ಕೇಂದ್ರ ಸರ್ಕಾರ ಗುರುತಿಸಿದೆ. ರಾಷ್ಟ್ರ ಮಟ್ಟದಲ್ಲಿ ಮಿಂಚಿದ ಸವಿತಾ ಅವರಿಗೆ ದ.ಕ.ಜಿ.ಪಂ., ಎಲ್ಲಾ ತಾ.ಪಂ.ಗಳು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಹಾಗೂ ಉಪ ವಿಭಾಗಗಳು ಮತ್ತು ಜಿಲ್ಲೆಯ ಎಲ್ಲಾ ಗ್ರಾ.ಪಂ.ಗಳ ಪರವಾಗಿ ಶುಭಾಶಯಗಳನ್ನು ಕೋರಲಾಗಿದೆ.

ಸರಕಾರಿ ಉದ್ಯೋಗ ನಿರೀಕ್ಷೆ ವಿಫಲವಾದರೂ ಎದೆಗುಂದದ ಪ್ರೇಮಾ

ಮೀನು ಮಾರುವ 'ಶಿಕ್ಷಕಿ'!

ಪುತ್ತೂರು: ಪಕೋಡಾ ಮಾರಿಯೂ ಬದುಕು ಕಟ್ಟಿಕೊಂಡವರಿದ್ದಾರೆ ಎಂದು ಉಲ್ಲೇಖಿಸಿದ್ದ ಪ್ರಧಾನಿಯವರನ್ನು ದೇಶದಲ್ಲೆಡೆ ಅಣಕಿಸುವ ಕಾರ್ಯ ನಡೆದಿತ್ತು. ಉನ್ನತ ವ್ಯಾಸಂಗ ಮಾಡಿದರೂ ಸರಕಾರಿ ಉದ್ಯೋಗಕ್ಕೆ ಕಾಯದೆ ಸ್ವ ಉದ್ಯೋಗದತ್ತಲೂ ಗಮನ ಹರಿಸಬೇಕಾದ ಅನಿವಾರ್ಯತೆ ಇಂದು ಇದೆ. ಇಲ್ಲೊಬ್ಬರು ಮಹಿಳೆ ಉನ್ನತ ವ್ಯಾಸಂಗ ಮಾಡಿ, ಸರಕಾರಿ ಉದ್ಯೋಗಕ್ಕಾಗಿ ಕಾದು ಸುಸ್ತಾದವರು. ಆದರೆ, ಅಷ್ಟಕ್ಕೇ ನಿರಾಶರಾಗದೆ ಇಂದು ಮೀನಿನ ವ್ಯಾಪಾರ ನಡೆಸುವ ಮೂಲಕ ಯಶಸ್ವಿಯಾಗಿದ್ದಾರೆ. ಪ್ರಾಮಾಣಿಕತೆಯ ಯಾವ ವೃತ್ತಿಯೂ ಕೀಳಲ್ಲ ಎಂಬುದನ್ನು ಎತ್ತಿ ತೋರಿದ್ದಾರೆ.

ಅತಿಥಿ ಉಪನ್ಯಾಸಕಿ

ಪುತ್ತೂರು ತಾಲೂಕಿನ ಶಾಂತಿನಗರ ನಿವಾಸಿ ಪ್ರೇಮಾ ಕುಂದರ್ ಅವರ ಯಶಸ್ಸಿನ ಕಥೆ ಇದು. ಮೂಲತ: ಕುಂದಾಪುರದ ಸಾಸ್ತಾನದವರಾಗಿರುವ ಪ್ರೇಮಾ ಕುಂದರ್ ಪುತ್ತೂರಿನ ಶಾಂತಿನಗರ ನಿವಾಸಿ ಕುಮಾರ್ ಕಿಶನ್ ಜೊತೆ ಮದುವೆಯಾದ ಬಳಿಕ ಪುತ್ತೂರಿಗೆ ಬಂದಿದ್ದಾರೆ. ಕುಂದಾಪುರದಲ್ಲಿದ್ದ ಸಂದರ್ಭ ಖಾಸಗಿ ಕಾಲೇಜೊಂದರಲ್ಲಿ ಅರ್ಥಶಾಸ್ತ್ರ ವಿಭಾಗದಲ್ಲಿ ಅತಿಥಿ ಉಪನ್ಯಾಸಕಿಯಾಗಿದ್ದ ಪ್ರೇಮಾ ಸರಕಾರಿ ಉದ್ಯೋಗಕ್ಕಾಗಿ ಹಲವು ಪರೀಕ್ಷೆಗಳನ್ನು ಎದುರಿಸಿದ್ದಾರೆ. ಮೊದಲ ಪ್ರಯತ್ನದಲ್ಲಿ ಟಿಇಟಿ, ಸಿಇಟಿ ಪಾಸಾಗಿದ್ದ ಪ್ರೇಮಾ ಸರಕಾರಿ ಕೆಲಸಕ್ಕೆ ಬೇಕಾದ ವೆರಿಫಿಕೇಶ್ ಹಂತದಲ್ಲೂ ಪಾಸ್ ಆಗಿದ್ದರು.

ಮೀನಿನ ಅಂಗಡಿ

ಸ್ವಲ್ಪವೇ ಅಂತರದಿಂದ ಸರಕಾರಿ ಕೆಲಸ ಕೈ ತಪ್ಪಿತ್ತು. ಆ ಬಳಿಕ ಸರಕಾರಿ ಕೆಲಸದ ಉಸಾಬರಿಯೇ ಬೇಡ ಎಂದು ಖಾಸಗಿ ಕಾಲೇಜ್‌ಗಳಲ್ಲೇ ಅತಿಥಿ ಉಪನ್ಯಾಸಕಿಯಾಗಿ ದುಡಿದಿದ್ದಾರೆ. ಆದರೆ, ಕೆಲವು ಸಮಸ್ಯೆಗಳಿಂದಾಗಿ ಉಪನ್ಯಾಸಕಿ ವೃತ್ತಿಯಿಂದ ದೂರ ಸರಿದು ಮನೆಯಲ್ಲೇ ಇದ್ದ ಸಮಯದಲ್ಲಿ ಪತಿ ಕುಮಾರ್ ಕಿಶನ್ ಜೊತೆ ಏನಾದರೂ ಒಂದು ಸ್ವಂತ ಉದ್ಯೋಗ ಮಾಡಿಸಿ ಕೊಡಿ ಎಂದು ಕೇಳಿಕೊಂಡಿದ್ದರು. ಮೀನು ಮಾರಾಟ ಮತ್ತು ಸಾಗಾಟ ಮಾಡುವ ವೃತ್ತಿಯಲ್ಲಿದ್ದ ಕುಮಾರ್ ತನ್ನ ಸ್ನೇಹಿತರ ಸಹಾಯದ ಮೂಲಕ ಪ್ರೇಮಾ ಕುಂದರ್‌ಗೆ ಕಳೆದ ಎರಡು ವರ್ಷದ ಹಿಂದೆ ಪುತ್ತೂರಿನ ಏಳ್ಮುಡಿಯಲ್ಲಿ ಒಂದು ಪುಟ್ಟ ತಾಜಾ ಮೀನಿನ ಅಂಗಡಿಯನ್ನು ಮಾಡಿಕೊಟ್ಟಿದ್ದಾರೆ.



ದಿನಕ್ಕೆ 150 ಕೆ.ಜಿ. ಮಾರಾಟ

ಬೆಳಿಗ್ಗೆ 7 ಗಂಟೆಯಿಂದ ಸಂಜೆ 7 ತನಕ ಅಂಗಡಿಯಲ್ಲಿ ದುಡಿಯುವ ಪ್ರೇಮಾ ದಿನಕ್ಕೆ 150 ಕೆ.ಜಿ.ಗಿಂತಲೂ ಮಿಕ್ಕಿ ವಿಧ ವಿಧದ ಮೀನುಗಳನ್ನು ಮಾರಾಟ ಮಾಡುತ್ತಾರೆ. ಉನ್ನತ ವ್ಯಾಸಂಗ ಮಾಡಿ ಮೀನು ಮಾರಾಟಕ್ಕೆ ತೊಡಗಿದ ಬಗ್ಗೆ ಪ್ರೇಮಾ ಕುಂದರ್‌ಗೆ ಅಭಿಮಾನವಿದೆ, ಸಂತೃಪ್ತಿಯಿದೆ. ಪ್ರೇಮಾ ಕುಂದರ್ ಕುಟುಂಬ ಮೀನುಗಾರಿಕೆಯಲ್ಲಿ ತೊಡಗಿಕೊಂಡ ಕುಟುಂಬವಾಗಿದ್ದು, ಅವರ ತಂದೆ, ಅಣ್ಣ ಸಮುದ್ರದಲ್ಲಿ ಮೀನು ಹಿಡಿಯುವ ವೃತ್ತಿಯನ್ನು ನಿರ್ವಹಿಸುತ್ತಿದ್ದಾರೆ. ಆ ಕಾರಣಕ್ಕಾಗಿ ಮೀನಿನ ಕುರಿತು ಮಾಹಿತಿ ಪಡೆದುಕೊಂಡ ಕಾರಣಕ್ಕೆ ಪ್ರೇಮಾ ಮೀನಿನ ವ್ಯಾಪಾರದಲ್ಲಿ ಯಶಸ್ವಿಯಾಗಿದ್ದಾರೆ.

ಕೀಳರಿಮೆ ಸಲ್ಲದು

ಯಾರೂ ಯಾವುದೇ ಕೆಲಸ ಮಾಡಬಹುದು. ಕೆಲಸದ ವಿಚಾರದಲ್ಲಿ ಕೀಳರಿಮೆ ಸಲ್ಲದು ಎನ್ನುವ ಪ್ರೇಮಾ ಉಪನ್ಯಾಸಕಿಯಾದರೂ ಮೀನಿನ ವ್ಯಾಪಾರವನ್ನು ಯಾವುದೇ ಅಳುಕು- ಅಂಜಿಕೆ ಯಿಲ್ಲದೆ ಮಾಡುತ್ತಿದ್ದಾರೆ. ಸ್ವಂತ ಉದ್ಯಮಗಳನ್ನು ಸ್ಥಾಪಿಸುವ ಮೂಲಕ ಸ್ವಾವಲಂಬಿ ಬದುಕು ಸಾಗಿಸಬಹುದು ಎನ್ನುವ ಪ್ರಧಾನಿ ನರೇಂದ್ರ ಮೋದಿಯವರ ಯೋಚನೆಯಂತೆ ಮುಂದುವರಿದ ಹಲವಾರು ಸಾಧಕರ ಪೈಕಿ ಪುತ್ತೂರಿನ ಪ್ರೇಮಾ ಕೂಡಾ ಒಬ್ಬರಾಗಿದ್ದಾರೆ.

ನಂದಾವರ ಮಸೀದಿಯಲ್ಲಿ ಅಭಯ ನೀಡಿದ ದೈವ...

ಬಂಟ್ವಾಳ: ತುಳುನಾಡಿನ ಧಾರ್ಮಿಕ ಹಾಗೂ ಮತೀಯ ಸೌಹಾರ್ದತೆ ಎಂಬುದು ಅದು ಪುರಾತನ ಕಾಲದಿಂದಲೂ ನಡೆದುಕೊಂಡು ಬಂದಿರುವಂತದ್ದು. ಬದಲಾದ ಈ ಕಾಲಘಟ್ಟದಲ್ಲಿ ಇಲ್ಲಿಯ ಮಣ್ಣಿನ ಸೌಹಾರ್ದತೆ, ಸಂಪ್ರದಾಯ ಇಲ್ಲವಾಗಿಸಲು ಸಾಧ್ಯವಾಗಿಲ್ಲ ಎಂಬುದಕ್ಕೆ ನಿದರ್ಶನವೊಂದು ಬಂಟ್ವಾಳ ತಾಲೂಕಿನ ಸಜಿಪಮುನ್ನೂರು ಗ್ರಾಮದ ನಂದಾವರದಲ್ಲಿ ಇಂದಿಗೂ ನಡೆದುಕೊಂಡು ಬರುತ್ತಿದೆ.

ಪ್ರತಿ ಮೂರು ವರ್ಷಕ್ಕೊಮ್ಮೆ ನಡೆಯುವ ಸಜಿಪ ಮಾಗಣೆಯ ನಾಲ್ಕೈತ್ತಾಯ ದೈವದ ಮೆಚ್ಚಿ ಪ್ರಯುಕ್ತ ದೈವದ ಭಂಡಾರವು ನಂದಾವರ ಜುಮಾ ಮಸೀದಿಗೆ ಬಂದು ಮಸೀದಿಯ 3 ಮೆಟ್ಟಿಲು ಏರಿ ಅಲ್ಲಿ ಸೀಯಾಳ ಸ್ವೀಕರಿಸಿ ದೈವ ಅಭಯವನ್ನಿತ್ತು ಬಳಿಕ ಮಂಜದಗೋಳಿಯಲ್ಲಿ ನೇಮ ನಡೆಯುವುದು ವಾಡಿಕೆ.

ಹಿಂದಿನಿಂದಲೂ ನಡೆದುಕೊಂಡು ಬರುತ್ತಿದ್ದ ಈ ಸಂಪ್ರದಾಯ ಈ ಬಾರಿ ಸೋಮವಾರ ನಡೆದಿದ್ದು, ಅಲ್ಲಿ ಸೇರಿದ್ದ ಜನಸಮೂಹ ಈ ದೃಶ್ಯ ಕಣ್ತುಂಬಿಕೊಂಡಿತು. ದೈವದ ಭಂಡಾರ ಹೊತ್ತ ಮೆರವಣಿಗೆ ರಾಜ ರಸ್ತೆಯಲ್ಲಿ ಸಾಗಿ ಬಂದು ನಂದಾವರ ಕೇಂದ್ರ ಜುಮಾ ಮಸೀದಿಯ ಮೂರು ಮೆಟ್ಟಿಲು ಏರಿ ಸಂಪ್ರಯದಾಯದಂತೆ ಸೀಯಾಳ ಸ್ವೀಕರಿಸುವ ವಿಧಿ ವಿಧಾನ ನೆರವೇರಿಸಿ ವಾಪಸ್ ಮರಳಿದೆ. ಊರಿನ ನೂರಾರು ಸಂಖ್ಯೆಯ ಹಿಂದೂ-ಮುಸ್ಲಿಂ ಸಮುದಾಯದ ಮಂದಿ ಈ ಸಂಪ್ರದಾಯಕ್ಕೆ ಸಾಕ್ಷಿಯಾಗಿದ್ದರು.



ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಸಾಮಾಜಿಕ, ಧಾರ್ಮಿಕ ಹಾಗೂ ಮತೀಯ ಸೌಹಾರ್ದತೆ ತುಳುನಾಡಿನ ಮಣ್ಣಿನ ಗುಣ. ಸಜಿಪ ಮಾಗಣೆಯ ದೈವದ ಭಂಡಾರ ನಂದಾವರದಂತಹ ಪ್ರಮುಖ ಮುಸ್ಲಿಂ ಬಾಹುಳ್ಯ ಇರುವ ಪ್ರದೇಶದ ಮಸೀದಿಗೆ ಸಾಗಿ ಬರುವ ಸೌಹಾರ್ದತೆಯ ದೃಶ್ಯ ಇದೀಗ ಎಲ್ಲೆಡೆ ಸಾಮಾಜಿಕ ಜಾಲ ತಾಣಗಳಲ್ಲಿ ವೈರಲ್ ಆಗಿದೆ.

ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ

ಏ.1-8: ಜಾತ್ರೆ; 7ರಂದು ರಥೋತ್ಸವ

ಮುಲ್ಕಿ: ಸೀಮೆಯ ಒಂಭತ್ತು ಮಾಗಣೆಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ವರ್ಷಾವಧಿ ಜಾತ್ರೆ ಏ.1ರಿಂದ 8ರವರೆಗೆ ನಡೆಯಲಿದೆ ಎಂದು ದೇವಸ್ಥಾನದ ಅನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು ಹಾಗೂ ಕಾರ್ಯನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಾತ್ರೆ ಪೂರ್ವಭಾವಿಯಾಗಿ ಮಾ.17 ರಂದು ಬಲಿ ಉತ್ಸವದೊಂದಿಗೆ ಆರಂಭ ಗೊಂಡು ಏ.7ರ ವರೆಗೆ ಬಲಿ ಉತ್ಸವಗಳು ನಡೆಯಲಿದೆ. ಮಾ.31 ರಂದು ಅಂಕುರಾರೋಹಣ, ಏ.1ರಂದು ಬೆಳಗ್ಗೆ ಕ್ಷೇತ್ರದ ತಂತ್ರಿಗಳಾದ ಶಿಬರೂರು ಗೋಪಾಲಕೃಷ್ಣ ತಂತ್ರಿ ಹಾಗೂ ಅರ್ಚಕರಾದ ಶ್ರೀಪತಿ ಉಪಾಧ್ಯಾಯ, ನರಸಿಂಹ ಭಟ್ ನೇತೃತ್ವದಲ್ಲಿ ವಿಶೇಷ ಪ್ರಾರ್ಥನೆ ನಡೆದು 11.30ಕ್ಕೆ ಶ್ರೀದೇವಿ ಮತ್ತು ಸಸಿಹಿತ್ಲು ಶ್ರೀ ಭಗವತಿಯವರ ಐತಿಹಾಸಿಕ ಭೇಟಿಯೊಂದಿಗೆ ಧ್ವಜಾರೋ ಹಣ, ರಾತ್ರಿ 7 ಗಂಟೆಗೆ ಉತ್ಸವ ಬಲಿ, ಏ.2ರಂದು ರಾತ್ರಿ 7 ಗಂಟೆಗೆ ಉತ್ಸವ ಬಲಿ, ಏ.3ರಂದು ರಾತ್ರಿ 7ಕ್ಕೆ ಪೇಟೆ ಸವಾರಿ, ಏ.4 ರಂದು ರಾತ್ರಿ 7 ಗಂಟೆಗೆ ಕೊಪ್ಪಲ ಸವಾರಿ, ಏ.5ರಂದು ರಾತ್ರಿ 7 ಗಂಟೆಗೆ ಬಾಕಿಮಾರು ದೀಪೋತ್ಸವ, ಏ.6ರಂದು ರಾತ್ರಿ 7ಕ್ಕೆ ಕೆರೆ ದೀಪೋತ್ಸವ ನಡೆಯಲಿದೆ ಎಂದು ದೇವಸ್ಥಾನದ ಅನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು ತಿಳಿಸಿದರು.

ಏ.7ರಂದು ಮಧ್ಯಾಹ್ನ 12 ಗಂಟೆಗೆ ಹಗಲು ರಥೋತ್ಸವ, ರಾತ್ರಿ 7.30ರಿಂದ ಉತ್ಸವ ಬಲಿ, ವೈಭವದ ಶಯನೋತ್ಸವ, ಏ.8ರಂದು ಬೆಳಗ್ಗೆ 7.30ಕ್ಕೆ ಕವಾಟೋ ದ್ಘಾಟನೆ, ಸಂಜೆ 7ರಿಂದ ಉತ್ಸವ ಬಲಿ, ಓಕುಳಿ, ಶ್ರೀದೇವಿ ಮತ್ತು ಸಸಿಹಿತ್ಲು ಶ್ರೀ ಭಗವತಿಯವರ ಭೇಟಿ, ಮಹಾ ರಥೋತ್ಸವ, ಅವಭೃತ ಧ್ವಜಾವರೋಹಣ, ಏ.9 ರಂದು ಊರ ಪರವೂರ ಭಕ್ತಾದಿಗಳಿಂದ ಹಣ್ಣು ಕಾಯಿ ಸಮರ್ಪಣೆ ಸೇವಾದಿಗಳು, ಏ.10 ರ ಮಧ್ಯಾಹ್ನ ಸಂಪ್ರೋಕ್ಷಣೆ, ಮಹಾ ಮಂತ್ರಾ ಕ್ಷತೆ ನಡೆಯಲಿದೆ ಎಂದರು. ಏ.12ರಂದು ದೇವಸ್ಥಾನಕ್ಕೆ ಸಂಬಂಧ ಪಟ್ಟ ಕೊಳಚಿಕಂಬಳ ಶ್ರೀ ಜಾರಂದಾಯ ದೈವದ ನೇಮ ನಡೆಯಲಿದೆ.



ಮಾ.24ರಂದು ಬ್ರಹ್ಮಕಲಶ ವರ್ಧಂತಿ

ಬ್ರಹ್ಮಕಲಶ ವರ್ಧಂತಿ ಮಾ.24 ರಂದು ಶ್ರೀ ದೇವರ ಸನ್ನಿಧಿಯಲ್ಲಿ ನಡೆಯಲಿದೆ. ಬೆಳಗ್ಗೆ 8.30ಕ್ಕೆ ಕಲಶಾಭಿಷೇಕ, 9.30ಕ್ಕೆ ಚಂಡಿಕಾಯಾಗ, ಮಧ್ಯಾಹ್ನ ಪ್ರಸನ್ನ ಪೂಜೆ, ಅನ್ನಸಂತರ್ಪಣೆ, ರಾತ್ರಿ ಮಹಾರಂಗಪೂಜೆ, ಬಲಿ ಉತ್ಸವ ನಡೆಯಲಿದೆ.

ರಥ ಪ್ರದಕ್ಷಿಣೆ

ಕಳೆದ ವರ್ಷ ಸಂಭವಿಸಿದ ರಥ ಅವಘಡದ ಹಿನ್ನೆಲೆ ಈ ಬಾರಿ ಪ್ರಶ್ನಾ ಚಿಂತನೆ ಅನುಸಾರ ಹಳೆ ರಥವನ್ನು ದುರಸ್ತಿಗೊಳಿಸಿ ಮಹೋತ್ಸವದಂದು ದೇವರ ರಥಾರೋಹಣ ಭಕ್ತಾದಿಗಳ ಕೂಡುವಿಕೆಯೊಂದಿಗೆ ನಡೆಯಲಿದೆ. ಸಾಂಕೇತಿಕ ರಥ ಎಳೆದ ಬಳಿಕದೇವಳ ವಿಮಾನ ರಥದ ಮೂಲಕ ರಥ ಪ್ರದಕ್ಷಿಣೆ ನಡೆಯಲಿದೆ ಎಂದು ಎಂ. ದುಗ್ಗಣ್ಣ ಸಾವಂತರು ತಿಳಿಸಿದ್ದಾರೆ.

ಮೂಡುಬಿದಿರೆಯಲ್ಲಿ ಕೇರಳದ ಶ್ರೀರಾಮ ನವಮಿ ರಥಯಾತ್ರೆಗೆ ಸ್ವಾಗತ

ಮೂಡುಬಿದಿರೆ: ಕೇರಳದ ಮಲ್ಲಪುರಂ ಜಿಲ್ಲೆಯ ಆಂಜನೇಯ ಆಶ್ರಮದ ವಾರ್ಷಿಕ ಮಹೋತ್ಸವದ ಅಂಗವಾಗಿ ಆಯೋಜಿಸಲಾದ ಶ್ರೀರಾಮ ನವಮಿ ರಥಯಾತ್ರೆ ಮೂಡುಬಿದಿರೆಗೆ ಆಗಮಿಸಿದ್ದು, ಅಲಂಗಾರಿನಲ್ಲಿ ಮಂಗಳವಾರ ಸಾಯಂಕಾಲ ಭಕ್ತಿಪೂರ್ವಕ ಸ್ವಾಗತ ದೊರೆಯಿತು.

ಜೈನಮಠದ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಂಡಿತಾಚಾರ್ಯವರ್ಯ ಸ್ವಾಮೀಜಿ ಅವರ ಮಾರ್ಗದರ್ಶನ ಹಾಗೂ ಶ್ರೀರಾಮ ನವಮಿ ರಥಯಾತ್ರೆ ಸಮಿತಿ ಸಂಚಾಲಕ ಎಂ. ದಯಾನಂದ ಪೈ ಅವರ ನೇತೃತ್ವದಲ್ಲಿ ರಥದಲ್ಲಿದ್ದ ಶ್ರೀರಾಮದೇವರ ಮೂರ್ತಿಗೆ ಸ್ವಾಮೀಜಿ ಮಾಲಾರ್ಪಣೆ ಮಾಡಿ, ಪ್ರಾರ್ಥನೆ ಸಲ್ಲಿಸಿದರು.

ನಂತರ ಅಲಂಗಾರಿನಿಂದ ಮೂಡುಬಿದಿರೆ ಜೈನಮಠದವರೆಗೆ ಶೋಭಾಯಾತ್ರೆ ನಡೆಯಿತು.

ಜೈನಮಠದಲ್ಲಿ ಧರ್ಮ ಸಂದೇಶ ನೀಡಿದ ಸ್ವಾಮೀಜಿ, ರಾಮ ದೇವರ ಆದರ್ಶಗಳು ಸರ್ವೋತ್ತಮವಾಗಿದ್ದು, ಇಂದಿನ ಸಮಾಜದಲ್ಲಿ ಅವುಗಳ ಮಹತ್ವ ಹೆಚ್ಚಿದೆ. ವಿಶ್ವಶಾಂತಿಯ ದೃಷ್ಟಿಯಿಂದ ಇಂತಹ ಧಾರ್ಮಿಕ ರಥಯಾತ್ರೆಗಳು ಹೆಚ್ಚಾಗಲಿ ಎಂದು ಆಶಿಸಿದರು.



ವಿಶ್ವಶಾಂತಿಯ ದೃಷ್ಟಿಯಿಂದ ಇಂತಹ ಧಾರ್ಮಿಕ ರಥಯಾತ್ರೆಗಳು ಹೆಚ್ಚಾಗಲಿ

ಆಂಜನೇಯ ಆಶ್ರಮದ ಸ್ವಾಮಿ ಹನುಮದ್ ಸದಾನಂದ ಸರಸ್ವತಿ ಸ್ವಾಮೀಜಿ ರಥಯಾತ್ರೆಯ ವೈಶಿಷ್ಟ್ಯ, ರೂಪುರೇಷೆಗಳ ಕುರಿತು ಮಾಹಿತಿ ನೀಡಿದರು. 6ನೇ ವರ್ಷಯಾತ್ರೆಯಾಗಿದ್ದು, ಕರ್ನಾಟಕ, ಕೇರಳ, ತಮಿಳುನಾಡು ರಾಜ್ಯಗಳಲ್ಲಿ ಸಂಚರಿಸಿ ಧರ್ಮಜಾಗೃತಿಯನ್ನು ಉಂಟುಮಾಡಲು ಶ್ರಮಿಸುತ್ತಿದೆ ಎಂದರು.

ಪ್ರಮುಖರಾದ ಎಂ. ರಾಘುವೇಂದ್ರ ಭಂಡಾರ್ಕರ್, ಕೆ. ಶಿವ ಭಂಡಾರ್ಕರ್, ಸುಧೀರ್ ನಾಯ್ಕ್, ಗಣೇಶ್ ಮಲ್ಯ, ಎಂ. ಶಾಂತರಾಮ ಕುಡ್ವ, ಮಠದ ವ್ಯವಸ್ಥಾಪಕ ಸಂಜಯತ್ ಕುಮಾರ್, ಎಸ್.ಪಿ. ವಿದ್ಯಾ ಕುಮಾರ್, ಗಣೇಶ್ ಪೈ ಅಲಂಗಾರು, ಸದಾಶಿವ ಶೆಟ್ಟಿ ಅಲಂಗಾರು, ಕಿಶೋರ್ ಭಂಡಾರಿ, ಭರತ್ ಶೆಟ್ಟಿ, ಮಂಜುನಾಥ ಪೈ, ಗಣೇಶ್ ನಾಯ್ಕ್ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಕೊಡಗು ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಆನೆ -ಮಾನವ ಸಂಘರ್ಷ | ಅರಣ್ಯ ಸಚಿವರ ಕಚೇರಿಯಲ್ಲಿ ಶಾಸಕ, ಹಿರಿಯ ಅಧಿಕಾರಿಗಳ ಸಭೆ

ಆನೆ ಕಂದಕ-ಸೌರ ಬೇಲಿಸಮರ್ಪಕ ನಿರ್ವಹಣೆಗೆ ಸಚಿವ ಖಂಡ್ರೆ ನಿರ್ದೇಶನ

ಮಡಿಕೇರಿ: ಆನೆ-ಮಾನವ ಸಂಘರ್ಷ ನಿಯಂತ್ರಿಸುವ ದಿಸೆಯಲ್ಲಿ ಕೊಡಗು ಜಿಲ್ಲೆಯಲ್ಲಿ ಈಗಾಗಲೇ ತೋಡಲಾಗಿರುವ ಆನೆ ಕಂದಕ ಮತ್ತು ಅಳವಡಿಸಿರುವ ಸೌರಬೇಲಿಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವಂತೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಅವರು ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದ್ದಾರೆ.

ಬೆಂಗಳೂರಿನ ವಿಕಾಸಸೌಧದ ತಮ್ಮ ಕಚೇರಿಯಲ್ಲಿ ಬುಧವಾರ ಶಾಸಕರಾದ ಎ.ಎಸ್. ಪೊನ್ನಣ್ಣ, ಡಾ.ಮಂಥರ್ ಗೌಡ ಮತ್ತು ದರ್ಶನ್ ಧ್ರುವನಾರಾಯಣ್ ಅವರ ಸಮ್ಮುಖದಲ್ಲಿ ಹಿರಿಯ ಅಧಿಕಾರಿಗಳ ಸಭೆ ನಡೆಸಿದ ಅವರು, ಕೊಡಗಿನಲ್ಲಿ ವನ್ಯಜೀವಿಗಳಿಂದ ಅಮೂಲ್ಯ ಜೀವ ಹಾನಿಯಾಗುತ್ತಿರುವುದು ಆತಂಕದ ವಿಷಯವಾಗಿದೆ. ಆನೆ-ಮಾನವ ಸಂಘರ್ಷ ನಿಯಂತ್ರಿಸುವ ನಿಟ್ಟಿನಲ್ಲಿ ಹಾಲಿ ಇರುವ 422 ಕಿ.ಮೀ ಆನೆ ಕಂದಕ ಮತ್ತು 544 ಕಿ.ಮೀ. ಸೌರಬೇಲಿಯ ಸಮರ್ಪಕ ದುರಸ್ತಿ ಕಾರ್ಯವನ್ನು ಒಂದು ತಿಂಗಳೊಳಗೆ ಪೂರ್ಣಗೊಳಿಸುವಂತೆ ಸೂಚಿಸಿದರು.



ಗಸ್ತು ಹೆಚ್ಚಳ ಮಾಡಬೇಕು

ರಾಜ್ಯದಲ್ಲಿ ವನ್ಯಜೀವಿ-ಮಾನವ ಸಂಘರ್ಷದಲ್ಲಿ ಸಂಭವಿಸುವ ಸಾವುಗಳ ಪೈಕಿ ಶೇ.38ರಷ್ಟು ಕೊಡಗು ಜಿಲ್ಲೆಯಲ್ಲೇ ಆಗುತ್ತಿದ್ದು, ಇದನ್ನು ನಿಯಂತ್ರಿಸಲು ಗಸ್ತು ಹೆಚ್ಚಳ ಮಾಡಬೇಕು. ಆನೆ ಕಾರ್ಯಪಡೆ, ತ್ವರಿತ ಸ್ಪಂದನಾ ಪಡೆ ಸೇರಿದಂತೆ ಮಾನವ ವನ್ಯಜೀವಿ ಸಂಘರ್ಷ ನಿಯಂತ್ರಣ ಘಟಕಗಳನ್ನು ಬಲಪಡಿಸಬೇಕೆಂದು ಅವರು ಸೂಚಿಸಿದರು.

ವನ್ಯಜೀವಿಗಳ ಸಂಚಾರ ಮಾಹಿತಿ ರವಾನಿಸಲು, ಅಕ್ರಮ ಮರ ಕಡಿತಲೆ ಮತ್ತು ವನ್ಯಜೀವಿ ಕಳ್ಳಬೇಟೆ ನಿಗ್ರಹಿಸಲು ಬಲಿಷ್ಠ ನಿಸ್ತಂತು ಜಾಲ (ವೈರ್‌ಲೆಸ್ ನೆಟ್ ವರ್ಕ್) ಕಾರ್ಯಾರಂಭಕ್ಕೆ ಎಲ್ಲಾ ಅಗತ್ಯ ಕ್ರಮ ಕೈಗೊಳ್ಳುವಂತೆಯೂ ಸಚಿವರು ಹಿರಿಯ ಅಧಿಕಾರಿಗಳಿಗೆ ಸೂಚಿಸಿದರು.

ವಾಹನ ಖರೀದಿಗೆ ಸಮ್ಮತಿ

ಆನೆ ಸೇರಿದಂತೆ ವನ್ಯಜೀವಿಗಳು ತೋಟಗಳಿಗೆ ಬಂದಾಗ ಅವುಗಳನ್ನು ಕಾಡಿಗೆ ಮರಳಿಸಲು ಸಿಬ್ಬಂದಿ ತ್ವರಿತ ಸ್ಪಂದಿಸಲು ಹಾಲಿ ಇರುವ 6 ವಾಹನಗಳ ಜೊತೆಗೆ ಈಗಾಗಲೇ 4 ವಾಹನ ಖರೀದಿಸಲಾ ಗಿದೆ. ಇನ್ನೂ ಹೆಚ್ಚುವರಿಯಾಗಿ 4 ವಾಹನ ಖರೀದಿಸಿ, ಸ್ಥಳೀಯ ಉತ್ಸಾಹಿ ಯುವಕರನ್ನು ಹೊರಗುತ್ತಿಗೆ ಆಧಾರದಲ್ಲಿ ಕಾರ್ಯಪಡೆಗೆ ಸೇರ್ಪಡೆ ಮಾಡಿಕೊಂಡು ಹೆಚ್ಚು ಕ್ರಿಯಾಶೀಲವಾಗಿ ಕಾರ್ಯ ನಿರ್ವಹಣೆ ಮಾಡಬೇಕು ಎಂದು ಈಶ್ವರ ಖಂಡ್ರೆ ನಿರ್ದೇಶನ ನೀಡಿದರು.

ಅಧಿಕಾರಿಗಳಿಗೆ ಕಿವಿಮಾತು

ಸ್ಥಳೀಯ ಜನರೊಂದಿಗೆ ಅರಣ್ಯ ಅಧಿಕಾರಿಗಳು ಸೌಹಾರ್ದಯುತವಾಗಿ ವರ್ತಿಸಬೇಕು. ಅವರೊಂದಿಗೆ ಉತ್ತಮ ಬಾಂಧವ್ಯ ಇದ್ದಾಗ, ಅವರ ಸಹಕಾರವೂ ಲಭಿಸುತ್ತದೆ. ಸಮಸ್ಯೆಗಳಿಗೆ ಪರಿಹಾರ ಲಭಿಸುತ್ತದೆ ಎಂದು ಸಚಿವರು ಅಧಿಕಾರಿಗಳಿಗೆ ಕಿವಿಮಾತು ಹೇಳಿದರು.

ಮಾಹಿತಿ ನೀಡಲು ಆದೇಶ

ಕೊಡಗು ಜಿಲ್ಲೆಯಲ್ಲಿನ ಪ್ರತಿ ವಲಯದಲ್ಲಿರುವ ತೋಟಗಳಲ್ಲಿ ಎಷ್ಟು ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ ಎಂಬ ಬಗ್ಗೆ ದತ್ತಾಂಶ ಕಲೆ ಹಾಕಿ, ಆಯಾ ವಲಯದಲ್ಲಿ ವನ್ಯಜೀವಿಗಳು ಅದರಲ್ಲೂ ಆನೆಗಳು ಜನ ವಸತಿ, ತೋಟಗಳ ಬಳಿ ಬಂದಾಗ ಆ ಕಾರ್ಮಿಕರಿಗೆ ತಕ್ಷಣವೇ ವಾಟ್ಸ್ ಆಪ್ ಮೂಲಕ ಮತ್ತು ಮೈಕ್ ಅಳವಡಿಸಿದ ವಾಹನಗಳ ಮೂಲಕ ಮಾಹಿತಿ ರವಾನಿಸುವಂತೆಯೂ ಸಚಿವರು ಸಲಹೆ ಮಾಡಿದರು.

ನೀರು-ಮೇವಿನ ಕೊರತೆ ನೀಗಿಸಿ

ಮಾರ್ಚ್ ಕೊನೆಯ ವಾರದಿಂದ ಮೇ ತಿಂಗಳವರೆಗೆ ಬಿರು ಬಿಸಿಲು ಇರುವ ಕಾರಣ ಕಾಡಿನಲ್ಲಿ ವನ್ಯಜೀವಿಗಳಿಗೆ ನೀರಿನ ಮತ್ತು ಮೇವಿನ ಕೊರತೆ ಬಾರದಂತೆ ಕ್ರಮ ವಹಿಸಲು ಮತ್ತು ಕಾಡಿನೊಳಗಿರುವ ಜಲಗುಂಡಿಗಳಲ್ಲಿರುವ ನೀರಿನ ಪ್ರಮಾಣದ ಬಗ್ಗೆ ಸಾರ್ವಜನಿಕರಿಗೆ ಮತ್ತು ಸ್ಥಳೀಯ ಜನ ಪ್ರತಿನಿಧಿಗಳಿಗೆ ಮಾಹಿತಿ ನೀಡುವಂತೆಯೂ ಈಶ್ವರ ಖಂಡ್ರೆ ತಿಳಿಸಿದರು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಪಡೆ ಮುಖ್ಯಸ್ಥೆ ಮೀನಾಕ್ಷಿ ನೇಗಿ, ಮುಖ್ಯ ವನ್ಯಜೀವಿ ಪರಿಪಾಲಕ ಕುಮಾರ್ ಪುಷ್ಕರ್, ಹಿರಿಯ ಅರಣ್ಯಾಧಿಕಾರಿಗಳಾದ ಮನೋಜ್ ರಾಜನ್, ಮನೋಜ್ ಕುಮಾರ್, ಸೋನಾಲ್ ವ್ರಿಸ್ನಿ ಸಭೆಯಲ್ಲಿ ಹಾಜರಿದ್ದರು.

ಕಿರುಸುದ್ದಿ

ಐಪಿಎಲ್ ಹೆಸರಿನ ವಿರುದ್ಧ ಪಿಐಎಲ್: ಅರ್ಜಿ ವಜಾ

ತಿರುವನಂತಪುರ: ಇಂಡಿಯನ್ ಪ್ರೀಮಿಯರ್ ಲೀಗ್ ಎಂಬ ಹೆಸರು ಬಳಸಿದ್ದಕ್ಕಾಗಿ ಭಾರತೀಯ ಕ್ರಿಕೆಟ್ ಸಂಸ್ಥೆ ವಿರುದ್ಧ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಕೇರಳ ಹೈಕೋರ್ಟ್ ವಜಾಗೊಳಿಸಿತು. ಎರ್ನಾಕುಲಮ್‌ನ ಆಶಿಖಿ ಎಂಬುವವರು, ಕೂಟ ಒಂದು ಫ್ರಾಂಚೈಸಿ ಆಧರಿತ ಪಂದ್ಯಾವಳಿಯಾದರೂ ಇದರ ಹೆಸರನ್ನು ಭಾರತದೊಂದಿಗೆ ಜೋಡಿಸಲಾಗಿದೆ. ಇದು ಪಂದ್ಯಾವಳಿಯನ್ನು ರಾಷ್ಟ್ರೀಯ ಕೂಟವೆಂಬಂತೆ ಸೂಚಿಸುತ್ತದೆ. ಹೀಗಾಗಿ ಬಿಸಿಸಿಐ ಈ ಇಂಡಿಯನ್ ಪ್ರೀಮಿಯರ್ ಲೀಗ್ ಹೆಸರಲ್ಲಿ ನಡೆಸುತ್ತಿರುವುದು ಅಕ್ರಮ ಎಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಬುಧವಾರ ಈ ಬಗ್ಗೆ ವಿಚಾರಣೆ ನಡೆಸಿದ್ದ ನ್ಯಾ. ಸೌಮೆನ್ ಸೇನ್ ಹಾಗೂ ನ್ಯಾ. ಸ್ಯಾಮ್ ಕುಮಾರ್ ವಿ. ಎಮ್. ಅವರಿದ್ದ ವಿಭಾಗೀಯ ಪೀಠವು ಅರ್ಜಿಯನ್ನು ಆಧಾರರಹಿತ ಎಂದು ಪರಿಗಣಿಸಿ ವಜಾಗೊಳಿಸಿದೆ.

ಕಣಕ್ಕಿಳಿದ ಕಿಂಗ್ ಕೊಹ್ಲಿ



ಹೊಸದಿಲ್ಲಿ: ಮುಂದಿನ ವಾರದಿಂದ ಶುರುವಾಗಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಗಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪ್ರಮುಖ ಆಟಗಾರ ವಿರಾಟ್ ಕೊಹ್ಲಿ ಬೆಂಗಳೂರಿಗೆ ಬಂದಿಳಿದರು. ಹಾಲಿ ಚಾಂಪಿಯನ್ ಬೆಂಗಳೂರು ಮತ್ತು ಹೈದರಾಬಾದ್ ಪಂದ್ಯದೊಂದಿಗೆ ಮಾರ್ಚ್ 28ಕ್ಕೆ ಐಪಿಎಲ್ ಶುರುವಾಗಲಿದೆ. ಇದಕ್ಕೂ ಮುನ್ನ ಲಂಡನ್‌ನಿಂದ ವಿರಾಟ್ ಕೊಹ್ಲಿ ಭಾರತಕ್ಕೆ ಆಗಮಿಸಿದ್ದಾರೆ. ಬೆಂಗಳೂರಿಗೆ ತಲುಪಿದ್ದು, ತಂಡ ಸೇರಿಕೊಂಡಿದ್ದಾರೆ. ಶೀಘ್ರದಲ್ಲೇ ಅಭ್ಯಾಸಕ್ಕಿಳಿಯಬಹುದು. ಇನ್ನೊಂದೆಡೆ ಚೆನ್ನೈ ತಂಡದ ಧೋನಿ ಮತ್ತು ಮುಂಬೈನ ರೋಹಿತ್ ಶರ್ಮ ಕೂಡ ನೆಟ್ಸ್‌ನಲ್ಲಿ ಕಾಣಿಸಿಕೊಂಡಿದ್ದು, ದೇಶದಲ್ಲಿ ಐಪಿಎಲ್ ಜ್ವರ ಶುರುವಾದಂತಿದೆ.

ಥಾಮಸ್ ಮತ್ತು ಉಬರ್ ಕಪ್: ಭಾರತ ಎ ಗುಂಪಿನಲ್ಲಿ

ಹೊಸದಿಲ್ಲಿ: ಥಾಮಸ್ ಮತ್ತು ಉಬರ್ ಕಪ್ ಚಾಂಪಿಯನ್‌ಶಿಪ್ ಡ್ರಾ ಬುಧವಾರ ನಡೆದಿದ್ದು ಏಪ್ರಿಲ್ 24ರಿಂದ ಮೇ 3ರವರೆಗೆ ಡೆನ್ಮಾರ್ಕ್‌ನ ಹೋರ್ಸೆನ್ಸ್‌ನಲ್ಲಿ ನಡೆಯಲಿದೆ. ಭಾರತ ಪುರುಷರ ತಂಡವನ್ನು ಎ ಗುಂಪಿನಲ್ಲಿ ಹಾಲಿ ಚಾಂಪಿಯನ್ ಚೀನಾ, ಓಶಿಯಾನಿಯಾ ಚಾಂಪಿಯನ್ ಆಸ್ಟ್ರೇಲಿಯಾ ಮತ್ತು ಪ್ಯಾನ್‌ಅಮ್ ಚಾಂಪಿಯನ್ ಕೆನಡಾ ಜೊತೆ ಸೇರಿಸಲಾಗಿದೆ. ಮಹಿಳಾ ತಂಡಕ್ಕೆ ಇನ್ನಷ್ಟು ಕಠಿಣ ಸವಾಲು ಎದುರಾಗಿದ್ದು, ಚೀನಾ, ಯೂರೋಪಿನ ಬಲಿಷ್ಠ ತಂಡ ಡೆನ್ಮಾರ್ಕ್ ಹಾಗೂ ಉಕ್ರೇನ್ ತಂಡಗಳ ವಿರುದ್ಧ ಆಡಬೇಕಿದೆ. ನಾಲ್ಕು ಗುಂಪುಗಳಲ್ಲಿ ಮೊದಲ ಎರಡು ಸ್ಥಾನ ಗಳಿಸಿದ ತಂಡಗಳು ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಲಿವೆ. 2022ರಲ್ಲಿ ಈ ಪ್ರಶಸ್ತಿ ಗೆದ್ದಿದ್ದ ಭಾರತ ಪುರುಷರ ತಂಡ, ಕಳೆದ ಬಾರಿ ಕ್ವಾರ್ಟರ್ ಫೈನಲ್‌ನಲ್ಲಿ ನಂತರದ ಚಾಂಪಿಯನ್ ಚೀನಾ ವಿರುದ್ಧ ಸೋತು ಹೊರಬಿದ್ದಿತ್ತು.

ಭಾರತ ಜಗತ್ತಿನ ಅತಿ ದೊಡ್ಡ ಶಕ್ತಿ

ಅಯೋಧ್ಯೆ: ಭಾರತ ಜಗತ್ತಿನ ಅತಿ ದೊಡ್ಡ ಶಕ್ತಿಯಾಗಿದೆ. ಅದು ಸಂಹಾರಕ್ಕಾಗಿ ಅಲ್ಲ ಸಂರಕ್ಷಣೆಗಾಗಿ, ಭಾರತ ಆದರ್ಶವನ್ನು ಮರೆತರೆ ಜಗತ್ತಿನಲ್ಲಿ ಆದರ್ಶ ಮರೆಯಾಗಿಬಿಡುತ್ತದೆ ಎಂದು ಆರ್‌ಎಸ್‌ಎಸ್ ನ ಪ್ರಮುಖರಾದ ಸುರೇಶ ಭಯ್ಯಾಜಿ ಜೋಶಿ ಹೇಳಿದ್ದಾರೆ. ಅಯೋಧ್ಯೆ ಹಿಂದೂ ಹೊಸವರ್ಷದ ಪ್ರಯುಕ್ತ ಪ್ರತಿವರ್ಷದಂತೆ ಈ ವರ್ಷವೂ ಕೂಡ ಸಂಜೆಯ ವೇಳೆ ನಡೆದ ರಾಮಕೋಟ್ ವಿಶೇಷ ಪರಿಕ್ರಮದ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ವಿಶ್ವಕ್ಕೆ ಆದರ್ಶದ ಬಗ್ಗೆ ತಿಳುವಳಿಕೆ ನೀಡುವವರು ಇರುವುದಿಲ್ಲ ಎಂದು ಹೇಳಿದರು. ಹಿಂದೂ ಶಕ್ತನಾಗಿದ್ದು ಒಗ್ಗಟ್ಟಿನಲ್ಲಿ ಬಲವಿದೆ ಎಂದು ತೋರಿಸಿ ಕೊಟ್ಟಿದ್ದಾನೆ ಎಂದರು. ಈ ಕಾರ್ಯಕ್ರಮದಲ್ಲಿ ಹಲವಾರು ಜನ ಸಾಧು,ಸಂತ ಮಹಾತ್ಮರು ಪಾಲ್ಗೊಂಡಿದ್ದರು, ಮತ್ ಗಜೇಂದ್ರ ಮಂದಿರದಿಂದ ಆರಂಭವಾದ ಪರಿಕ್ರಮ ಶ್ರೀ ರಾಮ ಜನ್ಮಭೂಮಿ ಸಮೇತವಾಗಿ ಹಲವಾರು ಮಂದಿರಗಳ ಪರಿಕ್ರಮದ ನಂತರ ಮರಳಿ ಮತ್ ಗಜೇಂದ್ರ ಮಂದಿರಕ್ಕೆ ತಲುಪಿದ ನಂತರ ಪರಿಕ್ರಮ ಮುಕ್ತಾಯವಾಯಿತು. ಈ ಸಂದರ್ಭದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಕ್ಷೇತ್ರ ಪ್ರಚಾರಕರಾದ ಅನೀಲ ಜಿ, ವೈದೇಹಿ ವಲ್ಲಭ ಶರಣ, ರಾಜಕುಮಾರ ದಾಸ ಹೀಗೆ ಹಲವಾರು ಜನ ಪಾಲ್ಗೊಂಡಿದ್ದರು.

ಎಫ್‌ಐಎಚ್ ವಿಶ್ವಕಪ್ ಡ್ರಾ ಬಿಡುಗಡೆ | ಡಿ ಗುಂಪಿನಲ್ಲಿ ಭಾರತ | ಚೀನಾ ಮತ್ತಿತರ ತಂಡಗಳ ವಿರುದ್ಧ ಮಹಿಳೆಯರ ಆಟ

ಹಾಕಿ ವಿಶ್ವಕಪ್‌ನಲ್ಲಿ ಭಾರತ-ಪಾಕ್ ಪಂದ್ಯ

ಹೊಸದಿಲ್ಲಿ: ಭಾರತ ಹಾಗೂ ಪಾಕಿಸ್ತಾನ ತಂಡಗಳು ಮತ್ತೊಮ್ಮೆ ಮುಖಾಮುಖಿಯಾಗಲು ಸಜ್ಜಾಗಿದ್ದು, ಅಂತಾರಾಷ್ಟ್ರೀಯ ಹಾಕಿ ಸಂಸ್ಥೆಯ ಹಾಕಿ ವಿಶ್ವಕಪ್ ಪಂದ್ಯಾವಳಿಯ ಪುರುಷರಲ್ಲಿ ಉಭಯ ತಂಡಗಳು ಎದುರಾಗಲಿವೆ. ಮಹಿಳೆಯರ ವಿಭಾಗದಲ್ಲಿ ಭಾರತ ಚೀನಾ ತಂಡವನ್ನು ಮೊದಲ ಪಂದ್ಯದಲ್ಲಿ ಎದುರಿಸಲಿದೆ.

ಎಫ್‌ಐಎಚ್ ಹಾಕಿ ವಿಶ್ವಕಪ್ ಪಂದ್ಯಾವಳಿಯ ಮುಖ್ಯ ಡ್ರಾ ಪಂದ್ಯಗಳ ವೇಳಾಪಟ್ಟಿ ಬಿಡುಗಡೆಯಾಗಿದೆ. ಭಾರತ ಮತ್ತು ಪಾಕಿಸ್ತಾನ ಹಾಕಿ ತಂಡಗಳು ಮತ್ತೆ ಮುಖಾಮುಖಿಯಾಗಲು ಸಜ್ಜಾಗಿವೆ. ಎಫ್‌ಐಎಚ್ ಪುರುಷರ ಹಾಕಿ ವಿಶ್ವಕಪ್‌ನಲ್ಲಿ ಈ ಎರಡು ವೈರೋಟಿ ತಂಡಗಳು ಡಿ ಗುಂಪಿನಲ್ಲಿವೆ. ಈ ಗುಂಪಿನಲ್ಲಿ ಇಂಗ್ಲೆಂಡ್ ಮತ್ತು ವೇಲ್ಸ್ ತಂಡಗಳೂ ಸೇರಿವೆ. ಈ ವಿಶ್ವಕಪ್ ಆಗಸ್ಟ್ ತಿಂಗಳಲ್ಲಿ ಬೆಲ್ಜಿಯಂ ಮತ್ತು ನೆದರ್‌ಲ್ಯಾಂಡ್ಸ್‌ನಲ್ಲಿ ನಡೆಯಲಿದೆ. ಪ್ರೋ ಲೀಗ್ ಪಂದ್ಯಾವಳಿಯಲ್ಲಿ ಹಿನ್ನಡೆ ಅನುಭವಿಸಿದರೂ ಭಾರತ ಏಷ್ಯಾಕಪ್‌ನಲ್ಲಿ ಭರ್ಜರಿ ಪ್ರದರ್ಶನ ನೀಡಿ ಅರ್ಹತೆ ಪಡೆದಿದೆ. ಮಹಿಳೆಯರು ಕೂಡ ಏಷ್ಯಾಕಪ್‌ನಲ್ಲಿ ಉತ್ತಮ ಪ್ರದರ್ಶನ ನೀಡಿ ಅರ್ಹತೆ ಗಿಟ್ಟಿಸಿಕೊಂಡಿದ್ದರು.

ಭಾರತ ಮತ್ತು ಪಾಕಿಸ್ತಾನ ಕೊನೆಯದಾಗಿ 2024ರಲ್ಲಿ ನಡೆದ ಏಷ್ಯನ್ ಚಾಂಪಿಯನ್ಸ್ ಟ್ರೋಫಿಯಲ್ಲಿ ಮುಖಾಮುಖಿಯಾಗಿದ್ದು, ಭಾರತ 2-1 ಅಂತರದಲ್ಲಿ



ಜಯ ಸಾಧಿಸಿತ್ತು. ಇತ್ತೀಚಿನ ಪಂದ್ಯಗಳಲ್ಲಿ ಭಾರತ ಮೇಲುಗೈ ಸಾಧಿಸಿದ್ದರೂ, ಒಟ್ಟು ಮುಖಾಮುಖಿ ದಾಖಲೆಗಳಲ್ಲಿ ಪಾಕಿಸ್ತಾನ ಇನ್ನೂ ಮುನ್ನಡೆಯಲ್ಲಿದೆ. ವಿಶ್ವಕಪ್‌ಗೆ ಮುನ್ನ ಈ ಎರಡು ತಂಡಗಳು ಎಫ್‌ಐಎಚ್ ಪ್ರೊ ಲೀಗ್‌ನಲ್ಲಿಯೂ ಮತ್ತೆ ಎದುರಾಗಲಿವೆ. ಒಲಿಂಪಿಕ್ ಚಾಂಪಿಯನ್ ನೆದರ್ಲೆಂಡ್ಸ್ ತಂಡವನ್ನು ಎ ಗುಂಪಿನಲ್ಲಿ ಅರ್ಜೆಂಟಿನಾ, ನ್ಯೂಜಿಲೆಂಡ್ ಮತ್ತು ಜಪಾನ್ ಜೊತೆ ಸೇರಿಸಲಾಗಿದೆ. ಹಾಲಿ ಚಾಂಪಿಯನ್ ಜರ್ಮನಿ ತಂಡ ಬಿ ಗುಂಪಿನಲ್ಲಿ ಬೆಲ್ಜಿಯಂ, ಫ್ರಾನ್ಸ್ ಮತ್ತು ಮಲೇಶಿಯಾ ಜೊತೆ ಇದೆ.

ಭಾರತಕ್ಕೆ ಯಾವ್ಯಾವ ತಂಡ ಎದುರಾಳಿ?: ಭಾರತ ಇರುವ ಗುಂಪಿನಲ್ಲಿ ಇಂಗ್ಲೆಂಡ್, ವೇಲ್ಸ್ ಹಾಗೂ ಪಾಕಿಸ್ತಾನ ತಂಡಗಳಿವೆ. ವೇಳಾಪಟ್ಟಿ ಇನ್ನೂ ಪ್ರಕಟವಾಗಬೇಕಿರುವ ಹೊತ್ತಿನಲ್ಲಿ ಭಾರತ ಎಫ್‌ಐಎಚ್‌ನಲ್ಲಿ ಹಿನ್ನಡೆ ಅನುಭವಿಸಿದೆ. ಈ ಹಿಂದಿನ ಪಂದ್ಯಗಳಲ್ಲಿ ಭಾರತ ಭಾರೀ ಹಿನ್ನಡೆ ಅನುಭವಿಸಿದೆ. ಸತತ ಸೋಲು ಗಳಿಸಿದರೂ, ಪ್ರೋ ಲೀಗ್ ಬಿಟ್ಟು ಬೇರೆ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಬೆನ್ನಲ್ಲೇ ವಿಶ್ವಾಸದಲ್ಲಿ ಕಾಣಿಸಿಕೊಂಡಿದೆ.

ಮಹಿಳೆಯರಿಗೆ ದೊಡ್ಡ ಸವಾಲು: ಎಫ್‌ಐಎಚ್ ಪ್ರೋ ಲೀಗ್‌ನಲ್ಲಿ ಉತ್ತಮ ಪ್ರದರ್ಶನವನ್ನೇ ನೀಡಿರುವ ಭಾರತ ಮಹಿಳೆಯರ ತಂಡವು ಹೈದರಾಬಾದ್‌ನಲ್ಲಿ ನಡೆದಿದ್ದ ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಎಲ್ಲಿಲ್ಲದ ಉತ್ತಮ ಪ್ರದರ್ಶನ ನೀಡಿ ರನ್ನರ್-ಅಪ್ ಆಗಿತ್ತು. ಅರ್ಹತೆ ಕೂಡ ಗಿಟ್ಟಿಸಿಕೊಂಡಿತು. ಪ್ರತಿಯೊಬ್ಬ ಆಟಗಾರ್ತಿ ಕೂಡ ಭರ್ಜರಿ ಪ್ರದರ್ಶನ ನೀಡಿರುವುದು ತಂಡ ವಿಶ್ವಾಸದಲ್ಲಿದೆ. ಆದಾಗ್ಯೂ ವಿಶ್ವಕಪ್‌ನಲ್ಲಿ ಭಾರತ ಮಹಿಳಾ ತಂಡವು ಚೀನಾ, ಇಂಗ್ಲೆಂಡ್ ಮತ್ತು ದಕ್ಷಿಣ ಆಫ್ರಿಕಾ ವಿರುದ್ಧ ಆಡಲಿದೆ.

ಯಾವ ಪಂದ್ಯ ಎಲ್ಲಿ?

ಪುರುಷರ ವಿಭಾಗದಲ್ಲಿ ಎ ಗುಂಪಿನಲ್ಲಿರುವ ತಂಡಗಳ ಪಂದ್ಯವು ನೆದರ್ಲೆಂಡ್ಸ್ ನಲ್ಲಿ ನಡೆಯಲಿವೆ. ಬಿ ಮತ್ತು ಸಿ ಗುಂಪಿನ ಪಂದ್ಯಗಳು ಬೆಲ್ಜಿಯಂನಲ್ಲಿ ಮತ್ತು ಡಿ ಗುಂಪಿನ ಪಂದ್ಯಗಳು ನೆದರ್ಲೆಂಡ್ಸ್ ನಲ್ಲೇ ನಡೆಯಲಿವೆ. ಮಹಿಳೆಯರ ವಿಭಾಗದಲ್ಲೂ ಇದೇ ಮಾದರಿಯಿದ್ದು, ಎ ಮತ್ತು ಡಿ ಪಂದ್ಯಗಳು ನೆದರ್ಲೆಂಡ್ಸ್, ಬಿ-ಸಿ ಪಂದ್ಯಗಳು ಬೆಲ್ಜಿಯಂನಲ್ಲಿ ನಡೆಯಲಿವೆ.

ಪುರುಷರ ಗುಂಪು

- ಎ ಗುಂಪು: ನೆದರ್ಲೆಂಡ್ಸ್, ಅರ್ಜೆಂಟಿನಾ, ನ್ಯೂಜಿಲೆಂಡ್, ಜಪಾನ್
- ಬಿ ಗುಂಪು: ಬೆಲ್ಜಿಯಂ, ಜರ್ಮನಿ, ಫ್ರಾನ್ಸ್, ಮಲೇಶಿಯಾ
- ಸಿ ಗುಂಪು: ಆಸ್ಟ್ರೇಲಿಯಾ, ಸ್ಪೇನ್, ಐರ್ಲೆಂಡ್, ದಕ್ಷಿಣ ಆಫ್ರಿಕಾ
- ಡಿ ಗುಂಪು: ಇಂಗ್ಲೆಂಡ್, ಭಾರತ, ಪಾಕಿಸ್ತಾನ, ವೇಲ್ಸ್

ಮಹಿಳೆಯರ ವಿಭಾಗದಲ್ಲಿ

- ಪೂಲ್ ಎ: ನೆದರ್ಲೆಂಡ್ಸ್, ಆಸ್ಟ್ರೇಲಿಯಾ, ಚಿಲಿ, ಜಪಾನ್
- ಪೂಲ್ ಬಿ: ಅರ್ಜೆಂಟೀನಾ, ಜರ್ಮನಿ, ಯುಎಸ್‌ಎ, ಸ್ಕಾಟ್ಲೆಂಡ್
- ಪೂಲ್ ಸಿ: ಬೆಲ್ಜಿಯಂ, ಸ್ಪೇನ್, ನ್ಯೂಜಿಲೆಂಡ್, ಐರ್ಲೆಂಡ್
- ಪೂಲ್ ಡಿ: ಚೀನಾ, ಇಂಗ್ಲೆಂಡ್, ಭಾರತ, ದಕ್ಷಿಣ ಆಫ್ರಿಕಾ
- ಮಹಿಳೆಯರ ವಿಶ್ವಕಪ್ ಗುಂಪುಗಳು

ಬೂಮ್ರಾ ವೇತನ ಹೆಚ್ಚಳ?

ಮುಂಬೈ: ವಾರ್ಷಿಕ ಗುತ್ತಿಗೆಯಲ್ಲಿ ಎ ಗ್ರೇಡ್‌ನಲ್ಲಿರುವ ಜಸ್‌ಪ್ರೀತ್ ಬೂಮ್ರಾ ಅವರ ವೇತನ ಹೆಚ್ಚುಗೊಳಿಸಲು ಬಿಸಿಸಿಐ ಚಿಂತನೆ ನಡೆಸಿದೆ. ಭಾರತ ತಂಡ ಇತ್ತೀಚಿಗೆ ಮುಕ್ತಾಯಗೊಂಡಿರುವ ಟಿ20 ವಿಶ್ವಕಪ್ ಗೆದ್ದುಕೊಂಡಿದೆ. ಈ ಗೆಲುವಿನಲ್ಲಿ ಬೂಮ್ರಾ ಪಾತ್ರ ಪ್ರಮುಖವಾಗಿರುವುದನ್ನು ಗಮನಿಸಿರುವ ಬಿಸಿಸಿಐ ಅವರಿಗೆ ಉಡುಗೊರೆಯಾಗಿ 2 ಕೋಟಿ ರೂ. ಹೆಚ್ಚುವರಿ ಮೊತ್ತ ನೀಡುವುದಕ್ಕೆ ಮುಂದಾಗಿದೆ ಎಂದು ವರದಿಯಾಗಿದೆ.

ಫೆಬ್ರವರಿಯಲ್ಲಿ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ವಾರ್ಷಿಕ ಗುತ್ತಿಗೆಯ ಪಟ್ಟಿ ಬಿಡುಗಡೆ ಮಾಡಿತ್ತು. ಪ್ರಮುಖ ಬದಲಾವಣೆಯಲ್ಲಿ ಈ ಬಾರಿ ಮೂರೇ ದರ್ಜೆಗಳಲ್ಲಿ ಆಟಗಾರರನ್ನು ವಿಂಗಡಿಸಲಾಗಿದೆ. ಎ ಗ್ರೇಡ್‌ನಲ್ಲಿ ಶುಭಮನ್ ಗಿಲ್, ರವೀಂದ್ರ ಜಡೇಜಾ ಮತ್ತು ಜಸ್‌ಪ್ರೀತ್ ಬೂಮ್ರಾ ಇದ್ದು, ಬಿ ಮತ್ತು ಸಿ ಗ್ರೇಡ್‌ನಲ್ಲಿ ಪ್ರಮುಖ ಆಟಗಾರರು ಸೇರಿಕೊಂಡಿದ್ದಾರೆ. ಮತ್ತೊಂದು ಬದಲಾವಣೆಯಲ್ಲಿ ಬಿಸಿಸಿಐ ವಾರ್ಷಿಕ ಮೊತ್ತವನ್ನೂ ಕಡಿತಗೊಳಿಸಿದೆ. ಎ ಗ್ರೇಡ್‌ನಲ್ಲಿದ್ದವರಿಗೆ 5 ಕೋಟಿ ರೂ. ಬಿನಲ್ಲಿರುವವರಿಗೆ 3 ಮತ್ತು ಸಿನಲ್ಲಿರುವವರಿಗೆ 2 ಕೋಟಿ ನೀಡುವುದಾಗಿ ಘೋಷಿಸಿತ್ತು.

ಆದರೆ ಈ ವೇತನದಲ್ಲಿ ಬದಲಾವಣೆ ಮಾಡಿ, ಬೂಮ್ರಾ ಅವರಿಗೆ ಮಾತ್ರ 7 ಕೋಟಿ ರೂ. ನೀಡುವ ಬಗ್ಗೆ ಬಿಸಿಸಿಐ ಚಿಂತನೆ ನಡೆಸುತ್ತಿದೆ. ಇದಲ್ಲದೆ, ಸಿ ಗ್ರೇಡ್‌ನಲ್ಲಿರುವ ಅಕ್ಷರ್ ಪಟೇಲ್ ಅವರಿಗೆ ಬಡ್ತಿ ನೀಡುವ ಕುರಿತು ವರದಿಯಾಗಿದ್ದು, ಕೆ.ಎಲ್. ರಾಹುಲ್, ಹಾರ್ದಿಕ್ ಪಾಂಡ್ಯ ಹಾಗೂ ರಿಷಭ್ ಪಂತ್ ಅವರನ್ನು ಎ ಗ್ರೇಡ್‌ನಲ್ಲಿ ಸೇರಿಸುವ ಚಿಂತನೆ ಕೂಡ ನಡೆಸಿದೆ ಎನ್ನಲಾಗಿದೆ.



- ಬಿಸಿಸಿಐ ವಾರ್ಷಿಕ ಗುತ್ತಿಗೆಯಲ್ಲಿ ಬದಲಾವಣೆ ಸಾಧ್ಯತೆ
- ಅಕ್ಷರ್‌ಗೆ ಬಡ್ತಿ ಗಿಫ್ಟ್

ಆರ್‌ಸಿಬಿ ಖರೀದಿಗೆ ಎರಡು ಪಾರ್ಟಿ ನಡುವೆ ಪೈಪೋಟಿ

ಹೊಸದಿಲ್ಲ: ಐಪಿಎಲ್ ತಂಡ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮಾರಾಟ ಪ್ರಕ್ರಿಯೆ ಅಂತಿಮ ಹಂತಕ್ಕೆ ಪ್ರವೇಶಿಸಿದ್ದು, ಎರಡು ಪ್ರಮುಖ ಪಾರ್ಟಿಗಳು ಅಂತಿಮ ಪೈಪೋಟಿಗೆ ಉಳಿದಿವೆ ಎಂದು ವರದಿಯಾಗಿದೆ.

ಒಂದು ಕಡೆ ಸ್ವೀಡನ್ ಮೂಲದ ಖಾಸಗಿ ಇಕ್ವಿಟಿ ಸಂಸ್ಥೆ ಇಕ್ವ್ಯಟಿ ದೊಡ್ಡ ಮೊತ್ತದ ಬಿಡ್ ಸಲ್ಲಿಸಿದೆ. ಇನ್ನೊಂದು ಕಡೆ ಮಣಿಪಾಲ್ ಆಸ್ಪತ್ರೆಗಳ ರಂಜನ್ ಪೈ, ಅಮೆರಿಕದ ಖಾಸಗಿ ಹೂಡಿಕೆ ಸಂಸ್ಥೆ ಕೋಹ್ಲ್ಬರ್ಗ್ ಕ್ರಾವಿಸ್ ರಾಬರ್ಟ್ಸ್ ಅಂಡ್ ಕಂಪನಿ ಹಾಗೂ ಸಿಂಗಾಪುರದ ಟೆಮಸೆಕ್ ಸೇರಿಕೊಂಡ ಒಕ್ಕೂಟವೂ ಪೈಪೋಟಿಯಲ್ಲಿ ಇದೆ. ಇದರ ನಡುವೆ ಮ್ಯಾಂಚೆಸ್ಟರ್ ಯುನೈಟೆಡ್ ಸಹ ಮಾಲೀಕರಾದ ಗ್ಲೇಜರ್ ಕುಟುಂಬ ಹಾಗೂ ಆದಾರ್ ಪೂನವಾಲ್ಲಾ ಈ ರೇಸ್‌ನಿಂದ ಹಿಂದೆ ಸರಿದಿದ್ದಾರೆ. ಈ ಒಪ್ಪಂದದ ಮೌಲ್ಯ ಸುಮಾರು 2 ಬಿಲಿಯನ್ ಡಾಲರ್ ಮಟ್ಟದಲ್ಲಿ ಇರಬಹುದು ಎಂದು ಅಂದಾಜಿಸಲಾಗಿದೆ. ಗ್ಲೇಜರ್‌ಗಳು ಸುಮಾರು 14.9 ಸಾವಿರ ಕೋಟಿ ರೂ. ಮೊತ್ತದ ಆಫರ್ ನೀಡಿದ್ದರೆ, ಇಕ್ವ್ಯಟಿ ಅದರಿಗಿಂತ ಹೆಚ್ಚಾಗಿ ಸುಮಾರು 1.86 ಲಕ್ಷ ಕೋಟಿ ರೂ. ಮಟ್ಟದ ಬಿಡ್ ನೀಡಿದೆ ಎಂದು ವರದಿಯಾಗಿದೆ. ಡಿಯಾಜಿಯೋ ಗುಂಪು ಮಾರ್ಚ್ 31ರೊಳಗೆ ಈ ಒಪ್ಪಂದವನ್ನು ಅಂತಿಮಗೊಳಿಸಲು ಗಡುವು ನಿಗದಿ ಮಾಡಿದೆ ಎಂದು ಮಾರುಕಟ್ಟೆ ಮೂಲಗಳು ತಿಳಿಸಿವೆ. ಇನ್ನೊಂದೆಡೆ, ರಾಜಸ್ಥಾನ್ ರಾಯಲ್ಸ್ ತಂಡಕ್ಕೂ ಸಾಕಷ್ಟು ಹೂಡಿಕೆದಾರರಿಂದ ಆಸಕ್ತಿ ವ್ಯಕ್ತವಾಗಿದೆ. ಈ ಫ್ರಾಂಚೈಸಿಗೆ ಮೂರು ಬಾಂಧವ್ಯ ಬಿಡ್‌ಗಳು ಬಂದಿದ್ದು, ಆದಿತ್ಯ ಬಿರ್ಲಾ ಗುಂಪು ಮುಂಚೂಣಿಯಲ್ಲಿದೆ.

ಹೈದರಾಬಾದ್‌ಗೆ ಕಿಶನ್ ಹಂಗಾಮಿ ನಾಯಕ

ಹೈದರಾಬಾದ್: ಇಂಡಿಯನ್ ಪ್ರೀಮಿಯರ್ ಲೀಗ್‌ಗೆ ಪ್ಯಾಟ್ ಕಮ್ಮಿನ್ಸ್ ಅವರು ಕೆಲವು ಪಂದ್ಯಗಳ ಮಟ್ಟಿಗೆ ಅಲಭ್ಯರಿರುವ ಬಗ್ಗೆ ಖಚಿತ ಪಡಿಸಿರುವ ಸನ್‌ರೈಸರ್ಸ್ ಹೈದರಾಬಾದ್ ಇಶಾನ್ ಕಿಶನ್ ಅವರನ್ನು ಹಂಗಾಮಿ ನಾಯಕರನ್ನಾಗಿ ಮಾಡಿದೆ. ಇನ್ನು 9 ದಿನಗಳಲ್ಲಿ ಐಪಿಎಲ್ ಶುರುವಾಗಲಿದೆ. ಎಲ್ಲಾ ತಂಡಗಳು ಅಭ್ಯಾಸಕ್ಕಿಳಿದಿವೆ. ಲೀಗ್‌ಗಾಗಿ ಎಲ್ಲಾ ಆಟಗಾರರು ಸಜ್ಜಾಗುತ್ತಿದ್ದಾರೆ. ಈ ಮಧ್ಯೆ ಪ್ಯಾಟ್ ಕಮ್ಮಿನ್ಸ್ ಗಾಯದ ನಿಟ್ಟಿನಲ್ಲಿ ಕೆಲವು ಪಂದ್ಯಗಳ ಮಟ್ಟಿಗೆ ವಿಕೆಟ್ ಕೀಪರ್-ಬ್ಯಾಟರ್ ಇಶಾನ್ ಕಿಶನ್ ನಾಯಕರನ್ನಾಗಿ, ಅಭಿಷೇಕ್ ಶರ್ಮ ಅವರನ್ನು ಉಪನಾಯಕರನ್ನಾಗಿ ನೇಮಿಸಲಾಗಿದೆ ಎಂದು ಫ್ರಾಂಚೈಸಿ ಘೋಷಣೆ ಮಾಡಿದೆ. ಗಾಯದ ಬಿಸಿ ಬಹುತೇಕ ಎಲ್ಲ ಫ್ರಾಂಚೈಸಿಗಳಿಗೂ ತಟ್ಟುತ್ತಿದೆ. ಈ ಮಧ್ಯೆ ಪ್ಯಾಟ್ ಕಮ್ಮಿನ್ಸ್ ತೀವ್ರ ಗಾಯದಿಂದ ಅಲಭ್ಯರಾಗಿದ್ದಾರೆಂದು ಹೇಳಲಾಗುತ್ತಿದೆ. ಹೀಗಿರುವಾಗ ವಿಶ್ವಕಪ್ ಪಂದ್ಯಾವಳಿಯಲ್ಲಿ ಭರ್ಜರಿ ಪ್ರದರ್ಶನ ನೀಡಿ ಮಿಂಚಿರುವ ಇಶಾನ್ ಕಿಶನ್ ಅವರಿಗೆ ನಾಯಕತ್ವ ನೀಡಲಾಗಿದೆ. ವೈಯಕ್ತಿಕ ಪ್ರದರ್ಶನ ಹೊರತುಪಡಿಸಿ, ಅವರು ಜಾರ್ಖಂಡ್ ತಂಡವನ್ನು ಸೈಯದ್ ಮುಷ್ತಾಕ್ ಅಲಿ ಟ್ರೋಫಿಯನ್ನು ನಾಯಕರಾಗಿ ಗೆಲ್ಲಿಸಿದ್ದಾರೆ.



ಜಾಲತಾಣ ನಿರ್ಬಂಧ ಇನ್ನಷ್ಟು ವಿಸ್ತಾರ: ಸಚಿವ ಅಶ್ವಿನಿ ವೈಷ್ಣವ್

ಹೊಸದಿಲ್ಲಿ: ಐಟಿ ಮಾತ್ರವಲ್ಲ, ಸರಕಾರದ ಇತರ ಎಲ್ಲಾ ಮಹತ್ವಪೂರ್ಣ ಸಚಿವಾಲಯಗಳೂ ಸಾಮಾಜಿಕ ಜಾಲತಾಣ ನಿರ್ಬಂಧಿಸುವ ಅಧಿಕಾರವನ್ನು ಶೀಘ್ರವೇ ಪಡೆಯಲಿವೆ. ಐಟಿ ಕಾಯ್ದೆಯನ್ನೇ ಮಾರ್ಪಾಡು ಮಾಡುವ ಬದಲು, ಈಗಾಗಲೇ ಅಸ್ತಿತ್ವದಲ್ಲಿರುವ ನಿಯಮಗಳನ್ನು ತಿದ್ದುಪಡಿ ಮಾಡಲಾಗುವುದು ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ನಕಲಿ ಅಥವಾ ಹಾನಿಕಾರಕ ವಿಚಾರಗಳ ಪ್ರಸಾರ ತಡೆಹಿಡಿವ ನಿಟ್ಟಿನಲ್ಲಿ , ಸರ್ಕಾರದ ಬಹುತೇಕ ಖಾತೆಗಳಿಗೂ ಸಾಮಾಜಿಕ ಜಾಲತಾಣ ಬ್ಲಾಕಿಂಗ್ ಆದೇಶ ಹೊರಡಿಸುವ ಅಧಿಕಾರವೀಗ ಪ್ರಸ್ತಾವವೊಂದು ಅಂತರ್ ಸಚಿವಾಲಯ ತಂಡದ ಪರಿಗಣನೆಯಲ್ಲಿದೆ. ಅಧಿಕಾರ ವಿಕೇಂದ್ರೀಕರಣ ಮುಖೇನ, ತಪ್ಪು ಮಾಹಿತಿಗಳ ಪ್ರಸಾರವನ್ನು ಪರಿಣಾಮಕಾರಿಯಾಗಿ ತಡೆ ಹಿಡಿಯುವುದು ಪ್ರಸ್ತುತ ಉಪಕ್ರಮ ಹಿಂದಿನ ಮೂಲೋದ್ದೇಶವಾಗಿದೆ. ಸರಕಾರದ ಪ್ರಸ್ತುತ ಉಪಕ್ರಮದಿಂದ ನಕಲಿ ಅಥವಾ ತಪ್ಪು ಮಾಹಿತಿಗಳು ವೈರಲ್ ಆಗುವುದನ್ನು ಯಶಸ್ವಿಯಾಗಿ ತಡೆಹಿಡಿಯಲು ಸಾಧ್ಯವೆಂದು ಕೇಂದ್ರ ಮಾಹಿತಿ ಮತ್ತು ಪ್ರಸರಣ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ. ಒಮ್ಮೆ ಡೀಪ್‌ಫೇಕ್‌ಗಳನ್ನು ಗುರುತಿಸಿ, ಪಿಐಬಿ ಮುಖೇನ ಸತ್ಯಶೋಧಿಸಿದಲ್ಲಿ, ಜನರಿಗೆ ತಪ್ಪು ಮಾಹಿತಿ ರವಾನೆಯಾಗೋದನ್ನು ತ್ವರಿತ ತಡೆಹಿಡಿಯಲು ಸಾಧ್ಯವಾಗುವುದು ಎಂದು ಸಚಿವರು ತಿಳಿಸಿದ್ದಾರೆ.



ರಕ್ಷಣೆ, ವಿದೇಶಾಂಗ ಖಾತೆಗೂ ವಿಸ್ತರಣೆ?: ಸದ್ಯ ಮಾಹಿತಿ ತಂತ್ರಜ್ಞಾನ ಕಾಯ್ದೆ 2000ದ ಕಲಂ 69ಎ ಅನ್ವಯ ಬ್ಲಾಕ್ ಆದೇಶ ಹೊರಡಿಸುವ ಅಧಿಕಾರ ಇಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆಗೆ ಸೀಮಿತವಾಗಿದೆ. ಈ ಅಧಿಕಾರವನ್ನು ವಿದೇಶ ವ್ಯವಹಾರಗಳ ಖಾತೆ, ಹಣಕಾಸು ಖಾತೆ ಮತ್ತು ರಕ್ಷಣೆಯಂತಹ ಪ್ರಮುಖ ಖಾತೆಗಳಿಗೂ ವಿಸ್ತರಿಸುವ ಬಗ್ಗೆ ಕೇಂದ್ರ ಸರ್ಕಾರ ಪರಾಮರ್ಶೆ ನಡೆಸುತ್ತಿದೆ.

ಬಹುತೇಕ ರಾಷ್ಟ್ರೀಯ ಭದ್ರತೆ, ವಿದೇಶ ವ್ಯವಹಾರಗಳು, ಆರ್ಥಿಕ ಸ್ಥಿರತೆ ಇತ್ಯಾದಿ ಸೂಕ್ಷ್ಮಸಂವೇದಿ ರಂಗಗಳನ್ನು ಟಾರ್ಗೆಟ್ ಮಾಡಿಕೊಂಡು ಡೀಪ್‌ಫೇಕ್ ಮಾಡಲಾಗುತ್ತಿದೆ. ಸರ್ಕಾರದ ಇತರ ಪ್ರಮುಖ ಖಾತೆಗಳಿಗೂ ಡೀಪ್ ಫೇಕ್ ವಿರುದ್ಧ ಕಾರ್ಯಾಚರಿಸುವ ಅಧಿಕಾರವಿತ್ತಲ್ಲಿ, ಇಂತಹ ಬೆದರಿಕೆಗಳಿಗೆ ಸಕಾಲಿಕವಾಗಿ ಪ್ರತ್ಯುತ್ತರಿಸಲು ಸಾಧ್ಯವಾಗುವುದೆಂಬುದು ಸರ್ಕಾರದ ಭರವಸೆ. ಮಾಜಿ ಸೇನಾಧಿಕಾರಿ ಮನೋಜ್ ಪಾಂಡೆ ಕುರಿತು ನಕಲಿ ವಿಡಿಯೊ ವೈರಲ್ ಆದ ಹಿನ್ನೆಲೆಯಲ್ಲಿ ಸರಕಾರ ಪ್ರಸ್ತುತ ಅಧಿಕಾರ ವಿಕೇಂದ್ರೀಕರಣ ಚಿಂತನೆ ನಡೆಸಿದೆ.

ಭಾರತೀಯ ಸೇನೆ ನೈತಿಕ ಪಡೆಯಾಗೋ ಬದಲು ಜನಾಂಗೀಯ ಸ್ವರೂಪ ಪಡೆಯುತ್ತಿದೆ ಮತ್ತು ಶೀಘ್ರ ದಂಗೆ ಸಾಧ್ಯತೆಯೂ ಇದೆ ಎಂದು ಮನೋಜ್ ಪಾಂಡೆ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆಂದು ಆರೋಪಿಸುವ ಡೀಪ್‌ಫೇಕ್ ವಿಡಿಯೊ ಈಚೆಗೆ ವೈರಲ್ ಆಗಿತ್ತು. ವಿಡಿಯೋದಲ್ಲಿ ಅಸ್ಸಾಂ ಬಗ್ಗೆಯೂ ಉಲ್ಲೇಖವಿದೆ. ಅಸ್ಸಾಂನ ಸಶಸ್ತ್ರಪಡೆ ವಿದೇಶಿ ಪ್ರಭಾವಕ್ಕೀಡಾಗಿದೆ ಎಂದು ವಿಡಿಯೋದಲ್ಲಿ ಸುಳ್ಳು ಮಾಹಿತಿ ನೀಡಲಾಗಿತ್ತು. ಬೆನ್ನಲ್ಲೇ, ಈ ವಿಡಿಯೋ ನಕಲಿ, ಇಂತಹ ಮಿಥ್ಯೆಯನ್ನು ಪಾಕಿಸ್ತಾನ ಪ್ರಸಾರ ಮಾಡುತ್ತಿದೆ. ದೇಶದ ಸೇನೆ ಬಗ್ಗೆ ಜನರಲ್ಲಿ ಅಪನಂಬಿಕೆ ಮೂಡಿಸುವುದು ಈ ರೀತಿಯ ನಕಲಿ ವಿಡಿಯೋ ಹಿಂದಿನ ದುರುದ್ದೇಶವೆಂದು ಪ್ರೆಸ್ ಇನ್‌ಫಾರ್ಮೇಶನ್ ಬ್ಯೂರೋ (ಪಿಐಬಿ) ತಕ್ಷಣ ಸ್ಪಷ್ಟಪಡಿಸಿತ್ತು. ಇಂತಹ ವಿಡಿಯೋಗಳ ಶೇರ್ ಮಾಡೋ ಮುನ್ನ, ಮಾಹಿತಿಗಳ ಸತ್ಯಾಸತ್ಯತೆಯನ್ನು ನಂಬಲಾರ್ಹ ಮೂಲಗಳ ಮುಖೇನ ದೃಢೀಕರಿಸಿಕೊಳ್ಳುವಂತೆ ಸರಕಾರ ಜನರಿಗೆ ಸಲಹೆ ಮಾಡಿದೆ.

ಆಮಿಷಗಳಿಗೆ ಒಳಗಾಗಬೇಡಿ

ಬೆಂಗಳೂರು: ಪರೀಕ್ಷಾ ಸಿದ್ಧತೆಗಾಗಿ ಈಗಾಗಲೇ 3 ಪೂರ್ವಸಿದ್ಧತಾ ಪರೀಕ್ಷೆಗಳನ್ನು ನಡೆಸಲಾಗಿದ್ದು, ಇದು ಮಕ್ಕಳಲ್ಲಿನ ಭಯವನ್ನು ಹೋಗಲಾಡಿಸಿದೆ. ಸಾಮಾಜಿಕ ಜಾಲತಾಣಗಳಲ್ಲಿ ಬರುವ ಸುಳ್ಳು ಸುದ್ದಿಗಳು ಆಮಿಷಗಳಿಗೆ ಒಳಗಾಗಿ ತಪ್ಪು ದಾರಿ ಹಿಡಿದು ಮೋಸಹೋಗಬಾರದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ವಿನಂತಿಸಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ -1ರ ಆರಂಭದ ಹಿನ್ನೆಲೆಯಲ್ಲಿ ಬೆಂಗಳೂರಿನ ಮಲ್ಲೇಶ್ವರದ 13ನೇ ಅಡ್ಡರಸ್ತೆಯಲ್ಲಿರುವ ಕರ್ನಾಟಕ ಪಬ್ಲಿಕ್ ಶಾಲೆಗೆ (ಕೆಪಿಎಸ್) ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು. ಪರೀಕ್ಷಾ ಅಕ್ರಮಗಳನ್ನು ತಡೆಯಲು ಎಲ್ಲ ಕೇಂದ್ರಗಳಲ್ಲೂ ವೆಬ್‌ಕ್ಯಾಸ್ಟಿಂಗ್ ಮೂಲಕ ನಿಗಾ ವಹಿಸಲಾಗಿದೆ. ಪ್ರತಿದಿನ ಪ್ರಶ್ನೆಪತ್ರಿಕೆಗಳನ್ನು ಸುರಕ್ಷಿತವಾಗಿ ಪೊಲೀಸ್ ಸಿಬ್ಬಂದಿಯೊಂದಿಗೆ ಪರೀಕ್ಷಾ ಕೇಂದ್ರಗಳಿಗೆ ರವಾನಿಸಲಾಗುತ್ತಿದೆ. ಆಯಾ ಜಿಲ್ಲಾ ಆಡಳಿತದ ಮೂಲಕ ಪರೀಕ್ಷೆಯನ್ನು ವ್ಯವಸ್ಥಿತವಾಗಿ ನಡೆಸಲು ಎಲ್ಲಾ ಸಿದ್ಧತೆಗಳನ್ನು ಮಾಡಲಾಗಿದೆ ಎಂದು ಹಾರೈಸಿದರು.

ಏ.7ಕ್ಕೆ ಪಿಯು ಫಲಿತಾಂಶ ನಿರೀಕ್ಷೆ: ಪದವಿ ಪೂರ್ವ ಶಿಕ್ಷಕರು ಮೌಲ್ಯಮಾಪನ ಬಹಿಷ್ಕಾರ ಮಾಡುತ್ತಿಲ್ಲ. ಆದ್ದರಿಂದ ತಾತ್ಕಾಲಿಕ ಗುರಿಯಂತೆ ಏ.7ಕ್ಕೆ ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟಿಸುವ ನಿರೀಕ್ಷೆಯಿದೆ ಎಂದರು. ಹಾಗೆಯೇ 1ನೇ ತರಗತಿಗೆ ಸೇರಲು 6 ವರ್ಷ ಕಡ್ಡಾಯವಾಗಬೇಕು ಎಂಬ ನಿಯಮದ ಸಡಿಲಿಕೆಯ ಬಗ್ಗೆ ಮುಖ್ಯಮಂತ್ರಿಗಳು ಹೇಳಿದಂತೆ ನಡೆಯುತ್ತೇವೆ ಎಂದು ಸಚಿವರು ತಿಳಿಸಿದರು.

ಪರೀಕ್ಷೆಗೆ 12,175 ಮಂದಿ ಗೈರು

ಬುಧವಾರ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ರ ಪ್ರಥಮ ಭಾಷೆ ಪರೀಕ್ಷೆಗೆ 12,175 ಮಂದಿ ಗೈರಾಗಿದ್ದಾರೆ. ಈ ಪರೀಕ್ಷೆಗೆ 8,28,477 ಮಂದಿ ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದು, ಈ ಪೈಕಿ 8,16,302 ಮಂದಿ ಪರೀಕ್ಷೆ ಬರೆದಿದ್ದಾರೆ. ಈ ಮೂಲಕ ಶೇ. 98.53 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಮಾ.23 ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1.15ರವರೆಗೆ ವಿಜ್ಞಾನ ಮತ್ತು ರಾಜ್ಯಶಾಸ್ತ್ರ ಹಾಗೂ ಮಧ್ಯಾಹ್ನ 2 ಗಂಟೆಯಿಂದ ಸಂಜೆ 5.15ರವರೆಗೆ ಕರ್ನಾಟಕ ಸಂಗೀತ, ಹಿಂದುಸ್ತಾನಿ ಸಂಗೀತ ಪರೀಕ್ಷೆಗಳು ನಡೆಯಲಿವೆ.

ಪಾಲಿಕೆ ಗದ್ದುಗೆ ಹಿಡಿದ ಬಿಜೆಪಿ

ಬೆಳಗಾವಿ: ಕುತೂಹಲ ಕೆರಳಿಸಿದ ಬೆಳಗಾವಿ ಮಹಾನಗರ ಪಾಲಿಕೆಯ ಮೇಯರ್ ಹಾಗೂ ಉಪಮೇಯರ್ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಜಯ ದಾಖಲಿಸಿದೆ. ಕಾಂಗ್ರೆಸ್ ನೀಡಿದ ಪೈಪೋಟಿ ನಡುವೆಯೂ ಸಂಖ್ಯಾಬಲ ಪ್ರದರ್ಶಿಸಿದ ಕೇಸರಿ ಪಡೆ, ಪಾಲಿಕೆಯ ಅಧಿಕಾರ ತನ್ನದಾಗಿಸಿಕೊಂಡಿದೆ.

ಬುಧವಾರ ಬೆಳಗಾವಿ ಮಹಾನಗರ ಪಾಲಿಕೆಯ ನೂತನ ಮೇಯರ್ ಆಗಿ ನೇಕಾರ ಸಮುದಾಯದ ಪ್ರೀತಿ ಕಾಮಕರ್ ಹಾಗೂ ಉಪಮೇಯರ್ ಆಗಿ ಲಿಂಗಾಯತ ಸಮುದಾಯದ ಹನುಮಂತ ಕೊಂಗಾಲಿ ಆಯ್ಕೆಯಾಗಿದ್ದಾರೆ. ಪ್ರಾದೇಶಿಕ ಆಯುಕ್ತ ಜಾನಕಿ ಅವರ ಸಮ್ಮುಖದಲ್ಲಿ ನಡೆದ ಚುನಾವಣೆಯಲ್ಲಿ, ಬಿಜೆಪಿ ಅಭ್ಯರ್ಥಿಗಳು ತಲಾ 39 ಮತಗಳನ್ನು ಪಡೆಯುವ ಮೂಲಕ ಸ್ಪಷ್ಟ ಬಹುಮತ ಸಾಬೀತು ಪಡಿಸಿದರು. ಕಾಂಗ್ರೆಸ್ ಅಭ್ಯರ್ಥಿಗಳಾದ ಖುರ್ಷಿದಾ ಮುಲ್ಲಾ ಹಾಗೂ ಮೋದಿನಸಾಬ್ ಮತ್ತೇವಾಲೆ ತಲಾ 20 ಮತಗಳನ್ನು ಪಡೆದು ಪರಾಭವಗೊಂಡರು. ಅವಿರೋಧ ಆಯ್ಕೆಯ ನಿರೀಕ್ಷೆಯಲ್ಲಿದ್ದ ಬಿಜೆಪಿಗೆ ಕಾಂಗ್ರೆಸ್ ಸ್ಪರ್ಧೆಯೊಡ್ಡಿದರೂ ಅಂತಿಮವಾಗಿ ಸಂಖ್ಯಾಬಲದೊಂದಿಗೆ ಬಿಜೆಪಿ ವಿಜಯಮಾಲೆ ಧರಿಸಿತು. ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಕೇವಲ ರಾಜಕೀಯ ಸಮೀಕರಣವನ್ನಷ್ಟೇ ಅಲ್ಲದೆ, ಪ್ರಾದೇಶಿಕ ಅಸ್ಮಿತೆಗೂ ಆದ್ಯತೆ ನೀಡಿದ್ದು ವಿಶೇಷ. ಆಯ್ಕೆಯಾದ ಇಬ್ಬರೂ ಅಭ್ಯರ್ಥಿಗಳು ಅಪ್ಪಟ ಕನ್ನಡಿಗರಾಗಿರುವುದು ಕನ್ನಡಪರ ಸಂಘಟನೆಗಳ ಮೆಚ್ಚುಗೆಗೆ ಪಾತ್ರವಾಗಿದೆ. ಚುನಾವಣಾ ಪ್ರಕ್ರಿಯೆಯಲ್ಲಿ ಬಿಜೆಪಿ ಶಾಸಕರು ಮಾತ್ರ ಭಾಗವಹಿಸಿದ್ದು, ಸಂಸದರು ಹಾಗೂ ಎಂಎಲ್ಸಿಗಳ ಗೈರು ಹಾಜರಿ ಕಂಡು ಬಂದಿತು. ಆದರೂ, ಎರಡೂ ಪ್ರಮುಖ ಸ್ಥಾನಗಳನ್ನು ಗೆಲ್ಲುವ ಮೂಲಕ ಬಿಜೆಪಿ ಬೆಳಗಾವಿ ಪಾಲಿಕೆಯಲ್ಲಿ ತನ್ನ ಹಿಡಿತವನ್ನು ಮತ್ತಷ್ಟು ಗಟ್ಟಿಗೊಳಿಸಿಕೊಂಡಿದೆ ಎಂದು ಪಾಲಿಕೆಯ ನೂತನ ಮೇಯರ್-ಉಪಮೇಯರ್‌ಗೆ ಅಭಿನಂದನೆ ಸಲ್ಲಿಸಲಾಗುತ್ತಿದೆ.

ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋ ವೈರಲ್ ಪ್ರಕರಣ


39 ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಕೆ

ಹಾಸನ: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋ ವೈರಲ್ ಪ್ರಕರಣದಲ್ಲಿ ಪೆನ್‌ಡ್ರೈವ್ ಹಂಚಿಕೆ ಸಂಬಂಧ ಎಸ್‌ಐಟಿ ಚಾರ್ಜ್‌ಶೀಟ್ ಸಲ್ಲಿಸಿದ್ದು, ಒಟ್ಟು 39 ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದೆ.

ಲೋಕಸಭೆ ಚುನಾವಣೆ ವೇಳೆ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋ ವೈರಲ್ ಆಗಿತ್ತು. ಈ ಕುರಿತು 2024 ರ ಲೋಕಸಭಾ ಚುನಾವಣೆಯ ಜೆಡಿಎಸ್ ಚುನಾವಣೆ ಏಜೆಂಟ್ ವಕೀಲ ಪೂರ್ಣಚಂದ್ರ ಅವರು ಪೆನ್‌ಡ್ರೈವ್ ಹಂಚಿಕೆ ಮಾಡಿದವರ ವಿರುದ್ಧ ದೂರು ನೀಡಿದ್ದರು. ಆಧರಿಸಿ ತನಿಖೆ ಪೆನ್‌ಡ್ರೈವ್ ಹಂಚಿಕೆ ಪ್ರಕರಣದಲ್ಲಿ ಹಾಸನ ಸಿವಿಲ್ ಕೋರ್ಟ್‌ಗೆ ಎಸ್‌ಐಟಿ 13,712 ಪುಟಗಳ ಚಾರ್ಜ್‌ಶೀಟ್ ಸಲ್ಲಿಕೆ ಮಾಡಿದೆ. ಒಟ್ಟು 39 ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದೆ. ಅಶ್ಲೀಲ ವಿಡಿಯೋ ಹಂಚಲು ಆರೋಪಿಗಳು 70 ಪೆನ್ ಡ್ರೈವ್ ಖರೀದಿಸಿದ್ದರು. ಹಾಸನದಲ್ಲೇ 70 ಪೆನ್‌ಡ್ರೈವ್ ಖರೀದಿ ಮಾಡಿರುವುದು ತನಿಖೆಯಿಂದ ಬಯಲಾಗಿದೆ. ಪ್ರಕರಣದಲ್ಲಿ 52 ಮಂದಿ ಹೆಸರು ಉಲ್ಲೇಖ ಮಾಡಲಾಗಿತ್ತು. 52 ಮಂದಿಯಲ್ಲಿ 39 ಮಂದಿ ಆರೋಪ ಸಾಬೀತಾಗಿದೆ. ವಕೀಲ ಪೂರ್ಣಚಂದ್ರ ನೀಡಿದ ದೂರಿನ ಮೇರೆಗೆ ಎಫ್‌ಐಆರ್ ದಾಖಲಾಗಿತ್ತು. ಎಸ್‌ಐಟಿ ತನಿಖೆ ವೇಳೆ ಮಹತ್ವದ ವಿಚಾರಗಳು ಬೆಳಕಿಗೆ ಬಂದಿವೆ. 70 ಪೆನ್ ಡ್ರೈವ್ ಖರೀದಿಸಿ ವಿಡಿಯೋ ವೈರಲ್ ಮಾಡಿರುವುದು ತನಿಖೆ ವೇಳೆ ಬಹಿರಂಗವಾಗಿದೆ. ಈ ಸಂಬಂಧ 277 ಸಾಕ್ಷಿಗಳ ಹೇಳಿಕೆಯನ್ನು ಎಸ್‌ಐಟಿ ದಾಖಲಿಸಿದೆ. ತಾಂತ್ರಿಕ ವರದಿ, ಎಫ್‌ಎಸ್‌ಎಲ್ ಸಾಕ್ಷಿಗಳ ವರದಿ ಆಧರಿಸಿ ದೋಷಾರೋಪ ಪಟ್ಟಿ ಸಲ್ಲಿಕೆ ಮಾಡಲಾಗಿದೆ. ಪ್ರಕರಣದಲ್ಲಿ ಎರಡು ಪಕ್ಷದ ಕಾರ್ಯಕರ್ತರ ವಿರುದ್ಧ ಆರೋಪ ಕೇಳಿಬಂದಿದೆ. ವಿಡಿಯೋ ವೈರಲ್ ಪ್ರಕರಣದಲ್ಲಿ ಪ್ರಜ್ವಲ್ ರೇವಣ್ಣ ಹೆಸರು ಕೈಬಿಡಲಾಗಿದೆ. ತನಿಖೆ ಪೂರ್ಣಗೊಳಿಸಿ ಹಾಸನ ಕೋರ್ಟ್‌ಗೆ ಎಸ್‌ಐಟಿ ದೋಷಾರೋಪ ಪಟ್ಟಿ ಸಲ್ಲಿಸಿದೆ. ಪೆನ್‌ಡ್ರೈವ್ ಹಂಚಿಕೆ ಪ್ರಕರಣದಲ್ಲಿ ಯಾರು ಪ್ರಮುಖ ವ್ಯಕ್ತಿಗಳು ಸಹ ಇದ್ದಾರೆ ಅವರ ಹೆಸರು ಬಹಿರಂಗಗೊಳಿಸಬೇಕು ಎಂದು ದೂರುದಾರ ಹಾಗೂ ವಕೀಲ ಪೂರ್ಣಚಂದ್ರ ಅವರು ತಿಳಿಸಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಕಳೆದ ಲೋಕಸಭಾ ಚುನಾವಣೆ ವೇಳೆ ಜಾತ್ಯಾತೀತ ಜನತಾದಳದ ಅಭ್ಯರ್ಥಿ ಸೋಲಿಸಬೇಕು ಎಂದು ಸಂಚು ಹೂಡಿ ರಸ್ತೆ, ರಸ್ತೆಯಲ್ಲಿ ಪೆನ್‌ಡ್ರೈವ್ ಹಂಚಿದರು. ಹಾಸನ ಜಿಲ್ಲೆಗೆ ಅಂಟಿದ ಕಳಂಕವನ್ನು ತೊಡೆದು ಹಾಕಬೇಕೆಂದು ಯಾರು ಹಂಚಿದರು ಅವರ ವಿರುದ್ಧ ದೂರು ಸಲ್ಲಿಸಿದ್ದೆ, ಅದರ ತನಿಖೆ ಪೂರ್ಣಗೊಳಿಸಿ ಎಸ್‌ಐಟಿ ಚಾರ್ಜ್‌ಶೀಟ್ ಸಲ್ಲಿಸಿದ್ದಾರೆ, ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಆದರೆ ನಾನು ಕೊಟ್ಟ ದೂರಿನಲ್ಲಿ ಇದ್ದಂತಹ ಹೆಸರುಗಳನ್ನು ಚಾರ್ಜ್‌ಶೀಟ್‌ನಲ್ಲಿ ಎಸ್‌ಐಟಿ ತಂಡ ಕೈಬಿಟ್ಟಿದ್ದಾರೆ. ಇನ್ನಷ್ಟು ಆಳವಾಗಿ ತನಿಖೆ ನಡೆಸಿ ಅಡಿಷನಲ್ ಚಾರ್ಜ್‌ಶೀಟ್ ಸಲ್ಲಿಸಬೇಕು ಎಂದು ಒತ್ತಾಯಿಸಿದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5928

ಎಡದಿಂದ ಬಲಕ್ಕೆ
1.ಸಂಸಾರವೆಂಬ ಬಂಧನ (4)
3.ಶುಭಲಕ್ಷಣಗಳಿಂದ ಕೂಡಿದ ಆನೆ (4)
5.ಜನರ ಕಡೆಗೆ ತಿರುಗಿದ ಮಡಿವಾಳ (3)
7.ಲಿಖಿತವಾದ ಒಪ್ಪಂದವಿದು (4)
9.ಮನುಷ್ಯಜಾತಿಯಿಲ್ಲಿ ತಿರುಗಿದೆ (4)
11.ವಸ್ತು-ಹಣ ಕೊಡದೆ ಉಳಿಸಿಕೊಂಡವನು (4)
14.ವಿಷ್ಣು ಶಿವರನ್ನು ಒಳಗೊಂಡ ನಗರ (4)
16.ಕಡೆಯ ಸಲ ನೋಡಿದಾಗ ಕಂಡ ಎಲ್ಲವೂ (3)
17.ಸ್ಥಿರವಾಗಿ ನೆಲೆಸು-ತಳವೂರು (4)
18.ಅನುಮಾನ ಬರದಂತಿರುವ ಸಂಚಿನ ರಹಸ್ಯ (4)

ಮೇಲಿನಿಂದ ಕೆಳಕ್ಕೆ
2.ಇದು ಅರಣ್ಯದಲ್ಲಿ ಹುಟ್ಟಿದುದು (4)
4.ಸಮಯ ತಿಳಿಸುವ ಸಾಧನ (4)
5.ಮೇರೆ ಮೀರಿ ಹೋದಾಗ ಕಂಡ ಲಕ್ಷ್ಮಿ (2)
6.ಕಲಹದಲ್ಲಡಗಿದ ಮಧುರವಾದುದು (2)
8.ತ್ರಿಲೋಕಸಂಚಾರಿ ಕಡೆಯಲ್ಲಿ ದೀರ್ಘವಾಗಿದ್ದಾನೆ (3)
10.ಕುರಿಯ ನಡುವೆ ಹುಲ್ಲಿನ ಮೆದೆಯಿದೆ (3)
12.ಕೋಪದಿಂದ ಕೆಟ್ಟಮಾತುಗಳನ್ನಾಡು (4)
13. ಇದು ಸತ್ವದಿಂದ ಕೂಡಿದ್ದು (2)
14. ಇದು ಬಲರಾಮನ ಆಯುಧ (2)
15. ಲೆಕ್ಕಹಾಕು-ಯೋಚಿಸು ಎಂಬರ್ಥದ ಶಬ್ದ (4)

5927 ಉತ್ತರ

ಎಡದಿಂದ ಬಲಕ್ಕೆ:
2.ಮರುತ 5.ಕೀರ್ತಿವಂತ
6.ಪಾಠಹೇಳು 7.ಕದನ
8.ವರಿಸು 10.ಸಂಚಾಲಕ
12.ಕುಂಜರಾರಿ 14.ಸಪಾಟು
15.ಸುಧಾಕರ 16.ಪರಿತ್ಯಕ್ತ

ಮೇಲಿನಿಂದ ಕೆಳಕ್ಕೆ : 1.ವಕೀಲ
2.ಮತದಾನ 3.ತಪಾಸಿಸು
4.ಬಾಳುವೆ 7.ಚಾಲಕ
9.ವಜೀರಾ 10.ಸಂಕೇತಿಸು
11.ಕಸವರ 12.ಕುಂಟುನೆಪ
13.ರಿಣಮುಕ್ತ

ಕಿರುಸುದ್ದಿ

ಅಕ್ರಮವಾಗಿ ಗ್ಯಾಸ್ ಮರುಪೂರಣ ಪತ್ತೆ

ಮಂಗಳೂರು: ಅಕ್ರಮವಾಗಿ ಗ್ಯಾಸ್ ಮರುಪೂರಣ ಮಾಡುತ್ತಿದ್ದ ಪ್ರಕರಣವೊಂದು ಬೆಳಕಿಗೆ ಬಂದಿದ್ದು, ಈ ಬಗ್ಗೆ ಬಂದರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ನಗರದ ಕುದ್ರೋಳಿ ಕಂಡತ್‌ಪಳ್ಳಿ ಎಂಬಲ್ಲಿ ಒಂದು ಗ್ಯಾಸ್ ಹಂಡೆಯಿಂದ ಇನ್ನೊಂದು ಗ್ಯಾಸ್ ಹಂಡೆಗೆ ಅಕ್ರಮವಾಗಿ ಗ್ಯಾಸ್ ಮರುಪೂರಣ ಮಾಡಲಾಗುತ್ತಿದ್ದು, ದಿನೇಶ್ ಸಾಲಿಯಾನ್ ಮತ್ತು ಸುನೀಲ್ ನಾಯಕ್ ವಿರುದ್ಧ ದೂರು ದಾಖಲಾಗಿದೆ. ಮಾ.17ರಂದು ಮಧ್ಯಾಹ್ನ 1.30ರ ವೇಳೆಗೆ ನಗರದ ನ್ಯೂಚಿತ್ರಾ ಜಂಕ್ಷನ್ ಬಸವನಗುಡಿ ಲಕ್ಷ್ಮೀನಾರಾಯಣ ಟೆಂಪಲ್ ಕಡೆಯಿಂದ ಕಂಡತ್‌ಪಳ್ಳಿ ಕಡೆಗೆ ಹೋಗುವ ರಸ್ತೆಯಲ್ಲಿರುವ ನಿಹಾ ಗ್ಯಾಸ್ ಪಾಯಿಂಟ್ ಹೆಸರಿನ ಅಂಗಡಿಯ ಪಕ್ಕದಲ್ಲಿರುವ ಗೋಡಾನ್‌ನಲ್ಲಿ ಆರೋಪಿಗಳು ಅಕ್ರಮವಾಗಿ ಗ್ಯಾಸ್ ಸಿಲೆಂಡರ್‌ಗಳನ್ನು ಸಂಗ್ರಹಿಸಿ ದೊಡ್ಡ ಹಂಡೆಯಿಂದ ಸಣ್ಣ ಹಂಡೆಗೆ ಮರುಪೂರಣ ಮಾಡುತ್ತಿದ್ದರು. ಈ ಬಗ್ಗೆ ಬಂದರು ಪೊಲೀಸರು ಮಾಹಿತಿ ಪಡೆದು ದಾಳಿ ನಡೆಸಿ ಸೊತ್ತುಗಳನ್ನು ಸ್ವಾಧೀನಪಡಿಸಿಕೊಂಡಿದ್ದಾರೆ.

ಹಲ್ಲೆ: ಪಂಚಾಯತ್ ಸದಸ್ಯ ಸಹಿತ ನಾಲ್ವರ ವಿರುದ್ಧ ಕೇಸು

ಕುಂಬಳೆ: ಯುವಕನನ್ನು ತಡೆದು ನಿಲ್ಲಿಸಿ ಹಲ್ಲೆ ನಡೆಸಿರುವುದಾಗಿ ಆರೋಪಿಸಿ ನೀಡಲಾದ ದೂರಿನಂತೆ ಪಂಚಾಯತ್ ಸದಸ್ಯ ಸಹಿತ ನಾಲ್ವರ ವಿರುದ್ಧ ಕುಂಬಳೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಇಚ್ಲಂಗೋಡು ವೀರನಗರ ಅಡ್ಕ ಆರ್‌ಎಲ್‌ಬಿ ಹೌಸ್‌ನ ಪ್ರೀತಂ (27) ಎಂಬವರಿಗೆ ಹಲ್ಲೆ ನಡೆಸಿದ ಆರೋಪದಂತೆ ಅವರು ನೀಡಿದ ದೂರಿನಂತೆ ಮಂಗಲ್ಪಾಡಿ ಪಂಚಾಯತ್ ಸದಸ್ಯ ಅಪೋಲೊ ಉಮ್ಮರ್ ಹಾಗೂ ಕಂಡರೆ ಪತ್ತೆಹಚ್ಚಬಹುದಾದ ಇತರ ಮೂವರು ಸೇರಿದಂತೆ ಒಟ್ಟು ನಾಲ್ಕು ಮಂದಿಯ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಸೋಮವಾರ ಸಂಜೆ ಬಂದ್ಯೋಡು ಸಪ್ಲೈಕೋ ಕಚೇರಿ ಬಳಿ ಆರೋಪಿಗಳು ತನ್ನ ಮೇಲೆ ಹಲ್ಲೆ ನಡೆಸಿ ಅವಾಚ್ಯ ಶಬ್ದಗಳಿಂದ ನಿಂದಿಸಿರುವುದಾಗಿ ಪೊಲೀಸರಿಗೆ ನೀಡಿದ ದೂರಿನಲ್ಲಿ ಪ್ರೀತಂ ಆರೋಪಿಸಿದ್ದಾರೆ.

ನದಿಗೆ ಬಿದ್ದು ಕಾಲೇಜ್ ವಿದ್ಯಾರ್ಥಿ ಸಾವು

ಬೆಳ್ತಂಗಡಿ: ನದಿಗೆ ಸ್ನಾನಕ್ಕೆ ತೆರಳಿದ ವೇಳೆ ಆಯತಪ್ಪಿ ನದಿ ನೀರಿಗೆ ಬಿದ್ದು ಕಾಲೇಜು ವಿದ್ಯಾರ್ಥಿಯೊಬ್ಬ ಸಾವನ್ನಪ್ಪಿದ ಘಟನೆ ಬುಧವಾರ ಮಧ್ಯಾಹ್ನ ನಡೆದಿದೆ. ಮುಂಡಾಜೆ-ಇಂದಬೆಟ್ಟು ಗಡಿಭಾಗದ ಅರಸಮಜಲು ಸಮೀಪ ನೇತ್ರಾವತಿ ನದಿಯ ಹೊಂಡ ಪ್ರದೇಶದಲ್ಲಿ ಸಂಬಂಧಿಕರೊಂದಿಗೆ ಸ್ನಾನಕ್ಕೆ ತೆರಳಿದ್ದ ಮುಂಡಾಜೆ ಗ್ರಾಮದ ಕುಳೂರು ನಿವಾಸಿ ನಿಶಾಂತ್ (16) ಮೃತಪಟ್ಟ ದುರ್ದೈವಿ. ಸ್ಥಳೀಯ ಕಾಲೇಜೊಂದರ



ವಿದ್ಯಾರ್ಥಿಯಾಗಿದ್ದ ಈತ ಈ ಬಾರಿ ಪ್ರಥಮ ಪಿ.ಯು.ಸಿ. ಪರೀಕ್ಷೆ ಮುಗಿಸಿ ಮನೆಯಲ್ಲೇ ಇದ್ದ, ಬುಧವಾರ ಮಧ್ಯಾಹ್ನ ಸಮೀಪದ ನದಿಗೆ ಸ್ನಾನಕ್ಕೆ ತೆರಳಿದಾಗ ಅವಘಡ ಸಂಭವಿಸಿದೆ. ಜತೆಗಿದ್ದವರು ರಕ್ಷಣೆಗೆ ಯತ್ನಿಸಿದರೂ ಸಾಧ್ಯವಾಗಿಲ್ಲ ಎನ್ನಲಾಗಿದೆ. ಸ್ಥಳಕ್ಕೆ ಧರ್ಮಸ್ಥಳ ಪೊಲೀಸರು ಆಗಮಿಸಿ ಪರಿಶೀಲನೆ ನಡೆಸಿದ್ದಾರೆ. ಸುಮಾರು ಹತ್ತು ಅಡಿಗಿಂತ ಆಳದಲ್ಲಿ ಸಿಲುಕಿದ್ದ ಮೃತ ದೇಹವನ್ನು ಶ್ರೀ ಧರ್ಮಸ್ಥಳ ಶೌರ್ಯ ವಿಪತ್ತು ನಿರ್ವಹಣಾ ತಂಡದ ಸದಸ್ಯರಾದ ಸುಧೀರ್, ಸ್ನೇಕ್ ಪ್ರಕಾಶ್, ಸ್ನೇಕ್ ಅನಿಲ್, ನಳಿನ್ ಬೇಕಲ್, ಸಚಿನ್ ಭಿಡೆ, ಧನೇಶ್ ಧನ್ವಿ ಹಾಗೂ ಸ್ಥಳೀಯರು ಸೇರಿ ಮೇಲೆತ್ತಿದ್ದಾರೆ. ನಿಶಾಂತ್‌ನ ಪೋಷಕರು ಹಲವು ವರ್ಷಗಳ ಹಿಂದೆ ಕೇರಳದಿಂದ ಬಂದು ಮುಂಡಾಜೆ ಆಸುಪಾಸಿನಲ್ಲಿ ರಬ್ಬರ್ ಟ್ಯಾಪಿಂಗ್ ನಡೆಸುತ್ತಿದ್ದರು. ಈತನ ತಂದೆ ಹಾಗೂ ತಾಯಿ ಕೆಲವು ವರ್ಷಗಳ ಹಿಂದೆ ನಿಧನರಾಗಿದ್ದು ನಿಶಾಂತ್ ಊಟ, ತಿಂಡಿಗೆ ಸಮೀಪದ ಚಿಕ್ಕಮ್ಮನ ಮನೆಯಲ್ಲಿ ಆಶ್ರಯ ಪಡೆದಿದ್ದ. ಈತನಿಗೆ ಸಹೋದರಿ ಇದ್ದು ಆಕೆ ಖಾಸಗಿ ಸಂಸ್ಥೆಯಲ್ಲಿ ಉದ್ಯೋಗಿಯಾಗಿದ್ದಾರೆ.

ಬಸ್, ಕಾರುಗಳ ಡಿಕ್ಕಿ

ಉಡುಪಿ: ಖಾಸಗಿ ಬಸ್ ಮತ್ತು ಕಾರುಗಳ ಮಧ್ಯೆ ಸಂತೆಕಟ್ಟೆಯ ಓವರ್ ಬ್ರಿಡ್ಜ್ ಬಳಿ ಬುಧವಾರ ಮಧ್ಯಾಹ್ನ ವೇಳೆ ಸಂಭವಿಸಿದ ಅಪಘಾತದಲ್ಲಿ ಹಲವು ಮಂದಿ ಗಾಯಗೊಂಡಿದ್ದಾರೆ. ಡಿಕ್ಕಿ ಹೊಡೆದ ರಭಸಕ್ಕೆ ಕಾರು ಸಂಪೂರ್ಣ ನಜ್ಜುಗುಜ್ಜಾಗಿದೆ. ಕಾರಿನಲ್ಲಿದ್ದವರಿಗೆ ಗಂಭೀರ ಗಾಯವಾಗಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಮತ್ತೊಂದು ಕಾರಿಗೂ ಹಾನಿಯಾಗಿದೆ.







ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಾದ್ಯಂತ ಸಾಂಗವಾಗಿ ನಡೆದ ಪರೀಕ್ಷೆ | ದ.ಕ.ದಲ್ಲಿ 213 ಮಂದಿ ಗೈರು

ಮೊದಲ ದಿನದ ಎಸ್ಸೆಸೆಲ್ಸಿ ಪರೀಕ್ಷೆ ಪಾಸ್

ಮಂಗಳೂರು: ರಾಜ್ಯದೆಲ್ಲೆಡೆ ಬುಧವಾರ ಎಸ್ಸೆಸೆಲ್ಸಿ ಪರೀಕ್ಷೆ ಆರಂಭವಾಗಿದೆ. ದಕ್ಷಿಣ ಕನ್ನಡ, ಉಡುಪಿ, ಕೊಡಗು ಜಿಲ್ಲೆಗಳಲ್ಲಿಯೂ ಮೊದಲ ದಿನದ ಪರೀಕ್ಷೆ ಯಶಸ್ವಿಯಾಗಿ ನಡೆದಿದೆ.

ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗಿದ್ದು, ವಿದ್ಯಾರ್ಥಿಗಳ ಪರೀಕ್ಷೆಗೆ ಪೂರಕ ವಾತಾವರಣ ಸೃಷ್ಟಿಸಲಾಗಿತ್ತು. ಪ್ರತಿಯೊಂದು ಪರೀಕ್ಷಾ ಕೇಂದ್ರಗಳ ಸುತ್ತ ತೀವ್ರ ನಿಗಾ ಇರಿಸಲಾಗಿತ್ತು. ಮೊದಲ ದಿನ ಭಾಷಾ ವಿಷಯದ ಪರೀಕ್ಷೆಯಾದ್ದರಿಂದ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಉತ್ಸಾಹ ಕಂಡುಬಂದಿತ್ತು. ವಿದ್ಯಾರ್ಥಿಗಳು ಖುಷಿಯಿಂದಲೇ ಪರೀಕ್ಷಾ ಕೇಂದ್ರದತ್ತ ತೆರಳುತ್ತಿದ್ದುದು ಎಲ್ಲೆಡೆ ಕಂಡುಬಂತು.

ದ.ಕ.213 ಮಂದಿ ಗೈರು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಸ್ಸೆಸೆಲ್ಸಿ ಪ್ರಥಮ ಭಾಷಾ ಪರೀಕ್ಷೆಗೆ ಒಟ್ಟು 28,334 ವಿದ್ಯಾರ್ಥಿಗಳು ಹಾಜರಾಗಿದ್ದು, 213 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.

ಸುಳ್ಯದಲ್ಲಿ 28 ವಿದ್ಯಾರ್ಥಿಗಳು ಗೈರು

ಪ್ರಥಮ ಭಾಷೆ ಪರೀಕ್ಷೆಗೆ ಸುಳ್ಯ ತಾಲೂಕಿನಲ್ಲಿ 6 ಕೇಂದ್ರಗಳಲ್ಲಿ 28 ವಿದ್ಯಾರ್ಥಿಗಳು ಗೈರುಹಾಜರಾಗಿದ್ದಾರೆ.

ಗೈರಾದ ಮಕ್ಕಳ ಪೈಕಿ 7 ನಿಯಮಿತ (ರೆಗ್ಯುಲರ್) ವಿದ್ಯಾರ್ಥಿಗಳಾಗಿದ್ದು, 19 ವಿದ್ಯಾರ್ಥಿಗಳು ಖಾಸಗಿ ಟ್ಯುಟೋರಿಯಲ್ ವಿದ್ಯಾರ್ಥಿಗಳಾಗಿದ್ದು ಇಬ್ಬರು ಪುನಾರವರ್ತಿತ ವಿದ್ಯಾರ್ಥಿಗಳು ಗೈರಾಗಿದ್ದಾರೆ.

ಪುತ್ತೂರು-ಕಡಬ 40 ಅಭ್ಯರ್ಥಿಗಳು ಗೈರು

ಕಡಬ ಸಹಿತ ಪುತ್ತೂರು ತಾಲೂಕಿನಲ್ಲಿ 40 ಅಭ್ಯರ್ಥಿಗಳು ಗೈರು ಹಾಜರಾಗಿದ್ದರು. ಅವಿಭಜಿತ ತಾಲೂಕಿನಲ್ಲಿ ಒಟ್ಟು 4656 ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಶಾಲಾ ಅಭ್ಯರ್ಥಿಗಳಲ್ಲಿ 7 ಗೈರಾಗಿದ್ದರೆ, ಖಾಸಗಿಯಾಗಿ ಪರೀಕ್ಷೆಗೆ ನೋಂದಣಿ ಮಾಡಿಕೊಂಡವರಲ್ಲಿ 28 ಅಭ್ಯರ್ಥಿಗಳು ಗೈರು ಹಾಜರಾಗಿದ್ದರು. ಇಬ್ಬರು ಶಾಲಾ ಪುನರಾವರ್ತಿತ ಅಭ್ಯರ್ಥಿಗಳು ಮತ್ತು 3 ಖಾಸಗಿ ಪುನರಾವರ್ತಿತ ಅಭ್ಯರ್ಥಿಗಳು ಗೈರು ಹಾಜರಾಗಿದ್ದಾರೆ. 2ನೇ ಪರೀಕ್ಷೆ ಮಾ.23ರಂದು ನಡೆಯಲಿದೆ.



ಅಂಧ ವಿದ್ಯಾರ್ಥಿಗಳಿಗೆ ಪರೀಕ್ಷಾ ಕೇಂದ್ರ ಬಲು ದೂರ!

ಎಸ್ಸೆಸೆಲ್ಸಿ ಪರೀಕ್ಷೆ ಬರೆಯಲು ಈ ಬಾರಿ ಮಂಗಳೂರಿನ ಅಂಧ ವಿದ್ಯಾರ್ಥಿಗಳಿಗೆ ಪರೀಕ್ಷಾ ಕೇಂದ್ರವನ್ನು ನಗರದಿಂದ ಹೊರಗಿಡಲಾಗಿತ್ತು. ಇದರಿಂದ ವಿದ್ಯಾರ್ಥಿಗಳು ಬೆಳ್ಳಂಬೆಳಗ್ಗೆ ಪರೀಕ್ಷೆಗಾಗಿ ಹೊರಡಬೇಕಾದ ಸ್ಥಿತಿ ಎದುರಾಗಿತ್ತು. ಮಂಗಳೂರಿನ ಅಂಧ ವಿದ್ಯಾರ್ಥಿಗಳಿಬ್ಬರು ಪರೀಕ್ಷೆ ಬರೆಯಲೆಂದು ಮೂಲ್ಕಿ ಸಮೀಪದ ಕಿಲ್ಪಾಡಿಗೆ ಹಾಗೂ ಸುರತ್ಕಲ್‌ಗೆ ಪ್ರಯಾಣಿಸಬೇಕಾದ ಪರಿಸ್ಥಿತಿ ಬಂದೊದಗಿತ್ತು. ಈ ಅಂಧ ವಿದ್ಯಾರ್ಥಿಗಳ ಜತೆ ಅವರಿಗೆ ಬರೆಯಲು ನೆರವು ನೀಡುವ ಇಬ್ಬರು ವಿದ್ಯಾರ್ಥಿಗಳೂ ಕಿಲ್ಪಾಡಿ ಮತ್ತು ಸುರತ್ಕಲ್‌ಗೆ ಪ್ರಯಾಣಿಸಬೇಕಾಯಿತು.

ಪರೀಕ್ಷೆ ಬರೆದ ಅಂಧ ವಿದ್ಯಾರ್ಥಿಗಳಿಬ್ಬರೂ ಮಂಗಳೂರಿನ ಶಾಲೆಯೊಂದರ ವಿದ್ಯಾರ್ಥಿಗಳಾಗಿದ್ದು, ಅವರಿಗೆ ಬರೆಯಲು ಸಹಾಯಕರಾಗಿರುವವರು ಕೂಡಾ ಮಂಗಳೂರಿನ ಶಾಲೆಯೊಂದರ 9ನೇ ತರಗತಿ ವಿದ್ಯಾರ್ಥಿಗಳು. ಈವರೆಗೆ ಅಂಧ ವಿದ್ಯಾರ್ಥಿಗಳಿಗೆ ಮಂಗಳೂರಿನಲ್ಲೇ ಪರೀಕ್ಷಾ ಕೇಂದ್ರವನ್ನು ನೀಡಲಾಗುತ್ತಿತ್ತು. ಆದರೆ ಇದೇ ಮೊದಲ ಬಾರಿ ಮಂಗಳೂರಿನ ಹೊರಗೆ ಪರೀಕ್ಷಾ ಕೇಂದ್ರ ನಿಗದಿಪಡಿಸಲಾಗಿತ್ತು. ಶಿಕ್ಷಣ ಇಲಾಖೆಯ ಈ ನಿರ್ಧಾರ ಅಂಧ ವಿದ್ಯಾರ್ಥಿಗಳಿಗೆ ತೊಡಕಾಗಿ ಪರಿಣಮಿಸಿತ್ತು.

ಉಡುಪಿ ಜಿಲ್ಲೆಯಲ್ಲಿ 52 ವಿದ್ಯಾರ್ಥಿಗಳು ಗೈರು

ಉಡುಪಿ: ಜಿಲ್ಲೆಯಾದ್ಯಂತ ಮೊದಲ ದಿನದ ಪ್ರಥಮ ಭಾಷಾಯ ಪರೀಕ್ಷೆಯು ಅತ್ಯಂತ ಸುಸೂತ್ರವಾಗಿ ಮುಕ್ತಾಯಗೊಂಡಿದೆ. ಜಿಲ್ಲಾಡಳಿತದ ಬಿಗಿ ಭದ್ರತೆ ಮತ್ತು ಸಿಸಿಟಿವಿ ಕಣ್ಗಾವಲಿನಲ್ಲಿ ನಡೆದ ಪರೀಕ್ಷೆಯಲ್ಲಿ ಜಿಲ್ಲೆಯ ಒಟ್ಟು 51 ಕೇಂದ್ರಗಳಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಿದರು. ಜಿಲ್ಲೆಯಾದ್ಯಂತ ಯಾವುದೇ ಪರೀಕ್ಷಾ ಅಕ್ರಮಗಳು ವರದಿಯಾಗಿಲ್ಲ.

ತಾಲೂಕುವಾರು ಹಾಜರಾತಿ ವಿವರ

ಪರೀಕ್ಷೆಯ ಮೊದಲ ದಿನ ಜಿಲ್ಲೆಯಲ್ಲಿ ಒಟ್ಟು 13,788 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದು, ಈ ಪೈಕಿ 13,736 ವಿದ್ಯಾರ್ಥಿಗಳು ಹಾಜರಾಗಿದ್ದಾರೆ. ಜಿಲ್ಲೆಯಾದ್ಯಂತ ಒಟ್ಟು 52 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ.

ವಲಯವಾರು ಅಂಕಿ-ಅಂಶಗಳನ್ನು ಗಮನಿಸಿದರೆ, ಉಡುಪಿ ದಕ್ಷಿಣ ವಲಯದಲ್ಲಿ 3,398 ವಿದ್ಯಾರ್ಥಿಗಳು ಹಾಜರಾಗಿದ್ದು 17 ಮಂದಿ ಗೈರಾಗಿದ್ದಾರೆ. ಉಡುಪಿ ಉತ್ತರ ವಲಯದಲ್ಲಿ 2,751 ಮಂದಿ ಹಾಜರಿದ್ದು 10 ವಿದ್ಯಾರ್ಥಿಗಳು ಪರೀಕ್ಷೆಯಿಂದ ದೂರ ಉಳಿದಿದ್ದಾರೆ. ಒಟ್ಟಾರೆಯಾಗಿ ಜಿಲ್ಲೆಯ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಮೊದಲ ದಿನದ ಪರೀಕ್ಷಾ ಪ್ರಕ್ರಿಯೆಯು ಯಶಸ್ವಿಯಾಗಿ ನಡೆದಿದ್ದು, ವಿದ್ಯಾರ್ಥಿಗಳು ಮತ್ತು ಪೋಷಕರಲ್ಲಿ ಪರೀಕ್ಷೆಯ ಬಗ್ಗೆ ಇದ್ದ ಆತಂಕ ನಿವಾರಣೆಯಾಗಿದೆ.

ಕುಂದಾಪುರ ವರದಿ

ಕುಂದಾಪುರ ಹಾಗೂ ಬೈಂದೂರು ವಲಯದಲ್ಲಿ ಮೊದಲ ದಿನದ ಪ್ರಥಮ ಭಾಷಾ ಪರೀಕ್ಷೆ ಯಾವುದೇ ಅಡೆತಡೆಗಳಿಲ್ಲದೇ, ಸುಸೂತ್ರವಾಗಿ ನಡೆಯಿತು. ಉಭಯ ವಲಯದಲ್ಲಿ ಒಟ್ಟು 17 ಮಂದಿ ವಿದ್ಯಾರ್ಥಿಗಳು ಗೈರಾಗಿದ್ದಾರೆ. ಕುಂದಾಪುರ ವಲಯದಲ್ಲಿ ಪರೀಕ್ಷೆಗೆ ನೋಂದಾಯಿಸಿದ 2,842 ಮಕ್ಕಳ ಪೈಕಿ 2,835 ಮಕ್ಕಳು ಹಾಜರಾಗಿದ್ದಾರೆ. 7 ಮಂದಿ ವಿದ್ಯಾರ್ಥಿಗಳು ಮೊದಲ ದಿನದ ಪರೀಕ್ಷೆಗೆ ಗೈರಾಗಿದ್ದಾರೆ. ಒಟ್ಟು 46 ಪ್ರೌಢಶಾಲೆಗಳಿದ್ದು, ಈ ಪೈಕಿ 20 ಸರಕಾರಿ, 3 ವಸತಿ, 7 ಅನುದಾನಿತ ಹಾಗೂ 16 ಖಾಸಗಿ ಪ್ರೌಢಶಾಲೆಗಳಾಗಿವೆ. ಒಟ್ಟು 8 ಪರೀಕ್ಷಾ ಕೇಂದ್ರಗಳಿದ್ದು, ಕುಂದಾಪುರದ ಬೋರ್ಡ್ ಹೈಸ್ಕೂಲ್, ಸೈಂಟ್ ಮೇರಿಸ್ ಕುಂದಾಪುರ, ಕೆಪಿಎಸ್ ಕೋಟೇಶ್ವರ, ಸರಕಾರಿ ಪ.ಪೂ. ಕಾಲೇಜು ಶಂಕರನಾರಾಯಣ, ಬಸ್ರೂರು ಸರಕಾರಿ ಪ್ರೌಢಶಾಲೆ, ಎಸ್. ವಿ. ಪ.ಪೂ. ಕಾಲೇಜು ಗಂಗೊಳ್ಳಿ, ಕೆಪಿಎಸ್ ಬಿದ್ಕಲ್‌ಕಟ್ಟೆ ಹಾಗೂ ಸಿದ್ದಾಪುರ ಸರಕಾರಿ ಪ್ರೌಢಶಾಲೆಯಲ್ಲಿ ಪರೀಕ್ಷೆ ನಡೆಯಿತು.

ಬೈಂದೂರು ವಲಯದಲ್ಲಿ 2,056 ಮಂದಿ ಮಕ್ಕಳು ನೋಂದಾಯಿಸಿದ್ದು, ಈ ಪೈಕಿ 2,046 ಮಕ್ಕಳು ಪರೀಕ್ಷೆ ಬರೆದಿದ್ದಾರೆ. 10 ಮಂದಿ ಪರೀಕ್ಷೆಗೆ ಗೈರಾಗಿದ್ದಾರೆ. ಒಟ್ಟು 34 ಪ್ರೌಢಶಾಲೆಗಳಿದ್ದು, 15 ಸರಕಾರಿ, 1 ವಸತಿ, 5 ಅನುದಾನಿತ ಹಾಗೂ 13 ಖಾಸಗಿ ಪ್ರೌಢಶಾಲೆಗಳಾಗಿವೆ. ಇಲ್ಲಿಯೂ ಒಟ್ಟು 8 ಪರೀಕ್ಷಾ ಕೇಂದ್ರಗಳಾದ ಬೈಂದೂರಿನ ಸರಕಾರಿ ಪ.ಪೂ. ಕಾಲೇಜು, ರತ್ತೂ ಬಾಯಿ ಪ್ರೌಢಶಾಲೆ, ಉಪ್ಪುಂದ ಸರಕಾರಿ ಪ.ಪೂ. ಕಾಲೇಜು, ಕಂಬದಕೋಣೆ ಸರಕಾರಿ ಪ.ಪೂ. ಕಾಲೇಜು, ಕೆಪಿಎಸ್ ವಂಡ್ಸೆ, ನಾವುಂದ ಸರಕಾರಿ ಪ.ಪೂ. ಕಾಲೇಜು, ತಲ್ಲೂರು ಸರಕಾರಿ ಪ್ರೌಢಶಾಲೆ, ಕೊಲ್ಲೂರಿನ ಶ್ರೀ ಮೂಕಾಂಬಿಕಾ ಪ್ರೌಢಶಾಲೆಯಲ್ಲಿ ಪರೀಕ್ಷೆ ನಡೆಯಿತು.

ಎಡಪದವಿನಲ್ಲಿ ಮತ್ತೆ ದನಗಳ ಕಳವು | ಆರೋಪಿಗಳು ಪರಾರಿ

ಕಾರು ಸಹಿತ ಜಾನುವಾರುಗಳು ಪೊಲೀಸ್ ವಶ

ಕೈಕಂಬ: ಫಾರ್ಚ್ಯುನರ್ ಕಾರಿನಲ್ಲಿ ದನಗಳನ್ನು ಸಾಗಿಸುವ ಹೈಟೆಕ್ ಜಾನುವಾರು ಕಳವು ಜಾಲವೊಂದನ್ನು ಬಜಪೆ ಪೊಲೀಸರು ಪತ್ತೆ ಹಚ್ಚಿದ್ದು, ನಾಲ್ಕು ಹಸುಗಳನ್ನು ರಕ್ಷಿಸಿದ್ದಾರೆ.

ಬುಧವಾರ ಮುಂಜಾನೆ ನಾಲ್ಕು ಗಂಟೆಗೆ ಪೊಲೀಸ್ ಠಾಣಾ ವ್ಯಾಪ್ತಿಯ ಎಡಪದವು ಸಮೀಪ ಶಾಸ್ತಾವು ದೇವಸ್ಥಾನದ ಬಳಿ ಬಿಳಿ ಬಣ್ಣದ ಫಾರ್ಚ್ಯುನರ್ ಕಾರಿನಲ್ಲಿ ಕೈಕಾಲು ಕಟ್ಟಿ ಹಿಂಸಾತ್ಮಕವಾಗಿ ದನಗಳನ್ನು ಸಾಗಾಟ ಮಾಡಲಾಗುತ್ತಿದೆ ಎಂದು ಬಂದ ಖಚಿತ ಮಾಹಿತಿಯ ಮೇರೆಗೆ ಪೊಲೀಸರು ಧಾಳಿ ನಡೆಸಿದ್ದು, ಈ ವೇಳೆ ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದರು. ನೊಂದಣಿ ಸಂಖ್ಯೆಯ ಕಾರಿನಲ್ಲಿ ಹಿಂಸಾತ್ಮಕವಾಗಿ ದನಗಳನ್ನು ತುಂಬಿಸಿದ್ದು ಪತ್ತೆಯಾಗಿದೆ.

ಅಂದಾಜು 8ಲಕ್ಷ ಮೌಲ್ಯದ ಕಾರು ಮತ್ತು ನಾಲ್ಕು ದನಗಳ ಸಹಿತ ಒಟ್ಟು 8 ಲಕ್ಷ 42 ಸಾವಿರ ಮೌಲ್ಯದ ಸೊತ್ತುಗಳನ್ನು ವಶಕ್ಕೆ ಪಡೆದುಕೊಂಡು ಎಫ್ ಐಆರ್ ದಾಖಲಿಸಿಕೊಂಡಿದ್ದಾರೆ.





ಪ್ರತ್ಯಕ್ಷದರ್ಶಿಗಳ ಪ್ರಕಾರ ಕಾರಿನಲ್ಲಿ ಮೂವರು ಬಂದಿದ್ದು, ದನಗಳನ್ನು ಕಳವುಗೈದು ಮಾಂಸ ಮಾಡಿ ಮಾರಾಟ ಮಾಡುವ ಬೃಹತ್ ಜಾಲ ಇದಾಗಿದ್ದು, ಪೊಲೀಸರು ದಾಳಿ ನಡೆಸಿದ ವೇಳೆ ಕೈಯಲ್ಲಿದ್ದ ತಲವಾರುಗಳ ಸಹಿತ ಪರಾರಿಯಾಗಿದ್ದಾರೆ ಎನ್ನಲಾಗಿದೆ.

ಎಡಪದವು, ಮಿಜಾರು ಮತ್ತು ದಡ್ಡಿ ಪ್ರದೇಶದಲ್ಲಿ ಸಕ್ರಿಯವಾಗಿದ್ದ ಜಾನುವಾರು ಕಳವು ಜಾಲ ಕೆಲಸಮಯದಿಂದ ಸುಮ್ಮನಿದ್ದು ಇದೀಗ ಮತ್ತೆ ಫೀಲ್ಡಿಗಿಳಿದಂತೆ ತೋರುತ್ತಿದೆ.

ಜಾನುವಾರು ಕಳ್ಳರು ಫಾರ್ಚ್ಯುನರ್ ಕಾರಿಗೆ ನಕಲಿ ನಂಬರ್ ಪ್ಲೇಟ್ ಬಳಸಿರುವ ಶಂಕೆ ಇದ್ದು, ನಿಜವಾದ ನಂಬರ್ ಪ್ಲೇಟ್ ಕಾರಿನ ಒಳಗಡೆ ಇತ್ತು ಎನ್ನಲಾಗಿದೆ.

ಕಾಸರಗೋಡು ಮಂಡಲದ ಎನ್‌ಡಿಎ ಪ್ರಚಾರಕ್ಕೆ ಕೇಂದ್ರ ಸಚಿವ ಸುರೇಶ್ ಗೋಪಿ ಚಾಲನೆ

ಹಿಂದುತ್ವ ಪ್ರತಿಪಾದಿಸುವ ಪಕ್ಷಕ್ಕೇ ಬೆಂಬಲ ನೀಡಿ

ಕಾಸರಗೋಡು: ಕೇರಳ ವಿಧಾನಸಭಾ ಚುನಾವಣೆಯ ಪ್ರಚಾರಾರ್ಥ ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಮೈತ್ರಿಕೂಟದ ಚುನಾವಣಾ ಪ್ರಚಾರಕ್ಕೆ ಕೇಂದ್ರ ಸಚಿವ ಸುರೇಶ್ ಗೋಪಿ ಅವರು ಬುಧವಾರ ಕಾಸರಗೋಡು ಮಠದ ಪೇಟೆ ಜಂಕ್ಷನ್‌ನಲ್ಲಿ ಗೋಡೆ ಬರಹ ಬರೆಯುವ ಮೂಲಕ ಚಾಲನೆ ನೀಡಿದರು.

ಬಿಜೆಪಿ ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ, ಕಲ್ಲಿಕೋಟೆ ವಲಯಾಧ್ಯಕ್ಷ, ವಕೀಲ ಕೆ.ಶ್ರೀಕಾಂತ್, ವಲಯ ಪ್ರಧಾನ ಕಾರ್ಯದರ್ಶಿ ಎಂ.ಸುಧಾಮ ಗೋಸಾಡ, ಮಾಜಿ ಜಿಲ್ಲಾಧ್ಯಕ್ಷ ರವೀಶ ತಂತ್ರಿ ಕುಂಟಾರು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಆರ್.ಸುನೀಲ್, ಜಿಲ್ಲಾ ಉಪಾಧ್ಯಕ್ಷ ಪಿ.ರಮೇಶ್, ಜಿಲ್ಲಾ ಕಾರ್ಯದರ್ಶಿ ಪ್ರಮೀಳಾ ಮಜಲ್, ಮಹಿಳಾಮೋರ್ಚಾ ಜಿಲ್ಲಾಧ್ಯಕ್ಷೆ ಕೆ.ಎಸ್.ರಮಣಿ, ಜಿಲ್ಲಾ ಸೆಲ್ ಕೋ ಓರ್ಡಿನೇಟರ್ ಸುಕುಮಾರ ಕುದ್ರೆಪ್ಪಾಡಿ, ಬಿಜೆಪಿ ಕಾಸರಗೋಡು ಮಂಡಲಾಧ್ಯಕ್ಷ ಕೆ.ಗುರುಪ್ರಸಾದ್ ಪ್ರಭು ಮೊದಲಾದವರು ಭಾಗವಹಿಸಿದ್ದರು.

ಕೇರಳದಲ್ಲಿ ತಾರತಮ್ಯತೆ

ಕಾರ್ಯಕ್ರಮದ ನಂತರ ಪಕ್ಷದ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಕೇಂದ್ರ ಸಚಿವ ಸುರೇಶ್ ಗೋಪಿಯವರು ಯಾವುದೇ ಧರ್ಮ ಮತದವರನ್ನು ಸಮಾನವಾಗಿ ಕಾಣಬೇಕು ಎಂದರು. ಆದರೆ ಕೇರಳದಲ್ಲಿ ಕೆಲವು ಮತದವರನ್ನು ಮಾತ್ರ ಸಂರಕ್ಷಿಸಲಾಗುತ್ತಿದೆ. ಹಿಂದುಗಳ ವಿಶ್ವಾಸ, ನಂಬಿಕೆ, ಆದರ್ಶ, ಪರಂಪರೆಗಳಿಗೆ ಯಾವುದೇ ಬೆಲೆ ಇಲ್ಲ. ಆದ್ದರಿಂದ ಎಲ್ಲಾ ಹಿಂದುಗಳು ಈ ನಿಟ್ಟಿನಲ್ಲಿ ಅತ್ಯಂತ ಜಾಗರೂಕತೆ ವಹಿಸಬೇಕು. ಜೊತೆಗೆ ಹಿಂದುತ್ವವನ್ನು ಪ್ರತಿಪಾದಿಸುವ ರಾಜಕೀಯ ಪಕ್ಷಕ್ಕೇ ಬೆಂಬಲ ನೀಡಬೇಕು ಎಂದು ವಿನಂತಿಸಿದರು.



ಕುಂಬಳೆಯಲ್ಲಿ ಚುನಾವಣಾ ಪ್ರಚಾರಕ್ಕೆ ಚಾಲನೆ

ಕುಂಬಳೆ: ಮಂಜೇಶ್ವರ ವಿಧಾನ ಸಭಾ ಕ್ಷೇತ್ರದಲ್ಲಿ ಎನ್‌ಡಿಎ ಚುನಾವಣಾ ಪ್ರಚಾರದ ಅಂಗ ವಾಗಿ ಕೇಂದ್ರ ಸಚಿವ ಸುರೇಶ್ ಗೋಪಿಯವರು ಕುಂಬಳೆ ಪೇಟೆಯಲ್ಲಿ ಗೋಡೆಗೆ ಬಣ್ಣ ಹಚ್ಚುವ ಮೂಲಕ ವರ್ಣರಂಜಿತ ಪ್ರಚಾರಕ್ಕೆ ಬುಧವಾರ ಬೆಳಗ್ಗೆ ಚಾಲನೆ ನೀಡಿದರು.



ಮಂಜೇಶ್ವರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್, ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಎಂ.ಎಲ್. ಅಶ್ವಿನಿ, ಎನ್‌ಡಿಎ ಸಂಚಾಲಕ ಎಂ. ವಿಜಯ ಕುಮಾರ್ ರೈ, ರಾಜ್ಯ ಸಮಿತಿ ಸದಸ್ಯರಾದ ವಿ.ರವೀಂದ್ರನ್, ಸುರೇಶ್ ಕುಮಾರ್ ಶೆಟ್ಟಿ, ಮಂಜೇಶ್ವರ ಮಂಡಲಾಧ್ಯಕ್ಷ ಆದರ್ಶ್ ಬಿ.ಎಂ., ಕುಂಬಳೆ ಮಂಡಲ ಸಮಿತಿ ಅಧ್ಯಕ್ಷ ಸುನಿಲ್ ಅನಂತಪುರ, ವಿಕ್ರಂ ಪೈ, ಸುಧಾಕರ ಕಾಮತ್, ಪ್ರೇಮಲತಾ ಎಸ್. ಸಹಿತ ಗಣ್ಯರು ಹಾಗೂ ಪಕ್ಷದ ಕಾರ್ಯಕರ್ತರು ಈ ಸಂದರ್ಭ ಉಪಸ್ಥಿತರಿದ್ದರು.

ಚಿಂತಿಸಿ ಮತ ಚಲಾಯಿಸಿ

ಪ್ರತಿಯೋರ್ವರಿಗೆ ಅವರದೇ ಧರ್ಮ, ಮತವನ್ನು ಸಂರಕ್ಷಿಸುವ, ಪಾಲಿಸುವ ಹಕ್ಕು ಇದ್ದೇ ಇರುತ್ತದೆ. ಹಿಂದು ಧರ್ಮ ಶ್ರೇಷ್ಠವಾದುದು. ವಿಶ್ವಕ್ಕೇ ಸಾಮರಸ್ಯದ ಸಂದೇಶ ಸಾರಿದ ಹಿಂದು ಧರ್ಮವು ಸಂಸ್ಕಾರ ಹಾಗೂ ಸಂಸ್ಕೃತಿಯುಕ್ತ ಬದುಕಿನ ಬಗ್ಗೆ ತಿಳಿಸುತ್ತದೆ. ಕೆ.ಸುರೇಂದ್ರನ್ ಅವರಂತಹ ಬಿಜೆಪಿ ನಾಯಕರು ಕೇರಳ ವಿಧಾನಸಭೆಯಲ್ಲಿರುತ್ತಿದ್ದರೆ ಶಬರಿಮಲೆಯ ಚಿನ್ನಾಭರಣ ಲೂಟಿಯಾಗುತ್ತಿರಲಿಲ್ಲ. ಆದಕಾರಣ ಈ ಕುರಿತು ಮತದಾರರು ಸರಿಯಾಗಿ ಚಿಂತಿಸಿ ಈ ಬಾರಿಯ ಚುನಾವಣೆಯಲ್ಲಿ ಮತ ಚಲಾಯಿಸಬೇಕೆಂದು ಸುರೇಶ್ ಗೋಪಿ ಮನವಿ ಮಾಡಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.



ಪುಟ 2

ಬೆಂಕಿ ಕೆನ್ನಾಲಿಗೆಗೆ ನಾಶಗೊಂಡ ಸಸ್ಯ, ಜೀವ ಸಂಕುಲಗಳಿಗೆ ಶ್ರದ್ಧಾಂಜಲಿ!



ಪುಟ 8


ರಾಜ್ಯ ಸರ್ಕಾರದ ವಿರುದ್ಧ ಮಂಗಳೂರಿನಲ್ಲಿ ಬಿಜೆಪಿಯಿಂದ ಪ್ರತಿಭಟನೆ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಸುತ್ತಮುತ್ತ

ನವೋದಯ ವಿದ್ಯಾಲಯಕ್ಕೆ ಚಿನ್ಮಯ ಶೌರಿ ಆಯ್ಕೆ

ಬಂಟ್ವಾಳ: 2025-26ನೇ ಸಾಲಿನಲ್ಲಿ ನಡೆದ ಜವಾಹರ್ ನವೋದಯ ವಿದ್ಯಾಲಯದ 6ನೇ ತರಗತಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಚಿನ್ಮಯ ಶೌರಿ ಅವರು ಶಾಲಾ ಪ್ರವೇಶಕ್ಕೆ ಆಯ್ಕೆಯಾಗಿದ್ದಾನೆ. ಈತ ಕನ್ಯಾನದ ಕರ್ನಾಟಕ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿ. ಡಾ. ವಿಶ್ವೇಶ್ವರ ವಿ.ಕೆ.-ಸುಪ್ರಿಯಾ ದಂಪತಿ ಪುತ್ರ.



ಅಧ್ಯಕ್ಷರಾಗಿ ಅನಿತಾ ಆಯ್ಕೆ

ಕಿನ್ನಿಗೋಳಿ: ಕಿನ್ನಿಗೋಳಿ ಶ್ರೀ ಕಾಳಿಕಾಂಬಾ ಮಹಿಳಾ ವೃಂದದ ಅಧ್ಯಕ್ಷರಾಗಿ ಅನಿತಾ ಪೃಥ್ವಿರಾಜ ಆಚಾರ್ಯ, ಗೌರವಾಧ್ಯಕ್ಷರಾಗಿ ಶಶಿಕಲಾ ಯೋಗೀಶ್, ಉಪಾಧ್ಯಕ್ಷೆ ಸವಿತಾ ಸತೀಶ್, ಕಾರ್ಯದರ್ಶಿ ಸವಿತಾ ದಿನೇಶ್, ಜೊತೆ ಕಾರ್ಯದರ್ಶಿ ರೇಣುಕಾ ಹರಿಶ್ಚಂದ್ರ, ಕ್ರೀಡಾ ಕಾರ್ಯದರ್ಶಿ ಸೌಮ್ಯ ಪ್ರಕಾಶ್, ಸಾಂಸ್ಕೃತಿಕ ಕಾರ್ಯದರ್ಶಿ ಅಂಬಿಕಾ ಕೇಶವ ಆಯ್ಕೆಯಾದರು.



ಮಾ.20ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ಮುಲ್ಕಿ ಫೀಡರ್‌ನಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮಾ.20ರಂದು ಬೆಳಗ್ಗೆ 10ರಿಂದ ಸಂಜೆ 5.30ವರೆಗೆ ಮುಲ್ಕಿ ಬಪ್ಪನಾಡು, ಕೊಳಚಿಕಂಬ್ಳ ಒಡೆಯರಬೆಟ್ಟು ಪಡುಬೈಲು, ಪಂಚಮಹಲ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಮಾ.21ರಂದು ಆರೋಗ್ಯ ಶಿಬಿರ

ಸುಬ್ರಹ್ಮಣ್ಯ: ಹರಿಹರ ಪಳ್ಳತ್ತಡ್ಕದ ವಿವೇಕ ಜಾಗೃತ ಬಳಗ ನೇತೃತ್ವದಲ್ಲಿ ರೋಟರಿ ಕ್ಲಬ್ ಪುತ್ತೂರು ಕಣ್ಣಿನ ಆಸ್ಪತ್ರೆ, ಮಂಗಳೂರಿನ ಪ್ರಸಾದ್ ನೇತ್ರಾಲಯ, ನೇತ್ರಜ್ಯೋತಿ ಚಾರಿಟೇಬಲ್ ಟ್ರಸ್ಟ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಡಾ.ಕೆ. ದಯಾನಂದ ಪೈ ಮತ್ತು ಸತೀಶ್ ಪೈ ಚಾರಿಟೇಬಲ್ ಟ್ರಸ್ಟ್ ಆಶ್ರಯದಲ್ಲಿ ಮಾ.21ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1ರವರೆಗೆ ಹರಿಹರ ಪಳ್ಳತ್ತಡ್ಕದ ಶ್ರೀ ಹರಿಹರೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ಉಚಿತ ನೇತ್ರ ತಪಾಸಣೆ, ಚಿಕಿತ್ಸಾ ಶಿಬಿರ ಹಾಗೂ ರಕ್ತದಾನ ಶಿಬಿರ ನಡೆಯಲಿದೆ ಎಂದು ಶಿಬಿರದ ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 9740901259, 8431342685, 8762128949 ಸಂಪರ್ಕಿಸಬಹುದಾಗಿದೆ.

ತೋಕೂರು ದೇವಸ್ಥಾನದಲ್ಲಿ ಭಕ್ತಾದಿಗಳ ವಿಶೇಷ ಸಭೆ

ಮುಲ್ಕಿ: ತೋಕೂರು ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಗ್ರಾಮಸ್ಥರ ಹಾಗೂ ಭಕ್ತಾದಿಗಳ ವಿಶೇಷ ಸಭೆಯು ದೇವಸ್ಥಾನದ ಸಭಾಭವನದಲ್ಲಿ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ ಗುರುರಾಜ್ ಎಸ್. ಪೂಜಾರಿ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ 2025-26ನೇ ಸಾಲಿನ ವಾರ್ಷಿಕ ಷಷ್ಠಿ ಮಹೋತ್ಸವದ ಆಯ – ವ್ಯಯದ ವಿವರವನ್ನು ಸಮಿತಿಯ ಸದಸ್ಯರಾದ ಪುರುಷೋತ್ತಮ ಕೋಟ್ಯಾನ್ ಮಂಡಿಸಿದರು ಹಾಗೂ ದೇವಾಲಯದ ಮುಂದಿನ ಕೆಲಸ ಕಾರ್ಯಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಅರ್ಚಕ ಟಿ.ಕೆ. ಮಧುಸೂಧನ್ ಆಚಾರ್, ಸಮಿತಿ ಸದಸ್ಯರಾದ ಅಶೋಕ್ ಕುಂದರ್, ಸಂಪತ್ ಜೆ.ಶೆಟ್ಟಿ ತೋಕೂರುಗುತ್ತು, ಸವಿತಾ ಶರತ್ ಬೆಳ್ಳಾಯರು, ಶೋಭಾ ವಿ. ಅಂಚನ್, ಗ್ರಾಮಸ್ಥರಾದ ಹರಿದಾಸ್ ಭಟ್, ಮೋಹನ್ ದಾಸ್, ಹೇಮನಾಥ ಅಮೀನ್, ರಮೇಶ್ ದೇವಾಡಿಗ, ವಿನೋದ್ ಕುಮಾರ್, ಧರ್ಮಾನಂದ ಶೆಟ್ಟಿಗಾರ್, ಸುರೇಶ್ ಶೆಟ್ಟಿ ವಾಮನ ದೇವಾಡಿಗ, ಸಂತೋಷ್ ಕುಮಾರ್, ಶೇಖರ್ ಶೆಟ್ಟಿಗಾರ್, ಸಂತೋಷ್ ದೇವಾಡಿಗ ಹಾಗೂ ಭಕ್ತರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಸದಸ್ಯರು ಇದ್ದರು. ಸಂಪತ್ ಜೆ. ಶೆಟ್ಟಿ ತೋಕೂರುಗುತ್ತು ನಿರೂಪಿಸಿ, ಪುರುಷೋತ್ತಮ ಕೋಟ್ಯಾನ್ ಕಾರ್ಯಕ್ರಮ ವಂದಿಸಿದರು.

ಕುಕ್ಕೆ ಪ್ರಾಧಿಕಾರ ಪ್ರಸ್ತಾಪಕ್ಕೆ ವಿರೋಧ

ಸುಬ್ರಹ್ಮಣ್ಯ: ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ಪ್ರಸ್ತಾಪಕ್ಕೆ ಸುಬ್ರಹ್ಮಣ್ಯದಲ್ಲಿ ವಿರೋಧ ವ್ಯಕ್ತಪಡಿಸಿ ಹೋರಾಟ ನಡೆಸಲು ಗ್ರಾಮಸ್ಥರು ನಿರ್ಧಾರ ಕೈಗೊಂಡಿದ್ದು, ಇಂದು ಅಂತಿಮ ಸಭೆ ನಡೆಯಲಿದೆ. ಪ್ರಾಧಿಕಾರ ರಚನೆ ಪ್ರಸ್ತಾಪಕ್ಕೆ ವಿರೋಧ ವ್ಯಕ್ತಪಡಿಸಿ ಸುಬ್ರಹ್ಮಣ್ಯದ ಪ್ರಮುಖರು ಮಂಗಳವಾರ ಸುಬ್ರಹ್ಮಣ್ಯದ ಗ್ರಾಮ ಪಂಚಾಯತ್‌ನ ಕುಮಾರಧಾರ ಸಭಾಭವನದಲ್ಲಿ ಸಭೆ ನಡೆಸಿದರು. ಸಭೆಯಲ್ಲಿ ವ್ಯಾಪಾರಸ್ಥರು, ವಸತಿಗೃಹಗಳ ಮಾಲಕರು, ಸಂಘ ಸಂಸ್ಥೆಗಳ ಪ್ರಮುಖರು, ಗ್ರಾಮಸ್ಥರು ಭಾಗವಹಿಸಿದ್ದರು. ಮಾಸ್ಟರ್ ಪ್ಲಾನ್ ಸಮಿತಿ ಇರುವಾಗಲೇ ಇನ್ನೊಂದು ಅಭಿವೃದ್ಧಿ ಪ್ರಾಧಿಕಾರ ಇಲ್ಲಿಗೆ ಬೇಕಾಗಿಲ್ಲ ಎಂದು ಗ್ರಾಮಸ್ಥರು ಪ್ರಸ್ತಾಪಿಸಿದರು. ನಮ್ಮ ವಿರೋಧವನ್ನು ಸರಕಾರದ ಮಟ್ಟಕ್ಕೆ ತಿಳಿಸಿ, ಪ್ರಾಧಿಕಾರ ರಚನೆ ಆಗದಂತೆ ನೋಡಿಕೊಳ್ಳಬೇಕು ಎಂದು ಶಿವರಾಮ ರೈ ಸಭೆಯಲ್ಲಿ ಅಭಿಪ್ರಾಯ ಮಂಡಿಸಿದರು. ಶಿವರಾಮ ರೈ, ರವೀಂದ್ರ ಕುಮಾರ್ ರುದ್ರಪಾದ, ರಾಜೇಶ್ ಎನ್. ಎಸ್., ಪವನ್ ಎಂ.ಡಿ., ಎಚ್.ಎಲ್. ವೆಂಕಟೇಶ್, ದಿನೇಶ್, ಸುಬ್ರಹ್ಮಣ್ಯ ರಾವ್, ರವೀಂದ್ರ ಸುಬ್ರಹ್ಮಣ್ಯ, ಶೇಖರ ಬಿಲದ್ವಾರ, ವೆಂಕಟೇಶ್ ಶರ್ಮ, ಭವಿಷ್ ಅಯ್ಯೆಟ್ಟಿ ಅನಿಲ್ ಡಿ'ಸೋಜಾ, ಕಾರ್ತಿಕ್ ಕಾಮತ್, ಭರತ್ ದೇವರಗದ್ದೆ, ಶೇಷ ಕುಮಾರ್, ದೀಪಕ್, ಸತೀಶ್ ಕೂಜುಗೋಡು ಮತ್ತಿತರರಿದ್ದರು.

ಮಂಗಳೂರು ರೋಶನೀ ನಿಲಯದಲ್ಲಿ ಕ್ರಿಫೋ 2ಕೆ26 ಅಂತಾರಾಷ್ಟ್ರೀಯ ಸಮ್ಮೇಳನ | ಭೂಮರೆಡ್ಡಿ ಸಲಹೆ

ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಬಗ್ಗೆ ಎಚ್ಚರ ಅಗತ್ಯ

ಮಂಗಳೂರು: ನಗರದ ಸ್ಕೂಲ್ ಆಫ್ ಸೋಶಿಯಲ್ ವರ್ಕ್ ಸಾರಥ್ಯದಲ್ಲಿ ಕ್ರಿಫೋ 2ಕೆ26 ಫಾರೆನ್ಸಿಕ್ ಫ್ಯೂಷನ್ ಅಂತಾರಾಷ್ಟ್ರೀಯ ಸಮ್ಮೇಳನವನ್ನು ರೋಶನೀ ನಿಲಯ ಕಾಲೇಜಿನಲ್ಲಿ ಮಂಗಳವಾರ ಹಮ್ಮಿಕೊಳ್ಳಲಾಗಿತ್ತು.

ಅಪರಾಧಗಳನ್ನು ಪತ್ತೆಹಚ್ಚುವಲ್ಲಿ ತಂತ್ರಜ್ಞಾನಗಳ ಬಳಕೆಯ ಬಗ್ಗೆ ಸಂಬಂಧಪಟ್ಟ ವಿಭಾಗದ ಅಧಿಕಾರಿಗಳನ್ನೇ ಸಂಪನ್ಮೂಲ ವ್ಯಕ್ತಿಗಳನ್ನಾಗಿ ಬರಮಾಡಿಕೊಂಡು ಮಾಹಿತಿ ನೀಡಲಾಯಿತು.

ಸ್ಕೂಲ್ ಆಫ್ ಸೋಶಿಯಲ್ ವರ್ಕ್ ರೋಶನಿ ನಿಲಯ, ಐಕ್ಯೂ ಎಸಿ ಘಟಕ ಮತ್ತು ಕ್ರಿಮಿನಾಲಜಿ ಮತ್ತು ಫೋರೆನ್ಸಿಕ್ ಸೈನ್ಸ್ ಸ್ನಾತಕೋತ್ತರ ವಿಭಾಗದ ವತಿಯಿಂದ ದುಬೈನ ಎವಿಝುಡ್ ಸೈಬರ್ ಸೆಕ್ಯುರಿಟಿ ಸೊಲ್ಯೂಷನ್ಸ್ ಮತ್ತು ಅವೆನ್ಸೊ ಸೈಬರ್ ಸೆಕ್ಯುರಿಟಿ ಸೊಲ್ಯೂಷನ್ಸ್ ಇಂಡಿಯಾ ಸಹಯೋಗದಲ್ಲಿ ನಡೆದ ಈ ಕಾರ್ಯಕ್ರಮವನ್ನು ದಕ್ಷಿಣ ಕನ್ನಡ ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಅನಿಲ ಕುಮಾರ್ ಭೂಮರೆಡ್ಡಿ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಅಪರಾಧಗಳನ್ನು ಪತ್ತೆ ಹಚ್ಚುವುದಕ್ಕೆ ಈಗ ಆಧುನಿಕ ತಂತ್ರಜ್ಞಾನಗಳಿವೆ, ಫಾರೆನ್ಸಿಕ್ ಸೇರಿದಂತೆ ಇನ್ನಿತರ ಟೆಕ್ನಾಲಜಿಗಳ ಬಳಕೆಯಿಂದ ಅಪರಾಧ ಪ್ರಕರಣಗಳನ್ನು ಬೇಗ ಬೇಧಿಸಬಹುದು ಎಂದರು.

ಆಧುನಿಕ ತಂತ್ರಜ್ಞಾನಗಳ ಹೊರತಾಗಿಯೂ ಹಳೆಯ ಮಾದರಿಯ ತನಿಖಾ ಕ್ರಮಗಳನ್ನು ಎಂದಿಗೂ ಮರೆಯುವಂತಿಲ್ಲ, ಹಳೆಯ ತನಿಖಾ ಪದ್ಧತಿ ಮತ್ತು ಹೊಸ ತಂತ್ರಜ್ಞಾನದ ನೆರವಿನಿಂದ ಪ್ರಕರಣಗಳನ್ನು ಸುಲಭವಾಗಿ ಭೇದಿಸಬಹುದು. ಈ ನಿಟ್ಟಿನಲ್ಲಿ ಫಾರೆನ್ಸಿಕ್ ವಿಭಾಗದ ನೆರವು ಮಹತ್ವದ್ದಾಗಿದೆ ಎಂದವರು ಹೇಳಿದರು.

ಸಾಮಾಜಿಕ ಜಾಲತಾಣಗಳ ಮೂಲಕ ಆಗುತ್ತಿರುವ ಅಪರಾಧ ಕೃತ್ಯಗಳ ಬಗ್ಗೆ ಬೆಳಕು ಚೆಲ್ಲಿದ ಅವರು, ಕೆಲವೊಮ್ಮೆ ಸಾಮಾಜಿಕ ಜಾಲತಾಣದಲ್ಲಿ ನಾವು ಹಾಕುವ ಪೋಸ್ಟ್‌ಗಳು ಹೇಗೆ ಮನೆಯ ಸಂಪೂರ್ಣ ದರೋಡೆಗೆ ಕಾರಣವಾಗುತ್ತದೆ ಎಂಬುದನ್ನು ನೈಜ ಘಟನೆಯೊಂದಿಗೆ ವಿವರಿಸಿದರು.

ಸಹ ಪ್ರಾಧ್ಯಾಪಕಿ ಸಿಸಿಲಿಯಾ ಎಸ್. ಗೋವಿಯಸ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಅಪರಾಧ ಪತ್ತೆ ಕಾರ್ಯದಲ್ಲಿ ಫಾರೆನ್ಸಿಕ್ ವಿಭಾಗದ ನೆರವು ಮಹತ್ವದ್ದಾಗಿದೆ ಎಂದರು.

ದುಬೈನ ಎವಿಝುಡ್ ಸೈಬರ್ ಸೆಕ್ಯುರಿಟಿ ಸೊಲ್ಯೂಷನ್ಸ್ ಆಡಳಿತ ಪಾಲುದಾರ ಡಾ.ಅಬ್ದು ಯಾಸರ್, ಅವನ್ಸೊ ಸೈಬರ್ ಸೆಕ್ಯುರಿಟಿ ಸೊಲ್ಯೂಷನ್ಸ್ ಇಂಡಿಯಾದ ನಿರ್ದೇಶಕ, ಸಿಇಒ ಡಾ. ಅಜಿತ್ ಕುಮಾರ್ ಪಾರಕ್ಕಾಡ್, ವಿದ್ಯಾರ್ಥಿ ಸಂಯೋಜಕಿ ಕೀರ್ತನಾ ಲಾಲಸ ಉಪಸ್ಥಿತರಿದ್ದರು. ಕಾರ್ಯಕ್ರಮ ಸಂಯೋಜಕಿ ಡಾ.ಸರಿತಾ ಡಿಸೋಜ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಅಸಿಸ್ಟೆಂಟ್ ಪ್ರೊಫೆಸರ್ ಗಾಯತ್ರಿ ಕೆ.ಎಸ್. ಸ್ವಾಗತಿಸಿ, ಅಸಿಸ್ಟೆಂಟ್ ಪ್ರೊಫೆಸರ್ ಜೋಯೆಲ್ ಜೋಸೆಫ್ ವಂದಿಸಿದರು. ಶರ್ಲಿನ್ ಮಾರ್ಟಿಸ್ ನಿರೂಪಿಸಿದರು.



ಫೇಸ್ ಬುಕ್ ಪೋಸ್ಟ್‌ನಿಂದ ಮನೆಯೇ ದರೋಡೆ ಆಯಿತು!

ಚಿಕ್ಕಮಗಳೂರಿನಲ್ಲಿ ಮಹಿಳೆಯೊಬ್ಬರು ಗೋವಾಕ್ಕೆ ಹೋಗುವ ಬಗ್ಗೆ, ಅಲ್ಲಿ ಹೋದ ಬಳಿಕ ಎಲ್ಲಿದ್ದೇನೆ ಎಂದು ನಿತ್ಯ ಫೇಸ್ ಬುಕ್‌ನಲ್ಲಿ ಪೋಸ್ಟ್ ಹಾಕುತ್ತಿದ್ದರು. ಮನೆಯೊಡತಿಯ ಫೇಸ್ ಬುಕ್ ಫಾಲೋ ಮಾಡುತ್ತಿದ್ದ ಕಳ್ಳ, ಮನೆಗೆ ನುಗ್ಗಿ ನಾಲ್ಕೈದು ದಿನಗಳ ಕಾಲ ಆ ಮನೆಯಲ್ಲಿ ಕಾಲ ಕಳೆದು, ನೆರೆಮನೆಯವರ ಗಮನಕ್ಕೂ ಬಾರದಂತೆ ಮನೆಯಲ್ಲಿದ್ದ ವಸ್ತುಗಳನ್ನೆಲ್ಲ ದೋಚಿದ್ದ. ಮನೆಯೊಡತಿ ಕುಟುಂಬ ಸಹಿತ ಮನೆಗೆ ಹಿಂತಿರುಗಿದಾಗ ಮನೆ ಸಂಪೂರ್ಣ ಖಾಲಿಯಾಗಿತ್ತು. ಬಳಿಕ ಆರೋಪಿಯನ್ನು ಪೊಲೀಸರು ಎರಡು ದಿನಗಳ ಅವಧಿಯಲ್ಲಿ ಪತ್ತೆಹಚ್ಚಿ ಕಳವು ಮಾಡಿದ್ದ ವಸ್ತುಗಳನ್ನು ವಶಪಡಿಸಿಕೊಂಡರಾದರೂ ಕಳ್ಳ ಮಾತ್ರ ಫೇಸ್‌ಬುಕ್‌ನ ಸಹಾಯದಿಂದ ಅನಾಯಾಸವಾಗಿ ದರೋಡೆ ಮಾಡಲು ಸಾಧ್ಯವಾಗಿತ್ತು ಎಂದು ಉದಾಹರಣೆ ಸಹಿತ ಅನಿಲ್ ಕುಮಾರ್ ಭೂಮರೆಡ್ಡಿ ನೈಜ ಘಟನೆಯ ಉದಾಹರಣೆ ನೀಡಿದರು.

ಉಪ್ಪಿನಂಗಡಿಯಲ್ಲಿ ವಿಜಯ-ವಿಕ್ರಮ ಜೋಡುಕರೆ ಕಂಬಳ: ಆಮಂತ್ರಣ ಬಿಡುಗಡೆ



ಉಪ್ಪಿನಂಗಡಿ: 40ನೇ ವರ್ಷದ ವಿಜಯ-ವಿಕ್ರಮ ಜೋಡುಕರೆ ಕಂಬಳವು 'ಉಬಾರ್ ಕಂಬಳೋತ್ಸವ'ವಾಗಿ ವಿಜೃಂಭಣೆಯಿಂದ ಈ ಬಾರಿ ಮಾ.28ರಂದು ನಡೆಯಲಿದ್ದು ಇದರ ಆಮಂತ್ರಣ ಪತ್ರಿಕೆಯ ಬಿಡುಗಡೆಯು ಕೂಟೇಲು ಬಳಿಯ ಹಳೆಗೇಟುವಿನ ನೇತ್ರಾವತಿ ನದಿ ಕಿನಾರೆಯಲ್ಲಿರುವ ಕಂಬಳ ಕರೆಯ ಬಳಿ ನಡೆಯಿತು.

ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಿ ಮಾತನಾಡಿದ ವಿಜಯ-ವಿಕ್ರಮ ಜೋಡುಕರೆ ಕಂಬಳ ಸಮಿತಿಯ ಅಧ್ಯಕ್ಷ, ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ, 40ನೇ ವರ್ಷದ ಹೊನಲು ಬೆಳಕಿನ ಕಂಬಳ ಇದಾಗಿದ್ದು, ಹಿಂದೆಂದಿಗಿಂತಲೂ ಅದ್ದೂರಿಯಾಗಿ ನಡೆಯಬೇಕು. ಇದರಲ್ಲಿ ಸರ್ವ ಧರ್ಮದವರು ಪಾಲ್ಗೊಂಡು ನಮ್ಮ ತುಳುನಾಡ ಜನಪದ ಕ್ರೀಡೆಯ ಸವಿಯನ್ನು ಅನುಭವಿಸಬೇಕು. ಎಲ್ಲರಿಗೂ ಆಮಂತ್ರಣ ಪತ್ರ ಮುಟ್ಟುವಂತೆ ಸಮಿತಿಯವರು ನೋಡಿಕೊಳ್ಳಬೇಕು. ನಮ್ಮ ತುಳುನಾಡ ಸಂಸ್ಕೃತಿಯನ್ನು ಇನ್ನಷ್ಟು ಬೆಳೆಸುವಂತಾಗಬೇಕೆಂದರು.

ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಾಲಯದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆ, ಪುಡಾ ಸದಸ್ಯ ನಿಹಾಲ್ ಶೆಟ್ಟಿ, ಅಕ್ರಮ-ಸಕ್ರಮ ಸಮಿತಿಯ ಸದಸ್ಯ ರಾಮಣ್ಣ ಪಿಲಿಂಜ, ವಿಜಯ-ವಿಕ್ರಮ ಜೋಡುಕರೆ ಕಂಬಳ ಸಮಿತಿಯ ಗೌರವಾಧ್ಯಕ್ಷ ಉಮೇಶ್ ಶೆಣೈ ಎನ್., ಕಾರ್ಯಾಧ್ಯಕ್ಷ ಅಶೋಕ್ ಕುಮಾರ್ ರೈ ಅರ್ಕಗುತ್ತು, ಪ್ರಧಾನ ಕಾರ್ಯದರ್ಶಿ ಕೇಶವ ಭಂಡಾರಿ ಬೆಳ್ಳಿಪ್ಪಾಡಿ ಕೈಪ, ಸಂಚಾಲಕ ಶಶಿಕುಮಾರ್ ರೈ ಬಾಳ್ಯೊಟ್ಟುಗುತ್ತು, ಕೋಶಾಧಿಕಾರಿ ಸೀತಾರಾಮ ಶೆಟ್ಟಿ ಹೆಗ್ಡೆಹಿತ್ಲು, ಕಾರ್ಯದರ್ಶಿಗಳಾದ ಶೆಟ್ಟಿ ಗೋಳ್ತಮಜಲು, ಚಂದ್ರಶೇಖರ ಮಡಿವಾಳ, ಜೊತೆ ಕಾರ್ಯದರ್ಶಿ ವಿಶ್ವನಾಥ ಶೆಟ್ಟಿ ಕಂಗ್ಲೆ, ಉಪಾಧ್ಯಕ್ಷರಾದ ವಿದ್ಯಾಧರ ಜೈನ್, ಮುರಳೀಧರ ರೈ ಮಠಂತಬೆಟ್ಟು, ವಿಠಲ ಶೆಟ್ಟಿ ಕೊಲ್ಲೊಟ್ಟು, ಡಾ. ರಾಜಾರಾಮ್ ಕೆ.ಬಿ., ರಾಮಚಂದ್ರ ಮಣಿಯಾಣಿ, ಜಯಂತ ಪೊರೋಳಿ, ವಾರಿಸೇನ ಜೈನ್ ಕೋಡಿಯಾಡಿಗುತ್ತು, ಪ್ರವೀಣ್ ಕುಮಾರ್ ಕರಿಕ್ಕಾರ್ ಬೀಡು, ಮೊದಲಾದವರು ಉಪಸ್ಥಿತರಿದ್ದರು.

ಪ್ರಿಯದರ್ಶಿನಿ ಸೊಸೈಟಿಯಲ್ಲಿ ಸಹಕಾರಿ ಭೀಷ್ಮ ನಾರಾಯಣ ಸನಿಲ್‌ರ ಸಂಸ್ಮರಣೆ



ಮುಲ್ಕಿ: ಹಳೆಯಂಗಡಿ ಪ್ರಿಯದರ್ಶಿನಿ ಕೋ-ಆಪರೇಟಿವ್ ಸೊಸೈಟಿ ಆಶ್ರಯದಲ್ಲಿ ಸಂಘದ ಪ್ರೇರಣಾಶಕ್ತಿ, ಸಹಕಾರಿ ರಂಗದ ಭೀಷ್ಮ ಎಚ್. ನಾರಾಯಣ ಸನಿಲ್ ಅವರ ಸ್ಮರಣಾ ಕಾರ್ಯಕ್ರಮ ಬುಧವಾರ ಸಂಘದ ಸಭಾಭವನದಲ್ಲಿ ನಡೆಯಿತು.

ಪ್ರಿಯದರ್ಶಿನಿ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ಎಚ್ ವಸಂತ್ ಬೆರ್ನಾಡ್ ಪ್ರಾಸ್ತಾವಿಕ ನುಡಿಗಳನ್ನಾಡಿ, ದಿ. ಎಚ್ ನಾರಾಯಣ ಸನಿಲ್ ಅವರು ವ್ಯಕ್ತಿಯಲ್ಲ ಶಕ್ತಿಯಾಗಿದ್ದರು. ಧಾರ್ಮಿಕ,ರಾಜಕೀಯ, ಸಹಕಾರಿ ಸಂಘದ ಭೀಷ್ಮರಾಗಿ ಸಾಮಾಜಿಕ ರಂಗದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಜನಾನುರಾಗಿ ಯಾಗಿದ್ದರು. ಅವರು ಆದರ್ಶಗಳನ್ನು ಮೈಗೂಡಿಸಿಕೊಂಡು ಸಂಸ್ಥೆಯು ಇಂದು ಬಹಳಷ್ಟು ಸಾಧನೆ ಮಾಡಿದೆ ಎಂದರು.

ಸಾಮಾಜಿಕ ಕಳಕಳಿಗೆ ಒತ್ತು

ಸಂಸ್ಥೆಯು ಲಾಭದ ಉದ್ದೇಶ ಒಂದೇ ಗುರಿಯಾಗದೇ ಉದ್ಯೋಗ ಸೃಷ್ಟಿ ಹಾಗೂ ಸಾಮಾಜಿಕ ಕಳಕಳಿ ಮೂಲಕ ಗ್ರಾಹಕರ ಹಾಗೂ ಸಿಬ್ಬಂದಿಗಳ ಶ್ರಮದೊಂದಿಗೆ ಸಾಧನೆ ಮಾಡಿದೆ ಎಂದರು.

ಸಮಾರಂಭದ ಮುಖ್ಯ ಅತಿಥಿಗಳಾಗಿ ಜ್ಯೋತಿಷಿ ವಿಶ್ವನಾಥ್ ಭಟ್ ಎಸ್.ಕೋಡಿ ಮಾತನಾಡಿ, ದಿ.ನಾರಾಯಣ ಸನಿಲ್ ಅವರ ಸಾಮಾಜಿಕ ಶೈಕ್ಷಣಿಕ ಹಾಗೂ ಸಹಕಾರಿ ಕ್ಷೇತ್ರಕ್ಕೆ ಕೊಡುಗೆ ಅಪಾರ ಎಂದು ಶುಭ ಹಾರೈಸಿದರು

ಮುಖ್ಯ ಅತಿಥಿಗಳಾಗಿ ಉಷಾ ವಿಶ್ವನಾಥ್ ಎಸ್ ಕೋಡಿ , ಬೇಬಿ ಚಾರ್ವಿ, ಉದ್ಯಮಿ ಪ್ರವೀಣ್ ಕುಮಾರ್ ಬೋಳ್ಳೂರು, ಪ್ರಿಯದರ್ಶಿನಿ ಕೋ-ಆಪರೇಟಿವ್ ಸೊಸೈಟಿ ನಿರ್ದೇಶಕ ವಿಜಯ ಸನಿಲ್, ಧನಂಜಯ ಮಟ್ಟು, ಉಮಾನಾಥ ಜೆ. ಶೆಟ್ಟಿಗಾರ್, ನವೀನ್ ಸಾಲ್ಯಾನ್, ಗಣೇಶ್ ಪ್ರಸಾದ್ ದೇವಾಡಿಗ, ಜಯ ಕೃಷ್ಣ ಕೋಟ್ಯಾನ್, ಸೊಸೈಟಿ ಕಾರ್ಯನಿರ್ವಹಣಾಧಿಕಾರಿ ಸುದರ್ಶನ್ ಇದ್ದರು. ಸ್ವಸಹಾಯ ಸಂಘದ ಪ್ರೇರಕಿ ನೀತು ನಿರಂಜಲ ಪ್ರಾರ್ಥಿಸಿದರು. ಕಾರ್ಯನಿರ್ವಹಣಾಧಿಕಾರಿ ಸುದರ್ಶನ್ ಸ್ವಾಗತಿಸಿದರು. ಪ್ರಧಾನ ಕಚೇರಿ ಲೆಕ್ಕಿಗ ಲೋಲಾಕ್ಷಿ ವಂದಿಸಿದರು. ಸಾಲ ವಿಭಾಗದ ಪ್ರಬಂಧಕಿ ಅಕ್ಷತಾ ಶೆಟ್ಟಿ ನಿರೂಪಿಸಿದರು.

ಸಂಘಟನೆ ಸಮಾಜದ ಅಶಕ್ತರ ಕಷ್ಟಗಳಿಗೆ ನೆರವಾಗಲಿ: ಮೋಹನ್



ಬಂಟ್ವಾಳ: ಸಂಘಟನೆ ಕೇವಲ ಸಭೆ-ಸಮಾರಂಭಗಳಿಗೆ ಮಾತ್ರ ಸೀಮಿತವಾಗದೆ, ಸಮಾಜದ ಪ್ರತಿಯೋರ್ವನ ಕಷ್ಟ-ಸುಖಗಳಿಗೆ ಸ್ಪಂದಿಸುವ ಮೂಲಕ ಸರ್ವರ ಏಳಿಗೆಗೆ ಪೂರಕವಾಗುವ ಶಕ್ತಿಯಾಗಬೇಕು ಎಂದು ಕಾವಳಕಟ್ಟೆ ವಲಯ ಬಂಟರ ಸಂಘದ ಅಧ್ಯಕ್ಷ ಮೋಹನ್ ಶೆಟ್ಟಿ ನರವಲ್ಡಡ್ಡ ಅಭಿಪ್ರಾಯಪಟ್ಟರು.

ಇರ್ವತ್ತೂರು ಗ್ರಾಮದ ಬಾಲಕೃಷ್ಣ ಶೆಟ್ಟಿ ಅವರ ನಿವಾಸದಲ್ಲಿ ನಡೆದ ಕಾವಳಕಟ್ಟೆ ವಲಯ ಬಂಟರ ಸಂಘದ ಗ್ರಾಮವಾರು ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪರಸ್ಪರ ಸಹಕಾರ ಮತ್ತು ಅಚಲ ನಂಬಿಕೆಯೇ ಸಂಘಟನೆಯ ಅಡಿಪಾಯ. ಸದಸ್ಯರು ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಮೂಲಕ ಸಂಘಟನೆಯನ್ನು ಬಲಪಡಿಸಬೇಕು. ಇಂತಹ ಸಾಮಾಜಿಕ ಕಾರ್ಯಕ್ಕೆ ಪ್ರತಿಯೊಬ್ಬ ಸದಸ್ಯನು ಕೈ ಜೋಡಿಸಿದಾಗ ವಲಯವು ಜಿಲ್ಲೆ ಮತ್ತು ರಾಜ್ಯದಲ್ಲಿ ಮಾದರಿಯ ಸಂಘಟನೆಯಾಗಿ ರೂಪುಗೊಳ್ಳಲು ಸಾಧ್ಯ ಎಂದರು.

ಬಂಟ ಸಂಘದ ಹಿರಿಯ ಸದಸ್ಯ ಶ್ರೀಧರ ಭಂಡಾರಿ ಬೆಂಗತ್ತೋಡಿ ಮಾತನಾಡಿ, ಬಂಟ ಸಮುದಾಯಕ್ಕೆ ತನ್ನದೇ ಆದ ತ್ಯಾಗ ಮತ್ತು ಪರಂಪರೆಯ ಇತಿಹಾಸವಿದೆ. ಆಧುನಿಕತೆಯ ಒತ್ತಡದಲ್ಲಿ ಯುವ ಪೀಳಿಗೆ ಮೂಲ ಆಚಾರ-ವಿಚಾರ, ಕೌಟುಂಬಿಕ ಬಾಂಧವ್ಯ ಮತ್ತು ಪೂರ್ವಜರು ನಡೆದು ಬಂದ ಸಂಸ್ಕಾರಗಳನ್ನು ಮರೆಯುತ್ತಿರುವ ಈ ಕಾಲಘಟ್ಟದಲ್ಲಿ ಬಂಟರ ಇತಿಹಾಸ ಮತ್ತು ಸಂಸ್ಕಾರಗಳ ಅರಿವು ಮೂಡಿಸುವ ಕಾರ್ಯಾಗಾರಗಳು ನಿರಂತರವಾಗಿ ನಡೆಯಬೇಕು ಎಂದರು.

ಸಂಘಟನಾ ಕಾರ್ಯದರ್ಶಿ ಪುನೀತ್ ಶೆಟ್ಟಿ ಮಾತನಾಡಿ, ಹಳ್ಳಿಯ ಕೊನೆಯ ಮನೆಯ ಬಂಟ ಬಂಧುವಿಗೂ ಆತ್ಮವಿಶ್ವಾಸ ನೀಡುವ ಆಸರೆಯಾಗಬೇಕು. ಪ್ರಸ್ತುತ ವಿದ್ಯಮಾನಗಳ ನಡುವೆ ನಮ್ಮ ಸಮಾಜದ ಯುವಕರು ಹಾಗೆ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳು ಒಂಟಿಯಲ್ಲ ಎಂಬ ಭರವಸೆಯ ಬೆಳಕನ್ನು ನೀಡಬೇಕು. ಎಂದು ಹೇಳಿದರು.

ಸಂಘದ ಕಾರ್ಯದರ್ಶಿ ಉದಯ ಕುಮಾರ್ ಶೆಟ್ಟಿ ವರದಿ ವಾಚಿಸಿ, ಲೆಕ್ಕಪತ್ರವನ್ನು ಮಂಡಿಸಿದರು. ಸಂಘದ ನಿಧಿ ಬಳಕೆಯ ಕುರಿತು ಸಮಗ್ರ ಮಾಹಿತಿ ನೀಡಿದರು.

ಆರ್ಥಿಕ ನೆರವಿಗೆ ನಿರ್ಣಯ

ಸಭೆಯಲ್ಲಿ ಅನಾರೋಗ್ಯಕ್ಕೀಡಾದವರು, ಅಶಕ್ತರಿಗೆ ವಲಯ ಮತ್ತು ತಾಲೂಕು ಸಂಘದ ವತಿಯಿಂದ ಆರ್ಥಿಕ ನೆರವು ನೀಡಲು ನಿರ್ಣಯಿಸಲಾಯಿತು. ಕಿರು ಉಳಿತಾಯ ಯೋಜನೆಯನ್ನು ವಿಸ್ತರಿಸಲು ಮತ್ತು ಹೊಸ ಸದಸ್ಯತ್ವಕ್ಕೆ ಒತ್ತು ನೀಡಲು ತೀರ್ಮಾನಿಸಲಾಯಿತು. ವೇದಿಕೆಯಲ್ಲಿ ವಲಯ ಸಂಘದ ಉಪಾಧ್ಯಕ್ಷ ಪ್ರದೀಪ್ ಕುಮಾರ್ ಬಿಯಂತಬೆಟ್ಟು, ಕೋಶಾಧಿಕಾರಿ ಚಂದ್ರಶೇಖರ ಶೆಟ್ಟಿ ಪಣೆಕಲ, ಯುವ ವಿಭಾಗದ ಅಧ್ಯಕ್ಷ ಕಿಶೋರ್ ರೈ ಉಪಸ್ಥಿತರಿದ್ದರು. ಗಣೇಶ ಶೆಟ್ಟಿ ನಿರೂಪಿಸಿ, ವಂದಿಸಿದರು.

ಹೊಸಬೆಟ್ಟು ಶಾರದಾ ಮಂದಿರದಲ್ಲಿ ವಿಶ್ವ ಮಹಿಳಾ ದಿನಾಚರಣೆ: ಸನ್ಮಾನ



ಸುರತ್ಕಲ್: ಶ್ರೀ ಶಾರದಾ ಸೇವಾ ಟ್ರಸ್ಟ್ ಮತ್ತು ಶಾರದಾ ಮಹೋತ್ಸವ ಸಮಿತಿ ಇದರ ಅಂಗ ಸಂಸ್ಥೆ ಶ್ರೀ ಶಾರದಾ ಮಾತೃ ಮಂಡಳಿಯ ಗಣೇಶಪುರ ಜೆಸಿಐ ಇವರ ಸಂಯುಕ್ತ ಆಶ್ರಯದಲ್ಲಿ ಹೊಸಬೆಟ್ಟುವಿನ ಶಾರದಾ ಮಂದಿರದಲ್ಲಿ ವಿಶ್ವ ಮಹಿಳಾ ದಿನಾಚರಣೆ ಹಾಗೂ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಮುಖ್ಯ ಅತಿಥಿಯಾಗಿ ಅಕ್ಷತಾ ನವೀನ್ ಶೆಟ್ಟಿ ಭಾಗವಹಿಸಿ, ಮಹಿಳೆಯರು ಬದಲಾಗಬೇಕಾದ ಮನೋಭಾವದ ಬಗ್ಗೆ ಮಾತನಾಡಿದರು. ಅಂಚೆ ಇಲಾಖೆಯ ಅಧಿಕಾರಿ ವನಿತಾ ಅಂಚನ್ ಉಳಿತಾಯ ಖಾತೆ ಬಗ್ಗೆ ಮಾಹಿತಿ ನೀಡಿದರು. ಸದಸ್ಯೆಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಐದು ಮಂದಿ ಮಹಿಳೆಯರನ್ನು ಸನ್ಮಾನಿಸಿದರು.

ಶಕುಂತಲಾ ಐ ರಮಾನಂದ ಭಟ್ (ಸಮಾಜಸೇವೆ), ರೇಖಾ ಸುಧಾಕರ್ (ನೇಕಾರಿಕೆ), ಭೂಮಿಕಾ ಎಸ್. ಆಚಾರ್ಯ (ಕುಸ್ತಿ ಕ್ರೀಡೆ), ಗೀತಾ ಎಸ್. ಸಾಲ್ಯಾನ್(ಸಂಚಾರ ಪೊಲೀಸ್), ಮಂಜುಳಾ (ಅಂಚೆ ಇಲಾಖೆ) ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಜೆಸಿಐ ಅಧ್ಯಕ್ಷ ದೇವಿಚರಣ್ ಟಿ. ಶೆಟ್ಟಿ ಶಾರದಾ ಸೇವಾ ಟ್ರಸ್ಟ್ ಅಧ್ಯಕ್ಷರಾದ ವೈ. ರಾಘವೇಂದ್ರ ರಾವ್, ಮಾತೃ ಮಂಡಳಿಯ ಕಾರ್ಯದರ್ಶಿ ಗುಲಾಬಿ ಸುರೇಂದ್ರ, ಕೋಶಾಧಿಕಾರಿ ವಿಮಲಾ ರಾವ್, ಮಾಜಿ ಅಧ್ಯಕ್ಷರು, ಸದಸ್ಯರು ಪಾಲ್ಗೊಂಡಿದ್ದರು. ಶಾರದಾ ಮಹೋತ್ಸವ ಸಮಿತಿಯ ನೂತನ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಜೆಸಿಐ ಸದಸ್ಯರು ಭಾಗವಹಿಸಿದ್ದರು. ಇದೇ ಸಂದರ್ಭ ಮಹಿಳೆಯರಿಗೆ ವಿವಿಧ ಆಟೋಟ ಸ್ಪರ್ಧೆ ಏರ್ಪಡಿಸಲಾಯಿತು. ಬಹುಮಾನ ವಿತರಿಸಲಾಯಿತು.

ಅಧ್ಯಕ್ಷೆ ತಾರಾ ಧನುರಾಜ್ ಸ್ವಾಗತಿಸಿ, ಗೌರವಾಧ್ಯಕ್ಷೆ ವೀಣಾ ಟಿ. ಶೆಟ್ಟಿ ಪ್ರಸ್ತಾಪಿಸಿದರು. ರೋಹಿಣಿ ಯಾದವ್ ನಿರೂಪಿಸಿ, ಅಮಿತಾ ದಿಲೀಪ್ ವಂದಿಸಿದರು.

ಬೆಂಗ್ರೆ ವಾರ್ಡಿನ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕಾಮತ್ ಚಾಲನೆ



ಮಂಗಳೂರು: ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಶಾಸಕರ ವಿಶೇಷ ಅನುದಾನದಲ್ಲಿ ನಡೆಯಲಿರುವ 60ನೇ ಬೆಂಗ್ರೆ ವಾರ್ಡಿನ ನಾಲ್ಕು ಕೈ ಪಂಜುರ್ಲಿ ದೈವಸ್ಥಾನ, ಬೆಂಗ್ರೆ ತೋಟ ಬಳಿ ಅಭಿವೃದ್ಧಿ ಕಾಮಗಾರಿಯ ಭೂಮಿ ಪೂಜೆಯು ಶಾಸಕ ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ನಡೆಯಿತು.

ಪ್ರಮುಖ ಬೇಡಿಕೆಗೆ ಆದ್ಯತೆ

ನಂತರ ಮಾತನಾಡಿದ ಶಾಸಕರು, ಇಲ್ಲಿನ ಸ್ಥಳೀಯರ ಹಲವು ಸಮಯದ ಬೇಡಿಕೆಗೆ ಅನುಗುಣವಾಗಿ ಅನುದಾನಗಳನ್ನು ಹೊಂದಿಸಿಕೊಂಡು ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು ಶೀಘ್ರದಲ್ಲಿ ಪೂರ್ಣವಾಗಲಿದೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಪ್ರಮುಖರಾದ ಲೋಕೇಶ್ ಬೆಂಗ್ರೆ, ಮೀರಾ ಕರ್ಕೇರ, ನಿತಿನ್ ಕುಮಾರ್, ವಿನೋದ್ ಮೆಂಡನ್, ಅನಿಲ್, ಕಿಶೋರ್ ಕೊಟ್ಟಾರಿ, ಸುರೇಂದ್ರ ಪಾಂಗಳ್, ಗಂಗಾಧರ, ಸಂಜಯ್ ಸುವರ್ಣ, ಧನಂಜಯ ಪುತ್ರನ್, ಚೇತನ್ ಬೆಂಗ್ರೆ, ವಿಥುನ್, ವಾಸು ಸುವರ್ಣ, ಸುಂದರ ಸಾಲ್ಯಾನ್, ಸುಕುಮಾರ, ಜೀವನ್ ಖಾರ್ವಿ, ಸ್ಥಳೀಯ ನಿವಾಸಿಗಳು, ವಾರ್ಡಿನ ಕಾರ್ಯಕರ್ತರು ಉಪಸ್ಥಿತರಿದ್ದರು.



ಸೌತ್ ಕೆನರಾ ಫೋಟೋ ಗ್ರಾಫರ್ಸ್ ಅಸೋಸಿಯೇಷನ್ ಬಂಟ್ವಾಳ ವಲಯವು ಕಾರ್ಕಳ ದಲ್ಲಿ ನಡೆದ ಜಿಲ್ಲಾ ಮಟ್ಟದ ಹಗ್ಗ-ಜಗ್ಗಾಟ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ವನ್ನು ಪಡೆದುಕೊಂಡಿದೆ. ಈ ಕ್ರೀಡಾಕೂಟದಲ್ಲಿ 14 ವಲಯದ ತಂಡಗಳು ಭಾಗವಹಿಸಿದ್ದರು.

ಅರಣ್ಯ ಸಂಪತ್ತು ರಕ್ಷಣೆಗಾಗಿ ಜನಶಿಕ್ಷಣ ಟ್ರಸ್ಟ್, ಕೊಣಾಜೆ ಪತ್ರಕರ್ತರ ಸಂಘದಿಂದ ವಿನೂತನ ಜಾಗೃತಿ ಕಾರ್ಯಕ್ರಮ

ಬೆಂಕಿ ಕೆನ್ನಾಲಿಗೆಗೆ ನಾಶಗೊಂಡ ಸಸ್ಯ, ಜೀವ ಸಂಕುಲಗಳಿಗೆ ಶ್ರದ್ಧಾಂಜಲಿ ಸಲ್ಲಿಕೆ!

ಕೊಣಾಜೆ: ಪ್ಲಾಸ್ಟಿಕ್ ಸುಡಲು ಹಾಕಿದ ಬೆಂಕಿಯ ಪರಿಣಾಮ ಕೊಣಾಜೆ ಪ್ರದೇಶದಲ್ಲಿ ಬೆಂಕಿಯ ಕೆನ್ನಾಲಿಗೆಗೆ ನಾಶವಾದ ಅಪಾರ ಸಸ್ಯ ಹಾಗೂ ಜೀವ ಸಂಕುಲಗಳಿಗೆ ಶ್ರದ್ಧಾಂಜಲಿ ಅರ್ಪಿಸುವ ವಿಶಿಷ್ಟ ಕಾರ್ಯಕ್ರಮ ಮಂಗಳವಾರ ನಡೆಯಿತು.

ಅಪ್ನಾ ದೇಶ್ ಮಾದರಿ ಗ್ರಾಮ ಅಭಿಯಾನ, ಜನ ಶಿಕ್ಷಣ ಟ್ರಸ್ಟ್ ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ ಮೂಲಕ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಭೂಮಿಯ ನಾಶಕ್ಕೂ ಕಾರಣವಾಗಲಿದೆ

ಈ ಸಂದರ್ಭ ಮಾತನಾಡಿದ ಜನ ಶಿಕ್ಷಣ ಟ್ರಸ್ಟ್ ನಿರ್ದೇಶಕ ಕೃಷ್ಣ ಮೂಲ್ಯ ಅವರು, ಸಸ್ಯ ಜೀವ ಸಂಕುಲಗಳಿಗೆ ಬಂದಿರುವ ಈ ಪರಿಸ್ಥಿತಿ ಮುಂದೊಂದು ದಿನ ಭೂಮಿಯ ನಾಶಕ್ಕೆ ಕಾರಣವಾಗಲಿದೆ ಭೂಮಿ ಕಾಪಾಡಿಕೊಳ್ಳುವ ಪ್ರಯತ್ನ ನಮ್ಮಿಂದ ಆಗಬೇಕು ಎಂದರು.



ಪಿ.ಎ ಇಂಜಿನಿಯರಿಂಗ್ ಪ್ರಾಧ್ಯಾಪಕ ಸಿವಿ ಪೂಜಾರ್, ಪ್ಲಾಸ್ಟಿಕ್ ಬೆಂಕಿಯಲ್ಲಿ ಉರಿಯುವುದರಿಂದ ಮಾನವನ ದೇಹಕ್ಕೆ ಆಗುವ ಅತ್ಯಂತ ಅಪಾಯಕಾರಿ ಅಂಶಗಳ ಬಗ್ಗೆ ತಿಳಿಸಿದರು.

ದ.ಕ. ಜಿಲ್ಲಾ ಸ್ವಚ್ಛತಾ ರಾಯಭಾರಿ ಶೀನ ಶೆಟ್ಟಿ ಪ್ರಕೃತಿ ಮಾತೆಯ ಮಡಿಲಲ್ಲಿ ಆಗುತ್ತಿರುವ ದುಷ್ಕೃತ್ಯಗಳ ಬಗ್ಗೆ ಖಂಡಿಸಿ ಮುಂದಿನ ಪೀಳಿಗೆಗೆ ಭೂಮಿ ನಾಶವಾಗುತ್ತಿರುವುದಕ್ಕೆ ಕಳವಳ ವ್ಯಕ್ತಪಡಿಸಿ ಬೆಂಕಿಗೆ ಆಹುತಿಯಾದ ಸಸ್ಯ ಜೀವ ಸಂಕುಲಕ್ಕೆ ಶ್ರದ್ಧಾಂಜಲಿ ಅರ್ಪಿಸಿದರು.

ಅಪ್ನಾ ದೇಸ್ ಮಾದರಿ ಗ್ರಾಮದ ಪ್ರಮುಖರಾದ ಜಮಯ್ಯತ್ತುಲ್‌ನ ಇಬ್ರಾಹಿಂ ನಡುಪದವು, ಅಬ್ದುಲ್ ನಾಸಿರ್, ಅಬುಬಕ್ಕರ್ ಜಲ್ಲಿ, ನಿವೃತ್ತ ಇಂಜಿನಿಯರ್ ಅರುಣ್ ದಂಪತಿಗಳು, ಪತ್ರಕರ್ತರ ಸಂಘದ ಮೋಹನ್ ಕುತ್ತಾರ್, ಅಶ್ವಿನ್, ಜನ ಶಿಕ್ಷಣದ ಚೇತನ್, ಬೆಳಕು ಟ್ರಸ್ಟ್ ಪ್ರಮುಖರು ಪರಿಸರ ಪ್ರೇಮಿಗಳು ಘಟನೆಗೆ ಮರುಕ ವ್ಯಕ್ತಪಡಿಸಿ, ಇಂತಹ ಕೃತ್ಯಗಳನ್ನು ಖಂಡಿಸಿದರು.

ದಂಡಾಸ್ತ್ರಕ್ಕೆ ಚಿಂತನೆ

ಈ ಸಂದರ್ಭದಲ್ಲಿ ಮಾನ್ಯ ವಿಧಾನಸಭಾ ಸಭಾಧ್ಯಕ್ಷರ ಕಚೇರಿಗೆ, ಜಿಲ್ಲಾ ಉಸ್ತುವಾರಿ ಸಚಿವರ ಕಚೇರಿಗೆ, ಜಿಲ್ಲಾ ಪಂಚಾಯತ್ ಜಿಲ್ಲಾ ಸ್ವಚ್ಛತಾ ನೋಡಲ್ ಅಧಿಕಾರಿಯವರಿಗೆ, ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗೆ, ಗ್ರಾಮ ಪಂಚಾಯತ್‌ಗೆ ಮಾಹಿತಿ ನೀಡಿ ಕ್ರಮ ಕೈಗೊಳ್ಳುವಂತೆ ಅಪ್ನಾದೇಶ್ ವತಿಯಿಂದ ದೂರವಾಣಿ ಮೂಲಕ ಸಂಪರ್ಕಿಸಿ ಮನವಿ ಸಲ್ಲಿಸಲಾಯಿತು.

ಕೊಣಾಜೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ ರಜನಿ ಹಾಗೂ ಕಾರ್ಯದರ್ಶಿ ಚೈತ್ರಾ ಸ್ಥಳಕ್ಕೆ ಹಾಜರಾಗಿ ಮುಂದಿನ ದಂಡಸ್ತ್ರದ ಬಗ್ಗೆ ಕಠಿಣ ನಿರ್ಧಾರದ ಬಗ್ಗೆ ಯೋಜನೆ ರೂಪಿಸುವ ಬಗ್ಗೆ ತಿಳಿಸಿದರು.

ಸ್ಪಂದಿಸಿದ ಸ್ಪೀಕರ್ ಕಚೇರಿ

ಸಭಾಧ್ಯಕ್ಷರ ಕಚೇರಿಯಿಂದ ಹಾಗೂ ಜಿಲ್ಲಾ ಉಸ್ತುವಾರಿ ಕಚೇರಿಯಿಂದ ಹಾಗೂ ಮಂಗಳೂರು ವಿವಿಯ ಕುಲಪತಿಗಳಿಂದ ಉತ್ತಮ ಸ್ಪಂದನೆ ದೊರಕಿದ ಕಾರಣ ಪರಿಸರ ಪ್ರೇಮಿಗಳಿಗೆ ಹೊಸ ಭರವಸೆ ಮೂಡಿತು.

ಸುತ್ತಮುತ್ತ

ಕುರಾಡಿ ಸೀತಾರಾಮ ಅಡಿಗ ಕಾವ್ಯ ಪ್ರಶಸ್ತಿಗೆ ಕವನ ಸಂಕಲನ ಆಹ್ವಾನ

ಉಡುಪಿ: ವಿಶ್ವ ಭಾರತಿ ಕರ್ನಾಟಕ ಪ್ರತಿಷ್ಠಾನ ಬೆನಗಲ್ ಪ್ರಾಯೋಜಿತ ಹಾಗೂ ಸಂಸ್ಕೃತಿ ವಿಶ್ವ ಪ್ರತಿಷ್ಠಾನ ಉಡುಪಿ ಸಂಸ್ಥೆಯ ವತಿಯಿಂದ ನೀಡಲಾಗುವ, ಕವಿ ಕುರಾಡಿ ಸೀತಾರಾಮ ಅಡಿಗರ ನೆನಪಿನ 'ಕುರಾಡಿ ಸೀತಾರಾಮ ಅಡಿಗ ಕಾವ್ಯ



ಪ್ರಶಸ್ತಿ'ಗಾಗಿ ಕವನ ಸಂಕಲನಗಳನ್ನು ಆಹ್ವಾನಿಸಲಾಗಿದೆ.

2025ನೇ ಸಾಲಿನಲ್ಲಿ ಪ್ರಕಟಗೊಂಡ ಮೊದಲ ಆವೃತ್ತಿಯ ಸ್ವರಚಿತ ಹಾಗೂ ಸ್ವತಂತ್ರ ಕವನ ಸಂಕಲನಗಳನ್ನು ಮಾತ್ರ ಈ ಪ್ರಶಸ್ತಿಗಾಗಿ ಪರಿಗಣಿಸಲಾಗುವುದು. ಪ್ರಶಸ್ತಿಯು 10,000 ರೂ. ನಗದು ಗೌರವ, ಪ್ರಶಸ್ತಿ ಪತ್ರ ಹಾಗೂ ಸ್ಮರಣಿಕೆಯನ್ನು ಒಳಗೊಂಡಿರುತ್ತದೆ. ಪ್ರಶಸ್ತಿಗೆ ಕಳುಹಿಸುವ ಕೃತಿಗಳು ಸ್ವತಂತ್ರ ಕವನ ಸಂಕಲನಗಳಾಗಿರಬೇಕು. ಯಾವುದೇ ರೀತಿಯ ಅನುವಾದಿತ ಕೃತಿಗಳು, ರೂಪಾಂತರ, ಶಿಶುಪ್ರಾಸ ಹಾಗೂ ಹನಿಗವನಗಳ ಸಂಕಲನಗಳನ್ನು ಸ್ಪರ್ಧೆಗೆ ಪರಿಗಣಿಸಲಾಗುವುದಿಲ್ಲ ಎಂದು ಪ್ರಶಸ್ತಿಯ ಸಂಚಾಲಕಿ ಪೂರ್ಣಿಮಾ ಜನಾರ್ದನ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುಬ್ರಹ್ಮಣ್ಯ-ಚೆರ್ಕಳ ರಸ್ತೆ ಪಕ್ಕದಲ್ಲಿ ಕಸದ ರಾಶಿಗೆ ಬೆಂಕಿ



ಸುಳ್ಯ: ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮವಾಗಿ ಸುಬ್ರಹ್ಮಣ್ಯ ಚೆರ್ಕಳ ಸಂಪರ್ಕಿತ ರಾಜ್ಯ ಹೆದ್ದಾರಿ ಮಹಾಬಲಡ್ಕ ಎಂಬಲ್ಲಿ ರಾಶಿ ಬಿದ್ದಿದ್ದ ಕಸದ ಗುಡ್ಡೆಗೆ ಬೆಂಕಿ ಹಚ್ಚಿ ಸುಡಲಾಗಿದೆ.

ಹೆದ್ದಾರಿ ಬದಿಯ ಮಹಾಬಲಡ್ಕ ಎಂಬಲ್ಲಿ ಕಸದ ರಾಶಿ ಬಿದ್ದಿರುವ ಕುರಿತು 'ಹೊಸ ದಿಗಂತ' ಪತ್ರಿಕೆಯಲ್ಲಿ ಬುಧವಾರ ವಿಸ್ತೃತವಾದ ವರದಿ ಪ್ರಕಟಗೊಂಡಿತ್ತು. ಇದನ್ನು ಗಮನಿಸಿ ಮಂಗಳೂರಿನಿಂದ ಹಿರಿಯ ಆರೋಗ್ಯ ಅಧಿಕಾರಿಗಳ ನಿರ್ದೇಶನದಂತೆ ಸಿಬಂದಿ ಸ್ಥಳಕ್ಕೆ ಭೇಟಿ ನೀಡಿ ಕಸ ಬಿದ್ದಿರುವ ಸಮೀಪದ ಅಂಗಡಿ ಮಾಲಕರ ಜೊತೆ ಚರ್ಚಿಸಿ ಕಸವನ್ನು ಸುಟ್ಟು ಹಾಕಿ ವೀಡಿಯೋ ಸಹಿತ ಕಳುಹಿಸಿ ಕೊಡಲು ಸೂಚಿಸಿದರು. ಇದೀಗ ಸಾರ್ವಜನಿಕರು ಸಾಂಕ್ರಾಮಿಕ ರೋಗ ಭೀತಿಯಿಂದ ಹೊರ ಬಂದಿದ್ದು ಪತ್ರಿಕಾ ವರದಿಗೆ ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ.

ಬಂಟ್ವಾಳ ಪುರಸಭೆಯ 2026-27ನೇ ಸಾಲಿನ ಮುಂಗಡ ಪತ್ರ ತಯಾರಿ | ಸಲಹೆ, ಪ್ರಸ್ತಾಪಗಳ ಸ್ವೀಕಾರ

ಗೊಂದಲ, ಗದ್ದಲಕ್ಕೆ ಕಾರಣವಾಯಿತು ಬಜೆಟ್ ಸಿದ್ಧತಾ ಸಭೆ

ಬಂಟ್ವಾಳ: ಬಂಟ್ವಾಳ ಪುರಸಭೆಯ 2026-27 ನೇ ಸಾಲಿನ ಮುಂಗಡ ಆಯ-ವ್ಯಯ ತಯಾರಿಯ ಪೂರ್ವಭಾವಿ ಸಭೆ ಇದೇ ಮೊದಲಿಗೆ ಗದ್ದಲಕ್ಕೆ ಕಾರಣವಾಯಿತು.

ಬುಧವಾರ ಸಂಜೆ ಪುರಸಭೆಯ ಸಭಾಭವನದಲ್ಲಿ 2026-27ನೇ ಸಾಲಿನ ಮುಂಗಡ ಆಯವ್ಯಯ ತಯಾರಿಯ ನಿಟ್ಟಿನಲ್ಲಿ ಮುಖ್ಯಾಧಿಕಾರಿ ತೀರ್ಥ ಪ್ರಸಾದ್ ಕೆ.ಬಿ. ಅವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದ್ದು, ಈ ನಿಟ್ಟಿನಲ್ಲಿ ಸಲಹೆ, ಸೂಚನೆಗಳನ್ನು ನೀಡಲು ಸ್ಥಳೀಯ ವಿವಿಧ ಸಂಘಸಂಸ್ಥೆಗಳ ಪ್ರತಿನಿಧಿಗಳನ್ನು ಆಹ್ವಾನಿಸಲಾಗಿತ್ತು.

ಈ ಪೂರ್ವಭಾವಿ ಸಭೆ ಆಯ-ವ್ಯಯಕ್ಕೆ ಸಂಬಂಧಿಸಿದಂತೆ ಸಲಹೆ, ಸೂಚನೆಗಳ ಪ್ರಸ್ತಾಪಕ್ಕೆ ವೇದಿಕೆಯಾಗುವ ಬದಲು, ವರ್ತಕರ ಸಂಘದ ಕಾರ್ಯದರ್ಶಿ ಸುರೇಶ್ ಬಾಳಿಗಾ ಅವರು 400 ವರ್ಷಗಳ ಇತಿಹಾಸವಿರುವ ಬಂಟ್ವಾಳದಲ್ಲಿ ಮೂಲ ಸೌಲಭ್ಯದ ಕೊರತೆಯಿಂದಾಗಿ ಅಭಿವೃದ್ಧಿಯಾಗದಿರುವುದು, ಗ್ರಾಮೀಣ ಭಾಗದಲ್ಲಿ ರಸ್ತೆಗಳು ಕಾಂಕ್ರೀಟಿಕರಣವಾದರೂ ಬಂಟ್ವಾಳದ ಶಾಲಾ ಸಹಿತ ಕೆಲ ರಸ್ತೆ ಕಾಂಕ್ರಟೀಕರಣವಾಗಿಲ್ಲ, ಕೊಟ್ರಮಣಗಂಡಿಯಲ್ಲಿ ಬಸ್ ತಂಗುದಾಣದಲ್ಲಿ ಬಸ್‌ಗಳು ಸರಿಯಾಗಿ ನಿಲುಗಡೆಯಾಗದಿರುವುದು, ಬಂಟ್ವಾಳ ನಗರದಲ್ಲಿ ಸಮರ್ಪಕವಾದ ಶೌಚಾಲಯದ ವ್ಯವಸ್ಥೆ ಇಲ್ಲದಿರುವುದು, ಇದ್ದ ಶೌಚಾಲಯ ನಿರ್ವಹಣೆಯಿಲ್ಲದೆ ದುರ್ನಾತ ಬೀರುತ್ತಿರುವ ಬಗ್ಗೆ ಗಮನಸೆಳೆಯುತ್ತಿದ್ದಂತೆ ಮಾಜಿ



ಪುರಸಭಾ ಸದಸ್ಯ ಜಗದೀಶ್ ಕುಂದರ್ ಅವರು ಮಧ್ಯಪ್ರವೇಶಿಸಿ ಈ ಭಾಗದ ಕೌನ್ಸಿಲರ್ ಅವರ ಗಮನಕ್ಕೆ ಇದನ್ನೆಲ್ಲ ತರಲಿಲ್ಲವೇ ಎಂದಾಗ ಸದಸ್ಯ ಹರಿಪ್ರಸಾದ್ ಭಂಡಾರಿಬೆಟ್ಟು ಅವರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರಲ್ಲದೆ ವೈಯಕ್ತಿಕ ಟೀಕೆ ಸರಿಯಲ್ಲ,

ಈ ಸಭೆಯಲ್ಲಿ ಆಯ-ವ್ಯಯಕ್ಕೆ ಸಂಬಂಧಿಸಿ ಸಲಹೆಗಳನ್ನು ಮಾತ್ರ ಕೊಡಬಹುದಷ್ಟೇ ಹೊರತು ವೈಯಕ್ತಿಕ ವಿಚಾರಗಳನ್ನು ಪ್ರಸ್ತಾವಿಸುವುದು ಸರಿಯಲ್ಲ ಎಂದರು.

ಈ ಸಂದರ್ಭ ಮೋಹನ್ ಚಂಡ್ತಿಮಾರ್, ವೈಯಕ್ತಿಕ ಚರ್ಚೆ ಮಾಡುವುದಿದ್ದರೆ ನಾವು ಮಾತನಾಡಬೇಕಾಗುತ್ತದೆ ಎಂದು ಅಬ್ಬರಿಸಿದಾಗ ಒಂದಷ್ಟು ಹೊತ್ತು ಸಭೆ ಗದ್ದಲದ ಗೂಡಾಯಿತು.

ಈ ಸಂದರ್ಭ ಸುರೇಶ್ ಬಾಳಿಗಾ ಅವರು ಬಿಜೆಪಿ, ಕಾಂಗ್ರೆಸ್ ಸದಸ್ಯರೆಲ್ಲರೂ ಹಿಂದಿನಿಂದಲು ಅಭಿವೃದ್ಧಿಯಲ್ಲಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದು ಹೇಳುವ ಮೂಲಕ ಚರ್ಚೆಗೆ ತೆರೆ ಎಳೆದರು.

ಪುರಸಭೆಯ ಸಿಬ್ಬಂದಿ ನೇಮಕಾತಿ ವಿಚಾರದ ಗೊಂದಲ, ಮೂರನೇ ವಾರ್ಡ್‌ನ ನೇರಂಬೋಳ್ ಪರಿಸರದಲ್ಲಿ ಸಮರ್ಪಕವಾಗಿ ನೀರು ಪೂರೈಕೆಯಾಗದಿರುವುದು ಸಹಿತ ಕೆಲ ವಿಚಾರಗಳಿಗೆ ಸಂಬಂಧಿಸಿಯು ಬಿಸಿ ಬಿಸಿ ಚರ್ಚೆ ನಡೆಯಿತು.

ಇದಕ್ಕು ಮೊದಲು ಸುರೇಶ್ ಬಾಳಿಗಾ ಅವರು ಬಂಟ್ವಾಳದ ಸಮಸ್ಯೆಗಳ ಸರಮಾಲೆಯನ್ನು ಸಭೆಯ ಮುಂದಿಟ್ಟು ಸುಧೀರ್ಘವಾಗಿ ಮಾತನಾಡುತ್ತಿದ್ದಂತೆ ಬಿ.ಸಿ.ರೋಡು ಕೈಕುಂಜ ಪರಿಸರದ ಸಾಮಾಜಿಕ ಕಾರ್ಯಕರ್ತ ಹರೀಶ್ ಅವರು ಆಕ್ಷೇಪಿಸಿ, ಈ ಸಭೆ ಸಲಹೆಗೆ ಮಾತ್ರ ಸೀಮಿತವಾಗಿದೆ ಹೊರತು ಸದಸ್ಯರ ಸಾಮಾನ್ಯಸಭೆಯಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರಲ್ಲದೆ, ಹದಗೆಟ್ಟಿರುವ ಕೈಕುಂಜ ರಸ್ತೆಯನ್ನು ಸುಸ್ಥಿತಿಗೆ ತರುವ ನಿಟ್ಟಿನಲ್ಲಿ ಮುಂದಿನ ಆಯವ್ಯಯ ಅನುದಾನ ಮೀಸಲಿಡುವಂತೆ ಮುಖ್ಯಾಧಿಕಾರಿ ತೀರ್ಥ ಪ್ರಸಾದ್ ಅವರಿಗೆ ಸಲಹೆ ನೀಡಿದರು. ಆ ಸಂದರ್ಭವೂ ಒಂದಷ್ಟು ಮಾತಿನ ಚಕಮಕಿ ನಡೆಯಿತು.

2 ತಿಂಗಳ ಮೊದಲೇ ಸಭೆ ನಡೆಸಬೇಕಿತ್ತು

ಆಯ-ವ್ಯಯ ತಯಾರಿಗೆ ಎರಡು ತಿಂಗಳ ಮೊದಲೇ ಪೂರ್ವಸಿದ್ಧತಾ ಸಭೆ ನಡೆಸುವುದು ವಾಡಿಕೆ. ಹಾಗೆಯೇ ಪ.ಜಾ.ಪ.ಪಂ.ದ ಮುಖಂಡರ ಸಭೆ ನಡೆಸಿ ಅವರ ಅಹವಾಲು, ಅಭಿಪ್ರಾಯ ಪಡೆಯಬೇಕಾಗುತ್ತದೆ. ಮಾರ್ಚ್ ತಿಂಗಳ ಕೊನೆಹಂತದಲ್ಲಿ ಅದು ಕೂಡ ಕಾಟಾಚಾರಕ್ಕೆಂಬಂತೆ ಆಡಳಿತಾಧಿಕಾರಿಯವರ ಅನುಪಸ್ಥಿತಿಯಲ್ಲಿ ಆಯ-ವ್ಯಯ ತಯಾರಿ ಪೂರ್ವ ಸಿದ್ಧತಾಸಭೆ ನಡೆಸುವುದು ಸರಿಯಾದ ಕ್ರಮವಲ್ಲ ಎಂದು ಹರಿಪ್ರಸಾದ್ ಭಂಡಾರಿಬೆಟ್ಟು ಅಸಮಾಧಾನ ವ್ಯಕ್ತಪಡಿಸಿದರು.

ಅಕೌಂಟೆಂಟ್ ಸಿಬ್ಬಂದಿ ಇಲ್ಲದ ಕಾರಣದಿಂದ ಈಗ ಓರ್ವರನ್ನು ಕರೆಸಿ ಅವರಿಗೆ ತರಬೇತಿ ನೀಡಿ ಆಯವ್ಯಯ ತಯಾರಿಸುವ ಸಿದ್ಧತೆ ನಡೆಸಲಾಗುತ್ತಿದೆ ಆದರಿಂದಾಗಿ ಕೊಂಚ ತಡವಾಗಿದೆ ಎಂದು ಮುಖ್ಯಾಧಿಕಾರಿ ತೀರ್ಥಪ್ರಸಾದ್ ಅವರು ಸಮಜಾಯಿಷಿ ನೀಡಿದರು.

ಮುಂದಿನ ಆಯ-ವ್ಯಯದಲ್ಲಿ ಆಸ್ತಿ ತೆರಿಗೆ, ಉದ್ದಿಮೆ ಪರವಾನಿಗೆ, ನವೀಕರಣ, ಖಾತೆ ಸಹಿತ ವಿವಿಧ ಮೂಲಗಳಿಂದ 4 ಕೋ.ರೂ. ವಿನ ಆದಾಯದ ಗುರಿಯನ್ನು ನಿರೀಕ್ಷಿಸಲಾಗಿದೆ. ಈ ಗುರಿ ತಲುಪಿದಾಗ ಅಭಿವೃದ್ಧಿ ಕೆಲಸಗಳನ್ನು ಮಾಡಲು ಸಾಧ್ಯವಾಗಲಿದೆ. ಈ ದೆಸೆಯಲ್ಲಿ ಸಾರ್ವಜನಿಕರು, ಉದ್ದಿಮೆದಾರರು, ಸಂಘಸಂಸ್ಥೆಗಳ ಸಹಕಾರದ ಅಗತ್ಯವಿದೆ. ಅದೇರೀತಿ ಎರಡನೇ ಹಂತದ ಕುಡಿಯುವ ನೀರಿನ ಯೋಜನೆಯನ್ನು ಶೀಘ್ರವೇ ಕೆಯುಡಬ್ಲ್ಯುಎಸ್‌ಗೆ ಹಸ್ತಾಂತರಿಸಿ, ಯೋಜನೆಯ ಪೂರ್ತಿ ನಿರ್ವಹಣೆಯನ್ನು ಕೂಡ ಅವರಿಗೆ ವಹಿಸಲಾಗುವುದು ಎಂದು ಮುಖ್ಯಾಧಿಕಾರಿ ತೀರ್ಥಪ್ರಸಾದ್ ಸಭೆಗೆ ಮಾಹಿತಿ ನೀಡಿದರು. ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮುದಾಯಕ್ಕು ಸರ್ಕಾರದ ಸವಲತ್ತು ಸಿಗುವ ನಿಟ್ಟಿನಲ್ಲಿ ಕ್ರಮಕೈಗೊಳ್ಳುವಂತೆ ಸಮುದಾಯದ ಮುಖಂಡರುಮನವಿ ಮಾಡಿದರು.

ಬೆಳೆಯುತ್ತಿರುವ ಮೆಲ್ಕಾರ್‌ನಲ್ಲಿ ಸಾರ್ವಜನಿಕ ಶಾಚಾಲಯ, ಬಸ್‌ತಂಗುದಾಣ ನಿರ್ಮಿಸುವಂತೆ ಸಾಮಾಜಿಕ ಕಾರ್ಯಕರ್ತೆ ವಸಂತಿ ಸಭೆಯ ಗಮನಸೆಳೆದರು. ಹಲವುಬಾರಿ ಬಜೆಟ್ ಪೂರ್ವ ಸಿದ್ದತಾಸಭೆಯಲ್ಲಿಈಬಗ್ಗೆಗಮನಸೆಳೆಯಲಾಗಿದ್ದರೂ ಸ್ಪಂದನೆ ಸಿಕ್ಕಿಲ್ಲ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಬಂಟ್ವಾಳ ಪೇಟೆಯಲ್ಲಿ ಪಾದಚಾರಿಗಳು ನಡೆದಾಡಲು ಫುಟ್ ಪಾತ್ ವ್ಯವಸ್ಥೆ ಎಂಬುದೇ ಇಲ್ಲ, ಅಂಗಡಿ ಜಗಲಿ ಮೇಲಿಂದಲೇ ಪಾದಚಾರಿಗಳು ನಡೆದಾಡಬೇಕಾಗಿದೆ. ಈ ನಿಟ್ಟಿನಲ್ಲಿ ಬಂಟ್ವಾಳ ನಗರವನ್ನು ಅಗಲೀಕರಣಗೊಳಿಸಲು ದಿಟ್ಟ ಕ್ರಮಕೈಗೊಳ್ಳಬೇಕು, ಆಮೂಲಕ ಸುಂದರ ಬಂಟ್ವಾಳಕ್ಕೆ ಮುಂದಾಗಬೇಕು. ಈ ಬಗ್ಗೆ ಸಾಕಷ್ಟು ಚರ್ಚೆ, ಈ ಹಿಂದಿನ ಜಿಲ್ಲಾಧಿಕಾರಿಗಳಿಂದ ಸಭೆ, ಸರ್ವೇಗಳು ನಡೆದರೂ ಅನುಷ್ಠಾನಕ್ಕೆ ಬಾರದಿರುವ ಬಗ್ಗೆಯು ಸಾಮಾಜಿಕ ಕಾರ್ಯಕರ್ತರೋರ್ವರು ಲಿಖಿತ ಮನವಿ ಸಲ್ಲಿಸಿ ಒತ್ತಾಯಿಸಿದ್ದಾರೆ. ವರ್ತಕರ ಸಂಘದ ಅಧ್ಯಕ್ಷ ಲಕ್ಷ್ಮಣ್ ಬಾಳಿಗಾ, ಪ್ರಮುಖರಾದ ದಾಮೋದರ ಸಂಚಯಗಿರಿ, ಸುರೇಶ್ ಬಂಗೇರ, ಲಕ್ಷ್ಮಣ್ ಪಾಣೆಮಂಗಳೂರು, ಸತೀಶ್ ಕುಮಾರ್ ಬಿ.ಸಿ.ರೋಡು, ಪ್ರೇಮನಾಥ್ ಬಂಟ್ವಾಳ, ರಾಜೇಶ್ ಭಂಡಾರಿ ಬಂಟ್ವಾಳ ಮೊದಲಾದವರಿದ್ದರು. ಪುರಸಭೆಯ ಸಮುದಾಯ ಅಧಿಕಾರಿ ಉಮಾವತಿ, ಇಂಜಿನಿಯರ್ ಡೊನೆಟಿಕ್ ಡಿಮೆಲ್ಲೋ, ಮೆನೇಜರ್ ರಜಾಕ್ ಉಪಸ್ಥಿತರಿದ್ದರು.

ಜ್ಞಾನವಿಕಾಸ 'ವಾತ್ಸಲ್ಯ' ಕಾರ್ಯಕ್ರಮದಡಿ ಮನೆ ಹಸ್ತಾಂತರ

ಪುತ್ತೂರು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಪುತ್ತೂರು ತಾಲೂಕಿನ ವತಿಯಿಂದ ಜ್ಞಾನ ವಿಕಾಸದ ವಾತ್ಸಲ್ಯ ಕಾರ್ಯಕ್ರಮದಡಿ ಡಾ.ಡಿ. ವೀರೇಂದ್ರ ಹೆಗ್ಗಡೆಯವರ ಹಾಗೂ ಡಾ. ಹೇಮಾವತಿ. ವಿ. ಹೆಗ್ಗಡೆಯವರ ಮಾರ್ಗದರ್ಶನದಂತೆ ಪುತ್ತೂರು ತಾಲೂಕಿನ ಅರಿಯಡ್ಕ ವಲಯದ ಮೇನಲ ಕಾರ್ಯಕ್ಷೇತ್ರದ ನೀರಳಿಕೆಯಲ್ಲಿ ಚಂದ್ರಾವತಿ ಅವರಿಗೆ ಹೊಸ 'ವಾತ್ಸಲ್ಯ ಮನೆ'ಯನ್ನು ಬುಧವಾರ ಹಸ್ತಾಂತರಿಸಲಾಯಿತು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ದಕ್ಷಿಣ ಕನ್ನಡ 2 ಜಿಲ್ಲೆಯ ಜಿಲ್ಲಾ ನಿರ್ದೇಶಕ ಬಾಬು ನಾಯ್ಕ ಅವರು ಮನೆ ಹಸ್ತಾಂತರಿಸಿ, ಮಾತೃಶ್ರೀ ಅಮ್ಮನವರು ಜ್ಞಾನ ವಿಕಾಸ ಕಾರ್ಯಕ್ರಮಗಳ ಮೂಲಕ ಮಹಿಳೆಯರನ್ನು ಹೇಗೆ ಸಮಾಜದಲ್ಲಿ ಸಬಲರನ್ನಾಗಿ ಮಾಡಿದ್ದಾರೋ ಹಾಗೆಯೇ ಸಮಾಜದಲ್ಲಿರುವ ನಿರ್ಗತಿಕರನ್ನು ಗುರುತಿಸಿ ಅವರ ಜೀವನ ಶೈಲಿಯೂ ಉತ್ತಮವಾಗಿರಬೇಕು. ಇತರರಂತೆಯೇ ಅವರು ಕೂಡ ಸಮಾಜದಲ್ಲಿ ಖುಷಿಯಿಂದ ಜೀವಿಸಬೇಕು. ಅವರ ಜೀವನಮಟ್ಟ ಉತ್ತಮವಾಗಿರಬೇಕೆಂದು ವಾತ್ಸಲ್ಯ ಕಾರ್ಯಕ್ರಮದ ಮೂಲಕ ಅವರ ಬದುಕಿಗೆ ಬೆಳಕನ್ನು ನೀಡುವ ಕೆಲಸವನ್ನು ಮಾಡಿರುತ್ತಾರೆ. ಈ ಮನೆಯ ಫಲಾನುಭವಿಗಳು ಬಹಳ ಸಂತೋಷದಿಂದ ನೆಮ್ಮದಿಯಿಂದ ಈ ಮನೆಯಲ್ಲಿ ಬಾಳಿ ಬದುಕಲಿ ಎಂದು ಶುಭ ಹಾರೈಸಿದರು.

ಮುಖ್ಯ ಅತಿಥಿಯಾಗಿದ್ದ ಕೃಷ್ಣಪ್ರಸಾದ್ ಭಟ್ ಮಾತನಾಡಿ, 'ವಾತ್ಸಲ್ಯ' ಹೆಸರು ಹೇಳುತ್ತದೆ. ಅದರ ಮೌಲ್ಯ, ಪ್ರೀತಿ, ಮಮತೆ ಎಷ್ಟು ಇದೆ ಎಂದು. ಬಡವರ ಕಣ್ಣೀರು ವರೆಸುವ ಕಾರ್ಯಕ್ರಮ ಪೂಜ್ಯರು ಹಾಗೂ ಅಮ್ಮನವರು



ಮಾಡುತ್ತಿದ್ದಾರೆ. ಮನೆಯಲ್ಲಿ ನೆಮ್ಮದಿ ಇದ್ದರೆ ಮಾತ್ರ ಜೀವನ ನಡೆಸಲು ಸಾಧ್ಯ. ಈ ವಾತ್ಸಲ್ಯ ಮನೆಯ ರಚನೆಯು ಸರಿಯಾದ ಫಲಾನುಭವಿಗೆ ಸಿಕ್ಕಿದೆ. ಹಿಂದೆ ಇದ್ದ ಮನೆಯಲ್ಲಿ ಸಮಸ್ಯೆಗಳೇ ಹೆಚ್ಚಿದ್ದು, ಯಾವುದೇ ರೀತಿಯ ನೆಮ್ಮದಿಯನ್ನು ಇಲ್ಲಿಯವರೆಗೆ ಈ ಕುಟುಂಬ ಕಂಡಿಲ್ಲ, ಆದರೆ, ಗ್ರಾಮಾಭಿವೃದ್ಧಿ ಯೋಜನೆ ಮೂಲಕ ಬಂದ ಈ ವಾತ್ಸಲ್ಯ ಮನೆಯಿಂದ ಕುಟುಂಬದ ಸದಸ್ಯರಲ್ಲಿ ಆರೋಗ್ಯ ವೃದ್ಧಿಯಾಗಿದೆ. ನೆಮ್ಮದಿ ಇದೆ. ಸಂತೋಷ ಇದೆ ಜೀವನದ ಅಭಿವೃದ್ಧಿಯ ಬೆಳಕು ಕಾಣುತ್ತಿದೆ ಎಂದರು.

ಶ್ರೀ ಪಂಚಲಿಂಗೇಶ್ವರ ದೇವಸ್ಥಾನ ಈಶ್ವರಮಂಗಲದ ವ್ಯವಸ್ಥಾಪನ ಸಮಿತಿ ಮಾಜಿ ಅಧ್ಯಕ್ಷ ಶ್ರೀ ಕೃಷ್ಣ ಭಟ್ ಮುಂಡ್ಯ ಶುಭಾಶಂಸನೆಗೈದರು. ವಾತ್ಸಲ್ಯ ಮನೆಯ ಬೇಡಿಕೆಯನ್ನು ಪರಿಶೀಲಿಸಿ ಮನೆಯ ಕಾಮಗಾರಿಯ ಬಗ್ಗೆ ಮಾಹಿತಿ ಮಾರ್ಗದರ್ಶನ ನೀಡಿದ ಕೇಂದ್ರ ಕಚೇರಿಯ ಜ್ಞಾನ ವಿಕಾಸ ವಿಭಾಗದ ನಿರ್ದೇಶಕ ವಿಠಲ್ ಪೂಜಾರಿ, ಕೇಂದ್ರ ಕಚೇರಿಯ ಜ್ಞಾನ ವಿಕಾಸ ವಿಭಾಗದ ಯೋಜನಾಧಿಕಾರಿ ಮಲ್ಲಿಕಾ, ಉಡುಪಿ ಪ್ರಾದೇಶಿಕ ವಿಭಾಗದ ಜ್ಞಾನ ವಿಕಾಸ ಯೋಜನಾಧಿಕಾರಿ ಅಮೃತ ಅವರಿಗೆ ಫಲಾನುಭವಿಯ ಕುಟುಂಬದ ಸದಸ್ಯರು ಕೃತಜ್ಞತೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಪುತ್ತೂರು ತಾಲೂಕಿನ ಯೋಜನಾಧಿಕಾರಿ ಶಶಿಧರ್ ಎಂ., ಅರಿಯಡ್ಕ ವಲಯದ ಜನಜಾಗೃತಿಯ ಮಾಜಿ ವಲಯ ಅಧ್ಯಕ್ಷ ನಾರಾಯಣ ರೈ ಕುತ್ಯಾಡಿ, ನೆಟ್ಟಣಿಗೆ ಮೂಡ್ನೂರು ಗ್ರಾ.ಪಂ.ನ ಮಾಜಿ ಉಪಾಧ್ಯಕ್ಷ ರಾಮ ಮೇನಲ, ಅರಿಯಡ್ಕ ವಲಯದ ಜನಜಾಗೃತಿ ವಲಯಾಧ್ಯಕ್ಷ ವಿಕ್ರಮ್ ರೈ ಸಾಂತ್ಯ, ಅರಿಯಡ್ಕ ವಲಯದ ವಲಯಾಧ್ಯಕ್ಷ ದಿನೇಶ್ ರೈ ಕುತ್ಯಳ, ಹಿರಿಯರು ಪ್ರಗತಿಪರ ಕೃಷಿಕರಾಗಿರುವ ಲಕ್ಷ್ಮೀನಾರಾಯಣ ಭಟ್ ಕುಂಜತ್ತಾಯ, ಅರಿಯಡ್ಕ ವಲಯದ ಮೇಲ್ವಿಚಾರಕ ಹರೀಶ್ ಕೆ., ಜ್ಞಾನವಿಕಾಸ ಸಮನ್ವಯಾಧಿಕಾರಿ ಕಾವ್ಯಶ್ರೀ, ಒಕ್ಕೂಟದ ಮಾಜಿ ಅಧ್ಯಕ್ಷ ಬಾಲಕೃಷ್ಣ ಮೇನಾಲ ಒಕ್ಕೂಟದ ಅಧ್ಯಕ್ಷೆ ಗೀತಾ, ಸೇವಾ ಪ್ರತಿನಿಧಿಗಳಾದ ಸುಂದರ್ ಜಿ. ಹಾಗೂ ಕುಸುಮಾ, ಮೇಸ್ತ್ರಿ ಶ್ರೀಧರ್ ಮತ್ತಿತರರು ಉಪಸ್ಥಿತರಿದ್ದರು.

ಜ್ಞಾನವಿಕಾಸ ಸಮನ್ವಯಾಧಿಕಾರಿ ಕಾವ್ಯಶ್ರೀ ಕಾರ್ಯಕ್ರಮ ನಿರ್ವಹಿಸಿದರು.

ಶಿವಾಜಿ ಆಟೋ ಪಾರ್ಕ್‌ಗೆ ಮೇಲ್ಛಾವಣಿಯ ಅಳವಡಿಕೆ




ಮಂಗಳೂರು: ಮಹಾನಗರ ಪಾಲಿಕೆ ವ್ಯಾಪ್ತಿಯ 60ನೇ ಬೆಂಗ್ರೆ ವಾರ್ಡ್‌ನ ಬೆಂಗ್ರೆ ಶಿವಾಜಿ ಆಟೋ ಪಾರ್ಕ್‌ಗೆ ವಿಶೇಷ ಅನುದಾನದಲ್ಲಿ ಮೇಲ್ಛಾವಣಿ ಅಳವಡಿಸಲಾಗುತ್ತಿದ್ದು ಶಾಸಕ ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ಶಿಲಾನ್ಯಾಸ ನಡೆಯಿತು.

ಈ ಸಂದರ್ಭದಲ್ಲಿ ಲೋಕೇಶ್ ಬೆಂಗ್ರೆ, ಮೀರಾ ಕರ್ಕೇರ, ನಿತಿನ್ ಕುಮಾರ್, ವಿನೋದ್ ಮೆಂಡನ್, ಅನಿಲ್, ಕಿಶೋರ್ ಕೊಟ್ಯಾರಿ, ಸುರೇಂದ್ರ ಪಾಂಗಳ್, ಗಂಗಾಧರ, ಸಂಜಯ್ ಸುವರ್ಣ, ಧನಂಜಯ ಪುತ್ರನ್, ಚೇತನ್ ಬೆಂಗ್ರೆ, ವಿಥುನ್, ವಾಸು ಸುವರ್ಣ, ಸುಂದರ ಸಾಲ್ಯಾನ್, ಸುಕುಮಾರ, ಜೀವನ್ ಖಾರ್ವಿ, ಸ್ಥಳೀಯ ಆಟೋ ರಿಕ್ಷಾ ಚಾಲಕರು ಹಾಗೂ ಮಾಲಕರು ಇದ್ದರು.

ರೊವಿನಾ ಶ್ಯಾರನ್‌ಗೆ ಮಂಗಳೂರು ವಿವಿ ಪಿಎಚ್‌ಡಿ

ಮಂಗಳೂರು: 'ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿನ ಆಯ್ದ (ಮಾಹಿತಿ ತಂತ್ರಜ್ಞಾನ ಆಧಾರಿತ ಸೇವೆಗಳು) ಐಟಿಇಎಸ್ ಕಂಪೆನಿಗಳಲ್ಲಿ ಆರೋಗ್ಯ ಮತ್ತು ಕ್ಷೇಮ ಕಾರ್ಯಕ್ರಮಗಳ ಉದ್ಯೋಗಿಗಳ ಉತ್ಪಾದಕತೆಯ ಮೇಲೆ ಇರುವ ಪರಿಣಾಮ: ಒಂದು ಅಧ್ಯಯನ' ವಿಷಯದ ಕುರಿತಾಗಿ ರೊವಿನಾ ಶ್ಯಾರನ್ ಸೋನ್ಸ್ ಅವರು ಸಲ್ಲಿಸಿದ ಮಹಾ ಪ್ರಬಂಧಕ್ಕೆ ಮಂಗಳೂರು ವಿಶ್ವವಿದ್ಯಾನಿಲಯ ಪಿಎಚ್ ಡಿ ನೀಡಿದೆ.

ಈ ಸಂಶೋಧನಾ ಪ್ರಬಂಧವನ್ನು ಅವರು ವ್ಯವಹಾರ ಆಡಳಿತ ವಿಭಾಗದ ಡಾ. ಶೇಖರ್ ನಾಯ್ಕ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದರು. ರೋವಿನಾ ಸೋನ್ಸ್ ಅವರು ಪ್ರಸ್ತುತ



ಯೆನೆಪೋಯಾ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್ಸ್, ಸಯನ್ಸ್, ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಸಂಸ್ಥೆಯಲ್ಲಿ ಸಹಾಯಕ ಪ್ರಾಧ್ಯಾಪಕಿ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

ರೋನಿ ಸೋನ್ಸ್ ಮತ್ತು ರೋಝಿನಾ ಸೋನ್ಸ್ ಅವರ ಪುತ್ರಿಯಾಗಿರುವ ರೊವಿನಾ ಸೋನ್ಸ್ ಸಂತೋಷ್ ಬಂಗೇರ ಅವರ ಪತ್ನಿ.

ಮಾ.20: ಮೆಸ್ಕಾಂ ಸಭೆ

ಉಡುಪಿ: ತಲ್ಲೂರು ಮೆಸ್ಕಾಂ ತಲ್ಲೂರು ಉಪವಿಭಾಗ ಕಚೇರಿಯಲ್ಲಿ ಮಾ. 20ರಂದು ಸಮಯ ಬೆಳಗ್ಗೆ 10.30ರಿಂದ 12 ಗಂಟೆಯವರೆಗೆ ಜನ ಸಂಪರ್ಕ ಸಭೆ ನಡೆಯಲಿದ್ದು ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲಿದ್ದಾರೆ, ಈ ಸಭೆಯಲ್ಲಿ ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲುಗಳನ್ನು ಸ್ವೀಕರಿಸುವುದರಿಂದ, ಈ ಅವಕಾಶವನ್ನು ಗ್ರಾಹಕರು ಸದುಪಯೋಗಿಸಿಕೊಳ್ಳಲು ಕೋರಲಾಗಿದೆ. ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ:- 08254-238182.

ಮಾ.24: ಕಣ್ಣಿನ ತಪಾಸಣೆ

ಮಡಿಕೇರಿ: ಹಿರಿಯ ನಾಗರಿಕರ ವೇದಿಕೆ ಮತ್ತು ಲಯನ್ಸ್ ಕ್ಲಬ್ ಸಂಯುಕ್ತಾಶ್ರಯದಲ್ಲಿ ಮಾ. 24 ರಂದು ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 1.30 ಗಂಟೆವರೆಗೆ ಮಡಿಕೇರಿಯ ಲಯನ್ಸ್ ಕ್ಲಬ್ ಸಭಾಂಗಣದಲ್ಲಿ ಉಚಿತವಾಗಿ ಕಣ್ಣಿನ ತಪಾಸಣಾ ಶಿಬಿರ ನಡೆಯಲಿದೆ. ಖ್ಯಾತ ನೇತ್ರ ತಜ್ಞ ಡಾ. ಪ್ರಶಾಂತ್ ಅವರು ಕಣ್ಣಿನ ತಪಾಸಣೆ ನಡೆಸಲಿದೆ ಎಂದು ವೇದಿಕೆ ಅಧ್ಯಕ್ಷ ಕೆ.ಎ.ತಿಮ್ಮಯ್ಯ ಅವರ ಪ್ರಕಟಣೆ ತಿಳಿಸಿದೆ.

ಸುತ್ತಮುತ್ತ

ಕೊಡಗು ಮಹಿಳಾ ಕಾಂಗ್ರೆಸ್ ನೂತನ ಬ್ಲಾಕ್ ಅಧ್ಯಕ್ಷರುಗಳ ನೇಮಕ



ಮಡಿಕೇರಿ: ಕೊಡಗು ಜಿಲ್ಲಾ ಮಹಿಳಾ ಕಾಂಗ್ರೆಸ್ ಸಮಿತಿಯ ಆರು ಬ್ಲಾಕ್ ಗಳ ನೂತನ ಅಧ್ಯಕ್ಷರುಗಳನ್ನು ನೇಮಕ ಮಾಡಲಾಗಿದೆ. ವಿರಾಜಪೇಟೆ ಬ್ಲಾಕ್ ಅಧ್ಯಕ್ಷರಾಗಿ ಕೆ.ಜಿ.ನೈನಾ, ಪೊನ್ನಂಪೇಟೆ ಬ್ಲಾಕ್ ಅಧ್ಯಕ್ಷರಾಗಿ ಆಶಾ ಪೂಣಚ್ಚ ಮೂಕಳೇರ, ನಾಪೋಕ್ಲು ಬ್ಲಾಕ್ ಅಧ್ಯಕ್ಷರಾಗಿ ಇಂದುಮತಿ ಕೆ.ಎಸ್ ಸೋಮವಾರಪೇಟೆ ಬ್ಲಾಕ್ ಅಧ್ಯಕ್ಷರಾಗಿ ಜಾನಕಿ ವೆಂಕಟೇಶ್, ಕುಶಾಲನಗರ ಬ್ಲಾಕ್ ಅಧ್ಯಕ್ಷರಾಗಿ ಸವಿತ ಕೆ.ಆರ್, ಹಾಗೂ ಮಡಿಕೇರಿ ಬ್ಲಾಕ್ ಅಧ್ಯಕ್ಷರಾಗಿ ಕೊಂಪುಳೀರ ಇಂದಿರಾ ರಾಮಚಂದ್ರ ನೇಮಕಗೊಂಡಿದ್ದಾರೆ ಎಂದು ಮಹಿಳಾ ಕಾಂಗ್ರೆಸ್ ಸಮಿತಿಯ ಜಿಲ್ಲಾಧ್ಯಕ್ಷರಾದ ಪುಷ್ಪಲತಾ ಜಿ.ಆರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾ. 21ರಂದು ಸೂರ್ಯ- ಚಂದ್ರ ಜೋಡುಕರೆ ಕಂಬಳ

ಬೆಳ್ತಂಗಡಿ: ವೇಣೂರು ಸನಿಹದ ಪೆರ್ಮುಡ ಎಂಬಲ್ಲಿ 33ನೇ ವರ್ಷದ ಸೂರ್ಯ- ಚಂದ್ರ ಜೋಡುಕರೆ ಬಯಲು ಕಂಬಳ ಮಾ. 21 ನಡೆಯಲಿದೆ ಎಂದು ಕಂಬಳ ಸಮಿತಿ ಗೌರವಾಧ್ಯಕ್ಷ ರಕ್ಷಿತ್ ಶಿವರಾಂ ಹೇಳಿದರು. ಬೆಳ್ತಂಗಡಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಆರು ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿದ್ದು ಉದ್ಘಾಟನೆಯನ್ನು ಬೆಳಿಗ್ಗೆ 8:30 ಕ್ಕೆ ಅಳದಂಗಡಿ ಅರಮನೆಯ ತಿಮ್ಮಣ್ಣರಸ ಡಾ. ಪದ್ಮಪ್ರಸಾದ್ ಅಜಿಲ ನೆರವೇರಿಸುವರು. ಕಂಬಳ ಸಮಿತಿ ಅಧ್ಯಕ್ಷ ನಿತೀಶ್ ಎಚ್. ಕೋಟ್ಯಾನ್ ಅಧ್ಯಕ್ಷತೆ ವಹಿಸಲಿದ್ದು ಅನೇಕ ಗಣ್ಯರು ಭಾಗವಹಿಸಲಿದ್ದಾರೆ ಎಂದರು. ಸಂಜೆ 6.30ಕ್ಕೆ ನಡೆಯುವ ಸಭಾ ಕಾರ್ಯಕ್ರಮದ ಉದ್ಘಾಟನೆಯನ್ನು ಪತ್ರಕರ್ತೆ ರಾಧಾ ಹಿರೇಗೌಡರ್ ನೆರವೇರಿಸುವರು. ಕಂಬಳ ಸಮಿತಿ ಗೌರವಾಧ್ಯಕ್ಷ ರಕ್ಷಿತ್ ಶಿವರಾಂ ಅಧ್ಯಕ್ಷತೆಯಲ್ಲಿ ಜರಗುವ ಈ ಕಾರ್ಯಕ್ರಮದಲ್ಲಿ ಸ್ಪೀಕರ್ ಯು.ಟಿ. ಖಾದರ್, ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್, ಸಂಸದ ಕ್ಯಾ. ಬ್ರಿಜೇಶ್ ಚೌಟ,ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷ ಸಹಕಾರ ರತ್ನ ಡಾ. ಎಂ.ಎನ್. ರಾಜೇಂದ್ರ ಕುಮಾರ್, ಶಾಸಕ ಹರೀಶ್ ಪೂಂಜ, ಅಶೋಕ್ ಕುಮಾರ್ ರೈ, ಉಮಾನಾಥ ಕೋಟ್ಯಾನ್, ಮೆಸ್ಕಾಂ ಅಧ್ಯಕ್ಷ ಹರೀಶ್ ಕುಮಾರ್, ಮಾಜಿ ಸಚಿವರಾದ ರಮಾನಾಥ ರೈ, ಅಭಯ ಚಂದ್ರ ಜೈನ್, ವಿನಯಕುಮಾರ್ ಸೊರಕೆ, ಗಂಗಾಧರ ಗೌಡ ಎಂಎಲ್‌ಸಿಗಳಾದ ಐವನ್ ಡಿಸೋಜಾ ಡಾ. ಮಂಜುನಾಥ ಭಂಡಾರಿ, ಪ್ರತಾಪ ಸಿಂಹ ನಾಯಕ್, ಕಿಶೋರ್ ಕುಮಾರ್ ಬೊಟ್ಯಾಡಿ ಸಹಿತ ಅನೇಕರು ಭಾಗವಹಿಸಲಿದ್ದಾರೆ. 30ಕ್ಕಿಂತ ಅಧಿಕ ವರ್ಷಗಳಲ್ಲಿ ಮಾಜಿ ಶಾಸಕ ಕೆ.ವಸಂತ ಬಂಗೇರ ಅವರ ಗೌರವಾಧ್ಯಕ್ಷತೆಯಲ್ಲಿ ಜರಗುತ್ತಿದ್ದ ಈ ಕಂಬಳ ವಿಶಿಷ್ಟವಾದ ಇತಿಹಾಸ ಹೊಂದಿದೆ. ಕಂಬಳ ನಡೆಯುವ ಪರಿಸರದಲ್ಲಿ ಬೋಟಿಂಗ್, ಹಾಯ್ ಕಿಂಗ್,ಗ್ಲೈಡಿಂಗ್ ಪ್ರದರ್ಶನ, ಆಹಾರಮೇಳ,ಹಳೆ ಕಾಲದ ವಸ್ತುಗಳ ವಿಶೇಷ ವಸ್ತು ಪ್ರದರ್ಶನ ಇತ್ಯಾದಿ ಇರಲಿದೆ. ಈಗಾಗಲೇ ಕಂಬಳಕ್ಕೆ 130 ಜೋಡಿ ಕೋಣಗಳ ನೋಂದಣಿ ಈಗಾಗಲೇ ನಡೆದಿದೆ ಎಂದರು. ಕಂಬಳ ಸಮಿತಿ ಅಧ್ಯಕ್ಷ ನಿತೀಶ್ ಎಚ್. ಕೋಟ್ಯಾನ್ ಸ್ವಾಗತಿಸಿದರು. ಕಾರ್ಯಾಧ್ಯಕ್ಷ ಶೇಖರ್ ಕುಕ್ಕೇಡಿ, ಸಂಚಾಲಕ ಪ್ರವೀಣ್ ಫೆರ್ನಾಂಡಿಸ್ ಹಳ್ಳಿ ಮನೆ, ಉಪಾಧ್ಯಕ್ಷ ಗೋಪಾಲ್ ಪೂಜಾರಿ, ಕೋಶಾಧ್ಯಕ್ಷ ಅಶೋಕ್ ಪಾಣೂರು ಇದ್ದರು.

ಕಡಬ ತಾ.ಪಂ. ವ್ಯವಸ್ಥಾಪಕ ಭುವನೇಂದ್ರ ಕುಮಾರ್‌ಗೆ ಬೀಳ್ಕೊಡುಗೆ

ಕಡಬ: ನಾವು ಮಾಡುವ ಕೆಲಸದಲ್ಲಿ ಪ್ರಾಮಾಣಿಕತೆ, ಶ್ರದ್ಧೆ ಹಾಗೂ ತಾಳ್ಮೆ ಇದ್ದಾಗ ಯಶಸ್ಸನ್ನು ಸಾಧಿಸಲು ಸಾಧ್ಯ. ಭುವನೇಂದ್ರ ಕುಮಾರ್ ಅವರು ಈ ಎಲ್ಲಾ ಗುಣಗಳಿಂದಾಗಿ ಸರಕಾರಿ ಉದ್ಯೋಗದಿಂದ ನಿವೃತ್ತರಾಗುವ ವೇಳೆಗೆ ಎಲ್ಲರ ಗೌರವದೊಂದಿಗೆ ನಿರ್ಗಮಿಸುತ್ತಿದ್ದಾರೆ ಎಂದು ದ.ಕ. ಜಿ.ಪಂ. ಉಪ ಕಾರ್ಯದರ್ಶಿ ಜಯಲಕ್ಷ್ಮೀ ರಾಯಕೋಡ ಹೇಳಿದರು. ಅವರು ಕಡಬ ತಾ.ಪಂ. ಸಭಾಂಗಣದಲ್ಲಿ ಕಡಬ ತಾ.ಪಂ.ನ ವ್ಯವಸ್ಥಾಪಕ ಭುವನೇಂದ್ರ ಕುಮಾರ್ ಅವರ ಸೇವಾ ನಿವೃತ್ತಿಯ ಬೀಳ್ಕೊಡುಗೆ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು. ಕಡಬ ತಾ.ಪಂ. ಆಡಳಿತಾಧಿಕಾರಿ ಹೊನ್ನಪ್ಪ ಜಿ. ಗೌಡ ಅಧ್ಯಕ್ಷತೆ ವಹಿಸಿದ್ದರು. ದ.ಕ. ಜಿ.ಪಂ.ನ ಯೋಜನಾ ನಿರ್ದೇಶಕ ಜಯರಾಮ್ ಕೆ.ಇ., ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಕಡಬ ತಾಲೂಕು ಅಧ್ಯಕ್ಷ ಸುಧೀರ್ ಕುಮಾರ್ ಶೆಟ್ಟಿ ಪುತ್ತೂರು ತಾಲೂಕು ಅಧ್ಯಕ್ಷ ಉಮಾನಾಥ ಶೆಟ್ಟಿ ಪುತ್ತೂರು ವಿಭಾಗದ ಉಪ ಪೊಲೀಸ್ ಅಧೀಕ್ಷಕ ಪ್ರಮೋದ್ ಕುಮಾರ್, ಜಿ.ಪಂ. ಮಾಜಿ ಸದಸ್ಯ ಪಿ.ಪಿ. ವರ್ಗೀಸ್, ಕಡಬ ತಾಲೂಕು ತಹಶೀಲ್ದಾರ್ ಪ್ರಭಾಕರ ಖಜೂರೆ, ಬೆಳ್ತಂಗಡಿ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಭವಾನಿ ಶಂಕರ್ ಶುಭ ಹಾರೈಸಿದರು. ಭುವನೇಂದ್ರ ಕುಮಾರ್ ಮತ್ತು ನಿರುಪಮಾ ದಂಪತಿಯನ್ನು ಸನ್ಮಾನಿಸಿ ಗೌರವಿಸಲಾಯಿತು. ತಾ.ಪಂ.ಇಒ ನವೀನ್ ಕುಮಾರ್ ಭಂಡಾರಿ ಪ್ರಸ್ತಾವಿಸಿದರು. ಸಹಾಯಕ ನಿರ್ದೇಶಕ ಸಂದೇಶ್ ಕೆ.ಎನ್. ಅಭಿನಂದನಾ ಪತ್ರ ವಾಚಿಸಿದರು. ತಾ.ಪಂ. ಸಹಾಯಕ ನಿರ್ದೇಶಕ ಯಶವಂತ್ ಬೆಳ್ಚಡ ಸ್ವಾಗತಿಸಿ, ನೂಜಿಬಾಳ್ತಿಲ ಪಿಡಿಒ ನಾರಾಯಣ ವಂದಿಸಿದರು. ನರೇಗಾ ತಾಲೂಕು ಐಇಸಿ ಸಂಯೋಜಕ ಭರತ್ ರಾಜ್ ಕಾರ್ಯಕ್ರಮ ನಿರ್ವಹಿಸಿದರು. ಸಹಾಯಕ ಲೆಕ್ಕಾಧಿಕಾರಿ ಭವ್ಯ ಸಹಕರಿಸಿದರು.

ವಸತಿ ಯೋಜನೆಯ ಫಲಾನುಭವಿಗಳಿಗೆ ಸಹಾಯಧನ ಹೆಚ್ಚಿಸಲು ಕಿಶೋರ್ ಕುಮಾರ್ ಪುತ್ತೂರು ಆಗ್ರಹ

ಭೂ ಪರಿವರ್ತನೆ, ವಿನ್ಯಾಸ ಅನುಮೋದನೆಗೆ ವಿನಾಯಿತಿ ನೀಡಿ

ಪುತ್ತೂರು: ರಾಜ್ಯ ಸರ್ಕಾರ ಮೀನುಗಾರಿಕೆ ವೃತ್ತಿ ನಡೆಸುವವರಿಗೆ ಮತ್ಸ್ಯಾಶ್ರಯ ಯೋಜನೆಯಡಿ ಮನೆ ಮಂಜೂರು ಮಾಡಲಾಗುತ್ತಿದೆ. ಆದರೆ, ಈ ಯೋಜನೆಯ ಫಲಾನುಭವಿಗಳು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದು ಸರಕಾರ ಈ ಕುರಿತು ಗಮನ ಹರಿಸಿ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳಬೇಕು ಎಂದು ಶಾಸಕ ಕಿಶೋರ್ ಕುಮಾರ್ ಪುತ್ತೂರು ಆಗ್ರಹಿಸಿದ್ದಾರೆ.

ಈ ಬಗ್ಗೆ ವಿಧಾನ ಪರಿಷತ್ತಿನ ಅಧಿವೇಶನದಲ್ಲಿ ಕಿಶೋರ್ ಕುಮಾರ್ ಅವರ ಚುಕ್ಕೆ ಗುರುತಿನ ಪ್ರಶ್ನೆಯಲ್ಲಿ ವಸತಿ ಯೋಜನೆಯ ಫಲಾನುಭವಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ತೆರೆದಿಟ್ಟರು. ರಾಜ್ಯ ಸರ್ಕಾರವು ಈ ಯೋಜನೆಯಡಿ ಗ್ರಾಮೀಣ ಭಾಗದ ಫಲಾನುಭವಿಗಳಿಗೆ ರೂ.1.20 ಲಕ್ಷ ಸಹಾಯಧನ ಮತ್ತು ಎಸ್‌ಸಿ/ಎಸ್‌ಟಿ ಪ್ರವರ್ಗದವರಿಗೆ ರೂ.1.75 ಲಕ್ಷ ಸಹಾಯಧನ ನೀಡುತ್ತಿದೆ

ನಗರ ಭಾಗದ ಫಲಾನುಭವಿಗಳಿಗೆ ರೂ.2 ಲಕ್ಷ ಸಹಾಯಧನ ನೀಡುತ್ತದೆ. ಈ ಸಹಾಯಧನವನ್ನು ಕನಿಷ್ಠ ರೂ.5 ಲಕ್ಷದವರೆಗೆ ಹೆಚ್ಚಿಸಬೇಕು ಎಂದು



ಅವರು ಒತ್ತಾಯಿಸಿದರು.

ಇತ್ತೀಚಿನ ಅಧಿವೇಶನದಲ್ಲಿ ಸರ್ಕಾರದ ವಸತಿ ಇಲಾಖೆಯು ನನ್ನ ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ನೀಡಿದ ಉತ್ತರದಲ್ಲಿ 700 ಚದರಡಿ ವಿಸ್ತೀರ್ಣದ ರೆಡ್ ಆಕ್ಸೈಡ್ ನೆಲದ ಹಂಚಿನ ಮನೆಯ ನಿರ್ಮಾಣಕ್ಕೆ ಲೋಕೋಪಯೋಗಿ ಇಲಾಖೆಯ 2024-25ನೇ ಸಾಲಿನ ದರಪಟ್ಟಿಯ ಪ್ರಕಾರ ಕನಿಷ್ಠ ರೂ.13.19 ಲಕ್ಷ ಅಂದಾಜು ವೆಚ್ಚ ತಗಲುತ್ತದೆ ಎಂದು ತಿಳಿಸಿದೆ ಮತ್ತು ಕಲ್ಲು ಮರಳು ಸಿಮೆಂಟ್ ದರಗಳು ವಿಪರೀತವಾಗಿ ಏರಿಕೆಯಾಗಿದ್ದು ಮನೆ ನಿರ್ಮಾಣ ವೆಚ್ಚವು ಅತ್ಯಧಿಕವಾಗಿದೆ. ಈಗಾಗಲೇ ಫಲಾನುಭವಿಗಳಿಗೆ ನೀಡಿರುವ ಮನೆಗಳ ಕಾಮಗಾರಿ ಪ್ರಾರಂಭವಾಗಿದ್ದು 2024-25ನೇ ಸಾಲಿನಲ್ಲಿ ವಿವಿಧ ಹಂತದಲ್ಲಿರುವ ತಳಪಾಯ ಹಂತದಲ್ಲಿ 587 ಗೋಡೆ ಹಂತದಲ್ಲಿ 86 ಮತ್ತು ಪೂರ್ಣಗೊಂಡ 2 ಮನೆಗಳಿಗೆ ಅನುದಾನ ಬಿಡುಗಡೆಗೊಳಿಸಲು ಬಾಕಿ ಇದ್ದು ಕೂಡಲೇ ಅನುದಾನವನ್ನು ಬಿಡುಗಡೆಗೊಳಿಸಿ ಮನೆ ಕಾಮಗಾರಿಯನ್ನು ಪೂರ್ಣಗೊಳಿಸಲು ಅವಕಾಶ ಕಲ್ಪಿಸಬೇಕು ಎಂದು ಅವರು ಆಗ್ರಹಿಸಿದರು.

> **25 ಮನೆಗಳನ್ನು ನೀಡಿ**
>
> ಪ್ರಸ್ತುತ ಸರ್ಕಾರದ ಆದೇಶದಂತೆ ನಾನು ನನ್ನ ಕ್ಷೇತ್ರ ವ್ಯಾಪ್ತಿಯ ಯಾವುದಾದರೂ ಒಂದು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಶಾಸಕರೊಂದಿಗೆ ಸಹ ಅಧ್ಯಕ್ಷನಾಗಿ ಇರಬೇಕಾಗಿದೆ. ಆದರೆ, ನಾನು ರಾಜ್ಯದ ಕರಾವಳಿ ಜಿಲ್ಲೆಗಳಾದ ದ.ಕ. ಮತ್ತು ಉಡುಪಿ ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಯಾಗಿ ವಿಧಾನ ಪರಿಷತ್ ಶಾಸಕನಾಗಿದ್ದು ನನ್ನ ವ್ಯಾಪ್ತಿಯಲ್ಲಿ 13 ವಿಧಾನಸಭಾ ಕ್ಷೇತ್ರಗಳು ಬರುತ್ತವೆ. ನನ್ನ ಕ್ಷೇತ್ರದಲ್ಲಿ ಮೀನುಗಾರಿಕಾ ವೃತ್ತಿಗಾರರು ಅತ್ಯಧಿಕ ಸಂಖ್ಯೆಯಲ್ಲಿರುವುದರಿಂದ ನನಗೂ ಸಹ ವಿವೇಚನಾ ಕೋಟದ ಅವಕಾಶ ನೀಡಿ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಫಲಾನುಭವಿಗಳಿಗೆ ಹಂಚಲು ಪ್ರತಿ ವರ್ಷ ಕನಿಷ್ಠ 25 ಮನೆಗಳನ್ನು ವಿತರಿಸಬೇಕು ಎಂದು ಕಿಶೋರ್ ಕುಮಾರ್ ಕೋರಿದರು.

ಈ ಹಿಂದೆ ಸರ್ಕಾರವು ಯಾವುದೇ ವಸತಿ ಯೋಜನೆಯಡಿ ಮನೆ ಮಂಜೂರು ಮಾಡಿದ ಫಲಾನುಭವಿಯು ತನ್ನ ಜಮೀನನ್ನು ಭೂ ಪರಿವರ್ತನೆಗೊಳಿಸದೆ ಕೃಷಿ ಜಮೀನಿನಲ್ಲಿ ಮನೆ ನಿರ್ಮಿಸಲು ಅವಕಾಶ ನೀಡಲಾಗಿತ್ತು. ಈ ಫಲಾನುಭವಿಗಳಿಗೆ ಗ್ರಾಮ ಪಂಚಾಯತ್‌ನಿಂದ ಕಟ್ಟಡ ಲೈಸೆನ್ಸ್ ನೀಡಲಾಗುತ್ತಿತ್ತು. ಮನೆ ಕಾಮಗಾರಿ ಪೂರ್ಣಗೊಂಡ ನಂತರ ಗ್ರಾಮ ಪಂಚಾಯತ್‌ನಿಂದ ಡೋರ್ ನಂಬ್ರ ಮತ್ತು ವಿದ್ಯುತ್ ಸಂಪರ್ಕ ಪಡೆಯಲು ನಿರಾಕ್ಷೇಪಣಾ ಪತ್ರವನ್ನು ನೀಡಲಾಗುತ್ತಿತ್ತು. ಆದರೆ, ಪ್ರಸ್ತುತ ಫಲಾನುಭವಿಯು ಕಟ್ಟಡ ಲೈಸೆನ್ಸ್ ಪಡೆಯಬೇಕಾದಲ್ಲಿ ಜಮೀನನ್ನು ವಾಸ್ತವ್ಯ ಉದ್ದೇಶಕ್ಕೆ ಭೂ ಪರಿವರ್ತನೆಗೊಳಿಸಿ ಸ್ಥಳೀಯ ನಗರ ಯೋಜನಾ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಪಡೆದು ಗ್ರಾಮ ಪಂಚಾಯತ್‌ನಿಂದ ನಮೂನೆ 11-ಂ ಪಡೆದು ನಂತರ ಸ್ಥಳೀಯ ನಗರ ಯೋಜನೆ ಪ್ರಾಧಿಕಾರದಿಂದ ಕಟ್ಟಡ ನಕ್ಷೆಗೆ ತಾಂತ್ರಿಕ ಅನುಮೋದನೆ ಪಡೆದು ಗ್ರಾಮ ಪಂಚಾಯತ್‌ನಿಂದ ಕಟ್ಟಡ ಲೈಸೆನ್ಸ್ ಪಡಯಬೇಕಾದ ಪರಿಸ್ಥಿತಿ ಇದೆ. ಕಟ್ಟಡ ಪೂರ್ಣಗೊಂಡ ನಂತರ ಸದರಿ ಸ್ಥಳೀಯ ನಗರ ಯೋಜನಾ ಪ್ರಾಧಿಕಾರದಿಂದ ದೃಢೀಕರಣ ಪಡೆದು ಸ್ವಾಧೀನ ಪ್ರಮಾಣ ಪತ್ರ ಮತ್ತು ಡೋರ್ ನಂಬ್ರವನ್ನು ಪಡೆಯಬೇಕಾಗಿದೆ. ಸ್ವಾಧೀನ ಪ್ರಮಾಣ ಪತ್ರವನ್ನು ಸಲ್ಲಿಸಿ ಮೆಸ್ಕಾಂನಿಂದ ವಿದ್ಯುತ್ ಸಂಪರ್ಕ ಪಡೆಯಬೇಕಾಗಿದೆ. ಕಳೆದ 3 ವರ್ಷಗಳಿಂದ ದ.ಕ. ಜಿಲ್ಲಾ ವ್ಯಾಪ್ತಿಯಲ್ಲಿ ಮಂಜೂರು ಮಾಡಲಾದ 61 ಮನೆಗಳಿಗೆ ಇನ್ನೂ ಕಟ್ಟಡ ಲೈಸೆನ್ಸ್ ವಿತರಿಸಲು ಬಾಕಿ ಇರುತ್ತದೆ ಎಂದು ಅವರು ಪ್ರಸ್ತಾಪಿಸಿದರು.

ಸಂಗಬೆಟ್ಟು ಗ್ರಾ.ಪಂ. ಸದಸ್ಯ ಸುನೀಲ್ ಶೆಟ್ಟಿಗಾರ್‌ಗೆ ಅಭಿನಂದನೆ

ಅಂಗನವಾಡಿ ಕೇಂದ್ರದ ಉದ್ಘಾಟನಾ ಸಮಾರಂಭ

ಬಂಟ್ವಾಳ: ತಾಲೂಕಿನ ಸಂಗಬೆಟ್ಟು ಗ್ರಾಮ ಪಂಚಾಯತ್ 4ನೇ ವಾರ್ಡ್‌ನ ಗ್ರಾ.ಪಂ. ಸದಸ್ಯ ಸುನೀಲ್ ಶೆಟ್ಟಿಗಾರ್ ಅವರ ಸದಸ್ಯರಾಗಿ ಸಲ್ಲಿಸಿದ ಸೇವೆನ್ನು ಗುರುತಿಸಿ ವಾರ್ಡ್‌ನ ಜನತೆಯ ವತಿಯಿಂದ ಅಭಿನಂದಿಸಲಾಯಿತು.



ಅವರು ತನ್ನ ವಾರ್ಡ್ ಸಂಗಬೆಟ್ಟು ಬಾಕಿಮಾರ್ ನಲ್ಲಿರುವ ಹಳೆಯ ಅಂಗನವಾಡಿ ಕಟ್ಟಡ ತೆರವುಗೊಳಿಸಿ ಗ್ರಾ.ಪಂ.ನ ಉದ್ಯೋಗ ಖಾತ್ರಿ ಯೋಜನೆ ಹಾಗೂ ಇತರ ಮೂಲಗಳಿಂದ ಅನುದಾನ ಕ್ರೋಡಿಕರಿಸಿ ಮಾದರಿ ಅಂಗನವಾಡಿ ಕೇಂದ್ರ ನಿರ್ಮಿಸುವಲ್ಲಿ ಸಹಕಾರ ನೀಡಿದ ಸುನೀಲ್ ಶೆಟ್ಟಿಗಾರ್ ಅವರನ್ನು ಅಂಗನವಾಡಿ ಕೇಂದ್ರದ ನೂತನ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ವಾರ್ಡ್ ಸದಸ್ಯರೆಲ್ಲರೂ ಸೇರಿ ಗೌರವಿಸಿದರು.

ಈ ಸಂದರ್ಭ ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪಾಡಿ, ಬಂಟ್ವಾಳ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮುಮ್ತಾಜ್ ಎಚ್. ಟಿ., ಬಾಲವಿಕಾಸ ಸಮಿತಿಯ ಅಧ್ಯಕ್ಷೆ ಭವ್ಯಶ್ರೀ, ಮುಖ್ಯ ಅತಿಥಿಗಳಾದ ಸಿದ್ದಕಟ್ಟೆ ಹಾಲು ಉತ್ಪಾದಕ ಸಹಕಾರ ಸಂಘದ ಅಧ್ಯಕ್ಷ ರತ್ನಕುಮಾರ್ ಚೌಟ, ನಿವೃತ ಶಿಕ್ಷಕ ದಾಮೋದರ ರಾವ್, ಉದ್ಯಮಿ ನಾರಾಯಣ ಪೂಜಾರಿ, ಸಿದ್ದಕಟ್ಟೆ ಸಿಎ ಬ್ಯಾಂಕ್ ಅಧ್ಯಕ್ಷ ಪ್ರಭಾಕರ ಪ್ರಭು, ಗ್ರಾಮ ಪಂಚಾಯತ್ ಆಡಳಿತಾಧಿಕಾರಿ ಉಮೇಶ್ ಕಿರಣ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪದ್ಮಾ ನಾಯ್ಕ್, ಕಾರ್ಯದರ್ಶಿ ರೋಹಿಣಿ ಶೆಟ್ಟಿ, ಅಂಗನವಾಡಿ ಕಾರ್ಯಕರ್ತೆ ಶಾರದಾ, ಸಹಾಯಕಿ ಸವಿತಾ, ಪ್ರಭಾಕರ ಗಾಡಿಪಾಲ್ಕೆ, ಸಂಗಬೆಟ್ಟು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಸತೀಶ್ ಪೂಜಾರಿ ಅಲಕ್ಕೆ, ಮಾಜಿ ಉಪಾಧ್ಯಕ್ಷ ಸುರೇಶ ಕುಲಾಲ್, ವಿಮಲಾ ಮೋಹನ್, ಜಲಜ ಹರೀಶ್ ಕುಂದರ್, ಗ್ರಾ.ಪಂ. ಮಾಜಿ ಸದಸ್ಯ ಸಂದೇಶ ಶೆಟ್ಟಿ ಪೊಡುಂಬ, ಉದಯ ಪೂಜಾರಿ, ದಾಮೋದರ ಪೂಜಾರಿ, ಮಾಧವ ಶೆಟ್ಟಿಗಾರ್, ಪ್ರೇಮಾ, ಪ್ರಮುಖರಾದ ಶ್ರೀಪ್ರಕಾಶ್ ಜೈನ್, ದೇವರಾಜ್ ಸಾಲಿಯಾನ್, ವಿಶ್ವನಾಥ್ ಶೆಟ್ಟಿಗಾರ್, ನವೀನ ಹೆಗ್ಡೆ ಚಂದ್ರಹಾಸ್ ಶೆಟ್ಟಿಗಾರ್, ಭೋಜ ಶೆಟ್ಟಿಗಾರ್, ಲೋಕೇಶ್ ಪೂಜಾರಿ, ಯಶೋಧರ ಶೆಟ್ಟಿಗಾರ್, ರೋಹಿತ್, ಉದಯ ಶೆಟ್ಟಿಗಾರ್, ಉಮೇಶ್ ಗೌಡ, ದೀಪಕ್ ಶೆಟ್ಟಿಗಾರ್, ಅಂಗನವಾಡಿ ಮೇಲ್ವಿಚಾರಕಿ ನೀತಾ, ಶಾಲಿನಿ, ಮತ್ತಿತರರು ಇದ್ದರು. ಪ್ರಜ್ವಲ್ ಕುಮಾರ್ ನಿರೂಪಿಸಿದರು.

> **ಜನಸಂಪರ್ಕ ಇಟ್ಟುಕೊಂಡಿದ್ದ ಸದಸ್ಯ**
>
> ಚುನಾಯಿತರಾದ ಬಳಿಕ ತನ್ನ ಸದಸ್ಯತನದ ಅವಧಿ ಮುಗಿಯುವ ವರೆಗೂ ಇಡೀ ವಾರ್ಡ್ ವ್ಯಾಪ್ತಿಯಲ್ಲಿ ಓಡಾಡಿಕೊಂಡು ಮನೆ, ಮನೆ ಸಂಪರ್ಕಿಸಿ ವಾರ್ಡ್ ನಲ್ಲಿರುವ ಸಾರ್ವಜನಿಕ, ವೈಯಕ್ತಿಕ ಸಮಸ್ಯೆಗಳು, ವಾರ್ಡ್‌ನ ಮತದಾರರ ಬೇಡಿಕೆಗಳಿಗೆ ಸ್ಪಂದಿಸುವ ಮೂಲಕ ಪರಿಹಾರ ಕಂಡುಕೊಳ್ಳುತ್ತಿದ್ದರು.

ಕಡಬ ಮಹಿಳಾ ದಿನಾಚರಣೆಯಲ್ಲಿ ತಮನ್ನಾ ಜಬೀನ್ ಅಭಿಮತ

ಸ್ತ್ರೀಯರ ಸಬಲೀಕರಣದಿಂದ ರಾಷ್ಟ್ರದ ಅಭಿವೃದ್ಧಿ

ಕಡಬ: ಮಹಿಳೆಯರು ನಾಲ್ಕು ಗೋಡೆಗಳ ನಡುವೆ ಕಾಲಕಳೆಯುವ ಸಮಯ ದಾಟಿದೆ. ಇಂದು ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಸಾಧನೆಗೈದು ಮುಂಚೂಣಿಯಲ್ಲಿದ್ದಾರೆ. ಮಹಿಳೆಯರ ಸಬಲೀಕರಣದಿಂದ ಮನೆ, ಕುಟುಂಬ, ಸಮಾಜ ಹಾಗೂ ರಾಷ್ಟ್ರದ ಅಭಿವೃದ್ಧಿಯಾಗಲು ಸಾಧ್ಯ ಎಂದು ಕಡಬ ಪಟ್ಟಣ ಪಂಚಾಯತ್ ಅಧ್ಯಕ್ಷೆ ತಮನ್ನಾ ಜಬೀನ್ ಹೇಳಿದರು.



ಕಡಬ ಪಟ್ಟಣ ಪಂಚಾಯತ್ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಆಯೋಜಿಸಲಾಗಿದ್ದ ನಾರಿ ಅಭಿಯಾನ ಕಾರ್ಯಕ್ರಮಕ್ಕೆ ಅವರು ಚಾಲನೆ ನೀಡಿ ಮಾತನಾಡಿದರು.

ಒಬ್ಬ ಮಹಿಳೆ ಸುಶಿಕ್ಷಿತಳಾದರೆ ಅವಳು ವಾಸಿಸುವ ಇಡೀ ಮನೆಯೇ ಶಿಕ್ಷಣ ಪಡೆದಂತೆ. ಆದುದರಿಂದ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸಮಾನ ಅವಕಾಶಗಳು ದೊರೆಯಬೇಕು. ಗ್ರಾಮೀಣ ಭಾಗದ ಹೆಣ್ಣು ಮಕ್ಕಳು ಸರಕಾರ ಮತ್ತು ಸಮಾಜ ಒದಗಿಸುವ ಅವಕಾಶಗಳನ್ನು ಬಳಸಿಕೊಂಡು ಉನ್ನತ ಸಾಧನೆಗಳನ್ನು ಮಾಡಬೇಕು. ಮಹಿಳೆಯರು ಅಭಿವೃದ್ಧಿಯ ಫಲಾನುಭವಿಗಳಾಗುವುದು ಮಾತ್ರವಲ್ಲ ಅಭಿವೃದ್ಧಿಯ ಭಾಗವಾಗಿ ಕೆಲಸ ಮಾಡಬೇಕು. ಹಾಗಾದಾಗ ಮಾತ್ರ ನಮ್ಮ ರಾಷ್ಟ್ರ ಅಭಿವೃದ್ಧಿಯ ಪಥದಲ್ಲಿ ಮುನ್ನಡೆಯಲು ಸಾಧ್ಯ ಎಂದರು.

ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಲೀಲಾವತಿ ಇ. ಮಾತನಾಡಿ, ಮಹಿಳಾ ಸಬಲೀಕರಣದ ನಿಟ್ಟಿನಲ್ಲಿ ಸರಕಾರ ಕೂಡ ಸಾಕಷ್ಟು ಯೋಜನೆಗಳನ್ನು ಜಾರಿಗೊಳಿಸಿದೆ. ಬೇಟಿ ಬಚಾವೋ ಬೇಟಿ ಪಢಾವೋ, ಸುಕನ್ಯಾ ಸಮೃದ್ಧಿ ಯೋಜನೆ, ಉಜ್ವಲ ಯೋಜನೆ ಮುಂತಾದ ಕಾರ್ಯಕ್ರಮಗಳ ಮೂಲಕ ಮಹಿಳೆಯರ ಆರೋಗ್ಯ, ಶಿಕ್ಷಣ ಹಾಗೂ ಜೀವನ ಗುಣಮಟ್ಟವನ್ನು ಸುಧಾರಿಸುವ ಕೆಲಸ ನಡೆಯುತ್ತಿದೆ. ಎಲ್ಲಾ ವ್ಯವಸ್ಥೆಗಳಲ್ಲಿಯೂ ಮಹಿಳೆಯರು ಅಂಜಿಕೆ ಇಲ್ಲದೆ ಅವಕಾಶಗಳನ್ನು ಬಳಸಿಕೊಳ್ಳಲು ಅನುವು ಮಾಡಿ ಕೊಡಲಾಗುತ್ತಿದೆ. ಮುಖ್ಯವಾಗಿ ಈ ಅವಕಾಶಗಳನ್ನು ಉಪಯೋಗಿಸಿಕೊಂಡು ಸ್ವಾವಲಂಬಿ ಬದುಕು ಕಟ್ಟಿಕೊಳ್ಳುವುದರೊಂದಿಗೆ ಇತರರಿಗೂ ಆಸರೆಯಾಗುವ ಕೆಲಸ ಮಹಿಳೆಯಿಂದ ಆಗಬೇಕು ಎಂದರು.

ಪಟ್ಟಣ ಪಂಚಾಯತ್ ಉಪಾಧ್ಯಕ್ಷೆ ನೀಲಾವತಿ ಶಿವರಾಮ್, ಸದಸ್ಯರಾದ ಕುಸುಮಾ ಅಂಗಡಿಮನೆ, ಅಕ್ಷತಾ ಮಣಿಮುಂಡ, ಸಿಬಂದಿಗಳಾದ ವಾರಿಜಾ ರೈ, ಶಶಿಕಲಾ, ಭಾರತಿ, ಚೈತ್ರ, ಆನ್ಸಿ ಚಾಕೋ ಮತ್ತಿತರರು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಂಗವಾಗಿ ಕಡಬ ಪೇಟೆಯ ಅಂಗಡಿ ಮನೆಯ ಬಳಿ ಮಹಿಳಾ ಸಬಲೀಕರಣ ಮತ್ತು ಸ್ವಚ್ಛ ಪರಿಸರದ ಕುರಿತು ಜಾಗೃತಿ ಮೂಡಿಸುವ ಕಾರ್ಯ ನಡೆಸಲಾಯಿತು.

ಇದೇ ಸಂದರ್ಭದಲ್ಲಿ ಪರಿಸರ ಸಂರಕ್ಷಣೆ ಹಾಗೂ ಪ್ಲಾಸ್ಟಿಕ್ ಮರುಬಳಕೆ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಪೌರ ಕಾರ್ಮಿಕರ ವಿಶ್ರಾಂತಿ ಗೃಹದ ಮುಂಭಾಗದಲ್ಲಿ ಕಮ್ಯುನಿಟಿ ಮೊಬಿಲೈಸರ್‌ಗಳು ಮತ್ತು ಪೌರ ಕಾರ್ಮಿಕರ ಸಹಕಾರದಿಂದ 'ಕಸದಿಂದ ರಸ' ಎಂಬ ಪರಿಕಲ್ಪನೆಯಡಿ ತ್ಯಾಜ್ಯ ಪ್ಲಾಸ್ಟಿಕ್ ಬಾಟಲಿಗಳನ್ನು ಅಲಂಕರಿಸಿ ಗಿಡಗಳ ಸುತ್ತ ನಿರ್ಮಿಸಿದ ಅಲಂಕಾರಿಕ ಕಾಂಪೌಂಡ್ ವ್ಯವಸ್ಥೆಯನ್ನು ವೀಕ್ಷಣೆ ಮಾಡಿದ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಮೆಚ್ಚುಗೆ ವ್ಯಕ್ತಪಡಿಸಿದರು.

'ವಸಂತ ಸಂಗೀತೋತ್ಸವ' ಉದ್ಘಾಟನೆ



ಮಂಗಳೂರು: ದಿ ಗೌಡ್ ಸಾರಸ್ವತ ಬ್ರಾಹ್ಮಣ ಸೇವಾ ಸಂಘವು ಶ್ರೀ ನಾರಾಯಣಿ ಸಂಗೀತ ಕಲಾ ಕೇಂದ್ರ ಇವರ ಸಹಯೋಗದಲ್ಲಿ ನಗರದ ಸುಜೀರ್ ಸಿ. ವಿ. ನಾಯಕ್ ಸಭಾಂಗಣದಲ್ಲಿ 'ವಸಂತ ಸಂಗೀತೋತ್ಸವ' ಭಾನುವಾರ ಆಯೋಜಿಸಿತ್ತು.

ಕಾರ್ಯಕ್ರಮದಲ್ಲಿ ವಿದುಷಿ ನಂದಿತಾ ಪೈ, ವಿಭಾ ನಾಯಕ್, ಶಾಂತೇರಿ ಕಾಮತ್ ಮತ್ತು ವಿದುಷಿ ಮೇಧಾ ಪೈ ಸೇರಿದಂತೆ ಪ್ರತಿಭಾನ್ವಿತ ಯುವ ಕಲಾವಿದರು ಸುಮಾರು ನಾಲ್ಕು ಗಂಟೆಗಳ ಕಾಲ ಸುಮಧುರ ಹಿಂದೂಸ್ತಾನಿ ಗಾಯನ ಸಂಗೀತ ಪ್ರದರ್ಶನ ನೀಡಿದರು. ಸಾಂಪ್ರದಾಯಿಕ ಶಾಸ್ತ್ರೀಯ ರಾಗಗಳಿಗೆ ಹೊಂದಿಸಲಾದ ವಿಶೇಷ ಕೊಂಕಣಿ ಸಂಯೋಜನೆಗಳ ಪ್ರಸ್ತುತಿ ಮಾಡಿದರು. ಯುವ ಬಾನ್ಸುರಿ ವಾದಕ ಪಿ. ಕಾರ್ತಿಕ್ ಭಟ್ ಅವರಿಂದ ಬಾನ್ಸುರಿ ವಾದನ ಜರಗಿತು. ಶ್ರೀವತ್ಸ ಭಟ್, ರಾಜೇಶ್ ಭಾಗವತ್ ತಬಲಾದಲ್ಲಿ, ಮೇಧಾ ಭಟ್, ಹೇಮಂತ್ ಭಾಗವತ್ ಹಾರ್ಮೋನಿಯಂನಲ್ಲಿ ಸಾಥ್ ನೀಡಿದರು. ಜಿಎಸ್‌ಬಿ ಸೇವಾ ಸಂಘದ ಅಧ್ಯಕ್ಷ ಡಾ. ಕಸ್ತೂರಿ ಮೋಹನ್ ಪೈ ಅವರು ಅತಿಥಿ ಕಲಾವಿದರಾಗಿ ಪ್ರದರ್ಶನ ನೀಡಿದರು. ಸೇವಾ ಸಂಘದ ಅಧ್ಯಕ್ಷ ಡಾ. ಕಸ್ತೂರಿ ಮೋಹನ್ ಪೈ, ಕಾರ್ಯದರ್ಶಿ ಡಾ. ರಮೇಶ್ ಪೈ ಎ., ಖಜಾಂಚಿ ಕುಂಬಳೆ ನರಸಿಂಹ ಪ್ರಭು, ಶ್ರೀ ನಾರಾಯಣಿ ಸಂಗೀತ ಕಲಾ ಕೇಂದ್ರದ ಸಂಸ್ಥಾಪಕಿ ವಿದುಷಿ ನಂದಿತಾ ಪೈ, ಯಜ್ಞವಂತ ಪೈ, ಐಡಿಯಲ್ ಐಸ್‌ಕ್ರೀಂನ ಜಯಾ ಕಾಮತ್, ಎನ್. ಕೆ. ಜಿ. ಎಸ್. ಬಿ. ಕೋ-ಆಪರೇಟಿವ್ ಬ್ಯಾಂಕ್‌ನ ಕಿರಣ್ ಕುಮಾರನಾಯಕ, ಯೂನಿಯನ್ ಬ್ಯಾಂಕ್‌ನ ಪೂರ್ಣಚಂದ್ರ ನಾಯ್ಡು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸುಚಿತ್ರಾ ಎಸ್. ಶೆಣೈ, ಮಂಗಳಾ ಭಟ್ ಕಾರ್ಯಕ್ರಮ ನಿರ್ವಹಿಸಿದರು. ಕಾರ್ಯದರ್ಶಿ ಡಾ. ರಮೇಶ ಪೈ ವಂದಿಸಿದರು. ಎಂ. ಆರ್. ಕಾಮತ್, ಗೋವಿಂದರಾಯ ಪ್ರಭು ಅವರು ಕಲಾವಿದರ ಪರಿಚಯ ನೀಡಿದರು. ಡಾ. ಕಸ್ತೂರಿ ಮೋಹನ ಪೈ, ಬಿ. ಆರ್. ಶೆಣೈ, ಜಿ. ಮಾಧವರಾಯ ಪ್ರಭು, ಅರವಿಂದ ಆಚಾರ್ಯ, ವಿಜಯಚಂದ್ರ ಕಾಮತ್, ಮೋಹನದಾಸ ಪೈ, ಪ್ರತಿಮಾ ಪ್ರಭು ಕಲಾವಿದರನ್ನು ಸನ್ಮಾನಿಸಿದರು.

ಯಕ್ಷಗಾನ ಕಲಾವಿದ ಮಾಧವ ಜೋಗಿಗೆ 'ಕದ್ರಿಕಟ್ಟು ಸಂಜೀವ ಪೂಜಾರಿ' ಪ್ರಶಸ್ತಿ



ಕೋಟ: ಸಂಜೀವ ಪೂಜಾರಿ ಎಂಬ ಕಲಾಶಕ್ತಿ ಗ್ರಾಮೀಣ ಭಾಗದಲ್ಲಿ ಕಲಾಸಕ್ತಿಯ ಕೇಂದ್ರವಾಗಿಸಿ ಯುವ ಸಮೂಹಕ್ಕೆ ದಾರಿದೀಪವಾಗಿದೆ ಎಂದು ಕೋಟ ಅಮೃತೇಶ್ವರೀ ದೇಗುಲದ ಆಡಳಿತ ಮಂಡಳಿಯ ಅಧ್ಯಕ್ಷ ಆನಂದ್ ಸಿ ಕುಂದರ್ ಹೇಳಿದರು.

ಸೋಮವಾರ ಕೋಟದ ಕದ್ರಿಕಟ್ಟು ಊರ ಹತ್ತು ಸಮಸ್ತರಿಂದ ವರ್ಷಂಪ್ರತಿ ನಡೆಸಲ್ಪಡುವ 35ನೇ ವರ್ಷದ ಶ್ರೀ ಕ್ಷೇತ್ರ ಅಮೃತೇಶ್ವರೀ ದಶಾವತಾರ ಯಕ್ಷಗಾನ ಮಂಡಳಿಯ ಯಕ್ಷಗಾನ, ಸತ್ಯನಾರಾಯಣ ಪೂಜಾ ಕಾರ್ಯಕ್ರಮ, ರಂಗಕರ್ಮಿ ಕಲಾವಿದ ಕದ್ರಿಕಟ್ಟು ಸಂಜೀವ ಪೂಜಾರಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಭಾಗವಹಿಸಿ, ಸಂಜೀವ ಕದ್ರಿಕಟ್ಟು ಅಪ್ರತಿಮಾ ಕಲಾವಿದನಾಗಿ ಕಲಾ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅನನ್ಯ ಎಂದರು.

ಈ ವೇಳೆ ಅಮೃತೇಶ್ವರೀ ಮೇಳದ ಸ್ತ್ರೀವೇಷಧಾರಿ ಮಾಧವ ಜೋಗಿ ನಾಗೂರು ಅವರಿಗೆ ಕದ್ರಿಕಟ್ಟು ಸಂಜೀವ ಪೂಜಾರಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ರಾಜ್ಯ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಯಕ್ಷಕಲಾವಿದ ಕೋಟ ಸುರೇಶ್ ಬಂಗೇರರಿಗೆ ವಿಶೇಷ ಅಭಿನಂದನೆ ಸಲ್ಲಿಸಲಾಯಿತು.

ಕೋಟ ಅಮೃತೇಶ್ವರೀ ದೇಗುಲದ ಟ್ರಸ್ಟಿ ಶಿವ ಪೂಜಾರಿ, ಉದ್ಯಮಿ ಸದಾನಂದ ಜಿ, ಕದ್ರಿಕಟ್ಟು ಗ್ರಾಮಸ್ಥರ ಪರವಾಗಿ ಗಣೇಶ್ ಪೂಜಾರಿ, ಗಣೇಶ್ ಕುಂದರ್, ಅಮೃತ ಯುವಕ ಸಂಘದ ಅಧ್ಯಕ್ಷ ಜೀವನ್ ಪೂಜಾರಿ ಕದ್ರಿಕಟ್ಟು, ಕೋಟ ಹಿರೇಮಹಾಲಿಂಗೇಶ್ವರ ಮಿತ್ರ ವೃಂದದ ಕಾರ್ಯದರ್ಶಿ ಜಿ.ಎಸ್. ಆನಂದ್ ದೇವಾಡಿಗ, ಗೌರವ ಸಲಹೆಗಾರ ಜಗನಾಥ ಕಾಂಚನ್, ರಮೇಶ್ ಪೂಜಾರಿ ಇದ್ದರು. ದೇಗುಲದ ಟ್ರಸ್ಟಿ ಚಂದ್ರ ಆಚಾರ್ ಸ್ವಾಗತಿಸಿ ಪ್ರಾಸ್ತಾವನೆ ಸಲ್ಲಿಸಿದರು. ಕಾರ್ಯಕ್ರಮವನ್ನು ಉಪನ್ಯಾಸಕ ನರೇಂದ್ರ ಕುಮಾರ್ ಕೋಟ ವಂದಿಸಿದರು. ಬಳಿಕ ಸತ್ಯನಾರಾಯಣ ಪೂಜೆ ಭಜನಾ ಕಾರ್ಯಕ್ರಮ, ಯಕ್ಷಗಾನ ಬಯಲಾಟ ನಡೆಯಿತು.

ಮಂಗಳೂರು ರಾಮಕೃಷ್ಣ ಮಠದಲ್ಲಿ 'ದಾಸ-ಗಾನ-ಚಿಂತನ'



ಮಂಗಳೂರು: ನಗರದ ರಾಮಕೃಷ್ಣ ಮಠದಲ್ಲಿ ಅಮೃತವರ್ಷ - 75ನೇ ವರ್ಷದ ಆಚರಣೆ ಅಂಗವಾಗಿ 'ದಾಸ-ಗಾನ-ಚಿಂತನ' ಎಂಬ ಭಕ್ತಿಮಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಭಾನುವಾರ ಸಂಜೆ ನಡೆಯಿತು.

ಬೆಂಗಳೂರು ಬಸವನಗುಡಿ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ನಿತ್ಯಸ್ಥಾನಂದಜಿ ಕಾರ್ಯಕ್ರಮವನ್ನು ಉದ್ಘಾಟಿಸಿ ಆಶೀರ್ವಚನ ನೀಡಿದರು. ರಾಮಕೃಷ್ಣ ಮಠ ಮಂಗಳೂರು ಅಧ್ಯಕ್ಷರಾದ ಸ್ವಾಮಿ ಜಿತಕಾಮಾನಂದಜಿ ಅಧ್ಯಕ್ಷತೆ ವಹಿಸಿದ್ದರು. 'ದಾಸ-ಗಾನ-ಚಿಂತನ' ಕಾರ್ಯಕ್ರಮದಲ್ಲಿ ಸುರಮಣಿ ಡಾ. ದತ್ತಾತ್ರೇಯ ಎಲ್. ವೇಲಣಕರ್ ಅವರ ಗಾಯನ, ಡಾ. ಎಚ್. ಎನ್. ಮುರಳೀಧರ ಅವರ ಅರ್ಥಪೂರ್ಣ ವ್ಯಾಖ್ಯಾನ ನೆರವೇರಿತು. ತಬಲಾದಲ್ಲಿ ಶ್ರೀದತ್ತ ಪ್ರಭು ಸಹಕರಿಸಿದರು.

ದಾಸ ಸಾಹಿತ್ಯದ ಭಕ್ತಿಮಯ ಸಂದೇಶಗಳನ್ನು ಸಂಗೀತ ಮತ್ತು ವಿವರಣೆಗಳ ಮೂಲಕ ಮನೋಜ್ಞವಾಗಿ ಪರಿಚಯಿಸಿದ ಕಾರ್ಯಕ್ರಮವು ಎಲ್ಲರ ಮನ ಸೆಳೆಯಿತು. ಭಕ್ತರು, ಸಂಗೀತಾಸಕ್ತರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

> ■ **ರಾಮಕೃಷ್ಣ ಮಠದಲ್ಲಿ ಅಮೃತವರ್ಷ - 75ನೇ ವರ್ಷದ ಆಚರಣೆ ಅಂಗವಾಗಿ ಕಾರ್ಯಕ್ರಮ**

ಶಿಲ್ಪಿ ಕೆ. ಲಕ್ಷ್ಮೀನಾರಾಯಣ ಆಚಾರ್ಯರಿಗೆ 'ಭೌವನ ವಿಶ್ವಕರ್ಮ ಕಲಾ ಪ್ರಶಸ್ತಿ' ಪ್ರದಾನ, ನೂತನ ವೆಬ್ ಸೈಟ್ ಉದ್ಘಾಟನೆ

ಮಾ.23ರಂದು ವಿಶ್ವಕರ್ಮ ಕಲಾ ಪರಿಷತ್‌ನಿಂದ 'ಸಮರ್ಪಣಂ ಕಲೋತ್ಸವ'

ಮಂಗಳೂರು: ಪರಂಪರೆ ಹಾಗೂ ಸಂಸ್ಕೃತಿಯ ಸಂಪನ್ನತೆಯಿಂದ ರಾಷ್ಟ್ರಾಭ್ಯುದಯ' ಎನ್ನುವ ಧ್ಯೇಯವಿರಿಸಿಕೊಂಡು, 2023ರಲ್ಲಿ ಪ್ರಾರಂಭಗೊಂಡ ವಿಶ್ವಕರ್ಮ ಕಲಾ ಪರಿಷತ್, ಕಲೆ ಹಾಗೂ ಸಂಸ್ಕೃತಿಗೆ ಸಂಬಂಧಿಸಿದ ಹಲವಾರು ಚಟುವಟಿಕೆಗಳನ್ನು ನಿರಂತರವಾಗಿ ಹಮ್ಮಿಕೊಂಡು ಬಂದಿದೆ. ಇದೀಗ ಮಾ.23ರಂದು ಮಂಗಳೂರು ಶ್ರೀ ಕಾಳಿಕಾಂಬಾ ವಿನಾಯಕ ದೇವಸ್ಥಾನದ ಪಂಚಮ ಉತ್ಸವದ ಸಂದರ್ಭದಲ್ಲಿ ವಿಶ್ವಕರ್ಮ ಕಲಾ ಪರಿಷತ್ ಬಳಗದ ಕಲಾವಿದರ ಪಾಲ್ಗೊಳ್ಳುವಿಕೆಯ 'ಸಮರ್ಪಣಂ ಕಲೋತ್ಸವ-2026' ಅನ್ನು ಹಮ್ಮಿಕೊಂಡಿದೆ.

ಈ ಸಂದರ್ಭ ವಿಶ್ವಕರ್ಮ ಕಲಾ ಪರಿಷತ್‌ನಿಂದ, ಶ್ರೇಷ್ಠ ರಥಶಿಲ್ಪಿ, ಶಿಲ್ಪಗುರು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಲ್ಪಿ ಕೆ. ಲಕ್ಷ್ಮೀನಾರಾಯಣ ಆಚಾರ್ಯ, ಕೋಟೇಶ್ವರ ಅವರಿಗೆ 'ವಿಶ್ವಕರ್ಮ ಕುಲತಿಲಕ' ಬಿರುದು ಸಹಿತ 'ಭೌವನ ವಿಶ್ವಕರ್ಮ ಕಲಾ ಪ್ರಶಸ್ತಿ' ನೀಡಿ ಗೌರವಾಭಿವಂದನೆ ಸಲ್ಲಿಸಲಾಗುವುದು. ಅಂದು ಬೆಳಗ್ಗೆ 10.30ಕ್ಕೆ ಶ್ರೀ ಕ್ಷೇತ್ರದ ಆವರಣದಲ್ಲಿರುವ ಶ್ರೀ ಕಾಳಿಕಾಂಬಾ ರಂಗಮಂಟಪದಲಿ ಆನೆಗುಂದಿ ಸರಸ್ವತೀ ಪೀಠಾಧೀಶ್ವರರಾದ ಅನಂತಶ್ರೀ ವಿಭೂಷಿತ ಕಾಳಹಸ್ತೇಂದ್ರ ಸರಸ್ವತೀ ಮಹಾಸ್ವಾಮಿಗಳವರ ದಿವ್ಯ ಉಪಸ್ಥಿತಿಯಲ್ಲಿ ಸಭೆ ಆರಂಭಗೊಳ್ಳಲಿದೆ. ಮಾಜಿ ಸಚಿವ ಕೃಷ್ಣ ಜೆ. ಪಾಲೆಮಾರ್ ಕಲೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಕರ್ನಾಟಕ ಸರ್ಕಾರದ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಸುಜ್ಞಾನಮೂರ್ತಿ ಪಿ. ವಿಶ್ವಕರ್ಮ ಕಲಾ ಪರಿಷತ್ತಿನ ನೂತನ ವೆಬ್ ಸೈಟ್ ಅನ್ನು ಲೋಕಾರ್ಪಣೆಗೈಯಲಿದ್ದಾರೆ. ಕ್ಷೇತ್ರದ ಆಡಳಿತಾಧಿಕಾರಿ ಕೆ. ಉಮೇಶ ಆಚಾರ್ಯ ಶುಭಾಶಂಸನೆಗೈಯಲಿದ್ದು ವಿಶ್ವಕರ್ಮ ಕಲಾ ಪರಿಷತ್ತಿನ ಅಧ್ಯಕ್ಷ ಡಾ. ಎಸ್. ಪಿ. ಗುರುದಾಸ್ ಸಭಾಧ್ಯಕ್ಷತೆ ವಹಿಸಲಿದ್ದಾರೆ. ಖ್ಯಾತ ಲೆಕ್ಕಪರಿಶೋಧಕ ಸಿಎ ಎಸ್. ಎಸ್. ನಾಯಕ್, ಆನೆಗುಂದಿ ಮಹಾಸಂಸ್ಥಾನ, ಸರಸ್ವತೀ ಪೀಠ ಪ್ರತಿಷ್ಠಾನ ಇದರ ಪ್ರಧಾನ ಕಾರ್ಯದರ್ಶಿ ಲೋಕೇಶ್ ಎಂ. ಬಿ. ಆಚಾರ್ಯ, ಸರಸ್ವತೀ ಪೀಠ ಪ್ರತಿಷ್ಠಾನ ಮಾತೃಮಂಡಳಿಯ ಅಧ್ಯಕ್ಷೆ ಸಂಧ್ಯಾ ಲಕ್ಷ್ಮಣ ಆಚಾರ್ಯ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಕಲಾ ಪರಿಷತ್ತಿನ ಗೌರವ ಅಧ್ಯಕ್ಷರಾದ ಪಿ. ಎನ್. ಆಚಾರ್ಯ ಉಡುಪಿ, ಬೆಂಗಳೂರಿನ ವಿಪ್ರೊ ಲಿ. ಇದರ ಇಂಜಿನಿಯರಿಂಗ್ ಡಿಸೈನ್ ಸರ್ವಿಸಸ್ ವಿಭಾಗದ ನಿರ್ದೇಶಕ ಹರಿದಾಸ್ ಎಸ್. ಪಿ. ಆಚಾರ್ಯ, ಪ್ರೊ. ಜಿ. ಯಶವಂತ ಆಚಾರ್ಯ, ಸುಂದರ ಆಚಾರ್ಯ ಬೆಳುವಾಯಿ ಗೌರವ ಉಪಸ್ಥಿತಿ ಪಡೆಯಲಿರುತ್ತಾರೆ. ಈ ಸಂದರ್ಭದಲ್ಲಿ ಹಿರಿಯ ಕಲಾ ಸಾಧಕರಾದ ಎಸ್. ವಿ. ಆಚಾರ್, ಶಿಲ್ಪಿ ಎಸ್. ಮಂಜುನಾಥ ಆಚಾರ್ಯ, ಶಿಲ್ಪಿ ದಾಮೋದರಾಚಾರ್ಯ, ಗಾಯಕ ಕೆ. ರವಿಶಂಕರ್, ಕಸೂತಿ ಕಲಾವಿದೆ ಗುಲಾಬಿ ಪಟ್ಟಾಭಿರಾಮ ಇವರನ್ನು ದಿ. ಶಿವಪುರ ಪದ್ಮನಾಭ ಆಚಾರ್ಯ ಪುರಸ್ಕಾರ ಸಹಿತ ವಿಶ್ವಕರ್ಮ ಕಲಾ ಪ್ರಶಸ್ತಿ ನೀಡಿ ಸಂಮಾನಿಸಲಾಗುವುದು. ಅಲ್ಲದೆ ತಮ್ಮ ಪ್ರತಿಭೆ ಸಾಧನೆಗಳಿಂದ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಗುರುತಿಸಲ್ಪಡುತ್ತಿರುವ ವಿಶಿಷ್ಟ ಕಲಾವಿದರಾದ ಶಿಲ್ಪಿ ದಿವಾಕರ ಆಚಾರ್ಯ, ಕಾಷ್ಠಶಿಲ್ಪಿ ಹರೀಶ್ ಆಚಾರ್ಯ, ಶಿಲ್ಪಿ ಪ್ರಮೋದ್ ಸಿ. ಕೆ., ಶಿಲ್ಪಿ ಶ್ರೀಕಾಂತ ಆಚಾರ್ಯ ಕಲ್ಲಪು, ಗ್ರಾಫಿಕ್ ಕಲಾವಿದೆ ಶಾಂತಲಾ ಸೀತಾರಾಮ ಆಚಾರ್ಯ ಇವರನ್ನು ಪಿ. ಎನ್. ಆಚಾರ್ಯ ವಿಶ್ವಕರ್ಮ ಕಲಾ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಯುವ ಉದಯೋನ್ಮುಖ ಕಲಾವಿದರಾದ ವಾರುಣಿ ನಾಗರಾಜ್, ಮನೋಜ್ಞ ಟಿ. ಆಚಾರ್ಯ, ಬಿಂದು ಕೆ., ಆಶೋಕ್ ಎ. ಎಸ್. ಹಾಗೂ ಗಾಯತ್ರಿ ಆಚಾರ್ಯ ಕೊಂಡೆವೂರು ಇವರನ್ನು ಶಾಂತಾ ಸುಬ್ರಾಯ ಆಚಾರ್ಯ ಸ್ಮಾರಕ ವಿಶ್ವಕರ್ಮ ಕಲಾ ಪ್ರಶಸ್ತಿ ನೀಡಿ ಗೌರವಿಸಲಾಗುವುದು,

ಸುಮಾರು ನೂರಕ್ಕೂ ಹೆಚ್ಚು ಕಲಾ ಪರಿಷತ್ತಿನ ಕಲಾವಿದರು ತಮ್ಮ ಕಲಾಕೃತಿಗಳ ಪ್ರದರ್ಶನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನೀಡಲಿದ್ದಾರೆ. ಪೂರ್ವಾಹ್ನ 10ರಿಂದ ಸಂಜೆ 4ರವರೆಗೆ ಕಲಾ ಪ್ರದರ್ಶನ ನಡೆಯಲಿದ್ದು, ಸಾರ್ವಜನಿಕರಿಗೆ ಮುಕ್ತ ಪ್ರವೇಶವನ್ನು ಕಲ್ಪಿಸಲಾಗಿದೆ.

ಸುತ್ತ ಮುತ್ತ

ಕಾರ್ಕಳ ವ್ಯಾಪ್ತಿಯಲ್ಲಿ ಸೇತುವೆಗಳಿಗೆ 4.50 ಕೋಟಿ ರೂ.

ಕಾರ್ಕಳ: ಕಾರ್ಕಳ ತಾಲೂಕು ವ್ಯಾಪ್ತಿಯಲ್ಲಿ ಜಿಲ್ಲಾ ಮುಖ್ಯರಸ್ತೆಗಳಲ್ಲಿ ಹಾದು ಹೋಗುವ 3 ಸೇತುವೆಗಳ ಮರು ನಿರ್ಮಾಣ ಕಾಮಗಾರಿಗಳಿಗೆ ತಲಾ 1.50 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲು ಒಟ್ಟು 4.50 ಕೋಟಿ ರೂ. ಅನುದಾನ ಮಂಜೂರಾಗಿ ಸರ್ಕಾರದ ಆಡಳಿತಾತ್ಮಕ ಅನುಮೋದನೆ ಆಗಿರುತ್ತದೆ. ಪ್ರಮುಖ ಸೇತುವೆಗಳ ಮರು ನಿರ್ಮಾಣದ ಪೈಕಿ ಕುಕ್ಕುಂದೂರು ಗ್ರಾಮ ಪಂಚಾಯತ್ ವ್ಯಾಪ್ತಿಯ



ಕಾರ್ಕಳ ನಕ್ರೆ ರಂಗನಪಲ್ಕೆ ಜಿಲ್ಲಾ ಮುಖ್ಯರಸ್ತೆಯ ಪರಪು ಎಂಬಲ್ಲಿ ಸೇತುವೆಯ ಮರು ನಿರ್ಮಾಣ ಕಾಮಗಾರಿ, ರೆಂಜಾಳ ನೆಲ್ಲಿಕಾರು ಜಿಲ್ಲಾ ಮುಖ್ಯರಸ್ತೆಯ ರೆಂಜಾಳ ಗ್ರಾಮ ಪಂಚಾಯತ್ ಬಳಿ ಸೇತುವೆಯ ಮರು ನಿರ್ಮಾಣ ಹಾಗೂ ಬೋಳ ಗ್ರಾಮದ ಶ್ರೀ ಮೃತ್ಯುಂಜಯ ಸ್ವಾಮಿ ದೇವಸ್ಥಾನದ ಬಳಿ ಸೇತುವೆ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಮಂಜೂರಾಗಿದೆ. ಸಾರ್ವಜನಿಕರ ಹಾಗೂ ವಾಹನಗಳ ಸುರಕ್ಷಿತ ಹಾಗೂ ಸುಗಮ ಸಂಚಾರಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಸೇತುವೆಗಳ ನಿರ್ಮಾಣಕ್ಕೆ ವಿಶೇಷ ಅನುದಾನ ನೀಡುವಂತೆ ಸರ್ಕಾರಕ್ಕೆ ಹಾಗೂ ಇಲಾಖಾ ಸಚಿವರಿಗೆ ಪತ್ರ ಮುಖೇನ ಮನವಿ ಮಾಡಲಾಗಿತ್ತು. ಇದರ ಪರಿಣಾಮವಾಗಿ ಕಾರ್ಕಳ ವಿಧಾನ ಸಭಾ ಕ್ಷೇತ್ರಕ್ಕೆ 4.50 ಕೋಟಿ ರೂ ಅನುದಾನ ಮಂಜೂರಾಗಿ ಸೇತುವೆಗಳ ಮರು ನಿರ್ಮಾಣ ಕಾರ್ಯಕ್ಕೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ದೊರಕಿದ್ದು ಆದಷ್ಟು ಶೀಘ್ರವಾಗಿ ಇಲಾಖಾ ಪ್ರಕ್ರಿಯೆಗಳನ್ನು ಮುಗಿಸಿ ಕಾಮಗಾರಿಗಳನ್ನು ಆರಂಭಿಸಲಾಗುವುದು ಎಂದು ವಿಕಾಸ ಶಾಸಕರ ಜನಸೇವಾ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೈಗಾರಿಕೆ ವಲಯ ಕುಂದು-ಕೊರತೆ: ಅಹವಾಲು ಸ್ವೀಕಾರ

ಉಡುಪಿ: ಜಿಲ್ಲಾ ಮಟ್ಟದ ಕೈಗಾರಿಕಾ ಸ್ಪಂದನ ಸಮಿತಿ ಸಭೆ ಹಾಗೂ ಜಿಲ್ಲಾ ರಫ್ತು ಉತ್ತೇಜನಾ ಸಮಿತಿ ಸಭೆಗಳನ್ನು ಮಾ. 25ರಂದು ಉಡುಪಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಿದ್ದು, ಜಿಲ್ಲೆಯ ಕೈಗಾರಿಕೋದ್ಯಮಿಗಳು ತಮ್ಮ ಅಹವಾಲುಗಳನ್ನು ಮಾರ್ಚ್ 20 ರ ಒಳಗಾಗಿ ಜಿಲ್ಲಾ ಕೈಗಾರಿಕಾ ಕೇಂದ್ರ, ಶಿವಳ್ಳಿ ಕೈಗಾರಿಕಾ ಪ್ರದೇಶ, ಮಣಿಪಾಲ, ಉಡುಪಿ ಕಚೇರಿಗೆ ಖುದ್ದಾಗಿ ಅಥವಾ ಇಮೇಲ್ jddicudupi@gmail.com ಮೂಲಕ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಜಿಲ್ಲಾ ಕೈಗಾರಿಕಾ ಕೇಂದ್ರ, ಉಡುಪಿ ದೂ.ಸಂಖ್ಯೆ: 0820-2575650 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರ ಕಚೇರಿ ಪ್ರಕಟಣೆ ತಿಳಿಸಿದೆ.

ಅಂಗನವಾಡಿ ಕಟ್ಟಡಗಳ ಬಹಿರಂಗ ಹರಾಜು

ಉಡುಪಿ: ಕುಂದಾಪುರ ಶಿಶು ಅಭಿವೃದ್ಧಿ ಯೋಜನೆಯ ಶಿಥಿಲಾವಸ್ಥೆಯಲ್ಲಿರುವ ಜಡ್ಕಲ್ ಗ್ರಾಮ ಪಂಚಾಯತ್ ವ್ಯಾಪ್ತಿಯ ಸೆಳ್ಕೋಡು ಅಂಗನವಾಡಿ ಕಟ್ಟಡ ಹಾಗೂ ಗುಲ್ವಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಕರ್ಕಿ ಅಂಗನವಾಡಿ ಕಟ್ಟಡವನ್ನು ಇದ್ದ ಸ್ಥಿತಿಯಲ್ಲಿಯೇ ಮಾ. 24ರಂದು ಕ್ರಮವಾಗಿ ಬೆಳಗ್ಗೆ 11 ಗಂಟೆಗೆ ಹಾಗೂ ಮಧ್ಯಾಹ್ನ 2 ಗಂಟೆಗೆ ಬಹಿರಂಗ ಹರಾಜು ಮಾಡಲಾಗುವುದು. ಆಸಕ್ತರು ಹೆಚ್ಚಿನ ವಿವರಗಳಿಗೆ ಶಿಶು ಅಭಿವೃದ್ಧಿ ಯೋಜನಾ ಕಚೇರಿ, ತಾಲೂಕು ಪಂಚಾಯತ್ ಸಮೀಪ ಕುಂದಾಪುರ ದೂ.ಸಂಖ್ಯೆ: 08254-230807 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಸಂವಾದ

ಕುಂದಾಪುರ: ನಡೂರಿನ ಶ್ರೀ ವಾಣಿ ಪ್ರೌಢಶಾಲೆಯಲ್ಲಿ ನಡೆಯುತ್ತಿರುವ ಕುಂದಾಪುರ ಕೋಟೇಶ್ವರದ ಶ್ರೀ ಕಾಳಾವರ ವರದರಾಜ ಎಂ. ಶೆಟ್ಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಶಿಬಿರದಲ್ಲಿ ಉಡುಪಿಯ ಎ.ವಿ. ಬಾಳಿಗ ಆಸ್ಪತ್ರೆಯ ಮನೋವೈದ್ಯ ಡಾ. ಪಿ. ವಿ .ಭಂಡಾರಿ ಸಮಕಾಲೀನ ಸಾಮಾಜಿಕ ಆತಂಕಗಳು ಮತ್ತು ಅವುಗಳನ್ನು ಪರಿಹರಿಸಲು ಅನುಸರಿಸಬಹುದಾದ ಮಾರ್ಗೋಪಾಯಗಳ ಕುರಿತು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಉದ್ಯೋಗಾರ್ಹತೆಯ ಕುರಿತಾಗಿ ಸಂವಾದ ಈ ಸಂದರ್ಭದಲ್ಲಿ ಶ್ರೀ ವಾಣಿ ವಿದ್ಯಾ ಅಭಿವೃದ್ಧಿ ಸಂಘದ ಆಡಳಿತ ಅಧಿಕಾರಿ ಎಂ. ವಿಶ್ವನಾಥ ಶೆಟ್ಟಿ ಶಿಬಿರದ ಯೋಜನಾಧಿಕಾರಿಗಳಾದ ನಿರಂಜನ ಶರ್ಮ ಹಾಗೂ ಶ್ರುತಿ ಆಚಾರ್ಯ ಎನ್., ರಂಜಿತ್ ಮತ್ತು ಘಟಕ ನಾಯಕರು ಉಪಸ್ಥಿತರಿದ್ದರು.

ಅವೈಜ್ಞಾನಿಕವಾಗಿ ಪ್ರಯಾಣಿಕರ ತಂಗುದಾಣ ನಿರ್ಮಾಣಕ್ಕೆ ಮುಂದಾದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ

ರಸ್ತೆ ಅಂಚಿನಲ್ಲೇ ತಂಗುದಾಣವಿದ್ದರೆ ಬಸ್ ನಿಲ್ಲುವುದು ಎಲ್ಲಿ?

■ ಗಣೇಶ್ ನಾಯಕ್, ಸಾಣೂರು

ಕಾರ್ಕಳ: ಕಾರ್ಕಳ ತಾಲೂಕು ಸಾಣೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಪುಲ್ಕೇರಿ ಬೈಪಾಸ್ ಸರ್ಕಲ್‌ನಿಂದ ಮಂಗಳೂರಿನ ಬಿಕರ್ನಕಟ್ಟೆಯ ವರೆಗೆ ರಾಷ್ಟ್ರೀಯ ಹೆದ್ದಾರಿ 169 ಚತುಷ್ಪಥ ಕಾಮಗಾರಿ ಪ್ರಾರಂಭವಾಗಿ 5 ವರ್ಷಗಳು ಕಳೆದಿವೆ. ಗ್ರಾ.ಪಂ. ವ್ಯಾಪ್ತಿಯ ಹೆದ್ದಾರಿಯಲ್ಲಿ 6 ಪ್ರಯಾಣಿಕರ ತಂಗುದಾಣ ಅವೈಜ್ಞಾನಿಕವಾಗಿ ನಿರ್ಮಾಣವಾಗುತ್ತಿದೆ. ಅವೈಜ್ಞಾನಿಕವಾಗಿ ಕಾಮಗಾರಿ ನಡೆಯುತ್ತಿದ್ದರೂ ಸೂಕ್ತ ತಿಳುವಳಿಕೆ ನೀಡಬೇಕಾದ ಜನಪ್ರತಿನಿಧಿಗಳು, ಪೊಲೀಸ್ ಇಲಾಖೆ ಕಣ್ಮುಚ್ಚಿ ಕುಳಿತಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಪ್ರಯಾಣಿಕರಿಗೆ ಅಪಾಯ

ಪ್ರಯಾಣಿಕರ ತಂಗುದಾಣ ಸಾರ್ವಜನಿಕರಿಗೆ ಸುರಕ್ಷತೆ ವಹಿಸುವ ಬದಲಾಗಿ, ಆಪತ್ತು ತರುವ ಆತಂಕಕ್ಕೆ ಕಾರಣವಾಗಿದೆ. ಸಾಣೂರು ಗ್ರಾಮ ಪಂಚಾಯತ್ ಬಳಿ ಪ್ರಯಾಣಿಕರು ಕೂರಲು, ನಿಲ್ಲಲು ಸ್ಥಳವಕಾಶವಾಗುವಂತೆ ನಿಲ್ದಾಣ ನಿರ್ಮಾಣ ಮಾಡಬೇಕು. ಆದರೆ ರಸ್ತೆಗೆ ಹೊಂದಿಕೊಂಡಂತೆ ಅವೈಜ್ಞಾನಿಕವಾಗಿ ನಿರ್ಮಾಣ ಮಾಡಲಾಗುತ್ತಿದೆ. ರಸ್ತೆಯಲ್ಲಿ ನಿಲ್ದಾಣ ನಿರ್ಮಾಣ ಮಾಡಿದರೆ ಪ್ರಯಾಣಿಕರು ಎಲ್ಲಿ ನಿಲ್ಲಬೇಕು. ರಾಷ್ಟ್ರೀಯ ಹೆದ್ದಾರಿಯಾದ ಕಾರಣ ವಾಹನಗಳು ವೇಗವಾಗಿ ಚಲಿಸುತ್ತವೆ, ಆಯತಪ್ಪಿದರು ಪ್ರಯಾಣಿಕರು ಅಪಾಯಕ್ಕೆ ತುತ್ತಾಗುವ ಆತಂಕವನ್ನ ಸಾರ್ವಜನಿಕರು ವ್ಯಕ್ತಪಡಿಸಿದ್ದಾರೆ.



ಕಳಪೆ ಕಾಮಗಾರಿ

ಬಸ್ ತಂಗುದಾಣದ ತೀರಾ ಅವೈಜ್ಞಾನಿಕವಾಗಿ ಕಳಪೆ ಗುಣಮಟ್ಟದ ಕಾಮಗಾರಿ ಕಳೆದ ನಡೆಯುತ್ತಿದೆ. ಈ ಬಗ್ಗೆ ಹೆದ್ದಾರಿ ಗುತ್ತಿಗೆದಾರರಿಗೆ ಮತ್ತು ಜನಪ್ರತಿನಿಧಿಗೆ ತಿಳಿಸಿದರೂ ಪ್ರಯೋಜನವಾಗಿಲ್ಲ ಎಂದು ಸ್ಥಳೀಯರು ತಿಳಿಸಿದ್ದಾರೆ.

ಸ್ಥಗಿತವಾಗಿದ್ದ ಕಾಮಗಾರಿ

ಪ್ರಯಾಣಿಕರು ಪಡುತ್ತಿರುವ ಸಂಕಷ್ಟವನ್ನು ನೋಡಿ 1 ವರ್ಷದ ಹಿಂದೆ ಸಾಣೂರಿನ ರಿಕ್ಷಾ ಮಾಲಕರು ಮತ್ತು ಚಾಲಕರು ಸೇರಿ ಕಲ್ಲು, ಮರ ಮತ್ತು ಶೇಡ್ ನೆಟ್ ಗಳನ್ನು ಬಳಸಿ ತಾತ್ಕಾಲಿಕ ತಂಗುದಾಣವನ್ನು ನಿರ್ಮಿಸಿದರು. ಹೆದ್ದಾರಿ ಪ್ರಾಧಿಕಾರದವರೂ ಬಸ್ಸು ನಿಲ್ದಾಣ ಕಟ್ಟಡಕ್ಕೆ ಎಂದು 10 ಅಡಿ ಆಳದ ಗುಂಡಿ ತೆಗೆದು ಸುಮಾರು ಒಂದು ತಿಂಗಳುಗಳ ಕಾಲ ಯಾವುದೇ ಕಾಮಗಾರಿ ನಡೆಸದೆ ತೆರೆದೇ ಇಟ್ಟಿದ್ದರು. ಸಾರ್ವಜನಿಕರ ಒತ್ತಡಕ್ಕೆ ಮಣಿದು ಕೊನೆಗೂ ಗುಂಡಿಯ ಅಡಿಭಾಗದಿಂದ ಕಾಂಕ್ರೀಟ್ ಬ್ಲಾಕ್ ಗಳನ್ನು ಕಟ್ಟಿಕೊಂಡು ಬಂದು ಮೇಲ್ಭಾಗಕ್ಕೆ ಮಣ್ಣು ಮುಚ್ಚಿ ಅವೈಜ್ಞಾನಿಕವಾಗಿ ಅಡಿಪಾಯದ ನಿರ್ಮಾಣ ಮಾಡಿದ್ದರು. ಆ ಬಳಿಕ ಕಳೆದ 2 ತಿಂಗಳುಗಳಲ್ಲಿ ನೆನೆಗುದಿಗೆ ಬಿದ್ದ ಕಾಮಗಾರಿಗೆ ಇದೀಗ ಚಾಲನೆ ದೊರೆತಿದೆ.

ಅವೈಜ್ಞಾನಿಕ ರಚನೆ

ಸಾಣೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ನಡೆಯುವ ವೇಳೆ ಸಾಣೂರು ಯುವಕ ಮಂಡಲವು ನಿರ್ಮಿಸಿದ ಹಾಗೂ ದಾನಿಗಳು ಕೊಡುಗೆ ನೀಡಿದ 6 ಹಳೆ ಬಸ್ ತಂಗುದಾಣಗಳನ್ನು ಕೆಡವಿ ಹಾಕಿದ್ದರು. ಕಳೆದ 5 ವರ್ಷಗಳಿಂದ ಸಾಣೂರಿನ ಗ್ರಾಮಸ್ಥರು ಬಸ್ಸು ತಂಗುದಾಣವಿಲ್ಲ, ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ನಿರ್ಮಿಸುತ್ತಿರುವ ತಂಗುದಾಣಗಳು ಅವೈಜ್ಞಾನಿಕವಾಗಿವೆ. ಪ್ರಯಾಣಿಕರ ಹಿತದೃಷ್ಟಿಯಿಂದ ಅವುಗಳನ್ನು ತೆರವುಗೊಳಿಸಿ ಗ್ರಾಮಸ್ಥರಿಗೆ ಅನುಕೂಲವಾಗುವ ಸ್ಥಳದಲ್ಲಿ ನಿರ್ಮಾಣ ಮಾಡಬೇಕು.

● ಪ್ರವೀಣ್ ಶೆಟ್ಟಿ ಸಾಣೂರು ಮಾಜಿ ಅಧ್ಯಕ್ಷರು, ಯುವಕ ಮಂಡಲ, ಸಾಣೂರು

ಕುಂದಾಪುರ ದ್ರಾವಿಡ ಬ್ರಾಹ್ಮಣ ಪರಿಷತ್ತಿನ ಮಹಾಸಭೆ, ವಾರ್ಷಿಕ ಅಧಿವೇಶನ

ವಿಪ್ರ ಸಂಘಟನೆ ಬಲಗೊಳ್ಳಲಿ: ಶ್ರೀರಮಣ

ಕುಂದಾಪುರ: ಬ್ರಾಹ್ಮಣ ಸಂಘಟನೆ ಬಲಗೊಳ್ಳಬೇಕು ಎಂಬುದು ಎಲ್ಲರ ಅಪೇಕ್ಷೆ. ಇಂದು ಬ್ರಾಹ್ಮಣರಿಗೆ ಸರಿಯಾದ ನಾಯಕತ್ವವಿಲ್ಲ, ಮಠಗಳು, ಸ್ವಾಮಿಗಳು ಈ ದಿಸೆಯಲ್ಲಿ ಮಾರ್ಗದರ್ಶನ ಮಾಡಬೇಕು. ಆದರೆ, ಅಲ್ಲಿಯೂ ರಾಜಕೀಯ ಹಿತಾಸಕ್ತಿಗಳೇ ಮೇಲುಗೈ ಸಾಧಿಸಿ ವಿಪ್ರ ಬಲವರ್ಧನೆಗೆ ಹಿನ್ನಡೆಯಾಗುತ್ತಿದೆ. ವಿಪ್ರ ಸಂಘಟನೆಗಳು ಈ ಬಗ್ಗೆ ವಿಮರ್ಶೆ ಮಾಡಬೇಕಾಗಿದೆ ಎಂದು ಕುಂಭಾಸಿ ಆನೆಗುಡ್ಡೆ ಶ್ರೀ ವಿನಾಯಕ ದೇವಳದ ಆನುವಂಶಿಕ ಆಡಳಿತ ಧರ್ಮದರ್ಶಿ ಶ್ರೀರಮಣ ಉಪಾಧ್ಯಾಯ ಹೇಳಿದರು.

ಹಂಗಳೂರಿನ ಶ್ರೀ ಕೃಷ್ಣ ಸಭಾ ಭವನದಲ್ಲಿ ನಡೆದ ಕುಂದಾಪುರ ತಾಲೂಕು ದ್ರಾವಿಡ ಬ್ರಾಹ್ಮಣ ಪರಿಷತ್ತಿನ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ ಮತ್ತು 31ನೇ ವಾರ್ಷಿಕ ಅಧಿವೇಶನವನ್ನು ಉದ್ಘಾಟಿಸಿ, ಪರಿಷತ್ ಮುಖವಾಣಿ 108ನೇ ವಿಪ್ರವಾಣಿ ಸಂಚಿಕೆಯನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ವಿಪ್ರವಾಣಿ ಬಿಡುಗಡೆ

ತಾಲೂಕು ಪರಿಷತ್ ಅಧ್ಯಕ್ಷ ಕೃಷ್ಣಾನಂದ ಚಾತ್ರ ಸಭಾಧ್ಯಕ್ಷತೆ ವಹಿಸಿದ್ದರು. ವಿಪ್ರವಾಣಿಯ ಪ್ರಧಾನ ಸಂಪಾದಕ ಪ್ರೊ. ಶಂಕರ್ ರಾವ್ ಕಾಳಾವರ ಸಂಚಿಕೆಯ ಬಗ್ಗೆ ಮಾಹಿತಿ ನೀಡಿದರು. ಪಡುವರಿಯ ಶಾಂತಾ ಬಾಯಿ ಸ್ಮರಣಾರ್ಥ ಯತಿರಾಜ್ 108 ನೇ ಈ ಸಂಚಿಕೆಯನ್ನು ಪ್ರಾಯೋಜಿಸಿದ್ದು, ಅವರಿಗೆ ಕೃತಜ್ಞತೆ ಸಲ್ಲಿಸಲಾಯಿತು.



ಸಾಧಕರಿಗೆ ಗೌರವಾರ್ಪಣೆ

ಸಂಗೀತ ಕ್ಷೇತ್ರದಲ್ಲಿ ವಿಶೇಷ ಸಾಧನೆಗೈದ ಯುಕ್ತಾ ಹೊಳ್ಳ ಮತ್ತು ವಿವಿಧ ವಲಯಗಳ ವಿಪ್ರ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಂಘಟನೆಗೆ ಕರೆ

ಮುಖ್ಯ ಅತಿಥಿ ಉಡುಪಿ ಜಿಲ್ಲಾ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಸಂದೀಪ್ ಕುಮಾರ್ ಮಂಜ ಅವರು ವಿಪ್ರ ಸಂಘಟನೆಯ ಬಗ್ಗೆ ಕರೆ ನೀಡಿದರು. ಗೌರವಾಧ್ಯಕ್ಷ ಶುಭಚಂದ್ರ ಹತ್ವಾರ್, ಉಪಾಧ್ಯಕ್ಷರಾದ ಗಣೇಶ್ ಮಯ್ಯ, ಪವಿತ್ರ ಅಡಿಗ, ಮಹಿಳಾ ವೇದಿಕೆ ಅಧ್ಯಕ್ಷೆ ಭಾರ್ಗವಿ ಭಟ್, ಯುವ ವಿಪ್ರ ವೇದಿಕೆ ಅಧ್ಯಕ್ಷ ಕೇಶವ ಅಡಿಗ ಮಕ್ಕಿಮನೆ ಶುಭ ಕೋರಿದರು.

ಹಳ್ಳಿ ಶ್ರೀನಿವಾಸ ಭಟ್ ವೇದ ಘೋಷ ಮಾಡಿದರೆ, ಜಯಲಕ್ಷ್ಮೀ ಕಾರಂತ ಮತ್ತು ರಾಧಾ ಕಾರಂತ ಪ್ರಾರ್ಥಿಸಿದರು. ಪ್ರಧಾನ ಕಾರ್ಯದರ್ಶಿ ವಾದಿರಾಜ ಹೆಬ್ಬಾರ್ ಸ್ವಾಗತಿಸಿ ವಾರ್ಷಿಕ ವರದಿ ಓದಿದರು. ಕೋಶಾಧಿಕಾರಿ ಶ್ರೀಕಾಂತ ಕನ್ನಂತ ವಾರ್ಷಿಕ ಲೆಕ್ಕಪತ್ರ ಮಂಡಿಸಿದರು. ಕೆ. ಜಿ. ವೈದ್ಯ ಕಾರ್ಯಕ್ರಮ ನಿರೂಪಿಸಿ, ಜಿಲ್ಲಾ ಪರಿಷತ್‌ನ ಗಣೇಶ್ ರಾವ್ ಕುಂಭಾಸಿ ವಂದಿಸಿದರು.

ಸೌತ್ ಕೆನರಾ ಫೋಟೋಗ್ರಾಫರ್ಸ್ ಅಸೋಸಿಯೇಷನ್ 'ಛಾಯಾ ಟ್ರೋಫಿ'

ಮೂಡುಬಿದಿರೆ ಪ್ರಥಮ, ಕಾರ್ಕಳ ದ್ವಿತೀಯ

ಕಾರ್ಕಳ: ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸೌತ್ ಕೆನರಾ ಫೋಟೋಗ್ರಾಫರ್ಸ್ ಅಸೋಸಿಯೇಷನ್ ದಕ್ಷಿಣ ಕನ್ನಡ ಉಡುಪಿ ಜಿಲ್ಲೆಯ ಕಾರ್ಕಳ ವಲಯದ ವತಿಯಿಂದ, ಅವಿಭಜಿತ ಜಿಲ್ಲೆಯ 14 ವಲಯಗಳಿಗಾಗಿ ಛಾಯಾ ಟ್ರೋಫಿ 2026 ರನ್ನು ಕಾರ್ಕಳದ ಗಾಂಧೀ ಮೈದಾನದಲ್ಲಿ ನೆರವೇರಿಸಲಾಯಿತು.

ಈ ಜಿಲ್ಲಾ ಮಟ್ಟದ ಕ್ರೀಡಾ ಕೂಟದಲ್ಲಿ ಜಿಲ್ಲೆಯ ಸುಮಾರು 12 ವಲಯಗಳ ತಂಡ ಭಾಗಿಯಾಗಿದ್ದು ಕ್ರಿಕೆಟ್ ಮತ್ತು ಹಗ್ಗಜಗ್ಗಾಟಕ್ಕೆ ವಿಜೇತ ತಂಡಗಳಿಗೆ ಆಕರ್ಷಕ ಟ್ರೋಫಿ ಮತ್ತು ನಗದು ಬಹುಮಾನವನ್ನು ನೀಡಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಉದಯ ಕೃಷ್ಣಯ್ಯ ಶೆಟ್ಟಿ ಚಾರಿಟೇಬಲ್ ಅಧ್ಯಕ್ಷ ಉದಯ್ ಕುಮಾರ್ ಶೆಟ್ಟಿ ಮುನಿಯಾಲು, ಜಿಲ್ಲಾ ಮಟ್ಟದ ಈ ಸ್ಪರ್ಧೆಯು ಛಾಯಾಚಿತ್ರಗ್ರಾಹಕರ ಮಾನಸಿಕ ಹಾಗೂ ದೈಹಿಕ ಬೆಳವಣಿಗೆ ಒಂದು ಉತ್ತಮ ವೇದಿಕೆಯಾಗಿದೆ ಅಲ್ಲದೇ ಉಭಯ ಜಿಲ್ಲೆಯ ಸಂಘಟನೆ ಜಿಲ್ಲೆ ಎರಡಾದರೂ ಸಂಘಟನೆಯು ಒಂದೇ ಆಗಿರುವುದು ಶ್ಲಾಘನೀಯ ಎಂದರು.

ವೇದಿಕೆಯಲ್ಲಿ ಅಧ್ಯಕ್ಷತೆಯನ್ನು ಎಸ್. ಕೆ. ಕಾರ್ಕಳ ವಲಯ ಅಧ್ಯಕ್ಷ ಪಿ. ಎ ಪ್ರಮೋದ್ ಚಂದ್ರ ಪೈ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ, ದ. ಕ ಮತ್ತು ಉಡುಪಿ ಜಿಲ್ಲೆ ಎಸ್‌ಕೆಪಿಎ ಜಿಲ್ಲಾಧ್ಯಕ್ಷ ನವೀನ್ ರೈ ಪಂಜಳ, ಮಿಯಾರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ತಾರಾನಾಥ್ ಕೋಟ್ಯಾನ್ ಸೂರಾಲು, ಯುವ ವಾಹಿನಿ ಕಾರ್ಕಳ ಘಟಕ ಅಧ್ಯಕ್ಷ ಪ್ರಕಾಶ್ ಪೂಜಾರಿ ಕೆರ್ವಾಸೆ, ದ.ಕ. ಮತ್ತು ಉಡುಪಿ ಜಿಲ್ಲೆ ಎಸ್‌ಕೆಪಿಎ ಪ್ರಧಾನ ಕಾರ್ಯದರ್ಶಿ ಅಜಯ್ ಮಂಗಳೂರು, ದತ್ತಾತ್ರೇಯ ಜಿಲ್ಲಾ ಉಪಾಧ್ಯಕ್ಷರು ಎಸ್.ಕೆ.ಪಿ.ಎ. ದ.ಕ. ಮತ್ತು ಉಡುಪಿ ಜಿಲ್ಲೆ ಹರೀಶ್ ಕುಂದರ್ ಜಿಲ್ಲಾ ಕ್ರೀಡಾ ಕಾರ್ಯದರ್ಶಿ ಎಸ್. ಕೆ. ಪಿ.ಎದ. ದ.ಕ. ಉಡುಪಿ ಜಿಲ್ಲೆ ವೃಷಭ ರಾಜ್ ಕಡಂಬ ಕೀರ್ತಿಡಿ ಗುತ್ತು ಕುಕ್ಕುಂದೂರು, ಸಂತೋಷ್ ಜೈನ್ ರೆಂಜಾಳ, ಸುಶೀಲ್ ಕುಮಾರ್ ಟಿ ವಿ ಗೌರವಾಧ್ಯಕ್ಷರು, ಶೇಖರ್ ಕುಕ್ಕುಜೆ ಪ್ರಧಾನ ಕಾರ್ಯದರ್ಶಿ ಎಸ್. ಕೆ. ಪಿ.ಎ. ಕಾರ್ಕಳ ವಲಯ, ವಿ. ಆರ್ ಸತೀಶ್ ಆಚಾರ್ಯ ಕೋಶಾಧಿಕಾರಿ, ಸುಶಾಂತ್ ಕಿಯಾರ ಕ್ರೀಡಾ ಕಾರ್ಯದರ್ಶಿ ಮತ್ತು ಆಶ್ವತ್ ದೇವಾಡಿಗ ಜೊತೆ ಕ್ರೀಡಾ ಕಾರ್ಯದರ್ಶಿ ಉಪಸ್ಥಿತರಿದ್ದರು.



ಹಿರಿಯರ ಕ್ರಿಕೆಟ್

ವಲಯದ ಹಿರಿಯ ಸದಸ್ಯರ ಕ್ರಿಕೆಟ್ ಪ್ರದರ್ಶನ ಪಂದ್ಯಾಟದಲ್ಲಿ ದತ್ತಾತ್ರೇಯ ಹಿರಿಯಂಗಡಿ ಇವರ ತಂಡವು ಪ್ರಥಮ ಸ್ಥಾನ ಪಡೆದು ಪ್ರಸಾದ್ ಐಸಿರ ಇವರ ತಂಡವು ದ್ವಿತೀಯ ಸ್ಥಾನ ಪಡೆಯಿತು.

ಕ್ರಿಕೆಟ್‌ನಲ್ಲಿ ಪ್ರಥಮ ಸ್ಥಾನವನ್ನು ಮೂಡುಬಿದಿರೆ ತಂಡವು ತನ್ನದಾಗಿಸಿಕೊಂಡು ಕಾರ್ಕಳ ವಲಯವು ದ್ವಿತೀಯ ಸ್ಥಾನವನ್ನು ಪಡೆಯಿತು. ಅಲ್ಲದೆ ಹಗ್ಗಜಗ್ಗಾಟದಲ್ಲಿ ಬಂಟ್ವಾಳ ವಲಯವು ಪ್ರಥಮ ಸ್ಥಾನ ಪಡೆದು ಕಾರ್ಕಳ ವಲಯವು ದ್ವಿತೀಯ ಪ್ರಶಸ್ತಿ ಬಾಚಿಕೊಂಡಿತು.

ಬಂಟಕಲ್ ಕಾಲೇಜು ವಿದ್ಯಾರ್ಥಿಗಳಿಗೆ ಇನ್‌ಕ್ರೀಡಿಯಾ-26 ಚಾಂಪಿಯನ್‌ಶಿಪ್



ಉಡುಪಿ: ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾ ವಿದ್ಯಾಲಯದ ವಿದ್ಯಾರ್ಥಿಗಳಿಗೆ ನಿಟ್ಟೆ ಎನ್‌ಎಂಎಎಂ ಐಟಿಯಲ್ಲಿ ನಡೆದ 'ಇನ್‌ಕ್ರೀಡಿಯಾ-26' ನಲ್ಲಿ ಚಾಂಪಿಯನ್ ಶಿಪ್ ಅನ್ನು ಪಡೆದಿದೆ.

ಆರ್ಟಿಫೀಶಿಯಲ್ ಇಂಟೆಲಿಜೆನ್ಸ್ ಮತ್ತು ಡಾಟಾ ಸೈನ್ಸ್ ವಿಭಾಗದ ವಿದ್ಯಾರ್ಥಿಗಳಾದ ರಿಸ್ಟನ್, ಧೃತಿ, ತನುಷಾ ಮತ್ತು ಸೃಜನ್ ಇವರು ಲೈನ್ ಫಾಲೋವರ್ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗಳಿಸಿದ್ದಾರೆ.

ಆರ್ಟಿಫೀಶಿಯಲ್ ಇಂಟೆಲಿಜೆನ್ಸ್ ಮತ್ತು ಡಾಟಾ ಸೈನ್ಸ್ ವಿಭಾಗದ ವಿದ್ಯಾರ್ಥಿಗಳಾದ ಧೃತಿ ಕರ್ಕೇರ, ತನುಷಾ ಆರ್. ಮೆಸ್ತಾ, ರಿಸ್ಟನ್ ಕ್ರಾಸ್ತಾ, ಸಾನ್ವಿ ಶೆಟ್ಟಿಗಾರ್, ಶ್ರಾವಣಿ, ಸೃಜನ್ ಎಸ್, ಸಾಧ್ವಿ ಎಸ್. ಭಟ್, ಪ್ರಾರ್ಥನಾ ಹೆಬ್ಬಾರ್ ಮತ್ತು ಅಮಿತ್ ರಾಜ್, ಆರ್ಟಿಫೀಶಿಯಲ್ ಇಂಟೆಲಿಜೆನ್ಸ್ ಮತ್ತು ಮೆಷಿನ್ ಲರ್ನಿಂಗ್ ವಿಭಾಗದ ವಿಹಾನ್ ಮತ್ತು ಸುಸ್ಮಿತಾ ಹರಿದಾಸ್, ಗಣಕ ಯಂತ್ರ ವಿಭಾಗದ ದೃಶ್ಯ ಕೆ ಶೆಟ್ಟಿ ಹರ್ಷ ಎಸ್. ರಾವ್, ರಿಜೇಶ್ ಎಸ್., ನೇಹಾ ಕುಂದರ್ ಮತ್ತು ಶ್ರೀಹರಿ ಹಾಗೂ ವಿದ್ಯುನ್ಮಾನ ಮತ್ತು ಸಂವಹನ ವಿಭಾಗದ ವಿದ್ಯಾರ್ಥಿಗಳಾದ ಪ್ರಜ್ನಾ ವಿ. ಪೂಜಾರಿ ಮತ್ತು ಸಿಂಚನಾ ಇವರು ಫ್ಯಾಷನ್ ಶೋ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗಳಿಸಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ, ಸೋದೆ ಶಿಕ್ಷಣ ಸಮೂಹ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಸಂಸ್ಥೆಯ ಪ್ರಾಂಶುಪಾಲರು ಹರ್ಷ ವ್ಯಕ್ತಪಡಿಸಿದ್ದಾರೆ.

ಕುಂದಾಪುರದಲ್ಲಿ ಉಡುಪಿ ವಲಯ ಅಂತರ್ ಕಾಲೇಜು ಪುರುಷರ ಕಬಡ್ಡಿ



ಕುಂದಾಪುರ: ಕ್ರೀಡೆ ಜೀವನದಲ್ಲಿ ಶಿಸ್ತು ಮತ್ತು ಸಂಯಮವನ್ನು ಬೆಳೆಸುತ್ತದೆ. ಕ್ರೀಡೆಯಿಂದ ಶಾರೀರಿಕ ಸದೃಢತೆ, ದೈಹಿಕ ಹಾಗೂ ಮಾನಸಿಕ ಸ್ಥೈರ್ಯ ಬೆಳೆಯುತ್ತದೆ. ವಿದ್ಯಾರ್ಥಿಗಳು ಕ್ರೀಡೆಯಲ್ಲಿ ವಿದ್ಯಾರ್ಥಿಗಳು ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು ಎಂದು ಉದ್ಯಮಿ ಚಂದ್ರೇಶ್ ಶೆಟ್ಟಿ ಹೇಳಿದರು.

ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಅಂತರ್ ಕಾಲೇಜು ಪುರುಷರ ಕಬಡ್ಡಿ ಪಂದ್ಯಾಟ (ಉಡುಪಿ ವಲಯ)ವನ್ನು ಮಂಗಳವಾರ ಉದ್ಘಾಟಿಸಿ ಅವರು ಮಾತನಾಡಿದರು.

ಅಧ್ಯಕ್ಷತೆಯನ್ನು ಭಂಡಾರ್ಕಾರ್ಸ್ ಪದವಿ ಕಾಲೇಜಿನ ಪ್ರಾಂಶುಪಾಲ ಡಾ.ಶುಭಕರಾಚಾರಿ ವಹಿಸಿದ್ದರು. ಮಂಗಳೂರು ವಿಶ್ವವಿದ್ಯಾನಿಲಯದ ದೈಹಿಕ ನಿರ್ದೇಶಕ ಜೆರಾಲ್ಡ್ ಸಂತೋಷ್ ಡಿಸೋಜಾ, ಬೆಂಗಳೂರಿನ ಲೆಕ್ಕಪರಿಶೋಧಕ ರಾಘವೇಂದ್ರ ಶೆಟ್ಟಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹರೀಶ್ ಕುಮಾರ್ ಶೆಟ್ಟಿ ಶುಭ ಹಾರೈಸಿದರು.

ಮಂಗಳೂರು ವಿಶ್ವವಿದ್ಯಾನಿಲಯದಿಂದ ವೀಕ್ಷಕರಾಗಿ ಆಗಮಿಸಿದ ಡಾ.ಮನೋಜ್ ಕುಮಾರ್, ಭಂಡಾರ್ಕಾರ್ಸ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಡಾ.ಜಿ.ಎಂ.ಗೊಂಡ, ಕಾಲೇಜಿನ ಆಂತರಿಕ ಗುಣಮಟ್ಟ ಮತ್ತು ಭರವಸೆ ಕೋಶದ ಸಂಯೋಜಕ ಪ್ರೊ. ಸತ್ಯನಾರಾಯಣ ಉಪಸ್ಥಿತರಿದ್ದರು. ದೈಹಿಕ ಶಿಕ್ಷಣ ನಿರ್ದೇಶಕ ಪ್ರೊ.ಶಂಕರನಾರಾಯಣ ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ರಾಜ್ಯಶಾಸ್ತ್ರ ಉಪನ್ಯಾಸಕಿ ಪ್ರೊ.ಅಕ್ಷತಾ ಕಾರ್ಯಕ್ರಮ ನಿರೂಪಿಸಿದರು. ದೈಹಿಕ ಶಿಕ್ಷಣ ನಿರ್ದೇಶಕಿ ವನಿತಾ ವಂದಿಸಿದರು.

ಗುರುಕುಲ ಪದವಿ ಪೂರ್ವ ಕಾಲೇಜಿನಲ್ಲಿ 'ಮಧುರಂ ಸ್ಮರಣಂ'



ಕುಂದಾಪುರ: ವಿದ್ಯಾರ್ಥಿಗಳು ಆದರ್ಶ ವ್ಯಕ್ತಿತ್ವವನ್ನು ರೂಪಿಸಿಕೊಂಡು ಒಳ್ಳೆಯ ಚಿಂತನೆಗಳತ್ತ ಮುಖ ಮಾಡಬೇಕು. ಶಿಕ್ಷಣವನ್ನು ಪಡೆಯುವ ಸಂದರ್ಭದಲ್ಲಿ ಸೋಲುಗಳನ್ನು ಮೆಟ್ಟಿ ಗೆಲುವಿನ ಕಡೆಗೆ ಸಾಗಬೇಕು. ಸಾಧಕ ವಿದ್ಯಾರ್ಥಿಗಳೇ ಸಮಾಜಕ್ಕೆ ದೊಡ್ಡ ಆಸ್ತಿಯಾಗಬೇಕು ಎಂದು ಬಾಂಡ್ಯ ಎಜುಕೇಶನಲ್ ಟ್ರಸ್ಟ್‌ನ ಜಂಟಿ ಕಾರ್ಯನಿರ್ವಾಹಕಿ ಅನುಪಮಾ ಎಸ್. ಶೆಟ್ಟಿ ಹೇಳಿದರು.

ವಕ್ವಾಡಿಯ ಗುರುಕುಲ ಪದವಿ ಪೂರ್ವ ಕಾಲೇಜಿನಲ್ಲಿ ದ್ವಿತೀಯ ವರ್ಷದ ವಿದ್ಯಾರ್ಥಿಗಳ ಮುಂದಿನ ಶೈಕ್ಷಣಿಕ ಜೀವನಕ್ಕೆ ಅನುಗುಣವಾಗಿ 'ಮಧುರಂ ಸ್ಮರಣಂ' ಎಂಬ ವಿನೂತನ ಕಾರ್ಯಕ್ರಮವನ್ನು ಮಂಗಳವಾರ ಉದ್ಘಾಟಿಸಿ ಅವರು ಮಾತನಾಡಿದರು.

ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳು ತಮ್ಮ ಎರಡು ವರ್ಷದ ಶೈಕ್ಷಣಿಕ ಅನುಭವವನ್ನು ಬಿಚ್ಚಿಟ್ಟರು. ವಿದ್ಯಾರ್ಥಿಗಳು ಸುಮಾರು ಇಪ್ಪತ್ತು ಸಾವಿರ ಮೊತ್ತದ ಕ್ರೀಡೋಪಕರಣಗಳನ್ನು ಸಂಸ್ಥೆಗೆ ಕೊಡುಗೆಯಾಗಿ ನೀಡಿದರು.

ಬಹುಮಾನ ವಿತರಣೆ

ಇಡೀ ಶೈಕ್ಷಣಿಕ ಅವಧಿಯಲ್ಲಿ ವಿವಿಧ ವಿಭಾಗಗಳಲ್ಲಿ ಸಾಧಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿ ಅಭಿನಂದಿಸಲಾಯಿತು.

ಪ್ರಜನ್ಯ ಸ್ವಾಗತಿಸಿದರು. ಪ್ರಾಂಶುಪಾಲೆ ಡಾ. ರೂಪಾ ಶೆಣೈ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿದ್ಯಾರ್ಥಿನಿ ವಿನಿಕ ವಿಜೇತರ ಪಟ್ಟಿಯನ್ನು ವಾಚಿಸಿದರು. ವಿದ್ಯಾರ್ಥಿ ಪೌರವ್ ನಿರೂಪಿಸಿ, ನಿತ್ಯ ವಂದಿಸಿದರು.

ಕುಂದಾಪುರ ವ್ಯಾಸರಾಜ ಮಠಕ್ಕೆ ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ಭೇಟಿ

ಗಾಣಿಗ ಸಮುದಾಯ ಅಭಿವೃದ್ಧಿಗೆ ಶ್ರಮ ಅಗತ್ಯ

ಕುಂದಾಪುರ: ಗಾಣಿಗ ಸಮುದಾಯ ಸಂಘಟನೆ ಮೂಲಕ ಬಲಗೊಳ್ಳಬೇಕಿದೆ. ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಗಾಣಿಗ ಸಮುದಾಯ ಗುರುತಿಸಿಕೊಳ್ಳುವುದರ ಮೂಲಕ ರಾಜಕೀಯವಾಗಿ ಬೆಳೆದು ತನ್ನ ಸಮುದಾಯದ ಅಭಿವೃದ್ಧಿಗೆ ಶ್ರಮಿಸಬೇಕು. ರಾಜ್ಯ ಸರಕಾರ ಗಾಣಿಗ ಸಮುದಾಯದ ಅಭಿವೃದ್ಧಿಗಾಗಿ ಗಾಣಿಗರ ಅಭಿವೃದ್ಧಿ ನಿಗಮ ಸ್ಥಾಪಿಸಿದೆ ಎಂದು ಮಾಜಿ ಸಭಾಪತಿ ವಿ. ಆರ್. ಸುದರ್ಶನ್ ಹೇಳಿದರು.



ಅವರು ಮಂಗಳವಾರ ಗಾಣಿಗ ಸಮುದಾಯದ ಗುರು ಮಠವಾದ ಕುಂದಾಪುರ ವ್ಯಾಸರಾಜ ಮಠಕ್ಕೆ ಭೇಟಿ ನೀಡಿ, ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ವಿಧಾನ ಪರಿಷತ್ ಮಾಜಿ ಸದಸ್ಯ ನಾರಾಯಣ ಸ್ವಾಮಿ, ಮಾಜಿ ಸಂಸದ ಕೆ.ಜಯಪ್ರಕಾಶ್ ಹೆಗ್ಡೆ ಮಾಜಿ ಶಾಸಕ ಕೆ.ಗೋಪಾಲ ಪೂಜಾರಿ, ಉಡುಪಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಶೋಕ್ ಕೊಡವೂರು, ಮುಖಂಡರಾದ ದಿನೇಶ್ ಹೆಗ್ಡೆ ಮೊಳಹಳ್ಳಿ, ಕಿಶನ್ ಹೆಗ್ಡೆ ಶಂಕರ್ ಕುಂದರ್, ಭುಜಂಗ ಗುರಿಕಾರ್, ಕುಂದಾಪುರ ತಾಲೂಕು ಗಾಣಿಗ ಸೇವಾ ಸಂಘದ ಅಧ್ಯಕ್ಷ ಸತೀಶ್ ಗಾಣಿಗ, ಮಾಜಿ ಅಧ್ಯಕ್ಷ ರಮೇಶ್ ಗಾಣಿಗ ಕೊಲ್ಲೂರು, ಕಾರ್ಯದರ್ಶಿ ರಾಘವೇಂದ್ರ ಗಾಣಿಗ ಆನಗಳ್ಳಿ, ಕೋಶಾಧಿಕಾರಿ ಎಚ್.ಎಸ್. ಗಾಣಿಗ, ಮಾಜಿ ಉಪಾಧ್ಯಕ್ಷ ನಾರಾಯಣ ಗಾಣಿಗ, ಕಾರ್ಯಕಾರಿ ಸಮಿತಿಯ ಸದಸ್ಯ ಗುರುರಾಜ್

ವಂಡ್ಸೆ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾರ್ಯಾಗಾರ

ಎಸ್‌ಡಿಎಂಸಿಯವರಿಗೆ, ಮುಖ್ಯಶಿಕ್ಷಕರಿಗೆ ತರಬೇತಿ

ಕುಂದಾಪುರ: ವಂಡ್ಸೆ ಕ್ಲಸ್ಟರ್ ಮಟ್ಟದ ಎಸ್.ಡಿ.ಎಂ.ಸಿ ಅಧ್ಯಕ್ಷರು, ಸದಸ್ಯರು ಹಾಗೂ ಮುಖ್ಯ ಶಿಕ್ಷಕರ ತರಬೇತಿ ಕಾರ್ಯಾಗಾರ ವಂಡ್ಸೆ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆಯಿತು.

ಶಾಲಾ ಮುಖ್ಯ ಶಿಕ್ಷಕ ಶಂಕರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪಿಎಂಶ್ರೀ ಚಿತ್ತೂರು ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ರಾಜೇಶ್ ಬಾಯರಿ ಕಾರ್ಯಕ್ರಮ ಉದ್ಘಾಟಿಸಿ ನೀಡಿದರು. ಮೂಕಾಂಬಿಕಾ ಚಾರಿಟೇಬಲ್ ಟ್ರಸ್ಟ್ ಕಾರ್ಯದರ್ಶಿ ಉದಯ್ ಕುಮಾರ್ ಶೆಟ್ಟಿ ಎಸ್.ಡಿ.ಎಂ.ಸಿ ಸಮನ್ವಯ ವೇದಿಕೆಯ ಜಿಲ್ಲಾಧ್ಯಕ್ಷ ಅಬ್ದುಲ್ ಸಲಾಂ ಚಿತ್ತೂರು ಶುಭ ಹಾರೈಸಿದರು.



ವಂಡ್ಸೆ ಶಾಲೆ ಎಸ್‌ಡಿಎಂಸಿ ಉಪಾಧ್ಯಕ್ಷ ನಾಗೇಂದ್ರ ಉಡುಪ, ಎಸ್‌ಡಿಎಂಸಿ ಸದಸ್ಯ ಸತೀಶ್, ಸರಕಾರಿ ನೌಕರ ಸಂಘದ ಸದಸ್ಯ ಪ್ರತಾಪ್ ಕುಮಾರ್ ಶೆಟ್ಟಿ, ಪ್ರೌಢಶಾಲಾ ಸಹಶಿಕ್ಷಕರ ಸಂಘ ಬೈಂದೂರು ವಲಯದ ಸದಸ್ಯ ಸದಾನಂದ ಶೆಟ್ಟಿ ಉಪಸ್ಥಿತರಿದ್ದರು. ವಂಡ್ಸೆಯ ಸಮೂಹ ಸಂಪನ್ಮೂಲ ವ್ಯಕ್ತಿ ಎಂ. ನಾಗರಾಜ್ ಶೆಟ್ಟಿ ಸ್ವಾಗತಿಸಿದರು. ಕ್ಷೇತ್ರ ಸಂಪನ್ಮೂಲ ವ್ಯಕ್ತಿ ರಾಜೇಶ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಸಮೂಹ ಸಂಪನ್ಮೂಲ ವ್ಯಕ್ತಿಗಳಾದ ರವಿಚಂದ್ರ ಹಾಗೂ ಕೊಲ್ಲೂರು ಸಮೂಹ ಸಂಪನ್ಮೂಲ ವ್ಯಕ್ತಿ ಶೈಲಜಾ ನಿರೂಪಿಸಿದರು. ಹೊಸಾಡು ಕ್ಲಸ್ಟರಿನ ಸಮೂಹ ಸಂಪನ್ಮೂಲ ವ್ಯಕ್ತಿ ಸತೀಶ್ ವಂದಿಸಿದರು.

ಸುತ್ತಮುತ್ತ

ಘಟಿಕೋತ್ಸವ

ಕುಂದಾಪುರ: ಕುಂದಾಪುರದ ಶ್ರೀ ವೆಂಕಟರಮಣ ಆಂಗ್ಲಮಾಧ್ಯಮ ಶಾಲೆಯ ಪೂರ್ವ ಪ್ರಾಥಮಿಕ ವಿಭಾಗದ ಘಟಿಕೋತ್ಸವವು ಶನಿವಾರ ನಡೆಯಿತು. ಶಾಲಾ ಆಡಳಿತ ಮಂಡಳಿಯ ಕಾರ್ಯದರ್ಶಿ ಕೆ. ರಾಧಾಕೃಷ್ಣ ಶೆಣೈ ಅಧ್ಯಕ್ಷತೆ ವಹಿಸಿದ್ದರು. ಘಟಿಕೋತ್ಸವದ ಪ್ರಮಾಣ ಪತ್ರವನ್ನು ಪ್ರದಾನ ಮಾಡಿ ಮಾತನಾಡಿದ ಮುಖ್ಯ ಅತಿಥಿ ಡಾ. ಚಿನ್ಮಯಿ ಪುತ್ರನ್ ಮಾತನಾಡಿ, ಹೆತ್ತವರು ತಮ್ಮ ಮಕ್ಕಳ ಸರ್ವಾಂಗೀಣ ಪ್ರಗತಿಗಾಗಿ ಶ್ರಮಿಸುವುದರಿಂದ ಮಕ್ಕಳ ಮುಂದಿನ ಭವಿಷ್ಯ ಉಜ್ವಲವಾಗಿರುತ್ತದೆ ಎಂದು ಹೇಳಿದರು. ಶ್ರೀ ವೆಂಕಟರಮಣ ಪ.ಪೂ.ಕಾಲೇಜಿನ ಪ್ರಾಂಶುಪಾಲ ಸಂದೀಪ ಗಾಣಿಗ ಹಾಗೂ ಉಪಪ್ರಾಂಶುಪಾಲ ಸುಜೇಯ್ ಕೋಟೆಗಾರ ಉಪಸ್ಥಿತರಿದ್ದರು. ಪೂರ್ವ ಪ್ರಾಥಮಿಕ ವಿಭಾಗದ ಮುಖ್ಯಸ್ಥೆ ಪ್ರಮೀಳಾ ಡಿಸೋಜ ಸ್ವಾಗತಿಸಿದರು, ಪ್ರಾಥಮಿಕ ವಿಭಾಗದ ಮುಖ್ಯಸ್ಥೆ ರೇಷ್ಮಾ ಡಿಸೋಜ ಅತಿಥಿಗಳನ್ನು ಪರಿಚಯಿಸಿದರು. ಪ್ರೌಢ ಶಾಲಾ ಮುಖ್ಯೋಪಾಧ್ಯಾಯ ಕೃಷ್ಣ ಆಡಿಗ ವಂದಿಸಿದರು.

ಸಾರಿಗೆ ಸಂಚಾರ ನಿಯಂತ್ರಣ

ಕಾಸರಗೋಡು: ಚೆರ್ಕಳ – ಜಾಲ್ಸೂರು ರಾಜ್ಯ ಹೆದ್ದಾರಿ ಡಾಮರೀಕರಣ ಕಾಮಗಾರಿ ಆರಂಭವಾಗಿರುವುದರಿಂದ ಮಾ.23 ರಿಂದ ಏಪ್ರಿಲ್ 5ರ ವರೆಗೆ ಈ ರಸ್ತೆಯಲ್ಲಿ ವಾಹನ ಸಂಚಾರ ನಿಯಂತ್ರಿಸಲಾಗಿದೆ. ಚೆರ್ಕಳದಿಂದ ಜಾಲ್ಸೂರಿಗೆ ಹೋಗುವ ವಾಹನಗಳು ಪಡಿಯತ್ತಡ್ಕದಿಂದ ಬಲಭಾಗಕ್ಕೆ ತಿರುಗಿ ಅಡೂರು ಮೂಲಕ ಕೊಟ್ಯೋಡಿಗೆ ತೆರಳಬೇಕು. ಜಾಲ್ಸೂರಿನಿಂದ ಚೆರ್ಕಳಕ್ಕೆ ಹೋಗುವ ವಾಹನಗಳು ಕೊಟ್ಯೋಡಿಯಿಂದ ಎಡಭಾಗಕ್ಕೆ ತಿರುಗಿ ಅಡೂರು ಮೂಲಕ ಪಡಿಯತ್ತಡ್ಕಕ್ಕೆ ತೆರಳಿ ಚೆರ್ಕಳಕ್ಕೆ ಹೋಗಬೇಕು ಎಂದು ಲೋಕೋಪಯೋಗಿ ರಸ್ತೆ ವಿಭಾಗ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆ ಮುಂದೂಡಿಕೆ

ಕಾಸರಗೋಡು: ಪರಿಶಿಷ್ಟ ಪಂಗಡ ವಿಭಾಗದ ವಿದ್ಯಾರ್ಥಿಗಳ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಕ್ರಿಯಾ ಯೋಜನೆಗೆ ಸಂಬಂಧಿಸಿದಂತೆ ಮಾ.21ರಂದು ನಡೆಯಬೇಕಾಗಿದ್ದ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆ ಮುಂದೂಡಲಾಗಿದೆ ಎಂದು ಶಿಕ್ಷಣ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿ ಬದಿಯ ನಾಮಫಲಕ- ಅಂಗಡಿಗಳ ತೆರವಿಗೆ ಸೂಚನೆ

ಮಡಿಕೇರಿ: ರಾಷ್ಟ್ರೀಯ ಹೆದ್ದಾರಿ–275 ಕಿ.ಮೀ. 71.600 ರಿಂದ ಕಿ.ಮೀ.130.21 ರವರೆಗೆ ಸಂಪಾಜೆಯಿಂದ ಕುಶಾಲನಗರ ಕಾವೇರಿ ನದಿ ಸೇತುವೆವರೆಗೆ ತೆರವುಗೊಳಿಸಲಾಗಿದ್ದ ಅನಧಿಕೃತ ಜಾಹಿರಾತು ಫಲಕಗಳನ್ನು ಮತ್ತು ವ್ಯಾಪಾರಿಗಳು ಹಣ್ಣಿನ ಅಂಗಡಿ ಮತ್ತು ಗೂಡಂಗಡಿಗಳನ್ನು ರಾಷ್ಟ್ರೀಯ ಹೆದ್ದಾರಿಯ ಪರಿಧಿಯ ಒಳಗೆ ಪುನರ್ ಸ್ಥಾಪಿಸಿಕೊಂಡು ವ್ಯಾಪಾರ ವಹಿವಾಟು ನಡೆಸಲಾಗುತ್ತಿದೆ. ಇದರಿಂದ ಗ್ರಾಹಕರ ವಾಹನಗಳು ಫುಟ್‌ಪಾತಿನಲ್ಲಿ ನಿಂತು ರಸ್ತೆ ಅಪಘಾತಗಳು ಸಂಭವಿಸುತ್ತಿವೆ ಮತ್ತು ವಾಹನಗಳ ಸರಾಗ ಚಲನೆಗೆ ತೊಂದರೆಯಾಗುತ್ತಿದೆ. ಆದ್ದರಿಂದ ವ್ಯಾಪಾರಿಗಳು ತಮ್ಮ ವ್ಯಾಪಾರ ವಹಿವಾಟು ಮತ್ತು ಅನಧಿಕೃತ ಜಾಹಿರಾತು ಫಲಕಗಳನ್ನು ರಾಷ್ಟ್ರೀಯ ಹೆದ್ದಾರಿ ಪರಿಧಿಯಿಂದ ಮಾ. 23ರೊಳಗೆ ತಾವೇ ತೆರವುಗೊಳಿಸಬೇಕು. ಇಲ್ಲದಿದ್ದಲ್ಲಿ ರಾಷ್ಟ್ರೀಯ ಹೆದ್ದಾರಿ ವತಿಯಿಂದ ಮಾ.24 ರಿಂದ ಅನಧಿಕೃತ ಬೋರ್ಡ್ ಮತ್ತು ಮಳಿಗೆಗಳ ತೆರವು ಕಾರ್ಯಾಚರಣೆ ಕೈಗೊಳ್ಳಲಾಗುವುದು. ತೆರವು ಕಾರ್ಯಾಚರಣೆಯಲ್ಲಿ ವ್ಯಾಪಾರಿಗಳಿಗೆ ನಷ್ಟವಾದಲ್ಲಿ ಇಲಾಖೆ ಜವಾಬ್ದಾರವಾಗುವುದಿಲ್ಲ ಎಂದು ರಾಷ್ಟ್ರೀಯ ಹೆದ್ದಾರಿ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಗಿರೀಶ್ ಅವರು ತಿಳಿಸಿದ್ದಾರೆ.



ಕಾರಡ್ಕ ಮುಂಡೋಳು ಶ್ರೀ ಮಹಾವಿಷ್ಣು ದುರ್ಗಾಪರಮೇಶ್ವರಿ ಶಾಸ್ತಾರ ಕ್ಷೇತ್ರದಲ್ಲಿ ಪ್ರತಿಷ್ಠಾಪಿಸಲಿರುವ ನೂತನ ಧ್ವಜಸ್ತಂಭದ ಶೋಭಾಯಾತ್ರೆ ಸೋಮವಾರ ನಡೆಯಿತು. ಪಿಲಾಂಕಟ್ಟೆ ಬಳಿಯ ಕೋಳಾರಿಯಿಂದ ಮಾವಿನಕಟ್ಟೆ ನಾರಂಪಾಡಿ ಮೂಲಕ ಕ್ಷೇತ್ರಕ್ಕೆ ಧ್ವಜಸ್ತಂಭದ ಮರವನ್ನು ಶೋಭಾಯಾತ್ರೆ ಮೂಲಕ ತರಲಾಯಿತು.

ಸುಳ್ಯ ತಾಲೂಕು ಪಂಚಾಯತ್ ಸಾಮಾನ್ಯ ಸಭೆ | ವಿವಿಧ ವಿಷಯಗಳ ಕುರಿತು ಗಂಭೀರ ಚರ್ಚೆ

ಆಹಾರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ಇರಲಿ: ಸಂತೋಷ್ ಕುಮಾರ್

ಸುಳ್ಯ: ಆಹಾರ ಸುರಕ್ಷತಾ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ವಸತಿ ನಿಲಯಗಳ ಮೇಲ್ವಿಚಾರಕರು ಮುತುವರ್ಜಿ ವಹಿಸಬೇಕು. ಇಲಾಖೆ ಕೂಡ ಈ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಸುಳ್ಯ ತಾಲೂಕು ಪಂಚಾಯತ್‌ನ ಆಡಳಿತಾಧಿಕಾರಿ ಸಂತೋಷ್ ಕುಮಾರ್ ಜಿ. ಸೂಚನೆ ನೀಡಿದ್ದಾರೆ.

ಬುಧವಾರ ತಾಲೂಕು ಪಂಚಾಯತ್‌ನ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ಇಲಾಖಾ ಅಧಿಕಾರಿಗಳು ಆಗಾಗ ವಿದ್ಯಾರ್ಥಿಗಳ ಹಾಸ್ಟೆಲ್‌ಗಳಿಗೆ ಭೇಟಿ ನೀಡಿ ಆಹಾರ ತಪಾಸಣೆ ನಡೆಸಬೇಕು. ಹಾಸ್ಟೆಲ್ ಸ್ವಚ್ಛವಾಗಿರಿಸುವುದರ ಕುರಿತಂತೆಯೂ ಎಚ್ಚರಿಕೆ ನೀಡಬೇಕು. ಆಹಾರ ಸುರಕ್ಷತೆ ಸಂಬಂಧಿಸಿ ಮಾರ್ಗಸೂಚಿಗಳನ್ನು ಪಾಲಿಸಬೇಕು ಎಂದರು.

ಬೀದಿ ನಾಯಿ ಶೆಡ್‌ಗೆ ಕ್ರಿಯಾ ಯೋಜನೆ

ಬೀದಿ ನಾಯಿಗಳ ನಿಯಂತ್ರಣಕ್ಕೆ ಸಂಬಂಧಿಸಿ ಚರ್ಚೆ ನಡೆದು ಶೆಡ್ ನಿರ್ಮಾಣ ಮತ್ತಿತರ ಕ್ರಮಗಳ ಬಗ್ಗೆ ಕ್ರಿಯಾ ಯೋಜನೆ ತಯಾರಿಸಿ ಪ್ರಸ್ತಾವನೆ ಸಲ್ಲಿಸುವಂತೆ ನಗರ ಪಂಚಾಯತ್ ಮುಖ್ಯಾಧಿಕಾರಿಗೆ ಸೂಚಿಸಲಾಯಿತು. ಸುಳ್ಯ ನಗರ ಪಂಚಾಯತ್‌ನ ಘನ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಜಮೀನು ಕಾಯ್ದಿರಿಸುವ ಸಂಬಂಧಿಸಿಯೂ ಸಭೆಯಲ್ಲಿ ಚರ್ಚೆ ನಡೆಯಿತು.



ಮಕ್ಕಳ ಅಪೌಷ್ಟಿಕತೆ ಬಗ್ಗೆ ನಿಗಾ ಅಗತ್ಯ

ಮಕ್ಕಳ ಅಪೌಷ್ಟಿಕತೆಯ ಕುರಿತು ಮನೆ ಮನೆ ಭೇಟಿ ಜಾಗೃತಿ ಮೂಡಿಸಬೇಕು ಎಂದು ಆಡಳಿತಾಧಿಕಾರಿಗಳು ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಗಳ ಅಧಿಕಾರಿಗಳಿಗೆ ಸೂಚಿಸಿದರು. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಗೈರು ಹಾಜರಾಗದಂತೆ ಎಚ್ಚರಿಕೆ ವಹಿಸಬೇಕು, ತಾಲೂಕಿಗೆ ಉತ್ತಮ ಫಲಿತಾಂಶ ಬರುವಂತೆ ಪ್ರಯತ್ನ ನಡೆಸಬೇಕು, ಮೊದಲ ಬಾರಿ ಬರೆಯುವ ವಿದ್ಯಾರ್ಥಿಗಳು ಗೈರಾಗದಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದರು.

ಸುಳ್ಯ ತಾಲೂಕಿನ ಸೋಣಂಗೇರಿ ಅಂಗನವಾಡಿ ಕಟ್ಟಡ ಕಾಮಗಾರಿ ಕುರಿತು ಪಶ್ನೆಗೆ ಉತ್ತರಿಸಿದ ಜಿಲ್ಲಾ ಪಂಚಾಯತ್ ಇಂಜಿನಿಯರ್, ಎರಡು ದಿನದಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದ್ದು, ಬಳಿಕ ಅದನ್ನು ಹಸ್ತಾಂತರ ಮಾಡಲಾಗುವುದು ಎಂದು ತಿಳಿಸಿದರು. ಏ.1ರಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಇರಬೇಕು ಎಂದು ಸೂಚಿಸಿದ ಅವರು, ಕರಿಯಮೂಲೆ ಮತ್ತು ಇರುವಂಬಳ್ಳ ಅಂಗನವಾಡಿ ಕಟ್ಟಡಕ್ಕೆ ಶಿಲಾನ್ಯಾಸ ಆಗಿದ್ದರೂ ಕಾಮಗಾರಿ ನಡೆಸಲು ಎನ್‌ಆರ್‌ಇಜಿಯಲ್ಲಿ ಮರು ಕ್ರಿಯಾ ಯೋಜನೆ ರೂಪಿಸಬೇಕಾಗಿದೆ ಎಂದರು.

ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ರಾಜಣ್ಣ ಸ್ವಾಗತಿಸಿದರು.

- ಇಲಾಖಾ ಅಧಿಕಾರಿಗಳು ಆಗಾಗ ವಿದ್ಯಾರ್ಥಿಗಳ ಹಾಸ್ಟೆಲ್‌ಗಳಿಗೆ ಭೇಟಿ ನೀಡಿ ಆಹಾರ ತಪಾಸಣೆ ನಡೆಸಬೇಕು
- ಹಾಸ್ಟೆಲ್ ಸ್ವಚ್ಛವಾಗಿರಿಸುವುದರ ಕುರಿತು ಎಚ್ಚರಿಕೆ ನೀಡಬೇಕು
- ಆಹಾರ ಸುರಕ್ಷತೆ ಸಂಬಂಧಿಸಿ ಮಾರ್ಗಸೂಚಿ ಪಾಲಿಸಬೇಕು
- ನೀರಿನ ಸ್ವಚ್ಛತೆ ಕಾಪಾಡಬೇಕು

ಮೇವಿಗೆ ಕೊರತೆಯಿಲ್ಲ

ಸುಳ್ಯ ತಾಲೂಕಿನಲ್ಲಿ 20,683 ಗೋವುಗಳಿದ್ದು ಕಳೆದ ಬಾರಿಗಿಂತ ಈ ಬಾರಿ ಶೇ.20ರಷ್ಟು ಕಡಿಮೆಯಾಗಿದೆ. ಆದರೆ, ತಾಲೂಕಿನಲ್ಲಿ ಮೇವಿಗೆ ಕೊರತೆಯಿಲ್ಲ. ಸುಳ್ಯದಲ್ಲಿ ಇದೀಗ ಕುಕ್ಕುಟೋದ್ಯಮಕ್ಕೆ ಮುಖ ಮಾಡುತ್ತಿದ್ದು ಸುಳ್ಯ ತಾಲೂಕಿನಲ್ಲಿ ಸುಮಾರು 4.5ಲಕ್ಷ ಕೋಳಿಗಳ ಸಾಕಾಣಿಕೆ ನಡೆಯುತ್ತಿದೆ. ಆಹಾರಗಳನ್ನು ಸರಕಾರ ಪರವಾನಿಗೆ ಹೊಂದಿದ ಘಟಕಗಳಿಂದಲೇ ಪೂರೈಕೆ ಆಗುತ್ತಿದೆ.

● ಡಾ. ನಿತಿನ್ ಪ್ರಭು, ತಾ.ಪಶು ವೈದ್ಯಕೀಯ ಆಸ್ಪತ್ರೆ ವೈದ್ಯಾಧಿಕಾರಿ

ಕುಂದಾಪುರ ಡಾ.ಬಿ.ಬಿ.ಹೆಗ್ಡೆ ಕಾಲೇಜು: 'ವಿ-ಗ್ರೋ ಬ್ಯುಸಿನೆಸ್ ಡೇ' ಕಾರ್ಯಕ್ರಮ



ಕುಂದಾಪುರ: ಮಕ್ಕಳಿಗೆ ಕಾಲೇಜು ದಿನಗಳಿಂ ದಲೇ ವ್ಯಾಪಾರ- ವಹಿವಾಟು ಬಗ್ಗೆ ಅನುಭವ ತಿಳಿಸುವ ಉದ್ದೇಶದಿಂದ ಕಳೆದ ಐದು ವರ್ಷಗಳಿಂದ ಬ್ಯುಸಿನೆಸ್ ಡೇ ಆಯೋಜಿಸುತ್ತಿದ್ದೇವೆ. ವರ್ಷದಿಂದ ವರ್ಷಕ್ಕೆ ಹೊಸ ಆಯಾಮ ದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ. ಸಚ್ಚಾರಿತ್ರ್ಯ, ಪರಿಶ್ರಮದಿಂದ ಉದ್ಯಮದಲ್ಲಿ ಯಶಸ್ವಿಯಾಗಲು ಸಾಧ್ಯ ಎಂದು ಬೈಂದೂರಿನ ಮಾಜಿ ಶಾಸಕ, ಕುಂದಾಪುರ ಎಜುಕೇಶನ್ ಸೊಸೈಟಿ ಅಧ್ಯಕ್ಷ ಬಿ.ಎಂ. ಸುಕುಮಾರ್ ಶೆಟ್ಟಿ ಹೇಳಿದ್ದಾರೆ.

ಕುಂದಾಪುರ ಡಾ.ಬಿ.ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ವಿಭಾಗದಿಂದ ಆಯೋಜಿಸಲಾದ 5ನೇ ಆವೃತ್ತಿ 'ವಿ-ಗ್ರೋ ಬ್ಯುಸಿನೆಸ್ ಡೇ' ಕಾರ್ಯಕ್ರಮ ಮಂಗಳವಾರ ಉದ್ಘಾಟಿಸಿ ಅವರು ಮಾತನಾಡಿದರು.

ಕುಂದಾಪುರ ಎಜುಕೇಶನ್ ಸೊಸೈಟಿ ಕಾರ್ಯದರ್ಶಿ ಸೀತಾರಾಮ ನಕ್ಕತ್ತಾಯ, ಗವರ್ನಿಂಗ್ ಕೌನ್ಸಿಲ್ ಸದಸ್ಯ ನಾರಾಯಣ ನಾಯಕ್, ಕಾಲೇಜಿನ ಪ್ರಾಂಶುಪಾಲ ಡಾ. ಕೆ. ಉಮೇಶ್ ಶೆಟ್ಟಿ, ಉಪಪ್ರಾಂಶುಪಾಲ ಡಾ. ಚೇತನ್ ಶೆಟ್ಟಿ ಕೋವಾಡಿ, ವಾಣಿಜ್ಯ ವಿಭಾಗದ ಮುಖ್ಯಸ್ಥೆ ವೀಣಾ ವಿ. ಭಟ್, ಕಾರ್ಯಕ್ರಮದ ಸಂಯೋಜಕ ಯೋಗೀಶ್ ಶ್ಯಾನುಭೋಗ್, ಸತೀಶ್ ಕಾಂಚನ್ ಮತ್ತಿತರರಿದ್ದರು.

ಮಕ್ಕಳಿಗೆ ಶಿಕ್ಷಣದ ಜತೆಗೆ ವ್ಯವಹಾರ ಜ್ಞಾನ, ಉದ್ಯಮದ ಕುರಿತು ಅನುಭವ ಪಡೆದುಕೊಳ್ಳಬೇಕು, ಅದಕ್ಕೆ ಬೇಕಾದ ಕೌಶಲಗಳನ್ನು ಬೆಳೆಸಿಕೊಳ್ಳಬೇಕು ಅನ್ನುವ ನಿಟ್ಟಿನಲ್ಲಿ ಆಯೋಜಿಸಿದ ವಿ- ಗ್ರೋ: ವ್ಯವಹಾರ ದಿನವೂ ಎಲ್ಲರ ಗಮನಸೆಳೆಯಿತು. ವಾಣಿಜ್ಯ ವಿಭಾಗದ ದ್ವಿತೀಯ, ತೃತೀಯ ಪದವಿ ವಿದ್ಯಾರ್ಥಿಗಳಿಗೆ ಮಳಿಗೆಗಳ ತೆರೆದು, ವ್ಯಾಪಾರ, ಮಾರುಕಟ್ಟೆ, ಗುಣಮಟ್ಟ, ಸಾಂಪ್ರದಾಯಿಕತೆ ಇನ್ನಿತರ ವಿಚಾರಗಳಿಗೆ ಸ್ಪರ್ಧೆಯ ರೂಪದಲ್ಲಿ ಆಯೋಜಿಸಲಾಗಿತ್ತು.

ಕೃಷಿ ತೋಟಗಳಿಗೆ ಲಗ್ಗೆಯಿಟ್ಟ ಕಾಡಾನೆ: ಅಡಿಕೆ, ಬಾಳೆ ಧ್ವಂಸ, ರೈತರು ಹೈರಾಣ



ಸುಬ್ರಹ್ಮಣ್ಯ: ನೆಟ್ಟಣಬೈಲು, ಕೊಂಬಾರು, ಸಿರಿಬಾಗಿಲು ಮೊದಲಾದ ಕಡೆ ಮಂಗಳವಾರ ರಾತ್ರಿ ಕೃಷಿಕರ ತೋಟಗಳಿಗೆ ಆನೆ ದಾಳಿ ಮಾಡಿದ್ದು, ಇದರಿಂದಾಗಿ ತೋಟವು ಹಾನಿಗೊಳಗಾಗಿದೆ. ನಿರಂತರ ಆನೆ ದಾಳಿಯಿಂದ ಕೃಷಿಕರು ಹೈರಾಣಾಗಿದ್ದು ಅಪಾರ ನಷ್ಟದಿಂದ ಸಂಕಷ್ಟ ಎದುರಿಸುತ್ತಿದ್ದಾರೆ.

ಮಂಗಳವಾರ ರಾತ್ರಿ ನೆಟ್ಟಣಬೈಲು, ಕೊಂಬಾರು, ಸಿರಿಬಾಗಿಲು ಪ್ರದೇಶದ ಅನೇಕ ರೈತರ ತೋಟಗಳಿಗೆ ನುಗ್ಗಿದ ಕಾಡಾನೆಯು ತೋಟದಲ್ಲಿದ್ದ ಫಲಭರಿತ ಅಡಿಕೆ ಮರ, ತೆಂಗಿನಮರಗಳನ್ನು ಉರುಳಿಸಿದೆ. ನೀರಾವರಿಗಾಗಿ ಅಳವಡಿಸಿದ್ದ ಸ್ಪಿಂಕ್ಲರ್ ಮತ್ತು ಪೈಪ್‌ಲೈನ್‌ಗಳು ಆನೆಯ ತುಳಿತದಿಂದ ಧ್ವಂಸವಾಗಿವೆ.

ಘಟನಾ ಸ್ಥಳಕ್ಕೆ ಅರಣ್ಯಾಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿ ಸೂಕ್ತ ಪರಿಹಾರದ ಭರವಸೆಯನ್ನು ನೀಡಿದ್ದಾರೆ.

ಕೃಷಿ ನಾಶ

ನೆಟ್ಟಣಬೈಲು, ಕೊಂಬಾರು, ಸಿರಿಬಾಗಿಲು ಪ್ರದೇಶದ ಅನೇಕ ರೈತರ ತೋಟಗಳಿಗೆ ನುಗ್ಗಿದ ಕಾಡಾನೆ ತೋಟದಲ್ಲಿದ್ದ ಫಲಭರಿತ ಅಡಿಕೆ ಮರ, ತೆಂಗಿನಮರಗಳ ಉರುಳಿಸಿದೆ. ತೋಟದಲ್ಲಿದ್ದ ಬಾಳೆಗಿಡಗಳ ತುಳಿದು ನಾಶಪಡಿಸಿದೆ.

ಶಾಶ್ವತ ಪರಿಹಾರ ಅಗತ್ಯ

ನಿರಂತರವಾಗಿ ಆನೆ ದಾಳಿ ಮಾಡುವ ಕಾರಣ ಅದಕ್ಕೆ ಶಾಶ್ವತ ಪರಿಹಾರ ಒದಗಿಸಿ ಕೃಷಿಕರನ್ನು ಸಂಕಷ್ಟದಿಂದ ಪಾರು ಮಾಡಬೇಕಾಗಿ ರೈತರು ವಿನಂತಿಸಿದ್ದಾರೆ. ಆನೆ ಕಂದಕ ನಿರ್ಮಿಸುವ ಮೂಲಕ ಶಾಶ್ವತ ಪರಿಹಾರ ಕಲ್ಪಿಸಿ ಕೃಷಿಕರನ್ನು ಸಂಕಷ್ಟದಿಂದ ಪಾರು ಮಾಡುವುದು ಅತ್ಯಗತ್ಯವಾಗಿದೆ.

ಅದ್ಯಪಾಡಿ ದೈವಂಗಳ ಗುಡ್ಡೆ ದೇವಸ್ಥಾನದ ಬ್ರಹ್ಮಕಲಶ: ರುದ್ರಯಾಗ, ದುರ್ಗಾಪೂಜೆ



ಕೈಕಂಬ: ಮಂಗಳೂರು ತಾಲೂಕಿನ ಬಜಪೆ ಸಮೀಪ ಅದ್ಯಪಾಡಿ ದೈವಂಗಳ ಗುಡ್ಡೆ ಶ್ರೀ ನೀಲಕಂಠ ಉಮಾಮಹೇಶ್ವರ ದೇವಳದಲ್ಲಿ ವೇ.ಮೂ. ಬ್ರಹ್ಮಶ್ರೀ ಕುಡುಪು ನರಸಿಂಹ ತಂತ್ರಿಗಳ ನೇತೃತ್ವ ಪವಿತ್ರಪಾಣಿ ವೇ.ಮೂ.ಎ.ರಮೇಶ್ ಉಡುಪ ಮತ್ತು ಅರ್ಚಕ ಕೃಷ್ಣ ಭಟ್ ಸಹಯೋಗದಲ್ಲಿ ನಡೆಯಲಿರುವ ಅಷ್ಟಬಂಧ ಬ್ರಹ್ಮಕಲಶದ ಅಂಗವಾಗಿ ಬುಧವಾರ ಬೆಳಿಗ್ಗೆ ಶಾಂತಿ ಹೋಮಗಳು, ರುದ್ರಯಾಗಾರಂಭ, ಗಣಪತಿ ದೇವರಿಗೆ ಕಲಶಾಭಿಷೇಕ ನಡೆಯಿತು. 11.30ಕ್ಕೆ ರುದ್ರಯಾಗ ಪೂರ್ಣಾಹುತಿಯಾಯಿತು ಮಹಾಪೂಜೆ ಬಳಿಕ ಅನ್ನ ಸಂತರ್ಪಣೆ ನಡೆಯಿತು.

ಸಂಜೆ ಧಾರ್ಮಿಕ ಸಭೆ, ದುರ್ಗಾ ಪೂಜೆ, ಯಾಗ ಮಂಟಪದಲ್ಲಿ ಅಗ್ನಿ ಜನನ, ಕುಂಡ ಶುದ್ಧಿ, ಅಂಕುರ ಪೂಜೆ ಬಳಿಕ ಅನ್ನ ಸಂತರ್ಪಣೆ ನಡೆಯಿತು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಬೈಲೂರು ಮಾರಿಯಮ್ಮ ಚೈತನ್ಯ ಕಲಾವಿದರಿಂದ ರಾಘು ಮಾಸ್ತು ಎಂಬ ತುಳು ನಾಟಕ ಪ್ರದರ್ಶನಗೊಂಡಿತು. ದೇವಳದ ಆಡಳಿತ ಮೊಕ್ತೇಸರ ಎ. ಮಂಜುನಾಥ ಭಂಡಾರಿ ಶೆಡ್ಡೆ, ಕೆ. ಶ್ರೀಧರ್ ಆಳ್ವ ಕಂದಾವರ ಬಾಳಿಕೆ, ಶಿವರಾಮ್ ಮಲ್ಲಿ ಅರ್ಬಿ ಶೆಡ್ಡೆ,ರಾಜೇಶ್ ಚೌಟ, ಸುಜೀರ್ ಗುತ್ತು, ರಾಜಲಕ್ಷ್ಮಿ ಎಜುಕೇಷನ್ ಟ್ರಸ್ಟ್ ಶಶಿ ಕಿರಣ್ ಶೆಟ್ಟಿ ಆಲ್ ಕಾರ್ಗೋ ಮುಂಬೈ, ಉದಯಚಂದ್ರ ಭಂಡಾರಿ, ಶೆಡ್ಡೆ ಹೊಸಮನೆ, ಸುಜಿತ್ ಆಳ್ವ ಐತಮೊಗರುಗುತ್ತು, ಹರಿಪ್ರಸಾದ್ ರೈ, ಬೆಳ್ಳಿಪಾಡಿ, ಬ್ರಹ್ಮಕಲಶ ಸಮಿತಿಯ ಅಧ್ಯಕ್ಷ ಅಜಿತ್ ಕುಮಾರ್ ರೈ ಮಾಲಾಡಿ, ಅಧ್ಯಕ್ಷರು, ಬಂಟರ ಯಾನೆ ನಾಡವರ ಮಾತೃ ಸಂಘ, ಮಂಗಳೂರು, ಮಾಜಿ ಸಚಿವ ಬಿ. ನಾಗರಾಜ್ ಶೆಟ್ಟಿ ಬೈಲುಮೇಗಿನ ಮನೆ, ಹರೀಶ್ ಶೆಟ್ಟಿ ಐತಮೊಗರು ದೊಡ್ಡಮನೆ ಬೈಲು ಮೂಡುಕರೆ, ರವಿರಾಜ್ ಶೆಟ್ಟಿ ನಿಟ್ಟೆಗುತ್ತು, ಕೃಷ್ಣಮೂರ್ತಿ, ಅಡ್ಯಾರ್‌ಕಟ್ಟೆ ದಿವಾಕರ ಸಾಮಾನಿ, ಚೇಳಾರು ಗುತ್ತು, ಸತೀಶ್ ಆಳ್ವ ಬೈಲು ಮೂಡುಕರೆ, ಸಂತೋಷ್ ಶೆಟ್ಟಿ, ಶೆಡ್ಡೆ ಹೊಸಲಕ್ಕೆ ಪ್ರಭಾಕರ ಶೆಟ್ಟಿ ಕಡೆಗುಂಡ್ಯ, ಸಂಜಿತ್ ಶೆಟ್ಟಿ ಬೈಲು ಮೂಡುಕರೆ, ಮುರಳೀಧರ್ ರಾವ್, ಅದ್ಯಪಾಡಿ, ಸುಜೀರ್ ಕುಮಾರ್ ಶೆಟ್ಟಿ ಇನ್ನದಗುತ್ತು, ಭುಜಂಗ ಕುಲಾಲ್ ಅದ್ಯಪಾಡಿ, ಜಯರಾಮ ಕೊಟ್ಟಾರಿ, ಶೆಡ್ಡೆ, ದಿನೇಶ್ ಮಾರ್ತ, ಬೈಲುಮೂಡುಕರೆ, ಉಮೇಶ್ ಶೆಟ್ಟಿ ಶೆಡ್ಡೆ ಹೊಸಲಕ್ಕೆ, ದೇವದಾಸ್ ನಾಯಕ, ಯಜಮಾನ ಬೈಲುಮೂಡುಕರೆ, ಶ್ರೀ ನೀಲಕಂಠ ಉಮಾಮಹೇಶ್ವರ ಟೆಂಪಲ್ ಟ್ರಸ್ಟ್ ಬೈಲುಮೂಡುಕರೆ ಕುಟುಂಬಸ್ಥರು, ಬಂಧುಗಳು, ಸಮಿತಿ ಪದಾಧಿಕಾರಿಗಳು, ಬೈಲುಮಾಗಣೆ ಹತ್ತು ಸಮಸ್ತರಿದ್ದರು.

ಇಂದಿನ ಕಾರ್ಯಕ್ರಮಗಳು

ಬೆಳಿಗ್ಗೆ 6ರಿಂದ ತತ್ವ ಕಲಶ, ತತ್ವ ಹೋಮ, ಕಲಶ ಮಂಟಪ ಸಂಸಾರ, ಅಗ್ನಿ ಜನನ, ಅಷ್ಟೋತ್ತರ ಸಹಸ್ರ ನಾಳಿಕೇರ ಗಣಪತಿ ಹೋಮ ಪ್ರಾರಂಭ, 1130ಕ್ಕೆ ಪೂರ್ಣಾಹುತಿ, ತತ್ವ ಕಲಶಾಭಿಷೇಕ, ಮಹಾಪೂಜೆ ಬಳಿಕ ಅನ್ನಸಂತರ್ಪಣೆ, ಸಂಜೆ 4ಕ್ಕೆ ಧಾರ್ಮಿಕ ಸಭೆ, ಸಂಜೆ 6ರಿಂದ ಕುಂಭೇಶ ಕರ್ಕರಿ ಪೂಜೆ, ಬ್ರಹ್ಮಕಲಶ ಪೂರಣ, 500 ಪರಿಕಲಶ ಪೂರಣ ಅಧಿ ವಾಸ ಹೋಮ, ಕಲಶಾಭಿಷೇಕ, ವೈದಿಕ ವಿಧಿಗಳು , ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಸಂಜೆ ಜಗದೀಶ್ ಆಚಾರ್ಯ ಪುತ್ತೂರು ಬಳಗದವರಿಂದ ಭಕ್ತಿ ಗಾನ ಸುಧೆ ನಡೆಯಲಿದೆ.

ಪುತ್ತೂರು ಅಕ್ಷಯ ಕಾಲೇಜಿನಲ್ಲಿ 'ವಾಣಿಜ್ಯ ವ್ಯೂಹ' ಭಿತ್ತಿಪತ್ರ ಉದ್ಘಾಟನೆ



ಪುತ್ತೂರು: ಅಕ್ಷಯ ಕಾಲೇಜಿನ ಇನ್ನಿಕ್ತ ವಾಣಿಜ್ಯ ಸಂಘ ಮತ್ತು ಐಕ್ಯೂಎಸಿ ಸಹಯೋಗದಲ್ಲಿ 'ವಾಣಿಜ್ಯ ವ್ಯೂಹ' ಎಂಬ ಶಿರೋನಾಮೆಯಲ್ಲಿ ಭಿತ್ತಿಪತ್ರದ ಉದ್ಘಾಟನಾ ಕಾರ್ಯಕ್ರಮ ಅಕ್ಷಯ ಕಾಲೇಜಿನಲ್ಲಿ ನಡೆಯಿತು.

ಅವಕಾಶಗಳ ಉತ್ತಮವಾಗಿ ಬಳಸಿಕೊಳ್ಳಿ

ಎಸ್.ಆರ್.ಕೆ. ಲ್ಯಾಡರ್ಸ್ ಸಂಸ್ಥೆಯ ಆಡಳಿತ ನಿರ್ದೇಶಕ ಕೇಶವ್ ಅಮೈ ಕಾರ್ಯಕ್ರಮವನ್ನು ಉದ್ಘಾಟಿಸಿ, ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ಎಲ್ಲಿದ್ದರು ತಮ್ಮ ಬದುಕನ್ನು ರೂಪಿಸುವಲ್ಲಿ ಯಶಸ್ವಿಯಾಗುತ್ತಾರೆ ಹಾಗೂ ಸಿಕ್ಕ ಅವಕಾಶಗಳನ್ನು ಒಳ್ಳೆಯ ರೀತಿಯಲ್ಲಿ ಬಳಸಿಕೊಂಡು ಜೀವನದಲ್ಲಿ ಯಶಸ್ವಿಯನ್ನು ಪಡೆದುಕೊಳ್ಳಬೇಕು ಎಂದು ಹೇಳಿದರು.

ಅತಿಥಿಯಾಗಿದ್ದ ಅಕ್ಷಯ ಸಮೂಹ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಡಾ. ಅಕ್ಷಯ್ ಮಾತನಾಡಿ, ಉದ್ಯಮಿ ಕೇಶವ್ ಅಮೈ ಅವರನ್ನು ಪ್ರೇರಣೆಯಾಗಿ ತೆಗೆದುಕೊಂಡು ಅವರ ಆದರ್ಶಗಳನ್ನು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿ ಕೊಳ್ಳಬೇಕೆಂದು ತಿಳಿಸಿದರು.

ಉತ್ತಮ ವೇದಿಕೆ

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಸಂಪತ್ ಕೆ. ಪಕ್ಕಳ ಮಾತನಾಡಿ, ವಿದ್ಯಾರ್ಥಿಗಳ ಕ್ರಿಯಾಶೀಲತೆ ತೋರಿಸಿಕೊಳ್ಳಲು ಇಂತಹ ಭಿತ್ತಿಪತ್ರಗಳು ಒಂದು ಉತ್ತಮ ವೇದಿಕೆಯಾಗಿದೆ ಎಂದರು.

ವಾಣಿಜ್ಯ ವಿಭಾಗದ ಮುಖ್ಯಸ್ಥ ಕಿಶೋರ್ ಕುಮಾರ್ ರೈ ಕೆ. ಶುಭಾಶಂಸನೆಗೈದರು. ವಾಣಿಜ್ಯ ಸಂಘದ ಸಂಯೋಜಕಿ ಮೇಘಶ್ರೀ ಪ್ರಸ್ತಾವನೆಗೈದರು. ಇನ್ನಿಕ್ತ ವಾಣಿಜ್ಯ ಸಂಘದ ಕಾರ್ಯದರ್ಶಿ ವಿಂಧುಶ್ರೀ ಉದ್ಘಾಟಕರನ್ನು ಪರಿಚಯಿಸಿದರು. ವಿದ್ಯಾರ್ಥಿನಿ ಸುಶ್ಮಿತಾ ಪ್ರಾರ್ಥಿಸಿ, ಇನ್ನಿಕ್ತ ವಾಣಿಜ್ಯ ಸಂಘದ ಅಧ್ಯಕ್ಷ ವಿಖ್ಯಾತ್ ಸ್ವಾಗತಿಸಿ, ಕೋಶಾಧಿಕಾರಿ ವೀಕ್ಷಿತ್ ವಂದಿಸಿದರು. ಅಕ್ಷಿತ್ ನಿರೂಪಿಸಿದರು.

ಇಂದಿನಿಂದ ಕರಿಚ್ಚೇರಿ ವಿಳಕ್ಕುಮಾಡಂ ಶ್ರೀ ಕ್ಷೇತ್ರದಲ್ಲಿ ಪುನರ್‌ಪ್ರತಿಷ್ಠಾ ಬ್ರಹ್ಮಕಲಶ

ಕಾಸರಗೋಡು: ಕರಿಚ್ಚೇರಿ ವಿಳಕ್ಕುಮಾಡಂ ಶ್ರೀ ವೆಂಕಟ್ರಮಣ ಕ್ಷೇತ್ರದಲ್ಲಿ ಪುನರ್ ಪ್ರತಿಷ್ಠಾ ಬ್ರಹ್ಮಕಲಶ, ಕಳಿಯಾಟ ಮಹೋತ್ಸವ ಮಾ.19ರಿಂದ 28ರವರೆಗೆ ವಿವಿಧ ವೈದಿಕ, ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಜರಗಲಿದೆ ಎಂದು ಕಾರ್ಯಕ್ರಮದ ಸಂಘಟಕರು ಮಂಗಳವಾರ ಪ್ರೆಸ್‌ಕ್ಲಬ್‌ನಲ್ಲಿ ಜರಗಿದ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಮಾ.19ರಂದು ಬೆಳಗ್ಗೆ 5ರಿಂದ ವಿವಿಧ ವೈದಿಕ ಕಾರ್ಯಕ್ರಮ, 6 ರಿಂದ ಹರಿನಾಮ ಕೀರ್ತನೆ, 10.30ರಿಂದ 11.30ರ ತನಕದ ಶುಭ ಮುಹೂರ್ತ ಉಗ್ರಾಣ ತುಂಬಿಸುವುದು, ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ಅನ್ನದಾನ, ರಾತ್ರಿ 9ರಿಂದ ನೃತ್ಯ ವೈವಿಧ್ಯ, ಮಾ.20ರಂದು 8 ಕ್ಕೆ ಸಂಪೂರ್ಣ ಸಹಸ್ರನಾಮ, ಸಂಜೆ 5 ಕ್ಕೆ ನಡೆಯುವ ಧಾರ್ಮಿಕ ಸಭೆಯಲ್ಲಿ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಆಶೀರ್ವಚನ ನೀಡುವರು. ರಾತ್ರಿ 9ರಿಂದ ನೃತ್ಯನೃತ್ಯಾವಳಿ ನಡೆಯಲಿದೆ.

ಮಾ.21ರಂದು ಬೆಳಿಗ್ಗೆ 8 ಗಂಟೆಗೆ ವಿಷ್ಣು ಸಹಸ್ರನಾಮ ಪಾರಾಯಣ, ಮಧ್ಯಾಹ್ನ ಮಹಾಪೂಜೆ, ಸಂಜೆ 3 ಗಂಟೆಗೆ ಅಕ್ಷರಶ್ಲೋಕ, ರಾತ್ರಿ 9.30ಕ್ಕೆ ತಿರುವಾದಿರ, ಕೂಚುಪುಡಿ ಜರಗಲಿದೆ. ಮಾ.22ರಂದು ಬೆಳಗ್ಗೆ 8ಕ್ಕೆ ವಿಷ್ಣು ಸಹಸ್ರನಾಮ, ಸಂಗೀತಾರಾಧನೆ, ಮಧ್ಯಾಹ್ನ ಮಧ್ಯಾಹ್ನ 12.30ಕ್ಕೆ ಮಹಾಪೂಜೆ,ಅನ್ನದಾನ, ಸಂಜೆ 3.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್ ಉದ್ಘಾಟಿ ಸುವರು. ಉದುಮ ಶಾಸಕ ಸಿ.ಎಚ್.ಕುಂಞಂಬು ಅತಿಥಿಯಾಗಿರುವರು. ಬಳಿಕ ಆಧ್ಯಾತ್ಮಿಕ ಭಾಷಣ, ರಾತ್ರಿ 9 ಕ್ಕೆ ತಿರುವಾದಿರ, ಮಾ.23ರಂದು ಬೆಳಿಗ್ಗೆ 7.30ಕ್ಕೆ ಸಂಪೂರ್ಣ ನಾರಾಯಣೀಯನ ಪಾರಾಯಣ, ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ರಾತ್ರಿ 7.30ಕ್ಕೆ ಭಜನೆ, ಫ್ಯೂಷನ್ ತಿರುವಾದಿರ, 9.30ರಿಂದ ಗಾನಾಮೃತ ನಡೆಯಲಿದೆ.

ಮಾ.24ರಂದು ಬೆಳಿಗ್ಗೆ 6ಕ್ಕೆ ಹರಿನಾಮ ಕೀರ್ತನೆ, 8ಕ್ಕೆ ಗೀತಾ ಪಾರಾಯಣ, 10ರಿಂದ ಧಾರ್ಮಿಕ ಭಾಷಣ, ರಾತ್ರಿ 9ಕ್ಕೆ ತಿರುವಾದಿರ, 9.30ಕ್ಕೆ ಭಕ್ತಿಗಾನ ಸುಧಾ ನಡೆಯಲಿದೆ. ಮಾ.25ರಂದು ಬೆಳಗ್ಗೆ 9.29ರಿಂದ 11.32ರ ಶುಭ ಮುಹೂರ್ತದಲ್ಲಿ ದೇವ ಪ್ರತಿಷ್ಠೆ ಬಳಿಕ ವಿವಿಧ ಉಪ ದೇವತೆಗಳ ಪ್ರತಿಷ್ಠೆ, ಸಂಜೆ 4ಕ್ಕೆ ಸರ್ವೈಶ್ವರ್ಯ ಪೂಜೆ, ರಾತ್ರಿ 9ಕ್ಕೆ ಮಹಿಳಾ ಕೋಲಾಟ, ಮಾ.26ರಂದು ಬೆಳಗ್ಗೆ 8 ಗಂಟೆಗೆ ವಿಷ್ಣು ಸಹಸ್ರನಾಮ, ಮಧ್ಯಾಹ್ನ ಮಹಾಪೂಜೆ, ಪ್ರಸಾದ ರಾತ್ರಿ 9ಕ್ಕೆ ತಿರುವಾದಿರ ಜರಗಲಿದೆ. ಮಾ.27ರಂದು ಬೆಳಿಗ್ಗೆ 10.30ಕ್ಕೆ ಧಾರ್ಮಿಕ ಭಾಷಣ, ರಾತ್ರಿ 7.30ಕ್ಕೆ ದೇವ ಸಂಗೀತ, 9.30ರಿಂದ ವಿವಿಧ ನೃತ್ಯಾವಳಿಗಳು, ಮಾ.28 ರಂದು ಬೆಳಿಗ್ಗೆ 6ರಿಂದ ಚತುರ್ಥ ಬ್ರಹ್ಮಕಲಶ, ಅನ್ನದಾನ, ಸಂಜೆ 6ರಿಂದ ನೃತ್ಯೋತ್ಸವ, ರಾತ್ರಿ 9ರಿಂದ ಕೈಕೊಟ್ಟುಕಳಿ ನಡೆಯಲಿದೆ ಎಂದರು. ವಕೀಲ ಎ.ಬಾಲಕೃಷ್ಣನ್ ನಾಯರ್, ದಿವಾಕರನ್ ಶ್ರೀಧರನ್ ನಾಯರ್, ಗಂಗಾಧರನ್ ನಾಯರ್, ಮೋಹನನ್ ನಾಯರ್ ಇದ್ದರು.

ಪಾಲಕುನ್ನು ಶ್ರೀ ಕ್ಷೇತ್ರದಲ್ಲಿ ಭರಣಿ ಉತ್ಸವ: ಲಲಿತಾ ಸಹಸ್ರನಾಮ ಸ್ತೋತ್ರ ಪಾರಾಯಣ

ಕಾಸರಗೋಡು: ಪಾಲಕುನ್ನು ಕಳಗಂ ಶ್ರೀ ಭಗವತೀ ಕ್ಷೇತ್ರ ಸನ್ನಿಧಿಯಲ್ಲಿ ಭರಣಿ ಮಹೋತ್ಸವದ ಅಂಗವಾಗಿ ಲಲಿತಾ ಸಹಸ್ರನಾಮ ಸ್ತೋತ್ರ ಪಾರಾಯಾಣ ನಡೆಯಿತು. ಈ ಸಂದರ್ಭ ಸಾವಿರಾರು ಮಂದಿ ಪಾಲ್ಗೊಂಡರು.



ಜಿಲ್ಲೆಯಿಂದ ಮಾತ್ರವಲ್ಲದೆ ಕರ್ನಾಟಕದವಿವಿಧೆಡೆಗಳಿಂದ ಬಂದ ಭಕ್ತರು ಪಾರಾಯಣದಲ್ಲಿ ಭಾಗವಹಿಸಿದ್ದರು. ಧಾರ್ಮಿಕ ಭಾಷಣಗಾರ ಕೊಪ್ಪಲ್ ಚಂದ್ರಶೇಖರನ್, ಎಡಮನಈಶ್ವರ ತಂತ್ರಿ, ಪೆರಿಗಮನ ಶ್ರೀಧರ ನಂಬೂದಿರಿ, ಬದಿಯಡ್ಕ ಇಕ್ಕೇರಿ ಪಿ.ರಾಮ, ತೈರೆ ಕ್ಷೇತ್ರ ಟ್ರಸ್ಟಿ ವೆಂಕಟ್ರಮಣ ಮತ್ತಿತರರು ಪಾರಾಯಣಕ್ಕೆ ನೇತೃತ್ವ ನೀಡಿದರು. ಪಾಲಕುನ್ನು ಜಗದಂಬಾ ಚಾರಿಟೇಬಲ್ ಸಮಿತಿ ಈ ಕಾರ್ಯಕ್ರಮ ಹಮ್ಮಿಕೊಂಡಿತ್ತು.

ಸುಂಟಿಕೊಪ್ಪ ಠಾಣೆಯಲ್ಲಿ ಶಾಂತಿ ಸಭೆ | ಸರ್ವಧರ್ಮದ ಮುಖಂಡರಿಗೆ ಕರೆ

ಏಕತೆ ಕಾಯುವ ಪರಂಪರೆಯನ್ನು ಎತ್ತಿ ಹಿಡಿಯಿರಿ

ಸುಂಟಿಕೊಪ್ಪ: ಸುಂಟಿಕೊಪ್ಪ ವಿವಿಧತೆಯಲ್ಲಿ ಏಕತೆಯನ್ನು ಮೆರೆಯುವ ಪ್ರದೇಶವಾಗಿದ್ದು ಇದೇ ಪರಂಪರೆ ಮುಂದುವರೆಸಿಕೊಂಡು ಸರ್ವ ಧರ್ಮಗಳ ಮುಖಂಡರು ಮಹತ್ತರ ಜವಾಬ್ದಾರಿಯನ್ನು ನಿರ್ವಹಿಸಬೇಕೆಂದು ಕುಶಾಲನಗರ ವೃತ್ತ ನಿರೀಕ್ಷಕ ದಿನೇಶ್‌ಕುಮಾರ್ ಕರೆ ನೀಡಿದರು.



ಸುಂಟಿಕೊಪ್ಪ ಪೊಲೀಸ್ ಠಾಣೆಯಲ್ಲಿ ಆಯೋಜಿಸಲಾಗಿದ್ದ ರಂಜಾನ್, ರಾಮನವಮಿ, ಯುಗಾದಿ ಪ್ರಯುಕ್ತ ಆಯೋಜಿಸಲಾಗಿದ್ದ ಶಾಂತಿಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಸುಂಟಿಕೊಪ್ಪ ಪಟ್ಟಣವು ಹಿಂದಿನಿಂದಲೂ ಶಾಂತಿ ಸೌಹಾರ್ದತೆ ಕಾಯ್ದುಕೊಂಡು ಬಂದಿದ್ದು ಮುಂದೆಯೂ ಇದು ಗಟ್ಟಿಯಾಗಿ ನೆಲೆಯೂರಬೇಕಾದರೆ ವಿವಿಧ ಧರ್ಮಗಳ ಮುಖಂಡರು ಮುಂದಾಳತ್ವ ತೆಗದುಕೊಳ್ಳುವ ಮೂಲಕ ಯುವ ಪೀಳಿಗೆಗೆ ಮಾರ್ಗದರ್ಶನ ನೀಡಬೇಕೆಂದು ಅವರು ಕಿವಿಮಾತು ಹೇಳಿದರು.

ಹಬ್ಬಗಳನ್ನು ಆಚರಿಸುವ ಸಂದರ್ಭ ಇತರರ ಭಾವನೆಗಳನ್ನು ಗೌರವಿಸುವಂತಿರಬೇಕು. ಅವರ ಭಾವನೆಗಳಿಗೆ ಘಾಸಿ ಉಂಟಾಗದಂತೆ ಆಚರಿಸಬೇಕು ಹಾಗಿದ್ದಾಗ ಮಾತ್ರ ನಮ್ಮ ಹಬ್ಬ ಆಚರಣೆ, ಸಂಸ್ಕೃತಿಗೆ ಮಹತ್ವ ಬರಲಿದೆ. ಅನ್ಯೋನ್ಯತೆ ಹೆಚ್ಚಾಗಲಿದೆ ಎಂದರು.

ಸುಂಟಿಕೊಪ್ಪ ಠಾಣಾಧಿಕಾರಿ ಮೋಹನ್ ರಾಜ್, ಅಪರಾಧ ವಿಭಾಗ ಠಾಣಾಧಿಕಾರಿ ಗೋಪಾಲ್ ಶಾಂತಿ ಸಭೆಯನ್ನುದ್ದೇಶಿಸಿ ಮಾತನಾಡಿದರು.

ವಿವಿಧ ಧಾರ್ಮಿಕ ಕೇಂದ್ರದ ಮುಖಂಡರಾದ, ಕೆ.ಇ.ಕರೀಂ, ಕೆ.ಎಚ್. ಶರೀಫ್, ಚಾಮುಂಡೇಶ್ವರಿ ಮತ್ತು ಮುತ್ತಪ್ಪ ದೇವಳ ಸಮಿತಿ ಅಧ್ಯಕ್ಷ ಪಟ್ಟೆಮನೆ ಉದಯಕುಮಾರ್, ಖಜಾಂಚಿ ರಮೇಶ್ ಪಿಳ್ಳೆ, ಗೌರಿ ಗಣೇಶೋತ್ಸವ ಆಚರಣಾ ಸಮಿತಿ ಅಧ್ಯಕ್ಷ ವಿಘ್ನೇಶ್, ಹರದೂರು ಗ್ರಾ.ಪಂ. ಮಾಜಿ ಅಧ್ಯಕ್ಷ ಪದ್ಮನಾಭ, ರವಿ, ಅಬ್ದುಲ್ ಸಲಾಂ, ಸೂಫಿ, ಗದ್ದೆಹಳ್ಳ ಜಮಾಅತ್‌ನ ಇಬ್ರಾಹಿಂ, ಕೊಡಗರಹಳ್ಳಿ, 7ನೇ ಹೊಸಕೋಟೆ, ಕಂಬಿಬಾಣೆ ಗ್ರಾಮದ ಧಾರ್ಮಿಕ ಮುಖಂಡರು ಉಪಸ್ಥಿತರಿದ್ದರು.

ಬಿಜೆಪಿ ಅವಧಿಯ ಅಭಿವೃದ್ಧಿಗೆ ಕಾಂಗ್ರೆಸ್‌ನ ಸಾಕ್ಷಿ ಅಗತ್ಯವಿಲ್ಲ

ಮಡಿಕೇರಿ: ಕಳೆದ 20ವರ್ಷಗಳಲ್ಲಿ ಬಿಜೆಪಿ ಶಾಸಕರ ಅಧಿಕಾರವಧಿಯಲ್ಲಿ ಕೊಡಗು ಜಿಲ್ಲೆಯಲ್ಲಿ ನಡೆದಿರುವ ಅಭಿವೃದ್ಧಿ ಕಾರ್ಯಗಳಿಗೆ ಕಾಂಗ್ರೆಸ್ಸಿಗರ ಅಥವಾ ಹಾಲಿ ಶಾಸಕರ ಸರ್ಟಿಫಿಕೇಟ್ ಅಥವಾ ಸಾಕ್ಷಿ ಅಗತ್ಯವಿಲ್ಲ, ಆಯಾ ಕ್ಷೇತ್ರದ ಜನರೇ ಅದಕ್ಕೆ ಮುಂದಿನ ದಿನಗಳಲ್ಲಿ ಉತ್ತರ ನೀಡಲಿದ್ದಾರೆ ಎಂದು ಕೊಡಗು ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ನೆಲ್ಲೀರ ಚಲನ್ ಕುಮಾರ್ ತಿಳಿಸಿದ್ದಾರೆ.



ಗೋಣಿಕೊಪ್ಪ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಬಿಜೆಪಿ ವಿರುದ್ಧ ಕಾಂಗ್ರೆಸ್ ಮಾಡುತ್ತಿರುವ ಆರೋಪದ ಬಗ್ಗೆ ಕಿಡಿಕಾರಿದ ಅವರು, ಬಿಜೆಪಿ ಪಕ್ಷಕ್ಕೆ ಕಾಂಗ್ರೆಸ್ ಕಾರ್ಯಕರ್ತರಿಂದ ನೈತಿಕ ಪಾಠ ಹೇಳಿಸಿಕೊಳ್ಳುವ ಅಗತ್ಯತೆ ಇಲ್ಲ. ಬಿಜೆಪಿ ಪಕ್ಷ ಈ ಕ್ಷೇತ್ರದ ಜನರ ಆಶ್ವಾಸನೆಯನ್ನು ಉಳಿಸಿಕೊಳ್ಳುವಲ್ಲಿ ಅವಿರತ ಪ್ರಯತ್ನ ನಡೆಸಿ ಸಫಲತೆ ಕಂಡಿದೆ. ಈ ವಿಚಾರವಾಗಿ ಯಾವುದೇ ನಾಟಕೀಯ ಬೆಳವಣಿಗೆಯ ಪ್ರೋತ್ಸಾಹ ವಾಗಿಲ್ಲ ಎಂದು ಹೇಳಿದ್ದಾರೆ.

ಕಾಂಗ್ರೆಸ್ ಪಕ್ಷ ಆರೋಪಿಸುವ ಮೊದಲು ಅವರ ಆತ್ಮಸಾಕ್ಷಿ ಮೆಚ್ಚುವಂತಹ ನುಡಿಗಳನ್ನಾಡಲಿ. ಬಿಜೆಪಿ ಆಡಳಿತದಲ್ಲಿ ಯಾವುದೇ ಪಕ್ಷ ಭೇದವಿಲ್ಲದೆ ಕಾಂಗ್ರೆಸ್ಸಿನ ಕಟ್ಟಕಡೆಯ ಕಾರ್ಯಕರ್ತರಿಗೂ ಸರಕಾರದ ಯೋಜನೆಯನ್ನು ಮತ್ತು ಅನುದಾನವನ್ನು ಮತ್ತು ಅಭಿವೃದ್ಧಿಯನ್ನು ತಲುಪಿಸುವ ಕಾರ್ಯವನ್ನು ಮಾಡಿದೆ. ಇಂದಿಗೂ ಅಭಿವೃದ್ಧಿ ಹೆಸರಿನಲ್ಲಿ ಗುದ್ದಲಿ ಪೂಜೆಗಳನ್ನು ನಡೆಸಲು ಕಾಂಗ್ರೆಸ್ಸಿನ ಶಾಸಕರು ಮತ್ತು ನಾಯಕರು ಸಂಚಾರ ಮಾಡುತ್ತಿರುವುದು ಬಿಜೆಪಿ ಆಡಳಿತದಲ್ಲಿದ್ದಾಗ ಮಾಡಿದ ರಸ್ತೆಗಳ ಅಭಿವೃದ್ಧಿ ಭಾಗ್ಯವೇ ಆಗಿದೆ. ಈ ಹಿನ್ನಲೆಯೊಳಗೆ ಬಿಜೆಪಿಯನ್ನು ಅಪಪ್ರಚಾರ ಮಾಡುತ್ತಲೇ ಪ್ರಚಾರ ಗಿಟ್ಟಿಸಿಕೊಳ್ಳುವ ಕುತಂತ್ರಗಾರಿಕೆಯನ್ನು ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.

ಪತ್ರಿಕಾಗೋಷ್ಠಿಗಳ ಮೂಲಕ ಅಪಪ್ರಚಾರಕ್ಕೆ ಒತ್ತುಕೊಡುವುದರಲ್ಲಿ ಅಭಿವೃದ್ಧಿ ಕಾರ್ಯ ಕಾಣುವುದಿಲ್ಲ ಪತ್ರಿಕಾಗೋಷ್ಠಿ ಮಾಡುವವರು ತಮ್ಮ ಕ್ಷೇತ್ರದ ಅಭಿವೃದ್ಧಿಯ ಕಡೆ ಗಮನ ಹರಿಸುವುದು ಬಹು ಮುಖ್ಯ. ಈ ನಿಟ್ಟಿನಲ್ಲಿ ಟಿ ಶೆಟ್ಟಿಗೇರಿ ಗ್ರಾ.ಪಂ. ವ್ಯಾಪ್ತಿಗೆ ಸಂಬಂಧಿಸಿದಂತೆ ರೈಲ್ವೆ ಬ್ಯಾರಿಕೇಡ್ ಅಳವಡಿಸುವ ಕಾಮಗಾರಿಗೆ ಒಂದು ವರ್ಷದ ಹಿಂದೆಯೇ ಗುದ್ದಲಿ ಪೂಜೆ ನಡೆಸಲಾಗಿದೆ. ಆದರೆ, ವರ್ಷಗಳು ಕಳೆದರೂ ಇನ್ನೂ ಕಾಮಗಾರಿ ಪ್ರಾರಂಭವಾಗಿಲ್ಲ ಈ ಬಗ್ಗೆ ಗಮನ ಹರಿಸುವುದು ಬಿಟ್ಟು ಬಿಜೆಪಿ ಮೇಲೆ ಗೂಬೆ ಕೂರಿಸುವುದು ಹಾಸ್ಯಾಸ್ಪದ ನಡೆ ಎಂದು ಲೇವಡಿ ಮಾಡಿದರು.

ಸುತ್ತಮುತ್ತ

ಕೇರಳ ಜಲಪ್ರಾಧಿಕಾರ: ನೀರಿನ ಪರೀಕ್ಷೆಗೆ ಶೀಘ್ರ ನಾಲ್ಕು ಲ್ಯಾಬ್‌ಗಳು ಸಿದ್ಧ

ಕಾಸರಗೋಡು: ಬಾವಿ, ಕೊಳವೆಬಾವಿ, ಕೆರೆ ಇತ್ಯಾದಿ ಜಲಸಂಪನ್ಮೂಲಗಳ ನೀರಿನ ಗುಣಮಟ್ಟ ಪರೀಕ್ಷಿಸಿ ಅದು ಕುಡಿಯಲು ಹಾಗೂ ಇತರ ಉಪಯೋಗಗಳಿಗೆ ಯೋಗ್ಯವಾಗಿದೆಯೇ ಎಂಬುದನ್ನು ಪರೀಕ್ಷಿಸಲು ಕೇರಳ ಜಲಪ್ರಾಧಿಕಾರವು ಜಿಲ್ಲೆಯ ನಾಲ್ಕು ಕಡೆಗಳಲ್ಲಿ ಲ್ಯಾಬ್‌ಗಳನ್ನು ಸಿದ್ಧಪಡಿಸಲಿದೆ.

ಕಾಸರಗೋಡು ನಗರದ ವಿದ್ಯಾನಗರ, ಪಿಲಿಕುಂಜೆ, ಬೋವಿಕ್ಕಾನ ಮತ್ತು ಚಾಮುಂಡಿಕುನ್ನು ಎಂಬೆಡೆಗಳಲ್ಲಿ ಜಲಪ್ರಾಧಿಕಾರದ ಈ ನಾಲ್ಕು ಲ್ಯಾಬ್‌ಗಳು ಕಾರ್ಯವೆಸಗಲಿದೆ. ಇದು ನ್ಯಾಶನಲ್ ಅಕ್ರಡಿಟೇಷನ್ ಬೋರ್ಡ್ ಆಫ್ ಟೆಸ್ಟಿಂಗ್ ಆ್ಯಂಡ್ ಕಾಲಿಬ್ರೇಷನ್ ಲ್ಯಾಬೋರೇಟರೀಸ್‌ನ ಅಂಗೀಕಾರ ಹೊಂದಿರುವ ಲ್ಯಾಬ್‌ಗಳಾಗಿವೆ.

ಅತ್ಯಾಧುನಿಕ ತಂತ್ರಜ್ಞಾನಗಳ ಉಪಯೋಗಿಸಿ ಇಲ್ಲಿ ನೀರಿನ ಸ್ಯಾಂಪಲ್‌ಗಳನ್ನು ಪರೀಕ್ಷಿಸಲಾಗುತ್ತಿದೆ. ನೀರಿನ ಗುಣಮಟ್ಟ ಪರೀಕ್ಷಿಸುವುದರ ಜೊತೆಗೆ ನೀರಿನ ಉತ್ತಮ ಗುಣಮಟ್ಟ ಕಾಪಾಡಿಕೊಳ್ಳಲಿರುವ ಅಗತ್ಯದ ಸಲಹೆಗಳು ಹಾಗೂ ನೀರಿನ ಗುಣಮಟ್ಟ ಕುಸಿದಿದ್ದಲ್ಲಿ ಅದಕ್ಕೆ ಪರಿಹಾರ ಕಂಡುಕೊಳ್ಳುವ ಸಲಹೆಗಳನ್ನು ಈ ಲ್ಯಾಬ್‌ಗಳಲ್ಲಿ ನೀಡಲಾಗುತ್ತಿದೆ. ನೀರಿನ ಪರೀಕ್ಷೆಗೆ ನಿಗದಿತ ಶುಲ್ಕ ನೀಡಬೇಕಾಗಿದೆ.

ಇಂದು 'ಭತ್ತದ ತಳಿಯ ಕಾವಲುಗಾರ' ಪುಸ್ತಕ ಲೋಕಾರ್ಪಣೆ

ಮುಳ್ಳೇರಿಯ: ಭತ್ತದ ತಳಿಗಳ ಸಂರಕ್ಷಕ ಪದ್ಮಶ್ರೀ ಸತ್ಯನಾರಾಯಣ ಬೆಳೇರಿಯವರ ಕುರಿತು ನಿವೃತ್ತ ಪ್ರಾಧ್ಯಾಪಕ ನರೇಂದ್ರ ರೈ ದೇರ್ಲ ಬರೆದ ಭತ್ತದ ತಳಿಯ ಕಾವಲುಗಾರ ಎಂಬ ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮವು ಮಾ.19ರಂದು ಮಧ್ಯಾಹ್ನ 2 ಗಂಟೆಗೆ ಬೆಳ್ಳೂರು ಶ್ರೀ ಮಹಾವಿಷ್ಣು ದೇವಸ್ಥಾನದಲ್ಲಿ ಜರಗಲಿದೆ. ಪ್ರಗತಿಪರ ಕೃಷಿಕ, ಸಾಮಾಜಿಕ ಧುರೀಣ ಕಲ್ಲಗ ಚಂದ್ರಶೇಖರ ರಾವ್ ಕಾರ್ಯಕ್ರಮ ಉದ್ಘಾಟಿಸುವರು. ಬೆಳ್ಳೂರು ಶ್ರೀ ಮಹಾವಿಷ್ಣು ಕ್ಷೇತ್ರದ ಆನುವಂಶಿಕ ಮೊಕ್ತೇಸರ ಹರಿಕೃಷ್ಣ ಅಧ್ಯಕ್ಷತೆ ವಹಿಸುವರು. ಹಿರಿಯ ಲೇಖಕ ನರಸಿಂಗ ರಾವ್ ಕಾಸರಗೋಡು ಕೃತಿ ಬಿಡುಗಡೆಗೊಳಿಸುವರು. ಉದ್ಯಮಿ ಮಧುಸೂದನ ಆಯರ್ ಮತ್ತಿತರರು ಈ ಸಂದರ್ಭದಲ್ಲಿ ಭಾಗವಹಿಸುವರು.

ಅಡುಗೆ ಅನಿಲ ಕೊರತೆ: ಮಾ.23ರಂದು ಹೊಟೇಲ್‌ಗಳು ಬಂದ್

ಕಾಸರಗೋಡು: ಹೊಟೇಲ್‌ಗಳನ್ನು ಅಗತ್ಯದ ಸೇವೆ ವಲಯದಲ್ಲಿ ಘೋಷಿಸಿ ಅವುಗಳಿಗೆ ಆವಶ್ಯಕ ಅಡುಗೆ ಅನಿಲ ಸಿಲಿಂಡರ್‌ಗಳನ್ನು ಪೂರೈಸಬೇಕೆಂಬ ಬೇಡಿಕೆ ಮುಂದಿರಿಸಿ ಮಾ.23ರಂದು ಕಾಸರಗೋಡು ಜಿಲ್ಲೆಯೂ ಸೇರಿದಂತೆ ರಾಜ್ಯವ್ಯಾಪಕವಾಗಿ ಹೊಟೇಲ್‌ಗಳನ್ನು ಮುಚ್ಚುಗಡೆಗೊಳಿಸಿ ಪ್ರತಿಭಟನೆ ಹಮ್ಮಿಕೊಳ್ಳಲು ಕೇರಳ ಹೊಟೇಲ್ ಆ್ಯಂಡ್ ರೆಸ್ಟೋರೆಂಟ್ ಅಸೋಸಿಯೇಶನ್ ನಿರ್ಧರಿಸಿದೆ. ಸಮರ್ಪಕ ರೀತಿಯಲ್ಲಿ ಅಡುಗೆ ಅನಿಲ ದೊರೆಯದಿರುವ ಕಾರಣದಿಂದಾಗಿ ಕಾಸರಗೋಡು ಜಿಲ್ಲೆಯೂ ಸಹಿತ ರಾಜ್ಯದ ಹಲವು ಹೊಟೇಲ್‌ಗಳನ್ನು ಈಗಾಗಲೇ ಮುಚ್ಚಲಾಗಿದೆ. ಈ ಸಂಕಷ್ಟದಿಂದ ಪಾರಾಗಲು ಅಗತ್ಯದಷ್ಟು ಅಡುಗೆ ಅನಿಲವನ್ನು ಪೂರೈಸಲು ತ್ವರಿತ ಕ್ರಮ ಕೈಗೊಳ್ಳಬೇಕೆಂದು ಅಸೋಸಿಯೇಶನ್‌ನ ಪದಾಧಿಕಾರಿಗಳು ಸರಕಾರವನ್ನು ಒತ್ತಾಯಿಸಿದ್ದಾರೆ.

ಸಂಸ್ಕೃತ ಸ್ಕಾಲರ್ ಶಿಪ್‌ಗೆ ಅರ್ಹತೆ ಪಡೆದ ಮಕ್ಕಳು



ಕುಂಬಳೆ: ಶೈಕ್ಷಣಿಕ ವರ್ಷದ ಸಂಸ್ಕೃತ ಸ್ಕಾಲರ್ ಶಿಪ್ ಪರೀಕ್ಷೆಯಲ್ಲಿ ಸೂರಂಬೈಲು ಸರಕಾರಿ ಪ್ರೌಢಶಾಲೆಯ ಸಾನ್ವಿ, ಅಂಜಿತ, ಆರಾಧ್ಯ, ಸನುಷ, ಸಾಯುಷ್, ಶಿನಿಶ್ ಉತ್ತೀರ್ಣರಾಗಿ ಸ್ಕಾಲರ್ ಶಿಪ್‌ಗೆ ಅರ್ಹತೆ ಪಡೆದಿದ್ದಾರೆ. ಇವರ ಸಾಧನೆಗೆ ಶಾಲಾ ರಕ್ಷಕ ಶಿಕ್ಷಕ ಸಂಘ ಅಭಿನಂದನೆ ಸಲ್ಲಿಸಿದೆ.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಮೀಡಿಯಾ ಸೆಂಟರ್ ಉದ್ಘಾಟನೆ | ಸಮಾಲೋಚನಾ ಸಭೆ

ವಿಧಾನಸಭಾ ಚುನಾವಣೆಗೆ ಕಾಸರಗೋಡು ಜಿಲ್ಲೆ ಸಜ್ಜು: ಡೀಸಿ

ಕಾಸರಗೋಡು: ರಾಜ್ಯದಲ್ಲಿ ಏ.9ರಂದು ನಡೆಯಲಿರುವ ವಿಧಾನಸಭಾ ಚುನಾವಣೆಗೆ ಕಾಸರಗೋಡು ಜಿಲ್ಲೆಸಿದ್ಧವಾಗಿದ್ದು ಪಾರದರ್ಶಕ ಮತ್ತು ನ್ಯಾಯಯುತ ಚುನಾವಣೆ ಖಚಿತಪಡಿಸಿಕೊಳ್ಳಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ಜಿಲ್ಲಾ ಚುನಾವಣಾ ಅಧಿಕಾರಿಯಾಗಿರುವ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಛೇಂಬರ್‌ನ ಮೀಡಿಯಾ ಸೆಂಟರ್‌ನ್ನು ಉದ್ಘಾಟಿಸಿದ ಬಳಿಕ ಸುದ್ದಿಗಾರರ ಜೊತೆ ನಡೆದ ಸಮಾಲೋಚನಾ ಸಭೆಯಲ್ಲಿ ಅವರು ಮಾತನಾಡಿದರು.

ಏ.9ರಂದು ನಡೆಯಲಿದೆ ಮತದಾನ

ಏ. 9ರಂದು ಬೆಳಿಗ್ಗೆ 7ರಿಂದ ಸಂಜೆ 6ರ ವರೆಗೆ ಮತದಾನ ನಡೆಯಲಿದೆ. ಜಿಲ್ಲೆಯಲ್ಲಿ ಒಟ್ಟು 11,00,036 ಮತದಾರರಿದ್ದಾರೆ. ಅದರಲ್ಲಿ 5,42,861 ಪುರುಷರು, 5,57,163 ಮಹಿಳೆಯರು ಮತ್ತು 12 ಟ್ರಾನ್ಸ್‌ಜೆಂಡರ್‌ಗಳು ಒಳಗೊಂಡಿದ್ದಾರೆ. ಜಿಲ್ಲೆಯಲ್ಲಿ 1141 ಮತಗಟ್ಟೆಗಳನ್ನು ಅಳವಡಿಸಲಾಗಿದೆ.

ಮಾ.23ರ ವರೆಗೆ ನಾಮಪತ್ರಗಳ ಸ್ವೀಕಾರ ನಡೆಯಲಿದ್ದು ಮಾ.24ರಂದು ಸೂಕ್ಷ್ಮ ಪರಿಶೀಲನೆ, ಮಾ.26ರ ವರೆಗೆ ನಾಮಪತ್ರ ಹಿಂತೆಗೆಯಬಹುದಾಗಿದೆ. ಮತಗಳ ಎಣಿಕೆ ಮೇ 4ರಂದು ನಡೆಯಲಿದೆ. ಚುನಾವಣಾ ಪ್ರಕ್ರಿಯೆಯು ಮೇ 6ರಂದು ಕೊನೆಗೊಳ್ಳಲಿದೆ.



ಚುನಾವಣಾ ಪ್ರಕ್ರಿಯೆಗಳ ಮೇಲ್ವಿಚರಣೆಗೆ, ಸುಗಮ ಮತದಾನ ಖಚಿತಪಡಿಸಿಕೊಳ್ಳಲು ಚುನಾವಣಾ ಆಯೋಗ ಸಾರ್ವಜನಿಕ ವೀಕ್ಷಕರು, ವೆಚ್ಚ ವೀಕ್ಷಕರು, ಪೊಲೀಸ್ ವೀಕ್ಷಕರನ್ನು ನೇಮಿಸಿದೆ. ಹಸಿರು ಸಂಹಿತೆಗೆ ಬದ್ಧವಾಗಿ ಚುನಾವಣೆಗಳು ನಡೆಯಲಿವೆ.

ಜಿಲ್ಲಾ ಮಟ್ಟದಲ್ಲಿ 1141 ಮತಗಟ್ಟೆಗಳು

ಮಂಜೇಶ್ವರದಲ್ಲಿ 229, ಕಾಸರಗೋಡಿನಲ್ಲಿ 218, ಉದುಮ 237, ಕಾಂಞಂಗಾಡ್ 239, ತೃಕ್ಕರೀಪುರದಲ್ಲಿ 218 ಒಳಗೊಂಡಂತೆ ಜಿಲ್ಲಾ ಮಟ್ಟದಲ್ಲಿ 1141 ಮತಗಟ್ಟೆಗಳು ಕಾರ್ಯಾಚರಿಸಲಿದೆ.

ಎಲ್ಲಾ ಬೂತ್‌ಗಳಿಗೂ ಕ್ಯಾಮರಾ ಕಣ್ಣು

ಜಿಲ್ಲೆಯ ಎಲ್ಲಾ 1141 ಬೂತ್‌ಗಳಲ್ಲಿ ವೆಬ್ ಕಾಸ್ಟಿಂಗ್ ಸ್ಥಾಪಿಸಲಾಗುವುದು. ಏ. 9ರಂದು ಬೆಳಗ್ಗೆ ಅಣಕು ಮತದಾನ ಪ್ರಾರಂಭದಿಂದ ಅಂತ್ಯದ ವರೆಗೆ, ಮತಯಂತ್ರಗಳ ಪ್ಯಾಕಿಂಗ್ ವರೆಗೆ ಮತಗಟ್ಟೆಗಳಲ್ಲಿನ ಕಾರ್ಯವೈಖರಿಯನ್ನು ಕಲೆಕ್ಟರೇಟ್‌ನಲ್ಲಿರುವ ನಿಯಂತ್ರಣ ಕೊಠಡಿ ಮೂಲಕ ನೇರಪ್ರಸಾರದೊಂದಿಗೆ ವೀಕ್ಷಿಸಲಾಗುವುದೆಂದು ಜಿಲ್ಲಾಧಿಕಾರಿ ತಿಳಿಸಿದರು.

ಮಾದರಿ, ಮಹಿಳಾ ಮತಗಟ್ಟೆ

ಪ್ರತಿ ಕ್ಷೇತ್ರಕ್ಕೆ ಒಂದರಂತೆ ಮಾದರಿ, ಮಹಿಳಾ ಮತಗಟ್ಟೆಗಳು ಕಾರ್ಯನಿರ್ವಹಿಸಲಿದೆ. ಜಿಲ್ಲೆಯಲ್ಲಿ 85 ವರ್ಷ ಮೇಲ್ಪಟ್ಟ 4292 ಮತದಾರರು, 10259 ದಿವ್ಯಾಂಗ ಮತದಾರರಿದ್ದು, ಅವರಿಗೆ ಮನೆಯಲ್ಲಿದ್ದುಕೊಂಡೇ ಮತ ಚಲಾಯಿಸಲು ಅವಕಾಶ ಕಲ್ಪಿಸಲಾಗಿದೆ. ಮತದಾರರಿಗೆ ಮತ ಚಲಾವಣೆಗೆ 12 ಗುರುತಿನ ಚೀಟಿಗಳನ್ನು ಚುನಾವಣಾ ಆಯೋಗ ಅನುಮೋದಿಸಿದ್ದು, ಅದರಲ್ಲಿ ಯಾವುದದರೊಂದನ್ನು ಬಳಸಿಕೊಳ್ಳಬಹುದಾಗಿದೆ.

● ಅರ್ಜುನ್ ಪಾಂಡ್ಯನ್, ಡೀಸಿ

ಏ.8: ಚುನಾವಣಾ ಸಾಮಗ್ರಿ ವಿತರಣೆ

ಚುನಾವಣೆಗೆ ಸಂಬಂಧಿಸಿದ ಮತಗಟ್ಟೆ ಸಾಮಗ್ರಿಗಳ ವಿತರಣೆಯನ್ನು ಏಪ್ರಿಲ್ 8ರಂದು ಬೆಳಿಗ್ಗೆ 8ರಿಂದ ಚುನಾವಣಾ ಸಾಮಗ್ರಿಗಳ ವಿತರಣೆ ನಡೆಯುವುದು. ಮಂಜೇಶ್ವರ, ಕಾಸರಗೋಡು ವಿಧಾನಸಭಾ ಕ್ಷೇತ್ರಗಳ ಚುನಾವಣಾ ಸಾಮಗ್ರಿ ವಿತರಣೆ, ಸ್ವೀಕೃತಿ ಕೇಂದ್ರ ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ಸಜ್ಜುಗೊಳಿಸಲಾಗಿದೆ. ಉದುಮ ಕ್ಷೇತ್ರದ ವಿತರಣಾ ಕೇಂದ್ರ ವಿದ್ಯಾನಗರ ತನ್ಬಿಹುಲ್ ಇಸ್ಲಾಂ ಹೈಯರ್ ಸೆಕೆಂಡರಿ ಶಾಲೆ, ಕಾಞಂಗಾಡು ಮತ್ತು ತೃಕ್ಕರೀಪುರ ವಿಧಾನಸಭಾ ಕ್ಷೇತ್ರದ ವಿತರಣಾ ಕೇಂದ್ರ ಕಾಞಂಗಾಡು ದುರ್ಗಾ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಕಾರ್ಯಾಚರಿಸಲಿದೆ. ಜಿಲ್ಲೆಯಲ್ಲಿ 238 ಸೂಕ್ಷ್ಮ ಮತಗಟ್ಟೆಗಳನ್ನು ಗುರುತಿಸಲಾಗಿದ್ದು ಅವುಗಳಲ್ಲಿ ಬಹುತೇಕ ಕಾಸರಗೋಡು, ಮಂಜೇಶ್ವರ ವಿಧಾನಸಭಾ ಕ್ಷೇತ್ರಗಳು ಒಳಗೊಂಡಿವೆ.

ಮದ್ಯವಿತರಣೆಗೆ ನಿಷೇಧ

ಮತದಾನಕ್ಕೆ 48 ಗಂಟೆಗಳ ಮುಂಚಿತವಾಗಿ ಜಿಲ್ಲೆಯಾದ್ಯಂತ ಮದ್ಯವಿತರಣೆಗೆ ನಿಷೇಧ ಹೇರಲಾಗುವುದು. ಏಪ್ರಿಲ್ 7ರಂದು ಸಂಜೆ 6ರಿಂದ ಏಪ್ರಿಲ್ 9ರಂದು ಸಂಜೆ 6 ರವರೆಗೆ ಮದ್ಯ ನಿಷೇಧ ಜಾರಿಯಲ್ಲಿರಲಿದೆ. ಚುನಾವಣಾ ಸಹಾಯಕ ಜಿಲ್ಲಾಧಿಕಾರಿ ಎ.ಎನ್.ಗೋಪಕುಮಾರ್, ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂದನನ್ ಉಪಸ್ಥಿತರಿದ್ದರು.

ವಿದ್ಯಾನಗರ ಸರಕಾರಿ ಅಂಧರ ಶಾಲೆ: ಅನುಮೋದನಾ ಸದಸ್ ಕಾರ್ಯಕ್ರಮ



ಕಾಸರಗೋಡು: ವಿದ್ಯಾನಗರ ಸರಕಾರಿ ಅಂಧರ ಶಾಲೆಯಲ್ಲಿ ದೃಷ್ಟಿಹೀನರಿಗಾಗಿ ಅನುಮೋದನಾ ಸದಸ್ (ಸ್ನೇಹ ಸದಸ್ ಅಥವಾ ಅಭಿನಂದನಾ ಸಭೆ) - 2026 ಎಂಬ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಅಂಧರು ಆತ್ಮವಿಶ್ವಾಸದಿಂದ ದೈಹಿಕ ಮಿತಿಗಳನ್ನು ಮೀರಿ ಅಧ್ಯಯನ, ಕಲೆ ಮತ್ತು ಕ್ರೀಡಾ ಕ್ಷೇತ್ರಗಳಲ್ಲಿ ಭಾಗವಹಿಸಿ ಯಶಸ್ಸು ಸಾಧಿಸಿದರು.

2025-26ನೇ ಶೈಕ್ಷಣಿಕ ವರ್ಷದಲ್ಲಿ ಶಾಲೆಗೆ ಹೆಮ್ಮೆ ತಂದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗೌರವಿಸಲು ಈ ಅನುಮೋದನಾ ಸದಸ್‌ನ್ನು ಹಮ್ಮಿಕೊಳ್ಳಲಾಗಿತ್ತು.

ಮಕ್ಕಳ ಸಾಧನೆ ಸಮಾಜಕ್ಕೆ ಪಾಠ

ಶಾಲಾ ಸಾಹಿತ್ಯ ಸಂಘದ ಅಭಿನಂದನಾ ಸಭೆ ಮತ್ತು ಸಮಾರೋಪ ಸಮಾರಂಭವನ್ನು ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂದನನ್ ಉದ್ಘಾಟಿಸಿ, ನಗುನಗುತ್ತಾ ಸಮಸ್ಯೆಗಳನ್ನು ಎದುರಿಸುತ್ತಿರುವ ಅಂಧ ವಲಯದ ಮಕ್ಕಳ ಸಾಧನೆಗಳು ಸಮಾಜಕ್ಕೆ ಒಂದು ಉತ್ತಮ ಪಾಠ ಎಂದು ಅವರು ಹೇಳಿದರು.

ಶಾಲಾ ಸಭಾಂಗಣದಲ್ಲಿ ನಡೆದ ಈ ಸಮಾರಂಭದ ಅಧ್ಯಕ್ಷತೆಯನ್ನು ಮುಖ್ಯೋಪಾಧ್ಯಾಯಿನಿ ಕೆ.ಓಮನಾ ವಹಿಸಿದ್ದರು. ಪಿಟಿಎ ಉಪಾಧ್ಯಕ್ಷ ಫೈಸಲ್, ಸಿಬ್ಬಂದಿ ಕಾರ್ಯದರ್ಶಿ ಪಿ.ನಾರಾಯಣನ್, ಸಂಗೀತ ಶಿಕ್ಷಕ ಟಿ.ಪಿ.ಸೋಮಶೇಖರನ್, ವಾದ್ಯ ಸಂಗೀತ ಶಿಕ್ಷಕ ಎಂ.ಉಮೇಶನ್, ಬ್ರೈಲ್ ಶಿಕ್ಷಕಿ ಟಿ.ವಿ.ಉಷಾ, ಸಾಹಿತ್ಯ ಸಮಾಜ ಸಂಚಾಲಕಿ ಫಾತಿಮಾ ರಶೀದಾ, ಭಾಷಾ ಕ್ಲಬ್ ಸಂಚಾಲಕಿ ಅಶ್ವತಿ ಮತ್ತು ಶಾಲಾ ನಾಯಕ ಅಬ್ದುಲ್ಲಾಹಿ ಮುಹಮ್ಮದ್ ವಫಾ ಮಾತನಾಡಿದರು.

ಶಾಲಾ ಸಂಪನ್ಮೂಲ ಗ್ರೂಪ್ ಸಂಚಾಲಕ ಎಂ.ರಾಜೇಶ್ ಬಾಬು ಸ್ವಾಗತಿಸಿ, ಕಾರ್ಯಕ್ರಮ ಸಂಯೋಜಕ ಎ.ಎಸ್. ಶಂಸಾದ್ ವಂದಿಸಿದರು. ವಿದ್ಯಾರ್ಥಿ ಗಳಿಂದ ಸಾಂಸ್ಕೃತಿಕ ಪ್ರದರ್ಶನ ನಡೆದವು.

ಜಿಲ್ಲೆಯಲ್ಲಿ ಆಡು ರೇಬೀಸ್ ನಿರ್ಮೂಲನಾ ಅಭಿಯಾನದ ಎರಡನೇ ಹಂತ ಆರಂಭ



ಕಾಸರಗೋಡು: ಪ್ರಾಣಿ ಕಲ್ಯಾಣ ಇಲಾಖೆ ನೇತೃತ್ವ ಆಡು ರೇಬೀಸ್ ನಿರ್ಮೂಲನಾ ಅಭಿಯಾನದ 2ನೇ ಹಂತ ಜಿಲ್ಲೆಯಲ್ಲಿ ಆರಂಭವಾಗಿದೆ. ಅದರಂತೆ ದ್ವಿತೀಯ ಹಂತದ ಜಿಲ್ಲಾ ಮಟ್ಟದ ಉದ್ಘಾಟನೆಯನ್ನು ಅಜಾನೂರು ಗ್ರಾ.ಪಂ.ನ ರಾವಣೇಶ್ವರದಲ್ಲಿ ಜಿ.ಪಂ. ಉಪಾಧ್ಯಕ್ಷೆ ಕೆ.ಕೆ.ಸೋಯಾ ನೆರವೇರಿಸಿದರು. ಜಿಲ್ಲಾ ಪ್ರಾಣಿ ಕಲ್ಯಾಣ ಇಲಾಖೆ ಅಧಿಕಾರಿ ಡಾ.ಬಿಂದು ಕೆ.ವಿ. ಯೋಜನೆ ವಿವರಿಸಿದರು. ಅಜಾನೂರು ಗ್ರಾ. ಪಂ. ಅಧ್ಯಕ್ಷೆ ವಿ.ವಿ.ತುಳಸಿ, ಉಪಾಧ್ಯಕ್ಷ ಪ್ರಭಾಕರನ್ ಮೂಲಕಂಡಂ, ವಾರ್ಡ್ ಸದಸ್ಯೆ ದೀಪಾ ಪ್ರವೀಣ್, ಜಿಲ್ಲಾ ಸಂಯೋಜಕಿ ಎಡಿಸಿಪಿ ಕಾಸರಗೋಡು ಡಾ.ಆಶಾ ಬಾಲನ್, ಜಿಲ್ಲಾ ಸಾಂಕ್ರಾಮಿಕ ರೋಗತಜ್ಞ ಡಾ.ಕ್ರಿಸ್ ಐನ್‌ಸ್ಟೈನ್ ಮತ್ತು ರಾವಣೇಶ್ವರ ಪಶುವೈದ್ಯ ಡಾ.ಗೋಕುಲ್ ರಾಜ್ ಉಪಸ್ಥಿತರಿದ್ದರು.

ಆಡುಗಳಿಗೆ ಶೇ.35ರಷ್ಟು ಸಾವು ರೇಬೀಸ್‌ನಿಂದ ತಲೆದೋರುತ್ತದೆ. ಈ ರೋಗಕ್ಕೆ ಯಾವುದೇ ಪರಿಣಾಮಕಾರಿ ಚಿಕಿತ್ಸೆಯಿಲ್ಲ, ಲಕ್ಷಣಗಳು ಮತ್ತು ಬ್ಯಾಕ್ಟೀರಿಯಾದ ಸೋಂಕಿಗೆ ಚಿಕಿತ್ಸೆ ನೀಡಲಾಗುತ್ತದೆ.

2030ರೊಳಗೆ ರೋಗ ನಿರ್ಮೂಲನೆ ಗುರಿ

2030ರ ವೇಳೆಗೆ ರೋಗ ನಿರ್ಮೂಲನೆ ಮಾಡುವುದು ಗುರಿಯಾಗಿದೆ. 4 ತಿಂಗಳಿಗಿಂತ ಕಡಿಮೆ ವಯಸ್ಸಿನ, ಗರ್ಭಿಣಿ, ಅನಾರೋಗ್ಯ ಪೀಡಿತ ಆಡುಗಳಿಗೆ ಲಸಿಕೆಯಿಂದ ವಿನಾಯಿತಿ. ಪಶುಪಾಲನಾ ಇಲಾಖೆ, ಪಶು ಅಧಿಕಾರಿಗಳು, ಇತರ ಸಿಬ್ಬಂದಿಗಳು ಮನೆಗಳಿಗೆ ಭೇಟಿ ನೀಡಿ ಲಸಿಕೆ ಹಾಕುತ್ತಾರೆ. ಆಡು ಸಾಕಣೆಯಲ್ಲಿ ತೊಡಗಿರುವ ರೈತರು ಆಡುಗಳಿಗೆ ಲಸಿಕೆ ಹಾಕಿಸಬೇಕು.

● ಡಾ.ಬಿಂದು ಕೆ.ವಿ., ಜಿಲ್ಲಾ ಪಶುಪಾಲನಾ ಅಧಿಕಾರಿ

ಜಿಲ್ಲಾ ಮಟ್ಟದ ಮತದಾರರ ಜಾಗೃತಿ ಕಾರ್ಯಕ್ರಮಗಳ ಲಾಂಛನ ಬಿಡುಗಡೆ



ಕಾಸರಗೋಡು: ವಿಧಾನಸಭಾ ಚುನಾವಣೆ ಅಂಗವಾಗಿ ಜಿಲ್ಲಾ ಮಟ್ಟದ ಮತದಾರರ ಜಾಗೃತಿ ಕಾರ್ಯಕ್ರಮವಾದ ಸ್ವೀಪ್‌ನ ಲಾಂಛನವನ್ನು ಜಿಲ್ಲಾಧಿಕಾರಿ ಅರ್ಜುನ್ ಪಾಂಡಿಯನ್ ಮಂಗಳವಾರ ಬಿಡುಗಡೆಗೊಳಿಸಿದರು. ವಿಧಾನಸಭಾ ಚುನಾವಣೆ ಸಮಯದಲ್ಲಿ ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲಿ ಕೇಂದ್ರ ಚುನಾವಣಾ ಆಯೋಗ ನಿಗದಿಪಡಿಸಿದ ಮಾದರಿ ನೀತಿ ಸಂಹಿತ ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಜಿಲ್ಲಾಧಿಕಾರಿ ಅರ್ಜುನ್ ಪಾಂಡಿಯನ್ ಹೇಳಿದರು. ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರದಲ್ಲಿ ಹಸಿರು ಸಂಹಿತೆ ಪಾಲಿಸಬೇಕು. ಸಾರ್ವಜನಿಕ ಮತ್ತು ಖಾಸಗಿ ಸ್ಥಳಗಳಲ್ಲಿ ಅಕ್ರಮ ಪ್ರಚಾರ ಸಾಮಗ್ರಿಗಳನ್ನು ತೆಗೆದುಹಾಕಲು ಜಿಲ್ಲಾಧಿಕಾರಿ ನಿರ್ದೇಶನ ನೀಡಿದರು. ಸಭೆಯಲ್ಲಿ ಚುನಾವಣಾ ಉಪ ಜಿಲ್ಲಾಧಿಕಾರಿ ಎ.ಎನ್.ಗೋಪಕುಮಾರ್, ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಪೆರಡಾಲ ಬ್ರಹ್ಮಕಲಶ: ನಾಳೆ ಚಪ್ಪರ ಮುಹೂರ್ತ



ಬದಿಯಡ್ಕ: ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಲ್ಲಿ ಏಪ್ರಿಲ್ 17ರಿಂದ 28ರ ತನಕ ನಡೆಯಲಿರುವ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವದ ಅಂಗವಾಗಿ ಮಾ.20ರಂದು ಚಪ್ಪರ ಮುಹೂರ್ತ ಕಾರ್ಯಕ್ರಮ ಜರಗಲಿದೆ. ಬೆಳಿಗ್ಗೆ 9.36ರಿಂದ 11 ಗಂಟೆಯ ಮಧ್ಯೆ ಒದಗುವ ಶುಭವೇಳೆಯಲ್ಲಿ ಶ್ರೀ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ದಿವ್ಯ ಸಾನ್ನಿಧ್ಯವನ್ನು ವಹಿಸಿ ಅನುಗ್ರಹ ಮಂತ್ರಾಕ್ಷತೆ ನೀಡಲಿದ್ದಾರೆ.



ಎಡನೀರು ಶ್ರೀ ಮಠದಲ್ಲಿ ಬುಧವಾರ ಮುಳ್ಳೇರಿಯದ ವಿದ್ಯಾಶ್ರೀ ಶಿಕ್ಷಣ ಕೇಂದ್ರದ 108 ವಿದ್ಯಾರ್ಥಿಗಳಿಂದ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ ಜರಗಿತು. ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರು ಮಂತ್ರಾಕ್ಷತೆಯನ್ನು ನೀಡಿ ಮಕ್ಕಳನ್ನು ಹರಸಿದರು. ಮಕ್ಕಳು ಶ್ರೀ ಮಠದಲ್ಲಿ ಭೋಜನ ಪ್ರಸಾದ ಸ್ವೀಕರಿಸಿದರು.

ಕಿದೂರು ಸ.ಕಿರಿಯ ಪ್ರಾಥಮಿಕ ಶಾಲಾ ನೂತನ ಕಟ್ಟಡ, ಮಹಾದ್ವಾರ ಉದ್ಘಾಟನೆ



ಕುಂಬಳೆ: ಕಿದೂರು ಸರಕಾರಿ ಕಿ.ಪ್ರಾ.ಶಾಲೆ ನೂತನ ಕಟ್ಟಡ, ಶಾಲಾ ಸುವರ್ಣ ಮಹೋತ್ಸವದ ಸವಿನೆನಪಿಗೆ ನಿರ್ಮಿಸಿದ ಶಾಲಾ ಮಹಾದ್ವಾರ ಉದ್ಘಾಟನಾ ಸಮಾರಂಭ ಜರಗಿತು. ಮಂಜೇಶ್ವರಶಾಸಕಎ.ಕೆ.ಎಂ.ಅಶ್ರಫ್ ಉದ್ಘಾಟಿಸಿದರು. ಕುಂಬಳೆ ಗ್ರಾ.ಪಂ.ಅಧ್ಯಕ್ಷ ವಿ.ಪಿ.ಅಬ್ದುಲ್‌ಖಾದರ್ ಅಧ್ಯಕ್ಷತೆ ವಹಿಸಿದ್ದರು. ಕಾಸರಗೋಡು ಲೋಕೋಪಯೋಗಿ ಇಲಾಖೆ ಎಕ್ಸಿಕ್ಯೂಟಿವ್ ಇಂಜಿನಿಯರ್ ಜಗದೀಶ್ ವರದಿ ಮಂಡಿಸಿದರು. ಅತಿಥಿಗಳಾಗಿ ಕಾಸರಗೋಡು ಬ್ಲಾಕ್ ಪಂ. ಸದಸ್ಯೆ ನಸೀಮ ಪಿ.ಎಂ., ಕುಂಬಳೆ ಗ್ರಾ.ಪಂ. ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷ ಎಂ.ಪಿ.ಖಾಲಿದ್, ಪಂ. ಸದಸ್ಯರಾದ ಸುಕೇಶ್ ಭಂಡಾರಿ, ಮಂಜುನಾಥ ಆಳ್ವ ಮಡ್ವ, ಜಿಲ್ಲಾ ಶಿಕ್ಷಣ ಉಪನಿರ್ದೇಶಕ ಇಬ್ರಾಹಿಂ ಬಿ., ಮಂಜೇಶ್ವರ ಉಪಜಿಲ್ಲಾ ಶಿಕ್ಷಣಾಧಿಕಾರಿ ಜೋರ್ಜ್ ಕ್ರಾಸ್ತ, ಮಂಜೇಶ್ವರ ಸುಪರಿಡೆಂಟ್ ಎಇಒ ಜಿತೇಂದ್ರ ಎಸ್.ಎಚ್., ರಾಜಗೋಪಾಲನ್ ಪಿ., ಜಿ.ಪಂ. ಸದಸ್ಯ ಅರ್ಝೀಜ್ ಕಳತ್ತೂರು ಮೊದಲಾದವರು ಉಪಸ್ಥಿತರಿದ್ದರು.

ಈ ಸಂದರ್ಭ ಸೇವೆಯಿಂದ ನಿವೃತ್ತಿ ಹೊಂದುವ ವೀಣಾ ಕುಮಾರಿ ಕೆ.ಸಿ. ಅವರನ್ನು ಸಂಘ ಸಂಸ್ಥೆಗಳಿಂದ ಗೌರವಿಸಲಾಯಿತು. ಕಿದೂರು ಸರಕಾರಿ ಶಾಲಾ ನಿವೃತ್ತ ಮುಖ್ಯೋಪಾಧ್ಯಾಯ ರಾಮು ಯು., ಇಚ್ಚಂಪಾಡಿ ಎಎಸ್‌ಬಿ ಶಾಲಾ ನಿವೃತ್ತ ಮುಖ್ಯೋಪಾಧ್ಯಾಯ ನರಹರಿ ಕೆ., ಪುಂಡರೀಕಾಕ್ಷ ಕೆ.ಎಲ್., ನಿವೃತ್ತ ಯೋಧ, ಅಧ್ಯಾಪಕ ಯು.ಎಂ. ಮೂಲ್ಯ ಕಿದೂರು, ಕುಂಬಳೆ ಗ್ರಾ.ಪಂ. ಮಾಜಿ ಸದಸ್ಯೆ ಪುಷ್ಪಲತಾ ಶೆಟ್ಟಿ, ರವಿರಾಜ್ ಕೆ., ಬಿಜೆಪಿ ರಾಜ್ಯ ಸಮಿತಿ ಸದಸ್ಯ ಸುರೇಶ್‌ಕುಮಾರ್ ಶೆಟ್ಟಿ ಪೂಕಟ್ಟೆ ಬಾಲಕೃಷ್ಣ ಶೆಟ್ಟಿ, ಆನಂದ ರೈ ಕಾಜುರು, ಮಹೇಶ್ ಶೆಟ್ಟಿ ಕಾಜೂರು, ಸುರೇಶ್ ಪಾದೆಕಲ್ಲು, ವೆಂಕಪ್ಪ ಶೆಟ್ಟಿ ಶುಭಹಾರೈಸಿದರು. ಶಿಕ್ಷಕರಾದ ಸಂತೋಷ್ ಪ್ರಸಾದ್ ವಂದಿಸಿ, ಜಯಶ್ರೀ ನಿರೂಪಿಸಿದರು. ಬಳಿಕ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಲೈಫ್ ಮಿಷನ್ ಯೋಜನೆ: ಅತ್ಯುತ್ತಮ ನಿರ್ವಹಣೆಯ ಸಂಸ್ಥೆಗಳಿಗೆ ಅಭಿನಂದನೆ



ಕಾಸರಗೋಡು: ಲೈಫ್ ಮಿಷನ್ ವಸತಿ ಯೋಜನೆಯ ಮೂಲಕ ಐದು ಲಕ್ಷ ಮನೆಗಳ ನಿರ್ಮಾಣ ಪೂರ್ಣಗೊಳಿಸುವಿಕೆಯ ಭಾಗವಾಗಿ ಅತ್ಯುತ್ತಮ ಗ್ರಾ.ಪಂ.ಗಳು, ನಗರಸಭೆಗಳು, ಗ್ರಾಮ ವಿಸ್ತರಣಾ ಅಧಿಕಾರಿಗಳು, ಕಾರ್ಯನಿರ್ವಾಹಕ ಅಧಿಕಾರಿಗಳು, ಬ್ಲಾಕ್ ಪಂ. ಜಂಟಿ ಬಿಡಿಒ (ವಸತಿ), ವಿಸ್ತರಣಾ ಅಧಿಕಾರಿಗಳು (ವಸತಿ), ಜಿಲ್ಲಾ ಮಟ್ಟದ ಅಧಿಕಾರಿಗಳ ಸನ್ಮಾನಿಸಲಾಯಿತು. ಜಿ.ಪಂ. ಸಭಾಂಗಣದಲ್ಲಿ ಜರಗಿದ ಕಾರ್ಯಕ್ರಮದಲ್ಲಿ ಜಿ.ಪಂ.ಅಧ್ಯಕ್ಷ ಸಾಬು ಅಬ್ರಹಾಂ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅಧಿಕಾರಿಗಳನ್ನು ಸನ್ಮಾನಿಸಿದರು. ಲೈಫ್ ಮಿಷನ್ ಜಿಲ್ಲಾ ಸಂಯೋಜಕ ಎಂ. ವಲ್ಸನ್ ಯೋಜನಾ ವರದಿ ಮಂಡಿಸಿದರು.

ರಾಜ್ಯಾದ್ಯಂತ ಪೂರ್ಣಗೊಂಡ 5 ಲಕ್ಷ ಮನೆಗಳ ಪೈಕಿ ಜಿಲ್ಲೆಯಲ್ಲಿ 19,328 ಮನೆಗಳನ್ನು ಪೂರ್ಣಗೊಳಿಸಲು ಸಾಧ್ಯವಾಯಿತು ಮತ್ತು ಸ್ಥಳೀಯಾಡಳಿತ ಸಂಸ್ಥೆಗಳ ಜನಪ್ರತಿನಿಧಿಗಳು, ಅಧಿಕಾರಿಗಳು ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳ ಕಠಿಣ ಪರಿಶ್ರಮದಿಂದ ಈ ಸಂಖ್ಯೆ ಮನೆಗಳನ್ನು ಪೂರ್ಣಗೊಳಿಸಲು ಸಾಧ್ಯವಾಯಿತೆಂದು ಲೈಫ್ ಮಿಷನ್ ಜಿಲ್ಲಾ ಸಂಯೋಜಕರು ಹೇಳಿದರು.

ಸ್ಥಳೀಯಾಡಳಿತ ಇಲಾಖೆ ಜಂಟಿ ನಿರ್ದೇಶಕ ಜೇಸನ್ ಮ್ಯಾಥ್ಯೂ, ಜಿಲ್ಲಾ ಯೋಜನಾ ನಿರ್ದೇಶಕ ಟಿ.ಟಿ.ಸುರೇಂದ್ರನ್, ನವಕೇರಳ ಕ್ರಿಯಾ ಯೋಜನೆಯ ಜಿಲ್ಲಾ ಸಂಯೋಜಕ ಕೆ.ಬಾಲಕೃಷ್ಣನ್ ಮಾತನಾಡಿದರು.

ವಿಜೇತರು

ಲೈಫ್ ಮಿಷನ್ ವಸತಿ ಯೋಜನೆಯಲ್ಲಿ ಕೋಡೋಂ ಬೇಳೂರು, ಪನತ್ತಡಿ ಮತ್ತು ಬದಿಯಡ್ಕ ಗ್ರಾ.ಪಂ.ಗಳು ಪ್ರಥಮ ಸ್ಥಾನ ಗಳಿಸಿದವು. ನಗರಸಭೆಗಳ ಪೈಕಿ ಕಾಞಂಗಾಡು ನಗರಸಭೆ ಪ್ರಥಮ ಸ್ಥಾನ, ನೀಲೇಶ್ವರ ನಗರಸಭೆ 2ನೇ ಸ್ಥಾನ ಪಡೆದಿದೆ.



ಶೈಕ್ಷಣಿಕ ವರ್ಷದ ಸ್ಕಾಲರ್ ಶಿಪ್‌ಗೆ ಕಲ್ಲಕಟ್ಟ ಎಂಎಯುಪಿ ಶಾಲೆಯ ವಿದ್ಯಾರ್ಥಿಗಳಾದ ಗಾಯತ್ರಿ ಎಂ., ಶ್ರೀಮಯಿ ಪಿ.ಎಂ., ಅಪರ್ಣಾ ಪಿ., ಶಾರ್ವಿ ವಿ.ಎಂ., ಆಯಿಷತ್ ನಿಶಾ, ಆದಿತ್ರಿ ಕೆ.ನಾಯ್ಕ್, ಆಯಿಷಾ ಟಿ.ಎನ್., ಅಭಿಲಾಷ್ ಎಚ್.ಎ., ಸಾನ್ವಿಕ್ ಎಂ. ಆಯ್ಕೆಯಾಗಿದ್ದಾರೆ. ಶಾಲಾ ರಕ್ಷಕ ಶಿಕ್ಷಕ ಸಂಘದ ವತಿಯಿಂದ ಶಾಲಾ ಮಕ್ಕಳನ್ನು, ಮುಖ್ಯೋಪಾಧ್ಯಾಯಿನಿ ಜಯಲಕ್ಷ್ಮೀ ಸಿ.ಎಚ್. ಮತ್ತು ಸಂಸ್ಕೃತ ಅಧ್ಯಾಪಕ ಶಾಲಿನಿ ಮಹೇಶ್ ಅವರನ್ನು ಅಭಿನಂದಿಸಲಾಯಿತು.

ಕೇರಳ ವಿಧಾನಸಭಾ ಚುನಾವಣೆ | ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಸೂಚನೆ

ಮುಖ್ಯಸ್ಥರು ಸಾಫ್ಟ್‌ವೇರ್‌ನಲ್ಲಿ ನೌಕರರ ಮಾಹಿತಿ ನಮೂದಿಸಬೇಕು

ಕಾಸರಗೋಡು: ಕೇರಳ ವಿಧಾನಸಭಾ ಚುನಾವಣೆಗೆ ಸಂಬಂಧಿಸಿ ಕಾಸರಗೋಡು ಜಿಲ್ಲೆಯ ಎಲ್ಲಾ ಸಂಸ್ಥೆಗಳ ಮುಖ್ಯಸ್ಥರು ಮಾ.20 ರೊಳಗೆ ತಮ್ಮ ನೌಕರರ ಸಮಗ್ರ ವಿವರಗಳನ್ನು ಆರ್ಡರ್ ಸಾಫ್ಟ್‌ವೇರ್‌ನಲ್ಲಿ ನಮೂದಿಸಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿ, ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ತಿಳಿಸಿದ್ದಾರೆ.

ಅಪ್‌ಲೋಡ್ ಮಾಡಬೇಕು

ಗ್ರಾ.ಪಂ., ನಗರಸಭೆ ಮತ್ತು ನಿಗಮ ಕಾರ್ಯದರ್ಶಿಗಳು ತಮ್ಮ ವ್ಯಾಪ್ತಿಯಲ್ಲಿರುವ ಸಂಸ್ಥೆಗಳ ನೌಕರರ ವಿವರಗಳನ್ನು ಮತದಾನ ಕರ್ತವ್ಯಕ್ಕೆ ನಿಯೋಜಿಸುವ ಸಲುವಾಗಿ ಆರ್ಡರ್ ಸಾಫ್ಟ್‌ವೇರ್ ಮೂಲಕ ಅಪ್‌ಲೋಡ್ ಮಾಡಬೇಕು. ಕೇಂದ್ರ ಮತ್ತು ರಾಜ್ಯ ಸರಕಾರಿ ಕಚೇರಿಗಳು, ಶಿಕ್ಷಣ ಸಂಸ್ಥೆಗಳು, ಬ್ಯಾಂಕ್‌ಗಳು (ಪ್ರಾಥಮಿಕ ಸಹಕಾರಿ ಸಂಘಗಳನ್ನು ಹೊರತುಪಡಿಸಿ), ಕೇಂದ್ರ ಮತ್ತು ರಾಜ್ಯ ನಿಗಮಗಳು, ಮಂಡಳಿಗಳು, ಸಾರ್ವಜನಿಕ ವಲಯದ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಪಿಎಸ್‌ಸಿ ಕಚೇರಿ, ಅನುದಾನಿತ ಕಾಲೇಜುಗಳು, ಶಾಲೆಗಳು ಮತ್ತು ಸರಕಾರಿ ನಿಯಂತ್ರಿತ ಸ್ವ ಹಣಕಾಸು ಸಂಸ್ಥೆಗಳಿಂದ ಮಾಹಿತಿ ಸಂಗ್ರಹಿಸಲಾಗುತ್ತದೆ ಎಂಬುದನ್ನು ಉಲ್ಲೇಖಿಸಲಾಗಿದೆ.



ಸ್ಥಳೀಯಾಡಳಿತ ಸಂಸ್ಥೆಗಳ ಕಾರ್ಯದರ್ಶಿಗಳು ಆಯಾ ಸಂಸ್ಥೆಗಳ ವಿವರಗಳನ್ನು ಆರ್ಡರ್ ಸಾಫ್ಟ್‌ವೇರ್‌ನಲ್ಲಿ ಸೇರಿಸಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳುವ ಜವಾಬ್ದಾರಿ ಹೊಂದಿರುತ್ತಾರೆ. ಸಂಸ್ಥೆಯ ಮುಖ್ಯಸ್ಥರಿಗೆ ಲಭ್ಯವಿರುವ ಬಳಕೆದಾರ ಐಡಿ ಮತ್ತು ಪಾಸ್‌ವರ್ಡ್ ಬಳಸಿ ನೌಕರರ ವಿವರಗಳನ್ನು ಆರ್ಡರ್ ಸಾಫ್ಟ್‌ವೇರ್‌ನಲ್ಲಿ ನಮೂದಿಸಬಹುದು ಎಂದು ಹೇಳಿದ್ದಾರೆ. ರಾಜ್ಯ ಚುನಾವಣಾ ಆಯೋಗದ ನಿರ್ದಿಷ್ಟ ಮಾನದಂಡಗಳ ಪ್ರಕಾರ ಚುನಾವಣಾ ಕರ್ತವ್ಯದಿಂದ ವಿನಾಯಿತಿ ಪಡೆಯಲು ಅರ್ಹರಾಗಿರುವ ನೌಕರರ ವಿವರಗಳನ್ನು ಪುರಾವೆ, ವೈದ್ಯಕೀಯ ಪ್ರಮಾಣಪತ್ರ, ಸಿಬ್ಬಂದಿ ಪಟ್ಟಿಯ ಮುದ್ರಿತ ಪ್ರತಿ ಮತ್ತು ಸ್ವೀಕೃತಿಯೊಂದಿಗೆ ಸ್ಥಳೀಯಾಡಳಿತ ಸಂಸ್ಥೆಯ ಕಾರ್ಯದರ್ಶಿಗೆ ಸಲ್ಲಿಸಬೇಕು.

ಮಾ.20: ದತ್ತಾಂಶ ಸಂಗ್ರಹ ಪೂರ್ಣ

ಜಿಲ್ಲಾ ಚುನಾವಣಾಧಿಕಾರಿ ಆಗಿರುವ ಜಿಲ್ಲಾಧಿಕಾರಿಗಳು, ಮಾ.20ರಂದು ಮಧ್ಯಾಹ್ನ 12.30 ರೊಳಗೆ ದತ್ತಾಂಶ ಸಂಗ್ರಹ ಪೂರ್ಣಗೊಳಿಸಲಿದ್ದಾರೆ.

ಸತ್ಯಾಸತ್ಯತೆ ಪರಿಶೀಲಿಸಿ

ಸಂಸ್ಥೆಗಳು ದಾಖಲಿಸಿದ ಮತ್ತು ಸಲ್ಲಿಸಿದ ಮಾಹಿತಿಯ ಸತ್ಯಾಸತ್ಯತೆಯನ್ನು ಮಾ.20ರಂದು ಸಂಜೆ 5 ಗಂಟೆಯೊಳಗೆ ಪರಿಶೀಲಿಸಿ ಜಿಲ್ಲಾ ಚುನಾವಣಾ ಇಲಾಖೆಗೆ ಸಲ್ಲಿಸಬೇಕು ಎಂದು ಮ್ಯಾನ್‌ಪವರ್ ನೋಡಲ್ ಅಧಿಕಾರಿಯಾದ ಎಡಿಎಂ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೇರಳ ಕೇಂದ್ರ ವಿವಿಯಲ್ಲಿ ವಿದ್ಯಾರ್ಥಿ ಪರಿಷತ್ ಉದ್ಘಾಟನೆ

ಕಾಸರಗೋಡು: ಪೆರಿಯದಲ್ಲಿರುವ ಕೇರಳ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ನೂತನವಾಗಿ ವಿದ್ಯಾರ್ಥಿ ಪರಿಷತ್ ಉದ್ಘಾಟಿಸಲಾಯಿತು.

ಈ ಸಂದರ್ಭದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

ಮಾನವೀಯತೆ ಎತ್ತಿಹಿಡಿಯಬೇಕು

ಪಯಸ್ವಿನಿ ಸಭಾಂಗಣದಲ್ಲಿ ನಡೆದ ಸಮಾರಂಭವನ್ನು ನಿರ್ದೇಶಕ ಜಿಯೋ ಬೇಬಿ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ರಾಜಕೀಯ ಸಂಘಟನೆ ಅಥವಾ ಧರ್ಮವನ್ನು ಲೆಕ್ಕಿಸದೆ ಮಾನವೀಯತೆಯನ್ನು ಎತ್ತಿಹಿಡಿಯಬೇಕು ಎಂದು ಕರೆ ನೀಡಿದರು.

ಚಟುವಟಿಕೆಗಳಿಗೆ ಬೆಂಬಲ

ಕಾರ್ಯಕ್ರಮದಲ್ಲಿ ಉಪಕುಲಪತಿ ಪ್ರೊ.ಸಿದ್ದು ಪಿ.ಅಲ್ಗೂರ್ ಅಧ್ಯಕ್ಷತೆ ವಹಿಸಿ, ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ಮಂಡಳಿಯ ಚಟುವಟಿಕೆಗಳಿಗೆ ಎಲ್ಲಾ ಬೆಂಬಲವನ್ನು ನೀಡುವುದಾಗಿ ತಿಳಿಸಿದರು. ಪ್ರಭಾರ ಕುಲಪತಿ ಪ್ರೊ.ವಿ.ಬಿ.ಸಮೀರ್ ಕುಮಾರ್, ಡೀನ್ ವಿದ್ಯಾರ್ಥಿ ಕಲ್ಯಾಣ ಪ್ರೊ.ರಾಜೇಂದ್ರ ಪಿಲಾಂಕಟ್ಟೆ, ಪರೀಕ್ಷಾ ನಿಯಂತ್ರಕ ಡಾ.ಆರ್. ಜಯಪ್ರಕಾಶ್, ಡೀನ್ ಶೈಕ್ಷಣಿಕ ಪ್ರೊ. ಜೋಸೆಫ್ ಕೊಯಿಪಳ್ಳಿ, ವಿದ್ಯಾರ್ಥಿ ಪರಿಷತ್‌ನ ಅಧ್ಯಕ್ಷ ವಿವೇಕ್ ಎಂ.ಎಸ್., ಪರಿಷತ್‌ನ ಕಾರ್ಯದರ್ಶಿ ಸಂಜಯ್ ಎಸ್. ಮುಂತಾದವರು ಈ ಸಂದರ್ಭದಲ್ಲಿ ಮಾತನಾಡಿದರು.



ನಿರಂತರ ಸುದ್ದಿ ಅಪ್ಡೇಟ್‌ಗಾಗಿ Google Lens ನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!

ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಗುರುವಾರ 19, ಮಾರ್ಚ್ 2026

ಮಂಗಳೂರಿನಲ್ಲಿ ಬಿಜೆಪಿಯಿಂದ ಪ್ರತಿಭಟನೆ | ಪ್ರೇಮಾನಂದ ಶೆಟ್ಟಿ ಆಗ್ರಹ

ಅಧಿಕಾರ ಶಾಹಿ ಆಡಳಿತವು ಕೊನೆಯಾಗಲಿ



ಜನನ ಮರಣ ಪ್ರಮಾಣ ಪತ್ರಿಗೆ 30 ರೂ. ಇದ್ದದ್ದು, 300 ರೂ.ಗೆ ತಲುಪಿದೆ. ಅಧಿಕಾರಿಗಳ ಆಡಳಿತದಿಂದ ಜನತೆ ಸಂಕಷ್ಟಕ್ಕೆ ಸಿಲುಕುವಂತಾಗಿದೆ. ನಗರದ ರಾಜಾ ಕಾಲುವೆಗಳ ಹೂಳೆತ್ತುವಿಕೆ ಕಾರ್ಯ ಆರಂಭವಾಗಬೇಕಿತ್ತು. ಆದರೆ ಅಧಿಕಾರಿಗಳು ಎಚ್ಚೆತ್ತುಕೊಂಡಂತೆ ಕಾಣುತ್ತಿಲ್ಲ.
● **ಸುಧೀರ್ ಶೆಟ್ಟಿ, ಮಾಜಿ ಮೇಯರ್**

ಮಂಗಳೂರು: ರಾಜ್ಯ ಸರ್ಕಾರ ನೇಮಿಸಿರುವ ಆಡಳಿತಾಧಿಕಾರಿಯ ಅಧೀನದಲ್ಲಿರುವ ಮಂಗಳೂರು ಮಹಾನಗರ ಪಾಲಿಕೆ ದುರಾಡಳಿತದಿಂದ ಕೂಡಿದೆ. ಭ್ರಷ್ಟಾಚಾರ ಮಿತಿ ಮೀರಿದ್ದು, ಜನವಿರೋಧಿ ನೀತಿ ಜಾರಿಯಲ್ಲಿದೆ. ಆಡಳಿತ ಸಂಪೂರ್ಣ ವೈಫಲ್ಯ ಅನುಭವಿಸಿದ್ದು ಪಾಲಿಕೆಯ ದುರಾಡಳಿತ ಕೊನೆಯಾಗಬೇಕು ಎಂದು ಆಗ್ರಹಿಸಿ ಬಿಜೆಪಿ ಮಂಗಳೂರು ನಗರ ದಕ್ಷಿಣ ಮತ್ತು ಉತ್ತರ ಮಂಡಲದ ನೇತೃತ್ವದಲ್ಲಿ ಬುಧವಾರ ಮಂಗಳೂರು ಮಹಾನಗರ ಪಾಲಿಕೆ ಮುಂಭಾಗ ಪ್ರತಿಭಟನೆ ನಡೆಯಿತು.

ಪಾಲಿಕೆಯ ಮುಂಭಾಗ ಜಮಾಯಿಸಿದ ಬಿಜೆಪಿ ಕಾರ್ಯಕರ್ತರು ರಾಜ್ಯ ಸರ್ಕಾರಕ್ಕೆ ಧಿಕ್ಕಾರ ಕೂಗುತ್ತಾ, ಪಾಲಿಕೆ ಜನತೆಯ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಮಾಜಿ ಮೇಯರ್ ಪ್ರೇಮಾನಂದ ಶೆಟ್ಟಿ, ಕಳೆದ ಒಂದು ವರ್ಷದಿಂದ ಮಂಗಳೂರು ಮಹಾನಗರ ಪಾಲಿಕೆ ಅಧಿಕಾರ ಆಡಳಿತಾಧಿಕಾರಿಯವರ ಕೈಯಲ್ಲಿದ್ದು, ಭ್ರಷ್ಟಾಚಾರ ಮಿತಿ ಮೀರಿದೆ. ತಮ್ಮ ಯಾವುದೇ ಸಮಸ್ಯೆಗಳಿಗೆ ಪಾಲಿಕೆಯಿಂದ ಸ್ಪಂದನೆ ವ್ಯಕ್ತವಾಗುತ್ತಿಲ್ಲ ಎಂದು ಜನತೆ ಆರೋಪಿಸುತ್ತಿದ್ದಾರೆ. ಸರ್ಕಾರ ತಕ್ಷಣ ಪಾಲಿಕೆ ಚುನಾವಣೆಗೆ ಆದ್ಯತೆ ನೀಡುವ ಮೂಲಕ ಪಾಲಿಕೆಯಲ್ಲಿ ಆಡಳಿತ ಸುಗಮವಾಗಿ ಸಾಗಲು ಒತ್ತು ನೀಡಬೇಕು ಎಂದು ಆಗ್ರಹಿಸಿದರು.

ಭ್ರಷ್ಟ ಅಧಿಕಾರಿಗಳ ಕೈಗೆ ಅಧಿಕಾರ ನೀಡಿ ಸರ್ಕಾರ ಜನತೆಯ ತೆರಿಗೆಯ ಹಣ ಲೂಟಿ ಮಾಡುತ್ತಿದೆ. ಇಲ್ಲಿನ ಜನತೆಯ ಹಣ ಲೂಟಿ ಮಾಡಿ ಸರ್ಕಾರದ ಖಜಾನೆ ತುಂಬಿಸುವ ಕಾರ್ಯ ಕಳೆದ ಒಂದು ವರ್ಷದಿಂದ ಆಗುತ್ತಿದೆ. ಇದಕ್ಕೆ ಕಡಿವಾಣ ಹಾಕಲೇ ಬೇಕಿದೆ. ಸರ್ಕಾರ ತಕ್ಷಣ ಪಾಲಿಕೆ ಚುನಾವಣೆ ನಡೆಸದಿದ್ದಲ್ಲಿ ಮುಂದಿನ ದಿನಗಳಲ್ಲಿ ತೀವ್ರ ರೀತಿಯ ಹೋರಾಟ ಕೈಗೆತ್ತಿಕೊಳ್ಳಲಾಗುವುದು ಎಂದರು.

ನಗರದಲ್ಲಿ ನೀರಿನ ಸಮಸ್ಯೆ ಹೆಚ್ಚಾಗಿದೆ. ಇ-ಖಾತಾ ಸಮಸ್ಯೆಯಿಂದ ಜನತೆ ತತ್ತರಿಸುತ್ತಿದ್ದಾರೆ. ಅವೈಜ್ಞಾನಿಕ ತೆರಿಗೆ ಪದ್ಧತಿಯಿಂದಾಗಿ ಜನತೆಯ ಮೇಲೆ ಹೊರೆ ಹೆಚ್ಚಾಗಿದೆ. ಪಾಲಿಕೆಯ ಅವ್ಯವಸ್ಥೆಯಿಂದಾಗಿ ಜನ ಬೀದಿಗಿಳಿಯುವ ಸ್ಥಿತಿ ಎದುರಾಗಿದೆ. ಪಾಲಿಕೆ ಚುನಾವಣೆ ನಡೆಸಿದರೆ ತಮಗೆ ಹಿನ್ನಡೆಯಾಗಬಹುದೆಂದು ಸರ್ಕಾರ ಚುನಾವಣೆಯಿಂದ ಹಿಂದೆ ಸರಿಯುತ್ತಿದೆ. ಇದು ಭ್ರಷ್ಟ ಅಧಿಕಾರಿಗಳಿಗೆ ಅನುಕೂಲಕರ ವಾತಾವರಣ ಸೃಷ್ಟಿಸಿದಂತಾಗಿದೆ. ಜನತೆ ಬೀದಿಗಿಳಿದು ಪ್ರತಿಭಟಿಸುವ ಮುನ್ನ ಸರ್ಕಾರ ಎಚ್ಚೆತ್ತುಕೊಳ್ಳಬೇಕು ಎಂದವರು ಆಗ್ರಹಿಸಿದರು.

ಮಾಜಿ ಮೇಯರ್ ಸುಧೀರ್ ಶೆಟ್ಟಿ ಮಾತನಾಡಿದರು. ಬಿಜೆಪಿ ಮುಖಂಡ ರಾಜೇಶ್ ಕೊಟ್ಟಾರಿ ಮಾತನಾಡಿ, ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕಮಿಷನ್ ದಂಧೆ ನಡೆಯುತ್ತಿದೆ. ಅಧಿಕಾರಿಗಳು ದರ್ಪದಿಂದ ವ್ಯವಹರಿಸುತ್ತಿದ್ದಾರೆ. ಪಾಲಿಕೆಯ ದುರಾಡಳಿತ ಕೊನೆಯಾಗಬೇಕು ಎಂದು ಒತ್ತಾಯಿಸಿದರು.

ವಿಧಾನಪರಿಷತ್ ಮಾಜಿ ಸದಸ್ಯ ಕೆ.ಮೋನಪ್ಪ ಭಂಡಾರಿ, ಮಾಜಿ ಮೇಯರ್ ಮನೋಜ್ ಕುಮಾರ್ ಕೋಡಿಕಲ್ ಮತ್ತಿತರರು ಪ್ರತಿಭಟನೆ ಉದ್ದೇಶಿಸಿ ಮಾತನಾಡಿದರು. ಬಿಜೆಪಿ ಮುಖಂಡರಾದ ನಿತಿನ್ ಕುಮಾರ್, ದಿವಾಕರ ಪಾಂಡೇಶ್ವರ, ಜಯಾನಂದ ಅಂಚನ್, ರವಿಶಂಕರ ಮಿಜಾರು, ತಿಲಕ್ ರಾಜ್ ಕೃಷ್ಣಾಪುರ, ರಮೇಶ್ ಕಂಡೆಟ್ಟು, ನಂದನ್ ಮಲ್ಯ, ಸಂದೀಪ್ ಪಚ್ಚನಾಡಿ, ವಸಂತ ಜೆ. ಪೂಜಾರಿ, ಸಂಗೀತಾ ನಾಯಕ್, ಶಕೀಲಾ ಕಾವಾ, ಪೂರ್ಣಿಮಾ ರಾವ್, ಅರುಣ್ ಜಿ. ಶೇಟ್, ಜಗದೀಶ್ ಶೆಟ್ಟಿ ಮತ್ತಿತರರಿದ್ದರು.

ಅರೆಭಾಷೆ ಸಾಹಿತ್ಯ ಬೆಳವಣಿಗೆಗೆ ಯೋಜನೆ: ಮಾವಜಿ



ಸುಳ್ಯ: ಅರೆಭಾಷೆ ಸಾಹಿತ್ಯ, ಸಂಸ್ಕೃತಿಗಳನ್ನು ಬೆಳೆಸುವ ದೃಷ್ಟಿಯಿಂದ ಯುವಜನರನ್ನು ಆಕರ್ಷಿಸಲು ಅರೆಭಾಷೆ ಅಕಾಡೆಮಿ ವತಿಯಿಂದ ಕಾಲೇಜ್‌ಗಳಲ್ಲಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ಹೇಳಿದ್ದಾರೆ.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ವತಿಯಿಂದ ಬುಧವಾರ ಸುಳ್ಯ ನೆಹರೂ ಮೆಮೋರಿಯಲ್ ಕಾಲೇಜ್ ಹಾಗೂ ಕಾಲೇಜಿನ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯದ ಸಹಯೋಗದಲ್ಲಿ ನಡೆದ "ಅರೆಭಾಷೆ ರಂಗ" ಕಾರ್ಯಕ್ರಮದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಎಲ್ಲಾ ರೀತಿಯ ಪ್ರಯತ್ನ

ಅರೆಭಾಷೆ ಅಕಾಡೆಮಿಯ ವತಿಯಿಂದ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯದ ಬೆಳವಣಿಗೆಗೆ ಹಲವಾರು ಯೋಜನೆಗಳು ಹಾಗೂ ಇತರ ಸಂಘಟನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದು ಅಕಾಡೆಮಿಯ ಮೂಲಕ ಅರೆಭಾಷೆಯ ಬೆಳವಣಿಗೆಗೆ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಲಾಗುವುದು ಎಂದು ಅವರು ಹೇಳಿದರು.

ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಷನ್‌ನ ಉಪಾಧ್ಯಕ್ಷೆ ಶೋಭಾ ಚಿದಾನಂದ ಕಾರ್ಯಕ್ರಮವನ್ನು ಉದ್ಘಾಟಿಸಿ, ಶುಭ ಹಾರೈಸಿದರು. ವೇದಿಕೆಯಲ್ಲಿ ಕಾಲೇಜಿನ ಪ್ರಾಂಶುಪಾಲ ರುದ್ರಕುಮಾರ್ ಎಂ.ಎಂ., ಲಯನ್ಸ್ ಕ್ಲಬ್ ಅಧ್ಯಕ್ಷ ದೀಪಕ್ ಕುತ್ತಮೊಟ್ಟೆ, ಅರೆಭಾಷೆ ಅಕಾಡೆಮಿ ಸದಸ್ಯರಾದ ಚಂದ್ರಶೇಖರ ಪೇರಾಲು, ಚಂದ್ರಾವತಿ ಬಡ್ಡಡ್ಕ, ಡಾ.ಎನ್.ಎ. ಜ್ಞಾನೇಶ್, ಲೋಕೇಶ್ ಊರುಬೈಲು, ಗೋಪಾಲ ಪೆರಾಜೆ, ಕಾಲೇಜಿನ ವಿದ್ಯಾರ್ಥಿ ಕ್ಷೇಮ ಪಾಲನಾಧಿಕಾರಿ ರತ್ನಾವತಿ ಡಿ., ಐಕ್ಯೂಎಸಿ ಸಂಚಾಲಕಿ ಡಾ. ಮಮತಾ ಕೆ., ಕನ್ನಡ ವಿಭಾಗದ ಮುಖ್ಯಸ್ಥೆ ಹಾಗೂ ಕಾರ್ಯಕ್ರಮದ ಸಂಯೋಜಕಿ ಡಾ. ಅನುರಾಧಾ ಕುರುಂಜಿ, ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಹಾಗೂ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಸಂಘದ ಸಂಚಾಲಕ ಕುಲದೀಪ್ ಪೆಲ್ತಡ್ಕ, ಸಂಘದ ಅಧ್ಯಕ್ಷೆ ಹರ್ಷಿತಾ ಕೆ.ಎಸ್., ವಿದ್ಯಾರ್ಥಿ ಸಂಘದ ಅಧ್ಯಕ್ಷ ಚಿಲನ ಟಿ. ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಸಂಘದ ಸಂಚಾಲಕ ಕುಲದೀಪ್ ಪೆಲ್ತಡ್ಕ ಸ್ವಾಗತಿಸಿ, ಸಂಘದ ಅಧ್ಯಕ್ಷೆ ಹರ್ಷಿತಾ ಕೆ.ಎಸ್. ವಂದಿಸಿದರು. ಕನ್ನಡ ವಿಭಾಗದ ಮುಖ್ಯಸ್ಥೆ ಹಾಗೂ ಕಾರ್ಯಕ್ರಮದ ಸಂಯೋಜಕ ಡಾ. ಅನುರಾಧಾ ಕುರುಂಜಿ ಕಾರ್ಯಕ್ರಮ ನಿರ್ವಹಿಸಿದರು.